ಬೆಂಗಳೂರು
ಗುರುವಾರ, 11 ಜೂನ್ 2026
ಸಂಪುಟ 33, ಸಂಚಿಕೆ 221, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



20 ದೇಸಿ ನ್ಯಾವಿಗೇಷನ್ ಜಾಮರ್ ಖರೀದಿಗೆ ಸಹಿ | ೧೦
ಮೈಸೂರಿನಲ್ಲಿ ಹುಲಿ ಸೆರೆ | ೦೨
ಭಾರತದ ವಾರ್ಷಿಕ ರಫ್ತು ಶೇ.5.7 | ೧೦

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ರೇವತಿ

ದಿನದ ಮಾತು

ಮೂರ್ಖ ಒಮ್ಮೆಯೂ ಸಂತೋಷದಿಂದಿರುವುದಿಲ್ಲ, ಓದಿದವನು ಯಾವಾಗಲೂ ಸಂತೋಷದಿಂದಿರುತ್ತಾನೆ.
▲ ನಾಣ್ಣುಡಿ

ವೃದ್ಧಾಪ್ಯವೂ, ಜನಸಂಖ್ಯೆ ಕಣ್ಮರೆಯೂ...

ಗುರುತರ
• ಸೋಮಶೇಖರ ಸಿ.ಜಿ.

• ಪುಟ ೬

ಕಿರುಸುದ್ದಿ

ಜೂನ್ 21ಕ್ಕೆ ಕೆಪಿಸಿಸಿ ಅಧ್ಯಕ್ಷರಾಗಿ ಹರಿಪ್ರಸಾದ್ ಅಧಿಕಾರ ಸ್ವೀಕಾರ

ನನಗೆ ಶಾಲು, ಹಾರ ಬೇಡ, ಅದೇ ಹಣ ಪಕ್ಷಕ್ಕೆ ಕೊಡಿ

• **ಬೆಂಗಳೂರು:** ನನಗೆ ಶಾಲು, ಹೂ ಹಾಕುವ ಬದಲಾಗಿ ಅದೇ ಹಣವನ್ನು ಕಾಂಗ್ರೆಸ್ ಪಕ್ಷಕ್ಕೆ ಹಾಕಿ. ಆ ಮೂಲಕ ಪಕ್ಷದ ಖಜಾನೆ ತುಂಬಲಿ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ. ಕೆಪಿಸಿಸಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂ.21ಕ್ಕೆ ಅರಮನೆ ಮೈದಾನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷನಾಗಿ ಪಕ್ಷದ ಜವಾಬ್ದಾರಿ ವಹಿಸಿಕೊಳ್ಳುತ್ತಿದ್ದೇನೆ. ಅಂದು ಹಲವಾರು ವಿಷಯಗಳ ಬಗ್ಗೆ ಮಾತನಾಡಬೇಕಾಗಿದೆ. ಕಾಂಗ್ರೆಸ್ ಪಕ್ಷದಲ್ಲಿ ಸೌಕರ್ಯವಾಗಿರುವವರಿದ್ದರೂ ಕಾಂಗ್ರೆಸ್ ಬಡವರ ಪಕ್ಷ. ಇಡೀ ದೇಶದಲ್ಲಿ ಕಾಂಗ್ರೆಸ್ ಬಳಿ ಇರುವುದು ಕೇವಲ 700 ಕೋಟಿ ರೂ. ಮಾತ್ರ ಎಂದರು. ➡ಪುಟ 9

ಸಮಾಜಕ್ಕಾಗಿ ಬದುಕಿದ ಈಶ್ವರಪ್ಪ: ಪೇಜಾವರ ಶ್ರೀ

• ಪುಟ ೩

ನಾಳೆ ಕೊಲ್ಲೂರು ಕ್ಷೇತ್ರಕ್ಕೆ ತಮಿಳ್ನಾಡು ಸಿಎಂ ವಿಜಯ್

• ಪುಟ ೩

ಕಾಪ್ಟರ್ ಪತನ: 21 ಪಾಕ್ ಸೇನಾ ಸಿಬ್ಬಂದಿ ಸಾವು

• ಪುಟ ೧೦

ಕಾಞಂಗಾಡಿನಲ್ಲಿ ಬಾಂಗ್ಲಾ ಯುವತಿ ಸೆರೆ

• ಪುಟ ೩

ತ್ಯಾಜ್ಯ ಟೆಂಡರ್ ಅವ್ಯವಹಾರ

• ಪುಟ ೩



ದ್ರೋಹಿ ಸದ್ದಡಗಿಸಲು ದ್ವಾದಶ ಅಣು ಸಿಡಿತಲೆ ಸಿದ್ಧ!

• ಪುಟ ೧೦

ಸುದ್ದಿ ಸಮಗ್ರ

ನೆಹರು ದಾಖಲೆ ಹಿಂದಿಕ್ಕಿದ ಮೋದಿ | ಎನ್‌ಡಿಎ ಅಭಿನಂದನೆ | 2047ರ ಭಾರತಕ್ಕೆ ಹೊಸ ಪ್ರತಿಜ್ಞೆ

ಜವಾಹರಲಾಲ್ ನೆಹರು **4,398** ದಿನ

ಮೋದಿ ದೀರ್ಘಾವಧಿ

ನರೇಂದ್ರ ಮೋದಿ **4,399** ದಿನ

- ವಿಕಸಿತ ಭಾರತಕ್ಕಾಗಿ ಒಗ್ಗಟ್ಟಿನಿಂದ ಕೆಲಸ ಮಾಡುವ ಎನ್‌ಡಿಎ ನಿರ್ಣಯ
- 12 ವರ್ಷಗಳಲ್ಲಿ 25 ಕೋಟಿ ಜನ ಬಡತನದಿಂದ ಹೊರಬಂದಿದ್ದಾರೆ: ಪ್ರಧಾನಿ
- ಹಿಂದು ಬೆಳವಣಿಗೆ ದರವಲ್ಲ, ಅದು ಕಾಂಗ್ರೆಸ್ ಬೆಳವಣಿಗೆ ದರ: ಮೋದಿ



• **ಹೊಸದಿಲ್ಲಿ:** ಭಾರತದ ಪ್ರಜಾಸತ್ತಾತ್ಮಕ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆದ ಪ್ರಧಾನಿ ನರೇಂದ್ರ ಮೋದಿ, ನಿರಂತರವಾಗಿ ಆಯ್ಕೆಯಾದ ಪ್ರಧಾನಿಯಾಗಿ 4,399 ದಿನಗಳ ಸೇವೆ ಸಲ್ಲಿಸುವ ಮೂಲಕ ಜವಾಹರಲಾಲ್ ನೆಹರು ಅವರ ದಾಖಲೆಯನ್ನು ಹಿಂದಿಕ್ಕಿದ ದಿನವೇ, ಎನ್‌ಡಿಎ ಸರ್ಕಾರದ 12 ವರ್ಷಗಳ ಸಾಧನೆಯ ಸಂಭ್ರಮವೂ ರಾಷ್ಟ್ರ ರಾಜಧಾನಿಯಲ್ಲಿ ಭರ್ಜರಿಯಾಗಿ ನಡೆಯಿತು. ಈ ಸಂದರ್ಭದಲ್ಲಿ ನಡೆದ ಎನ್‌ಡಿಎ ಮಹಾಸಭೆಯಲ್ಲಿ ಪ್ರಧಾನಿ ಮೋದಿ ಅವರು, ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದು, ಹಿಂದೂ ಬೆಳವಣಿಗೆ ದರ ಎಂಬ ಪದಪ್ರಯೋಗ ತಿರಸ್ಕರಿಸಿ, ಅದನ್ನು ಕಾಂಗ್ರೆಸ್ ಬೆಳವಣಿಗೆ ದರ ಎಂದು ಕರೆಯಬೇಕಿತ್ತು ಎಂದು ಹೇಳಿದ್ದಾರೆ.



ಭಾರತ್ ಮಂಟಪಂನಲ್ಲಿ ನಡೆದ ಎನ್‌ಡಿಎ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಆಡಳಿತ ದೇಶವನ್ನು ಅಸಹಾಯಕತೆ, ನಿರಾಶೆ ಹಾಗೂ ಕೀಳರಿಮೆಯ ಮನೋ ಭಾವಕ್ಕೆ ತಳ್ಳಿತ್ತು ಎಂದು ಆರೋಪಿಸಿದರು. ಅಭಿವೃದ್ಧಿ ನಿಧಾನಗತಿಯಲ್ಲಿ ಸಾಗುವುದು ಭಾರತದ ವಿಧಿ ಎಂಬ ಭಾವನೆಯನ್ನು ಜನರಲ್ಲಿ ಬಿತ್ತಲಾಗಿತ್ತು. ಅದಕ್ಕೆ ಕುತಂತ್ರದಿಂದ ಹಿಂದೂ ಬೆಳವಣಿಗೆ ದರ ಎಂಬ ಹೆಸರು ನೀಡಲಾಗಿತ್ತು. ಆದರೆ ಅದು ಕಾಂಗ್ರೆಸ್‌ನ ಆಡಳಿತ ವೈಫಲ್ಯ, ನೀತಿ ದಿವಾಳಿತನ ಮತ್ತು ದಿಕ್ಕುಗೆಟ್ಟ ಆಡಳಿತದ ಪರಿಣಾಮವಾಗಿತ್ತು ಎಂದು ಕಿಡಿಕಾರಿದರು.

2014ರಲ್ಲಿ ಎನ್‌ಡಿಎ ಅಧಿಕಾರಕ್ಕೆ ಬಂದಾಗ ದೇಶದಲ್ಲಿ ಹೊಸ ಭರವಸೆ ಮೂಡಿತ್ತು ಇಂದು ಆ ಭರವಸೆ ಆತ್ಮವಿಶ್ವಾಸವಾಗಿ ರೂಪಾಂತರಗೊಂಡಿದೆ. ➡ಪುಟ 9

ದಾಖಲೆ ದಿನ

- ನಿರಂತರವಾಗಿ ಆಡಳಿತ ನಡೆಸಿ 4,399 ದಿನ ಪೂರೈಸಿದ ಮೋದಿ
- ಜವಾಹರಲಾಲ್ ನೆಹರು ಅವರ 4,398 ದಿನಗಳ ದಾಖಲೆಗೆ ತೆರೆ
- 2014, 2019 ಮತ್ತು 2024ರಲ್ಲಿ ಸತತ ಮೂರು ಬಾರಿ ಪ್ರಧಾನಿಯಾಗಿ ಪ್ರಮಾಣವಚನ
- ಭಾರತದ ಇತಿಹಾಸದಲ್ಲೇ ಅತಿ ದೀರ್ಘಾವಧಿ ಸೇವೆ ಸಲ್ಲಿಸಿದ ಚುನಾಯಿತ ಪ್ರಧಾನಿ

ರಾಜ್ಯಾದ್ಯಂತ ಸಂಭ್ರಮ, ವಿಶೇಷ ಪೂಜೆ

• ಪುಟ ೩

ಎನ್‌ಡಿಎ ಪ್ರಮುಖ ನಿರ್ಣಯಗಳು

1. ಮೋದಿ ನಾಯಕತ್ವಕ್ಕೆ ಏಕಮತದ ಅಭಿನಂದನೆ
2. ಜನಕೇಂದ್ರಿತ ಆಡಳಿತಕ್ಕೆ ಮೆಚ್ಚುಗೆ
3. ವಿಕಸಿತ ಭಾರತ ಗುರಿಗೆ ಪುನರ್‌ಬದ್ಧತೆ
4. ಮೈತ್ರಿಕೂಟದ ಎಲ್ಲಾ ಪಕ್ಷಗಳ ಕೊಡುಗೆಗೆ ಕೃತಜ್ಞತೆ
5. ಅಭಿವೃದ್ಧಿ, ಸುಶಾಸನ ಮತ್ತು ಜನವಿಶ್ವಾಸದ ಮೇಲೆ ಒತ್ತು

ಎದ್ದು ನಿಂತು ಗೌರವ ಸೂಚಿಸಿದ ಸಚಿವ ಸಂಪುಟ

ಪ್ರಧಾನಿ ನರೇಂದ್ರ ಮೋದಿ ಅವರ ದಾಖಲೆಯ ದಿನವನ್ನು ಕೇಂದ್ರ ಸಚಿವ ಸಂಪುಟವೂ ವಿಶೇಷವಾಗಿ ಆಚರಿಸಿತು. ಬುಧವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಪ್ರಧಾನಿ ಮೋದಿಗೆ ಎಲ್ಲ ಸಚಿವರು ಎದ್ದು ನಿಂತು ಗೌರವ ಸಲ್ಲಿಸಿದರು. ಇದೇ ವೇಳೆ ಸಚಿವ ಸಂಪುಟ ಸರ್ವಾನುಮತದಿಂದ ವಿಶೇಷ ನಿರ್ಣಯವೊಂದನ್ನು ಅಂಗೀಕರಿಸಿ, ಮೋದಿ ಅವರ ನಾಯಕತ್ವವನ್ನು ಶ್ಲಾಘಿಸಿತು. ಕಳೆದ 12 ವರ್ಷಗಳಲ್ಲಿ ಜನಕೇಂದ್ರಿತ ಅಭಿವೃದ್ಧಿ, ಸುಶಾಸನ, ರಾಷ್ಟ್ರೀಯ ಭದ್ರತೆ ಹಾಗೂ ಆರ್ಥಿಕ ಪರಿವರ್ತನೆಗೆ ಮೋದಿ ನೀಡಿದ ನಾಯಕತ್ವವನ್ನು ನಿರ್ಣಯದಲ್ಲಿ ಪ್ರಶಂಸಿಸಲಾಗಿದೆ.

ಮೋದಿ ಕಾಲದ ಬದಲಾವಣೆಗಳು

ಜನನ ಸಮಯದ ಲಿಂಗ ಅನುಪಾತ
2014: 918
2026: 929

ಉನ್ನತ ಶಿಕ್ಷಣದಲ್ಲಿ ಮಹಿಳಾ ದಾಖಲಾತಿ
2014: 9.86 ಲಕ್ಷ
2026: 34+ ಲಕ್ಷ

ಶೌಚಾಲಯ ಸೌಲಭ್ಯಕ್ಕೆ ಪ್ರವೇಶ
2014: 39%
2026: 100%

ಸ್ವಸಹಾಯ ಗುಂಪುಗಳ ಸದಸ್ಯತ್ವ
2014: 2.35 ಕೋಟಿ
2026: 10+ ಕೋಟಿ

ತಾಯಂದಿರ ಮರಣ ಪ್ರಮಾಣ
2014: 130
2026: 80

ಸಶಸ್ತ್ರ ಪಡೆ/ಭದ್ರತಾ ಪಡೆಗಳಲ್ಲಿ ಮಹಿಳಾ ಅಧಿಕಾರಿಗಳು
2014: 3,000
2026: 11,000+

ವೇತನಸಹಿತ ಹೆರಿಗೆ ರಜೆ
2014: 12 ವಾರಗಳು
2026: 26 ವಾರಗಳು

ಪಿಎಂ-ಕಿಸಾನ್
ಫಲಾನುಭವಿಗಳಲ್ಲಿ ಶೇ.80 ಸಣ್ಣ, ಅಲ್ಪ ರೈತರು

ಉತ್ಪಾದನೆ ಆಧಾರಿತ ಪ್ರೋತ್ಸಾಹ ಯೋಜನೆ
- 2 ಲಕ್ಷ ಕೋಟಿ ರೂ.ಗೂ ಅಧಿಕ ಹೂಡಿಕೆ
- ಸುಮಾರು 13 ಲಕ್ಷ ಉದ್ಯೋಗ ಸೃಷ್ಟಿ

ವೈದ್ಯಕೀಯ ಶಿಕ್ಷಣ ವಿಸ್ತರಣೆ
- ವೈದ್ಯಕೀಯ ಕಾಲೇಜುಗಳು: 842-2,100+
- ಎಂಬಿಬಿಎಸ್ ಪದವಿ ಸೀಟುಗಳು: 1,28,976
- ಸ್ನಾತಕೋತ್ತರ(ಪಿಜಿ) ಸೀಟುಗಳು: 85,822

ಎಸ್‌ಸಿ/ಎಸ್‌ಟಿ/ಒಬಿಸಿ ಸಬಲೀಕರಣ
- ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಫಲಾನುಭವಿಗಳಲ್ಲಿ ಶೇ.71 ಎಸ್‌ಸಿ/ಎಸ್‌ಟಿ/ಒಬಿಸಿ ರೈತರು

ರಾಜ್ಯ ರಾಜಕಾರಣ ಕುರಿತು ಸಮಾಲೋಚನೆ ನಡೆಸಿದ ಡಿಕೆಶಿ

ಸೋನಿಯಾಗೆ ಧನ್ಯವಾದ ಹೇಳಿದ ಸಿಎಂ

• **ಹೊಸದಿಲ್ಲಿ:** ಎರಡು ದಿನಗಳ ದಿಲ್ಲಿ ಪ್ರವಾಸ ಕೈಗೊಂಡಿರುವ ಸಿಎಂ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿ ಧನ್ಯವಾದ ಅರ್ಪಿಸಿದ್ದಾರೆ.

ಬುಧವಾರ 10 ಜನಪಥ್ ನಿವಾಸಕ್ಕೆ ಭೇಟಿ ನೀಡಿದ ಅವರು, ಸಿಎಂ ಸ್ಥಾನಕ್ಕೆ ಅವಕಾಶ ಕಲ್ಪಿಸಿದ್ದಕ್ಕಾಗಿ ಕೃತಜ್ಞತೆ ತಿಳಿಸಿ, ಕೆಲ ಹೊತ್ತು ರಾಜ್ಯ ರಾಜಕಾರಣದ ಕುರಿತು ಸಮಾಲೋಚನೆ ನಡೆಸಿದರು. ಈ ಸಂದರ್ಭದಲ್ಲಿ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ವಾದ್ರಾ ಉಪಸ್ಥಿತರಿದ್ದರು. ಮಧ್ಯಾಹ್ನ ರಾಷ್ಟ್ರೀಯ ಯುವ ಕಾಂಗ್ರೆಸ್ ಕಚೇರಿ, ಎನ್‌ಎಸ್‌ಯುಐ ಕಚೇರಿ, ಮಹಿಳಾ ಕಾಂಗ್ರೆಸ್ ಕಚೇರಿಗೆ ಸೌಜನ್ಯದ ಭೇಟಿ ನೀಡಿದ ಡಿ.ಕೆ.ಶಿವಕುಮಾರ್, ಪದಾಧಿಕಾರಿಗಳ ಜತೆ ಪಕ್ಷ ಸಂಘಟನೆ ಕುರಿತು ಚರ್ಚಿಸಿದರು. ➡ಪುಟ 9



ಇಂದು ನೀತಿ ಆಯೋಗದ ಸಭೆ

3 ವರ್ಷ ಬಳಿಕ ಕರ್ನಾಟಕದ ಸಿಎಂ ಭಾಗಿ

ಹೊಸದಿಲ್ಲಿ: ವಿಕಸಿತ ಭಾರತ 2047 ದೃಷ್ಟಿಕೋನದಲ್ಲಿ ಸಮಗ್ರ ಮಾನವ ಅಭಿವೃದ್ಧಿ ಕುರಿತು ಚರ್ಚಿಸಲು ಗುರುವಾರ (ಜೂ.11) ನೀತಿ ಆಯೋಗದ 11ನೇ ಆಡಳಿತ ಮಂಡಳಿ ಸಭೆ ಆಯೋಜಿಸಲಾಗಿದೆ. ➡ಪುಟ 9

ಅಡಗುದಾಣಗಳ ಮೇಲೆ ದಾಳಿ ಸಮರ್ಥಿಸಿಕೊಂಡ ಪಾಕಿಸ್ತಾನ

ಪಾಕ್ ದಾಳಿಗೆ 26 ಆಫ್ಘನ್ ಮಂದಿ ಬಲಿ

• **ಇಸ್ಲಾಮಾಬಾದ್:** ಪೂರ್ವ ಅಫ್ಘಾನಿಸ್ತಾನದಲ್ಲಿ ಪಾಕಿಸ್ತಾನ ಸೇನೆ ನಡೆಸಿದ ವೈಮಾನಿಕ ದಾಳಿಯಲ್ಲಿ 11 ಮಕ್ಕಳು ಸೇರಿ 26 ಮಂದಿ ಮೃತಪಟ್ಟಿದ್ದಾರೆ. ಈ ಅಮಾನುಷ ದಾಳಿಯನ್ನು ತಾಲಿಬಾನ್ ಸರ್ಕಾರ ಬಲವಾಗಿ ಖಂಡಿಸಿದೆ. ಅಫ್ಘಾನ್ ಪ್ರಾದೇಶಿಕ ಸಮಗ್ರತೆ ಪಾಕಿಸ್ತಾನ ಉಲ್ಲಂಘಿಸುತ್ತಿದ್ದು, ನಾಗರಿಕ ಪ್ರದೇಶಗಳನ್ನು ಗುರಿಯಾಗಿಸಿಕೊಂಡಿದೆ ಎಂದು ಆರೋಪಿಸಿದೆ. ತಾಲಿಬಾನ್ ವಕ್ತಾರ ಜಬಿಹುಲ್ಲಾ ಮುಜಾಹಿದ್ ಪ್ರಕಾರ, ಅಫ್ಘಾನಿಸ್ತಾನದ ಕುನಾರ್, ಖೋಸ್ಟ್ ಮತ್ತು ಪಕ್ತಿಕಾ ಪ್ರಾಂತ್ಯಗಳ ಮೇಲೆ ಪಾಕ್ ದಾಳಿ ನಡೆಸಿದೆ. ದಾಳಿ ಬಗ್ಗೆ ಪಾಕಿಸ್ತಾನ ಸರ್ಕಾರ, ಅಫ್ಘನ್ ಬಂಡುಕೋರರ ಅಡಗುದಾಣಗಳು ಮತ್ತು ಇತರ ಸೌಲಭ್ಯಗಳನ್ನು ಗುರಿಯಾಗಿಸಿ ತಾವು ದಾಳಿ ನಡೆಸಿರುವುದಾಗಿ ಸಮರ್ಥಿಸಿಕೊಂಡಿದೆ. ಈ ಹಿಂದೆ ಜೂ.9ರ ಮೂಸಾ ದರಾ ಪ್ರದೇಶದ ಫೆಡರಲ್ ಕಾನ್‌ಸ್ಟೆಬ್ಯುಲರಿ ಠಾಣೆಯ ಮೇಲಿನ ದಾಳಿ, ಜೂ.2ರ ಉತ್ತರ ವಜಿರಿಸ್ತಾನದಲ್ಲಿನ ಸೇನಾ ಠಾಣೆ ಮೇಲಿನ ವಾಹನಾಧಾರಿತ ಆತ್ಮಹತ್ಯಾ ದಾಳಿ, ಮೇ 9ರಂದು ಬನ್ನು ಪೊಲೀಸ್ ಠಾಣೆ ಮೇಲೆ ಪಾಕ್ ದಾಳಿ ನಡೆಸಿತ್ತು.



ಅಮೆರಿಕ-ಇರಾನ್ ಸಂಘರ್ಷ ಮತ್ತೆ ಉಲ್ಬಣ

• **ವಾಷಿಂಗ್ಟನ್:** ಅಮೆರಿಕದ ಮಿಲಿಟರಿ ನೆಲೆಗಳ ಮೇಲೆ ಇರಾನ್ ದಾಳಿ ನಡೆಸಿದ ಬೆನ್ನಲ್ಲೇ, ಶಾಂತಿ ಮಾತುಕತೆಗಳನ್ನು ವಿಳಂಬ ಮಾಡುತ್ತಿರುವ ಇರಾನ್ ಇದಕ್ಕೆ ತಕ್ಕ ಬೆಲೆ ತೆರಬೇಕಾಗುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ. ➡ಪುಟ 9

ಬಂಡಾಯ ಕ್ಯಾಂಪ್ ಸೇರಿದ 19 ಟಿಎಂಸಿ ಸಂಸದರು

ಪಕ್ಷ ಇಬ್ಭಾಗ ಸಾಧ್ಯತೆ ಹೆಚ್ಚಳ, ಎನ್‌ಡಿಎ ಭಾಗವಾಗಲು ಸಿದ್ಧತೆ

• **ಕೋಲ್ಕತ್ತಾ:** ಹತ್ತೊಂಬತ್ತು ತೃಣಮೂಲ ಕಾಂಗ್ರೆಸ್ ಲೋಕಸಭಾ ಸದಸ್ಯರು ಬಂಡಾಯ ಬಣ ಸೇರಿಕೊಂಡಿದ್ದು, ಪಕ್ಷದೊಳಗಿನ ರಾಜಕೀಯ ಬಿಕ್ಕಟ್ಟನ್ನು ತೀವ್ರಗೊಳಿಸಿದ್ದಾರೆ ಮತ್ತು ಪಕ್ಷ ಇಬ್ಭಾಗವಾಗುವ ಸಾಧ್ಯತೆಯನ್ನು ಹೆಚ್ಚಿಸಿದ್ದಾರೆ ಎಂದು ವರದಿಗಳು ತಿಳಿಸಿವೆ. ಮೂಲಗಳ ಪ್ರಕಾರ, ಬಂಡಾಯ ಶಿಬಿರದಲ್ಲಿ ಶತ್ರುಘ್ನ ಸಿನ್ಹಾ, ಯೂಸುಫ್ ಪಠಾಣ್, ಸಾಯೋನಿ ಘೋಷ್, ಕಾಕೋಲಿ ಘೋಷ್ ದಸ್ತಿದಾ,ರ್ ಮಾಲಾ ರಾಯ್, ಶತಾಬ್ದಿ ರಾಯ್, ದೀಪಕ್ ಅಧಿಕಾರಿ, ಜೂನ್ ಮಾಲಿಯಾ ಮತ್ತು ಇತರ ಹಲವು ಸಂಸದರಿದ್ದಾರೆ. ➡ಪುಟ 9

ಆಸ್ಪತ್ರೆಗಳ ವಿರುದ್ಧ ಕಠಿಣ ಕ್ರಮ: ಸಚಿವ ಖಾದರ್

ರೋಗಿಗಳಿಗೆ ಸಹಾಯವಾಣಿ

• **ಬೆಂಗಳೂರು:** ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ರೋಗಿಗಳಿಗೆ ಎದುರಾಗುವ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸಲು ಆರೋಗ್ಯ ಸೌಧದಲ್ಲಿ ಸಹಾಯವಾಣಿ ಆರಂಭಿಸಲಾಗುವುದು ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ತಿಳಿಸಿದರು.

ಆರೋಗ್ಯ ಸೌಧದಲ್ಲಿ ಇಲಾಖೆಯ ಕಾರ್ಯಕ್ರಮ/ಯೋಜನೆಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದ ಯಾವುದೇ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ, ಔಷಧಿ ಲಭ್ಯತೆ ಸಮಸ್ಯೆ ಎದುರಾದರೆ ನೇರವಾಗಿ ನಮ್ಮ ಕಚೇರಿಗೆ ಅಥವಾ ಇಲಾಖೆಯ ಕಾರ್ಯದರ್ಶಿಗಳ ಕಚೇರಿಗೆ ಕರೆ ಮಾಡಿ ತಿಳಿಸಿದರೆ ಅದನ್ನು ಸರಿಪಡಿಸಲಾಗುವುದು. ಇದಕ್ಕಾಗಿ ಸಹಾಯವಾಣಿ ತೆರೆಯಲು ಯೋಜಿಸಿದ್ದೇವೆ ಎಂದು ವಿವರಿಸಿದರು.

ರೋಗಿಗಳಿಂದ ದೂರು ಬಂದ ಆಸ್ಪತ್ರೆಗಳ ವಿರುದ್ಧ ಆರೋಗ್ಯ ಇಲಾಖೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ದೂರುಗಳು ಸಾಬೀತಾದಲ್ಲಿ ಸಂಬಂಧಿತ ಅಧಿಕಾರಿಗಳು, ವೈದ್ಯರು ಅಥವಾ ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ➡ಪುಟ 9



ರಕ್ತಸಂಗ್ರಹ ಬಗ್ಗೆ ಮಾಹಿತಿಗೆ ಮನವಿ

ಗ್ರಾಮೀಣ ಮಟ್ಟದಲ್ಲಿ ರಕ್ತನಿಧಿ ಸಂಗ್ರಹಕ್ಕಾಗಿ ದುಡಿಯುವ ಸಂಸ್ಥೆಗಳು, ಕೇಂದ್ರಗಳಿಗೆ ವಿಶೇಷ ವೆಬ್‌ಸೈಟ್ ಮಾಡಲಾಗುವುದು. ಸಂಸ್ಥೆಗಳು ನೋಂದಣಿ ಮಾಡಿಕೊಂಡು ಎಷ್ಟು ರಕ್ತಸಂಗ್ರಹ ಮಾಡುತ್ತಿದ್ದೇವೆ ಎಂಬ ಮಾಹಿತಿಯನ್ನು ನಿಯಮಿತವಾಗಿ ನೀಡಿದಲ್ಲಿ ಅವರಿಗೆ ಪ್ರಮಾಣಪತ್ರ ನೀಡಲಾಗುವುದು. ➡ಪುಟ 9

ರಾಜ್ಯಸಭೆಯ ವ್ಯಾಮೋಹವಿಲ್ಲ: ದೇವೇಗೌಡ

ನನ್ನ ಮೋದಿ ಬಾಂಧವ್ಯ ಈ ಸ್ಥಾನ ಮೀರಿದ್ದು

• **ಬೆಂಗಳೂರು:** ಎಪ್ಪತ್ತು ವರ್ಷಗಳ ಸುದೀರ್ಘ ರಾಜಕೀಯ ಜೀವನ ಸವೆಸಿರುವ ನನಗೆ ರಾಜ್ಯಸಭೆ ಸದಸ್ಯನಾಗಬೇಕು ಎಂಬ ವ್ಯಾಮೋಹ ವಿಲ್ಲ, ನನ್ನ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಡುವಿನ ಬಾಂಧವ್ಯವು ರಾಜ್ಯಸಭೆ ಸ್ಥಾನವನ್ನು ಮೀರಿದ್ದು ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ತಿಳಿಸಿದರು. ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಬುಧವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದರು ಅವರು, ನನ್ನ ಮತ್ತು ಪ್ರಧಾನಿ ಮೋದಿ ಅವರ ನಡುವೆ ಉತ್ತಮ ಬಾಂಧವ್ಯ ಇದೆ. ➡ಪುಟ 9





ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,50,000**(2,60,000) ಅಪರಂಜಿ ಚಿನ್ನ: **1,48,860**(1,53,160) ಆಭರಣ ಚಿನ್ನ: **1,36,450**(1,40,400) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **73,983**(64↑) ಎನ್‌ಎಸ್‌ಇ **23,214**(27↓)

$1 = ₹95.71

ಮುಂದುವರಿದ ಐಎಎಸ್ ಅಧಿಕಾರಿಗಳ ವರ್ಗ ಪ್ರಕ್ರಿಯೆ

• **ಬೆಂಗಳೂರು:** ಕಳೆದ ಎರಡು ದಿನಗಳ ಹಿಂದೆಯಷ್ಟೇ ಹಲವು ಐಎಎಸ್ ಅಧಿಕಾರಿಗಳ ವರ್ಗಾವಣೆ ಮಾಡಿ ಆದೇಶ ಮಾಡಿದ್ದ ರಾಜ್ಯ ಸರ್ಕಾರ, ಬುಧವಾರ ಇನ್ನಷ್ಟು ಅಧಿಕಾರಿಗಳನ್ನು ವರ್ಗಾವಣೆ ಮಾಡಿದೆ. ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿರುವ ಅಂಜುಂ ಪರ್ವೇಜ್ ಅವರಿಗೆ ಲೋಕೋಪಯೋಗಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯನ್ನೂ ಸಮವರ್ತಿತ ಪ್ರಭಾರವಾಗಿ ನೀಡಲಾಗಿದೆ.

ರಾಜೇಂದರ್ ಕುಮಾರ್ ಕಠಾರಿಯಾ ಅವರಿಗೆ ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯನ್ನೂ ಸಮವರ್ತಿತ ಪ್ರಭಾರವಾಗಿ ನೀಡಲಾಗಿದೆ. ಕೆ.ಪಿ.ಮೋಹನ ರಾಜ್ ಅವರನ್ನು ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿಯಾಗಿ ನಿಯೋಜಿಸಲಾಗಿದ್ದು, ಸಮವರ್ತಿತ ಪ್ರಭಾರವಾಗಿ ವಸತಿ ಇಲಾಖೆ ಕಾರ್ಯದರ್ಶಿ ಹುದ್ದೆ ವಹಿಸಲಾಗಿದೆ. ಸೆಲ್ವಮಣಿ ಅವರಿಗೆ ಕೆಎಸ್‌ಆರ್‌ಟಿಸಿ ಎಂಡಿಯನ್ನಾಗಿ ಪ್ರಭಾರವಾಗಿ ನೀಡಲಾಗಿದೆ. ಇದರೊಟ್ಟಿಗೆ ಸ್ವಚ್ಛ ಭಾರತ ಮಿಷನ್(ನಗರ)ದ ಮಿಷನ್ ನಿರ್ದೇಶಕ ರಾಗಿಯೂ ಹೆಚ್ಚುವರಿ ಕಾರ್ಯಭಾರ ವಹಿಸಲಾಗಿದೆ. ಹುದ್ದೆ ನಿರೀಕ್ಷೆಯಲ್ಲಿದ್ದ ಡಾ.ಎಂ.ಮಹೇಶ್ ಅವರನ್ನು ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ನೇಮಕ ಮಾಡಲಾಗಿದೆ. ಖುಷ್ಬು ಗೋಯಲ್ ಚೌಧರಿ ಅವರಿಗೆ ಮೂರು ಹೆಚ್ಚುವರಿ ಹುದ್ದೆ ನೀಡಲಾಗಿದೆ. ಇನ್ವೆಸ್ಟ್ ಕರ್ನಾಟಕ ವೇದಿಕೆಯ ಸಿಇಒ, ಎನ್‌ಜಿಇಎಫ್‌ನ ಅಧ್ಯಕ್ಷೆ ಹಾಗೂ ವ್ಯವಸ್ಥಾಪಕ ನಿರ್ದೇಶಕಿ, ಮೈಸೂರು ಲ್ಯಾಂಪ್ಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕಿ ಹುದ್ದೆಗಳನ್ನು ವಹಿಸಲಾಗಿದೆ. ಸಹಕಾರ ಇಲಾಖೆಯ ನಿಬಂಧಕರಾಗಿರುವ ಡಾ.ಎಂ.ವಿ. ವೆಂಕಟೇಶ್ ಅವರಿಗೆ ಯೋಜನೆ, ಕಾರ್ಯಕ್ರಮ ಮೇಲುಸ್ತುವಾರಿ ಹಾಗೂ ಸಾಂಖ್ಯಿಕ ಇಲಾಖೆ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ವಹಿಸಲಾಗಿದೆ.

ಕರ್ತವ್ಯಲೋಪ ಸಲ್ಲ: ಪೊಲೀಸರಿಗೆ ಸೂಚನೆ

• **ಬೆಂಗಳೂರು:** ಕೆಳಹಂತದ ಪೊಲೀಸ್ ಅಧಿಕಾರಿಗಳು ರೌಡಿಗಳ ಜನ್ಮದಿನದ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಊಟಕ್ಕೆ ಹೋಗುವುದು ಅಥವಾ ಅವರೊಂದಿಗೆ ಸೆಲ್ಫಿ ತೆಗೆದುಕೊಳ್ಳುವಂತಹ ಕೃತ್ಯಗಳಲ್ಲಿ ತೊಡಗಬಾರದು ಎಂದು ಸ್ಪಷ್ಟ ನಿರ್ದೇಶನ ನೀಡಲಾಗಿದೆ. ಇಂತಹ ಲೋಪಗಳು ಕಂಡುಬಂದಲ್ಲಿ ಕಠಿಣ ಶಿಸ್ತುಕ್ರಮ ಕೈಗೊಳ್ಳಲಾಗುವುದು ಗೃಹ ಇಲಾಖೆ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.



ಬೆಂಗಳೂರು ನಗರ ಪೊಲೀಸ್ ಆಯುಕ್ತರ ಕಚೇರಿಗೆ ಭೇಟಿ ನೀಡಿ, ಹಿರಿಯ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಪ್ರತಿಯೊಂದು ಠಾಣೆಗಳಲ್ಲೂ ಆಂಟಿ ರೌಡಿ ಸ್ಕ್ವಾಡ್ ರಚಿಸಲು ಈಗಾಗಲೇ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಕೆಳಹಂತದ ಪೊಲೀಸ್ ಅಧಿಕಾರಿಗಳು ರೌಡಿಗಳ ಜನ್ಮದಿನದ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಊಟಕ್ಕೆ ಹೋಗುವುದು ಅಥವಾ ಅವರೊಂದಿಗೆ ಸೆಲ್ಫಿ ತೆಗೆದುಕೊಳ್ಳುವಂತಹ ಕೃತ್ಯಗಳಲ್ಲಿ ತೊಡಗಬಾರದು ಎಂದು ಸ್ಪಷ್ಟ ನಿರ್ದೇಶನ ನೀಡಲಾಗಿದೆ. ಇಂತಹ ಲೋಪಗಳು ಕಂಡುಬಂದಲ್ಲಿ ಕಠಿಣ ಶಿಸ್ತುಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರು ನಗರದ ಪ್ರಮುಖ ಸಮಸ್ಯೆಯಾದ ಟ್ರಾಫಿಕ್ ದಟ್ಟಣೆಯನ್ನು ಕೇವಲ ಮೂಲಸೌಕರ್ಯ ಬದಲಾವಣೆಯಿಂದ ಲ್ಲದೆ, ವ್ಯವಸ್ಥಿತ ಲೋಪದೋಷಗಳನ್ನು ಸರಿಪಡಿಸುವ ಮೂಲಕ ನಿರ್ವಹಿಸಲು ನಿರ್ಧರಿಸಲಾಗಿದೆ. ಇದಕ್ಕಾಗಿ ಬಿಎಂಟಿಸಿ, ಬಿಎಂಆರ್‌ಸಿಎಲ್ ಮತ್ತು ಖಾಸಗಿ ಸಹಭಾಗಿತ್ವದೊಂದಿಗೆ ಬೆಂಗಳೂರು ಅರ್ಬನ್ ಮೊಬಿಲಿಟಿ ಮಿಷನ್ ತಂಡವನ್ನು ರಚಿಸಲಾಗುವುದು. ಇದರ ಸಂಪೂರ್ಣ ನೀಲಿ ನಕ್ಷೆಯನ್ನು ಮುಂದಿನ 2-3 ದಿನಗಳಲ್ಲಿ ಪ್ರಕಟಿಸಲಾಗುವುದು ಎಂದು ಹೇಳಿದರು.

ಬೆಂಗಳೂರು ಜಾಗತಿಕ ಮಟ್ಟದಲ್ಲಿ 4ನೇ ಅತಿ ದೊಡ್ಡ ತಂತ್ರಜ್ಞಾನ ಕ್ಲಸ್ಟರ್ ಆಗಿರುವುದರಿಂದ ಇಲ್ಲಿ ಸೈಬರ್ ಅಪರಾಧಗಳು ಹೆಚ್ಚುತ್ತಿವೆ. ಸೈಬರ್ ಅಪರಾಧಿಗಳನ್ನು ಮಟ್ಟ ಹಾಕಲು ಗೃಹ ಇಲಾಖೆ, ಐಟಿ-ಬಿಟಿ ಮತ್ತು ಇ-ಆಡಳಿತ ಇಲಾಖೆಗಳನ್ನು ಒಗ್ಗೂಡಿಸಿ ಸಮಗ್ರ ನೀತಿಯನ್ನು ತರಲಾಗುವುದು. ಮುಂದಿನ ವಾರ ಖಾಸಗಿ ತಂತ್ರಜ್ಞಾನ ಸಂಸ್ಥೆಗಳೊಂದಿಗೆ ಸಭೆ ನಡೆಸಿ, ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಸೇಫ್ಟಿ ಗಾರ್ಡ್ ರೈಲ್ಸ್ ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಮಾದಕ ದ್ರವ್ಯ ಮುಕ್ತ ಬೆಂಗಳೂರು: ಮಾದಕ ದ್ರವ್ಯ ಜಾಲದ ವಿರುದ್ಧ ಗೃಹ ಇಲಾಖೆ ಸಮರ ಸಾರಿದೆ. ನೆರೆ ರಾಜ್ಯಗಳಾದ ಕೇರಳ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಿಂದ ಸಣ್ಣ ಪ್ರಮಾಣದಲ್ಲಿ ಬರುವ ಮಾತ್ರೆಗಳು ಹಾಗೂ ಸೈಕೋಟ್ರೋಪಿಕ್ ಪದಾರ್ಥಗಳನ್ನು ಪತ್ತೆಹಚ್ಚಲು ಗಡಿಭಾಗಗಳಲ್ಲಿ ಹೆಚ್ಚಿನ ಟೆಸ್ಟಿಂಗ್ ಕಿಟ್‌ಗಳನ್ನು ಒದಗಿಸಲಾಗುವುದು. ವಿದೇಶಿ ಪ್ರಜೆಗಳ ಕಾನೂನುಬಾಹಿರ ವಾಸ್ತವ್ಯ ಹಾಗೂ ಡಿಪೋರ್ಟೇಶನ್ (ಗಡಿಪಾರು) ಪ್ರಕ್ರಿಯೆ ಯನ್ನು ವೇಗಗೊಳಿಸಲು ಕೇಂದ್ರ ಸರ್ಕಾರದ ವಿದೇಶಾಂಗ ಸಚಿವಾಲಯದೊಂದಿಗೆ ಚರ್ಚಿಸಲಾಗುವುದು ಎಂದು ಹೇಳಿದರು.

ಅಮೆರಿಕ-ಇರಾನ್ ಸಂಘರ್ಷ ಮತ್ತೆ ಉಲ್ಬಣ

ಪುಟ 0➡ ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಬುಧವಾರ ಬಹ್ರೇನ್, ಕುವೈತ್ ಮತ್ತು ಜೋರ್ಡಾನ್‌ನಲ್ಲಿರುವ 21 ಅಮೆರಿಕನ್ ಗುರಿಗಳ ಮೇಲೆ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದೆ. ಈ ದಾಳಿಯಲ್ಲಿ ಅಮೆರಿಕದ ಫಿಫ್ತ್ ಫ್ಲೀಟ್, ಅಲಿ ಅಲ್ ಸೇಲಂ ವಾಯುನೆಲೆ ಮತ್ತು ಅಜ್ರಾಕ್‌ನಲ್ಲಿರುವ ವಾಯುನೆಲೆಗಳನ್ನು ಗುರಿಯಾಗಿಸಲಾಗಿದ್ದು, ಯುದ್ಧ ವಿಮಾನದ ಹ್ಯಾಂಗರ್ ಸೇರಿದಂತೆ ನಾಲ್ಕು ಗುರಿಗಳನ್ನು ಧ್ವಂಸಗೊಳಿಸಿರುವುದಾಗಿ ಇರಾನ್ ಹೇಳಿಕೊಂಡಿದೆ. ಮಂಗಳವಾರ ತನ್ನ ಅಪಾಚೆ ಹೆಲಿಕಾಪ್ಟರ್ ಹೊಡೆದುರುಳಿಸಿದ ಹಿನ್ನೆಲೆಯಲ್ಲಿ, ಅಮೆರಿಕ ಸೇನೆ ಹಾರ್ಮುಜ್ ಜಲಸಂಧಿಯ ಕೇಶ್ಮ್ ದ್ವೀಪ ಮತ್ತು ಇರಾನ್ ಬಂದರುಗಳ ಮೇಲೆ ದಾಳಿ ನಡೆಸಿತ್ತು. ಇದಕ್ಕೆ ಪ್ರತಿಯಾಗಿ ಇರಾನ್ ಈ ದಾಳಿ ನಡೆಸಿದೆ. ಈ ನಡುವೆ ಟ್ರಂಪ್, ಶಾಂತಿ ಮಾತುಕತೆಯಿಂದ ಇರಾನ್ ಹಿಂದೆ ಸರಿಯುತ್ತಿದೆ ಎಂದು ಆರೋಪಿಸಿದ್ದಾರೆ.

ಯುಎಸ್ ವಾಯು ದಾಳಿ: ಇರಾನ್ ನೆಲೆಗಳು ಧ್ವಂಸ

ವಾಷಿಂಗ್ಟನ್: ಗಲ್ಫ್ ವಲಯದಲ್ಲಿ ಅಮೆರಿಕದ ಅಪಾಚೆ ಹೆಲಿಕಾಪ್ಟರ್ ಹೊಡೆದುರುಳಿಸಿದ ಕ್ರಮಕ್ಕೆ ಪ್ರತಿಯಾಗಿ ಯುಎಸ್ ಸೇನೆ ಇರಾನ್‌ನ ಮಿಲಿಟರಿ ಮತ್ತು ಕಣ್ಗಾವಲು ನೆಲೆಗಳ ಮೇಲೆ ಗುರಿ ಆಧಾರಿತ ವಾಯು ದಾಳಿ ನಡೆಸಿದೆ. ಸ್ಟ್ರೇಟ್ ಆಫ್ ಹಾರ್ಮುಜ್ ಬಳಿಯ ವಾಯು ರಕ್ಷಣಾ ವ್ಯವಸ್ಥೆಗಳು, ನಿಯಂತ್ರಣ ಕೇಂದ್ರಗಳು ಮತ್ತು ರಾಡಾರ್ ನೆಲೆಗಳನ್ನು ಗುರಿಯಾಗಿಸಿ ಈ ಕಾರ್ಯಾಚರಣೆ ನಡೆಸಲಾಗಿದೆ ಎಂದು ಸೆಂಟ್ರಲ್ ಕಮಾಂಡ್ ತಿಳಿಸಿದೆ. ಸೋಮವಾರ ಗಸ್ತು ತಿರುಗುತ್ತಿದ್ದ ಹೆಲಿಕಾಪ್ಟರ್ ಅನ್ನು ಇರಾನ್ ಡ್ರೋನ್ ಹೊಡೆದುರುಳಿಸಿದ ನಂತರ ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ದಾಳಿಗೆ ಆದೇಶಿಸಿದ್ದರು. ಹೆಲಿಕಾಪ್ಟರ್‌ನಲ್ಲಿದ್ದ ಇಬ್ಬರು ಸಿಬ್ಬಂದಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್, ಬಹ್ರೇನ್ ಮತ್ತು ಜೋರ್ಡಾನ್‌ನಲ್ಲಿರುವ ಯುಎಸ್ ನೆಲೆಗಳ 21 ಗುರಿಗಳ ಮೇಲೆ ದಾಳಿ ನಡೆಸಿದೆ. ಯುಎಸ್ ದಾಳಿಯಿಂದ ಜಾಸ್ಕ್, ಸಿರಿಕ್ ಮತ್ತು ಕೇಶ್ಮ್‌ನಲ್ಲಿ ಟೆಲಿಕಾಂ ಟವರ್ ಹಾಗೂ ನೀರಿನ ಟ್ಯಾಂಕ್‌ಗಳಿಗೆ ಹಾನಿಯಾಗಿದೆ ಎಂದು ಐಆರ್‌ಜಿಸಿ ಹೇಳಿಕೊಂಡಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಎಲ್ಲರೂ ಬದುಕೆಂಬ ಜೀವನ ಸೌಂದರ್ಯವನ್ನು ಸವಿಯುವುದೇ ಧರ್ಮ, ತನ್ನ ಸ್ವಾರ್ಥಕ್ಕಾಗಿ ಅನ್ಯರ ಮೇಲೆ ಬಾಂಬ್ ಹಾಕುವುದು ಧರ್ಮವಲ್ಲ - ಡಾ. ಚಾರುಕೀರ್ತಿ ಪಂಡಿತಾಚಾರ್ಯ ಮಹಾ ಸ್ವಾಮೀಜಿ
- ಧರ್ಮದ ಹೆಸರಿನಲ್ಲಿ ಬಾಂಬ್ ಹಾಕುವ ದುಷ್ಟರನ್ನು ದಂಡಿಸುವುದೂ ಧರ್ಮ, ಏಕೆಂದರೆ ಧರ್ಮದಲ್ಲಿ ದುಷ್ಟ ಸಂಹಾರವೂ ಸೇರಿದೆ!

ದಿನ ಭವಿಷ್ಯ

ಮೇಷ ಈ ದಿನ ನಿಮ್ಮದು. ಪೂರ್ಣವಾಗಿ ಆನಂದಿಸಿ. ಗುರಿ ಸಾಧನೆಯ ಹಾದಿ ಸುಗಮ. ವಾದಕ್ಕೆ ಕಿವಿಗೊಡಬೇಡಿ. ಕೌಟುಂಬಿಕ ಸಾಮರಸ್ಯ.

ವೃಷಭ ಎಲ್ಲ ಕೆಲಸ ಸರಾಗವಾಗಿ ಸಾಗುವಂತೆ ಯೋಜನೆ ರೂಪಿಸಿ. ಸಮಸ್ಯೆ ಪರಿಹಾರ ಕಷ್ಟವಲ್ಲ. ಸಮಾಧಾನದ ನಡೆ ಅತ್ಯವಶ್ಯ.

ಮಿಥುನ ವೃತ್ತಿಯಲ್ಲಿ ಫಲಪ್ರದ ಬೆಳವಣಿಗೆ. ನಿರ್ಧಾರ ಫಲ ನೀಡಲಿದೆ. ಹೊಸ ವಾಹನ ಖರೀದಿಯ ಬಯಕೆ ಈಡೇರುವ ಕಾಲ ಬಂದಿದೆ. ಧನಾಗಮ.

ಕಟಕ ಶಾಂತಚಿತ್ತರಾಗಿ ಇಂದು ವರ್ತಿಸಿ. ಸಹನೆ ಕೆಣಕುವ ವಿದ್ಯಮಾನ ಉಂಟಾದೀತು. ಆಪ್ತರಿಂದ ವಿಶ್ವಾಸದ್ರೋಹ. ಭಾವಾವೇಶ ನಿಯಂತ್ರಿಸಿ.

ಸಿಂಹ ಹೆಚ್ಚು ಫಲ ನೀಡದ ದಿನ. ಶ್ರಮ ವ್ಯರ್ಥ. ದೈಹಿಕ ನೋವು ಅನುಭವಿಸುವಿರಿ. ಧ್ಯಾನ, ಯೋಗ ನಿಮಗೆ ಸಹಕಾರಿಯಾದೀತು. ಆರ್ಥಿಕ ಒತ್ತಡ.

ಕನ್ಯಾ ಕೆಲಸದ ಒತ್ತಡ, ನಿಮ್ಮ ದಿನಚರಿಯನ್ನು ಬದಲಿಸಬೇಕಾದೀತು. ಕುಟುಂಬಸ್ಥರ ಜತೆ ತಾಳ್ಮೆಯಿಂದ ವ್ಯವಹರಿಸಿ.

ತುಲಾ ಆತ್ಮವಿಶ್ವಾಸ ಹೆಚ್ಚಿಸುವ ಬೆಳವಣಿಗೆ. ಗುರಿ ಸಾಧನೆಗೆ ಬದ್ಧರಾಗಿ. ನಿಮಗೆ ಅನುಕೂಲಕರ ಪರಿಸ್ಥಿತಿ ನಿರ್ಮಾಣ. ಬಂಧು ಜತೆ ಚಕಮಕಿ.

ವೃಶ್ಚಿಕ ಕೆಲವರ ಮೇಲೆ ಅನುಮಾನ ಪಡುವ ಸ್ವಭಾವ ಬಿಟ್ಟುಬಿಡಿ. ಹಣದ ವಿಚಾರದಲ್ಲಿ ಮಹತ್ವದ ನಿರ್ಧಾರ ತಾಳಬೇಡಿ. ಕಾಯಿರಿ.

ಧನು ಕೆಲವು ಪರಿಸ್ಥಿತಿಯ ಕಾರಣದಿಂದ ಆತ್ಮವಿಶ್ವಾಸ ಕುಂದುವುದು. ಹಿಂಜರಿಕೆ ಬಿಟ್ಟು ಕಾರ್ಯವೆಸಗಿ. ದೈವಬಲ ನಿಮಗಿದೆ. ಕಾರ್ಯಸಿದ್ಧಿ ಆಗಲಿದೆ.

ಮಕರ ಎಂದಿಗಿಂತ ಹೆಚ್ಚು ಕೆಲಸದ ಒತ್ತಡ. ಯಾವುದೇ ವಿಚಾರಕ್ಕೆ ಅತಿರೇಕದ ಪ್ರತಿಕ್ರಿಯೆ ತೋರದಿರಿ. ತಾಳ್ಮೆ ತಪ್ಪಿ ವರ್ತಿಸಬೇಡಿ.

ಕುಂಭ ಮನಸ್ಸಿಗೆ ಶಾಂತಿ ಬೇಕೆ? ಸಣ್ಣಪುಟ್ಟ ಸಂಘರ್ಷಗಳಿಂದ ದೂರ ಇರಿ. ಸಮಸ್ಯೆ ಸೃಷ್ಟಿಸುವ ವ್ಯಕ್ತಿಗಳನ್ನು ನಿಮ್ಮಿಂದ ದೂರ ಇಟ್ಟುಕೊಳ್ಳಿ.

ಮೀನ ಏಕಾಗ್ರತೆ ಕಳಕೊಳ್ಳದೆ ನಿಮ್ಮ ಕೆಲಸ ಮಾಡಿ. ಸಮಯದೊಳಗೆ ಮುಗಿಸಿ. ಸಂಗಾತಿ ಜತೆ ವಾಗ್ವಾದ ನಡೆದೀತು. ತಾಳ್ಮೆ ಕಾಯ್ದುಕೊಳ್ಳಿರಿ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 0,5,2,7

ಡಬಲ್ ಡೆಕ್ಕರ್ ಮೇಲ್ಸೇತುವೆ ನಿರ್ಮಾಣ | ಕೇಂದ್ರದ ಅನುಮತಿಗೆ ಡಿಕೆಶಿ ಮನವಿ

ಬದಲಾವಣೆ ಪ್ರಸ್ತಾಪ

• **ಬೆಂಗಳೂರು:** ಮೆಟ್ರೋ ಮೂರನೇ ಹಂತ ಯೋಜನೆಯಲ್ಲಿ 44.65 ಕಿ.ಮೀ ಉದ್ದದ ಡಬಲ್‌ಡೆಕ್ಕರ್ ಮೇಲ್ಸೇತುವೆ ನಿರ್ಮಾಣಕ್ಕೆ ಸರ್ಕಾರ ಮುಂದಾಗಿದ್ದು, ಯೋಜನೆಯಲ್ಲಿ ಸಣ್ಣ ಬದಲಾವಣೆ ಪ್ರಸ್ತಾಪ ಮಾಡಿದ್ದು, ಇದಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡ ಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.



ಬುಧವಾರ ಹೊಸದಿಲ್ಲಿಯಲ್ಲಿ ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವ ಮನೋಹರಲಾಲ್ ಖಟ್ಟರ್ ಅವರನ್ನು ಭೇಟಿ ಮಾಡಿ ಅಹವಾಲು ಸಲ್ಲಿಸಿದರು ಮೆಟ್ರೋ ಮೂರನೇ ಹಂತ ಯೋಜನೆಯಲ್ಲಿ 44.65 ಕಿ.ಮೀ ಉದ್ದದ ಡಬಲ್ ಡೆಕ್ಕರ್ ಮೇಲ್ಸೇತುವೆ ನಿರ್ಮಾಣಕ್ಕೆ ಸರ್ಕಾರ (ಬಿಎಂಆರ್‌ಸಿಎಲ್) ಮುಂದಾಗಿದೆ. ದೆಹಲಿಯಲ್ಲಿ ರಾಜ್ಯ ಸರಕಾರದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಎಲ್.ಕೆ. ಅತೀಕ್, ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಕಾರ್ಯದರ್ಶಿ ರಾಜೇಂದ್ರ ಚೋಳನ್ ಉಪಸ್ಥಿತರಿದ್ದರು.

> 2024ರ ಸೆ.13ರಂದು ಕೇಂದ್ರ ಸರ್ಕಾರ ಇದಕ್ಕೆ ಅನುಮತಿ ನೀಡಿತ್ತು. ಈ ಯೋಜನೆಯ ವೆಚ್ಚ 9,700 ಕೋಟಿ ರೂ. ಅನ್ನು ಕರ್ನಾಟಕ ಸರ್ಕಾರವೇ ಭರಿಸಲಿದೆ. ಆದರೆ, ಕಳೆದ ಜ.19ರಂದು ಬಿಎಂಆರ್‌ಸಿಎಲ್ ಮಂಡಳಿಯ 118ನೇ ಸಭೆಯಲ್ಲಿ ಸಣ್ಣ ಬದಲಾವಣೆ ಪ್ರಸ್ತಾಪ ಮಾಡಲಾಗಿದೆ. ಇದಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಬೇಕು.
> ■ ಡಿ.ಕೆ.ಶಿವಕುಮಾರ್, ಸಿಎಂ

ಮನವಿಯಲ್ಲಿರುವ ಇತರೆ ಅಂಶಗಳು

1 **ಮೆಟ್ರೋ ಎರಡನೇ ಹಂತದ ಪರಿಷ್ಕೃತ ಯೋಜನಾ ವೆಚ್ಚಕ್ಕೆ ಅನುಮತಿ:** ಈ ಯೋಜನೆಗೆ ಕೇಂದ್ರ ಸರ್ಕಾರ 21-02-2014ರಂದು 26,405.14 ಕೋಟಿ ರೂ. ಅಂದಾಜು ವೆಚ್ಚಕ್ಕೆ ಅನುಮತಿ ನೀಡಿತ್ತು. 72.095 ಕಿ.ಮೀ ಉದ್ದ ಹಾಗೂ 61 ನಿಲ್ದಾಣಗಳನ್ನು ಒಳಗೊಂಡಿರುವ ಈ ಯೋಜನೆ ಅಂದಾಜು ವೆಚ್ಚ ಈಗ 40,425.02 ಕೋಟಿ ರೂ.ಗೆ ಅಂದರೆ 14,019.88 ಕೋಟಿ ರೂ. ಏರಿಕೆ ಮಾಡಲಾಗಿದ್ದು, ಆದಷ್ಟು ಬೇಗ ಈ ಪರಿಷ್ಕೃತ ಯೋಜನಾ ವೆಚ್ಚಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಬೇಕು.

2 **ಮೆಟ್ರೋ ಮೂರನೇ ಎ ಹಂತಕ್ಕೆ ಅನುಮತಿ:** ಈ ಯೋಜನೆ ಸರ್ಜಾಪುರದಿಂದ ಹೆಬ್ಬಾಳದವರೆಗೆ ಒಟ್ಟು 37.804 ಕಿ.ಮೀ (14.28 ಕಿ.ಮೀ ಸುರಂಗ ಹಾಗೂ 23.524 ಕಿ.ಮೀ ಮೇಲ್ಸೇತುವೆ) ಉದ್ದವಿದ್ದು, ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ಕೆಲವು ಮಾರ್ಪಾಡು ಮಾಡಲಾಗಿದ್ದು, 25,999 ಕೋಟಿ ರೂ. ಅಂದಾಜು ವೆಚ್ಚದ ಪರಿಷ್ಕೃತ ಡಿಪಿಆರ್ ಅನ್ನು 29-04-2026ರಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಕೆ ಮಾಡಲಾಗಿದ್ದು, ಆದಷ್ಟು ಬೇಗ ಇದಕ್ಕೆ ಅನುಮತಿ ನೀಡಬೇಕು.

3 **ಪ್ರಾದೇಶಿಕ ಕ್ಷಿಪ್ರ ರೈಲು ಸಾರಿಗೆ ವ್ಯವಸ್ಥೆ (ಖಖ) ಜಾರಿಗೆ ಅನುಮತಿ:** ಬೆಂಗಳೂರು - ಮೈಸೂರು, ಬೆಂಗಳೂರು-ಕನಕಪುರ, ಬೆಂಗಳೂರು-ತುಮಕೂರು, ಬೆಂಗಳೂರು- ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು- ಕೋಲಾರ ನಡುವೆ ಪ್ರಾದೇಶಿಕ ಕ್ಷಿಪ್ರ ರೈಲು ಸಾರಿಗೆ ವ್ಯವಸ್ಥೆ (RRTS) ಜಾರಿಗೆ ಅನುಮತಿ ನೀಡಬೇಕು.

423 ಕೋಟಿ ರೂ. ಮೌಲ್ಯದ ವಿದ್ಯುತ್ ಮಾರಾಟ: ಜಾರ್ಜ್

• **ಬೆಂಗಳೂರು:** ರಾಜ್ಯವು ಕಳೆದ ಎರಡೂವರೆ ತಿಂಗಳಲ್ಲಿ ಪ್ರತಿ ಯೂನಿಟ್‌ಗೆ 9.08 ಪೈಸೆಯಂತೆ ಬರೋಬ್ಬರಿ 423 ಕೋಟಿ ರೂ. ಮೌಲ್ಯದ ವಿದ್ಯುತ್ತನ್ನು ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಮೂಲಕ ರಾಷ್ಟ್ರೀಯ ಗ್ರಿಡ್‌ಗೆ ಮಾರಾಟ ಮಾಡಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.



ಬೆಸ್ಕಾಂ ಕಾರ್ಪೊರೇಟ್ ಕಚೇರಿಯಲ್ಲಿ ಹಿರಿಯ ಅಧಿಕಾರಿಗಳ ಸಭೆ ಕರೆದಿದ್ದ ಅವರು ಮಾನ್ಸೂನ್ ಸಿದ್ಧತೆ, ಕುಸುಮ್ ಯೋಜನೆ, ಮುಖ್ಯಮಂತ್ರಿ ಸೌರ ಕೃಷಿ ಯೋಜನೆಸೇರಿದಂತೆವಿವಿಧಯೋಜನೆಗಳ ಪ್ರಗತಿ ಪರಿಶೀಲಿಸಿ, ಮಾತನಾಡಿದ ಅವರು, 2026 ಏಪ್ರಿಲ್ ನಿಂದ ಜೂನ್ 8ರವರೆಗಿನ ಅವಧಿಯಲ್ಲಿ 423 ಕೋಟಿ ರೂ. ಮೌಲ್ಯದ ವಿದ್ಯುತನ್ನು ರಾಷ್ಟ್ರೀಯ ಗ್ರಿಡ್‌ಗೆ ಮಾರಾಟ ಮಾಡಿದ್ದೇವೆ. ವಿದ್ಯುತ್ ಉತ್ಪಾದನೆ, ಗ್ರಿಡ್ ನಿರ್ವಹಣೆ ಮತ್ತು ಇಂಧನ ಮಾರುಕಟ್ಟೆಯಲ್ಲಿ ವ್ಯಾವಹಾರಿಕ ಜಾಣ್ಮೆಯ ಫಲ ಇದು ಎಂದು ಹೇಳಿದರು.

2026-27ನೇ ಸಾಲಿನಲ್ಲಿ ಏಪ್ರಿಲ್ 1ರಿಂದ ಜೂನ್ 8ರವರೆಗೆ 21,789 ಮಿಲಿಯನ್ ಯೂನಿಟ್ ಬಳಕೆಯಾಗಿದೆ. ಇದು ಶೇ. 22.39ರಷ್ಟು ಏರಿಕೆಯಾಗಿದ್ದು, ಹಿಂಗಾರು ವೈಫಲ್ಯದಿಂದ ಬಳಕೆ ಹೆಚ್ಚಾಗಿದೆ ಎಂದು ಮಾಹಿತಿ ನೀಡಿದರು.

ಅಗತ್ಯ ಸಾಮಗ್ರಿಗಳ ದಾಸ್ತಾನಿದೆ

ಈವರೆಗೆ ಎಲ್ಲಾ ಎಸ್ಕಾಂಗಳ ವ್ಯಾಪ್ತಿಯಲ್ಲಿ ಹಾನಿಗೊಳಗಾದ 33,400 ಕಂಬಗಳು, 1,441 ಟಿಸಿಗಳು ಮತ್ತು 343.56 ಕಿ.ಮೀ. ವಿದ್ಯುತ್ ಮಾರ್ಗಗಳನ್ನು ಬದಲಾಯಿಸಲಾಗಿದೆ. ಸದ್ಯ 20,012 ಲೈನ್‌ಮ್ಯಾನ್‌ಗಳು ಕಾರ್ಯ ನಿರ್ವಹಿಸುತ್ತಿದ್ದು, ಮಳೆಗಾಲದ ಕಾರ್ಯಾಚರಣೆಗಾಗಿ ಹೆಚ್ಚುವರಿಯಾಗಿ 4,883 ಲೈನ್‌ಮ್ಯಾನ್‌ಗಳನ್ನು ನೇಮಿಸಲಾಗಿದೆ. 99,530 ಕಂಬಗಳು ಮತ್ತು 12,733 ಟಿಸಿಗಳು ಸೇರಿದಂತೆ ಅಗತ್ಯ ಸಾಮಗ್ರಿಗಳ ದಾಸ್ತಾನಿದೆ ಎಂದು ಅಧಿಕಾರಿಗಳು ಸಚಿವರಿಗೆ ಮಾಹಿತಿ ನೀಡಿದರು.

> ಮಳೆ ಮತ್ತು ಗಾಳಿಯಿಂದಾಗುವ ಹಾನಿ ನಂತರ ವಿದ್ಯುತ್ ಅನ್ನು ತ್ವರಿತವಾಗಿ ಪುನಃಸ್ಥಾಪಿಸಿ ಜನರಿಗೆ ಯಾವುದೇ ರೀತಿ ಸಮಸ್ಯೆ ಆಗದಂತೆ ಎಚ್ಚರವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ.
> ■ ಕೆ.ಜೆ. ಜಾರ್ಜ್, ಇಂಧನ ಸಚಿವ

ರಾಜ್ಯಸಭೆಯ ವ್ಯಾಮೋಹವಿಲ್ಲ: ಎಚ್ಡಿಡಿ

ಪುಟ 0➡ ಒಂದು ರಾಜ್ಯಸಭೆ ಸ್ಥಾನ ಇಂತಹ ಉತ್ತಮ ಬಾಂಧವ್ಯವನ್ನು ಹಾಳು ಮಾಡುತ್ತದೆ ಎಂದು ಯಾರಾದರೂ ಭಾವಿಸಿದ್ದರೆ ಅದು ಅವರ ಮೂರ್ಖತನ ಎಂದು ನೇರವಾಗಿ ಹೇಳಿದರು.

ಕಾಂಗ್ರೆಸ್ ನಾಟಕದ ಬಗ್ಗೆ ನನಗೆ ಗೊತ್ತು: ಒಂದು ಕಾಲದಲ್ಲಿ ನಾನು ಮೋದಿ ಅವರನ್ನು ಕಟುವಾಗಿ ಟೀಕಿಸಿದ್ದೆ ಎಂಬುದು ನಿಜ. ಆದರೆ ಕಳೆದ ಹಲವು ವರ್ಷಗಳಿಂದ ನಾನು ಅವರನ್ನು ಬಹಳಷ್ಟು ಅರ್ಥ ಮಾಡಿಕೊಂಡಿದ್ದೇನೆ. ಅವರಲ್ಲಿ ವಿಶ್ವಾಸ ಇರಿಸಿದ್ದೇನೆ. ಅವರ ಒಳ್ಳೆಯ ಕೆಲಸಗಳನ್ನು ಹೃದಯಪೂರ್ವಕವಾಗಿ ಶ್ಲಾಘಿಸಿದ್ದೇನೆ ಎಂದರು. ಇವತ್ತು ಒಂದು ವಿಷಯ ಇಟ್ಟುಕೊಂಡು ನನ್ನ ಬಗ್ಗೆ ಇಷ್ಟೆಲ್ಲಾ ಅನುಕಂಪದ ನಾಟಕ ಆಡುತ್ತಿರುವ ಕಾಂಗ್ರೆಸ್ ನಾಯಕರು ಹಿಂದೆಲ್ಲಾ ನನ್ನ ವಿಚಾರದಲ್ಲಿ ಹೇಗೆಲ್ಲಾ ನಡೆದುಕೊಂಡರು ಎಂಬುದು ಗೊತ್ತಿದೆ. ಇದರ ಬಗ್ಗೆ ಹೇಳುತ್ತಾ ಹೋದರೆ ಬಹಳಷ್ಟು ಹೇಳಬಹುದು. ನನಗೆ ಅದರ ಬಗ್ಗೆ ಆಸಕ್ತಿ ಇಲ್ಲ ಎಂದು ತಿಳಿಸಿದರು. ಕೆಲವರು ಸುಖಾಸುಮ್ಮನೆ ಮಾತಾಡುತ್ತಿದ್ದಾರೆ. ಈ ವಿಚಾರದಲ್ಲಿ ನನಗೆ ಅಪಮಾನವಾಗಿದೆ ಎಂಬ ಹೇಳಿಕೆಗಳಿಗೆ ನಾನು ಯಾವುದೇ ಮಹತ್ವ ನೀಡುವುದಿಲ್ಲ, ಅದರಲ್ಲಿ ಯಾವುದೇ ಅರ್ಥವೂ ಇಲ್ಲ. ಸುದೀರ್ಘ ರಾಜಕೀಯ ಜೀವನದಲ್ಲಿ ಅಧಿಕಾರಕ್ಕಿಂತ ಜನಸೇವೆಯೇ ಮುಖ್ಯವಾಗಿತ್ತು ಎಂಬುದನ್ನು ಅತ್ಯಂತ ವಿನಯಪೂರ್ವಕವಾಗಿ ಹೇಳಲು ಬಯ ಸುತ್ತೇನೆ ಎಂದರು.

ನನ್ನ-ಮೋದಿ ಸಂಬಂಧಕ್ಕಿಲ್ಲ ಧಕ್ಕೆ

ನರೇಂದ್ರ ಮೋದಿ ಅವರ ಬಗ್ಗೆ ಭಾರತ ಅಷ್ಟೇ ಅಲ್ಲ, ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಗೌರವಭಾವ ಇದೆ. ಅದರಿಂದ ರಾಷ್ಟ್ರಕ್ಕೂ ಒಳ್ಳೆಯದಾಗುತ್ತಿದೆ. ಅವರ ಮಟ್ಟಕ್ಕೆ ಯಾವ ನಾಯಕನೂ ಬೆಳೆಯಲು ಸಾಧ್ಯವಿಲ್ಲ. ಅವರೊಂದಿಗೆ ನಾನು ಹೊಂದಿರುವ ಬಾಂಧವ್ಯ ವೈಯಕ್ತಿಕ. ಅದನ್ನು ರಾಜಕೀಯ ಕಾರಣಕ್ಕಾಗಿ ಕಳೆದುಕೊಳ್ಳಲು ಬಯಸುವುದಿಲ್ಲ. ನಾನು ಸಂಸತ್ತಿನಲ್ಲಿ ಇರಲಿ, ಇಲ್ಲದಿರಲಿ ಮೋದಿ ಅವರ ನಡುವಿನ ಸಂಬಂಧಕ್ಕೆ ಧಕ್ಕೆ ಬರುವುದಿಲ್ಲ. ಕೊನೆಯವರೆಗೂ ನಮ್ಮ ಸಂಬಂಧ ಹೀಗೇ ಇರುತ್ತದೆ ಎಂದರು.

ರಾಜ್ಯಸಭೆಗೆ ಬೇಡಿಕೆ ಇಟ್ಟಿರಲಿಲ್ಲ



ಕೆಲವರು ನನ್ನ ಬಗ್ಗೆ ಕಾಳಜಿಯಿಂದ ಮಾತನಾಡುತ್ತಿದ್ದಾರೆ. ಬಹಳ ಅಪಮಾನವಾಯಿತು ಎಂದು ನೋವು ವ್ಯಕ್ತಪಡಿಸುತ್ತಿದ್ದಾರೆ. ಆದರೆ, ನನ್ನ ಹೆಸರು ಪರಿಗಣನೆಗೆ ಬರುತ್ತದೆ ಎಂದು ಮಾಧ್ಯಮಗಳಲ್ಲಿ ಪ್ರಚಾರವಾಗಿದ್ದು ಬಿಟ್ಟರೆ, ನಾನು ಆ ಬಗ್ಗೆ ಎಲ್ಲಿಯೂ ನನಗೆ ರಾಜ್ಯಸಭೆ ಸ್ಥಾನ ಬೇಕೆಂದು ಬೇಡಿಕೆ ಇಟ್ಟಿರಲಿಲ್ಲ. ಈ ಬಗ್ಗೆ ಕುಮಾರಸ್ವಾಮಿ ಅವರು ಸ್ಪಷ್ಟವಾಗಿಯೇ ಹೇಳಿದ್ದಾರೆ. ಇದರಲ್ಲಿ ಮತ್ತೊಮ್ಮೆ ನಾನು ಹೇಳುವಂಥದ್ದು ಏನೂ ಇಲ್ಲ ಎಂದು ದೇವೇಗೌಡ ಹೇಳಿದರು. ರಾಜ್ಯಸಭೆಗೆ ಸ್ಪರ್ಧಿಸುವ ಆಸಕ್ತಿ ನನಗೆ ಇದ್ದಿದ್ದೇ ಆದಲ್ಲಿ ಕಳೆದ ಮೇ 26ರಂದು ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕಾಗಿ ನವದೆಹಲಿಗೆ ಹೋಗಿದ್ದಾಗ ಪ್ರಧಾನಿಗಳಿಗೆ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಮಾತುಕತೆ ನಡೆಸುತ್ತಿದ್ದೆ. ನಾನು ಯಾರೊಂದಿಗೂ ಈ ಬಗ್ಗೆ ಮಾತುಕತೆ ನಡೆಸಲಿಲ್ಲ. ಅಂದಿನ ಕಾರ್ಯಕ್ರಮ ಮುಗಿದ ಕೂಡಲೇ ನಾನು ಬೆಂಗಳೂರಿಗೆ ವಾಪಸ್ ಬಂದೆ ಎಂದರು.

ಜೂ.21ಕ್ಕೆ ಕೆಪಿಸಿಸಿ ಅಧ್ಯಕ್ಷರಾಗಿ ಹರಿಪ್ರಸಾದ್ ಅಧಿಕಾರ ಸ್ವೀಕಾರ

ಪುಟ 0➡ 2001ರಲ್ಲಿ ಬೆಂಗಳೂರು ಪಾಲಿಕೆ ಚುನಾವಣೆ ನಡೆಸಲು ನನಗೆ ಜವಾಬ್ದಾರಿ ನೀಡಿದ್ದರು. ಹೋಟೆಲ್ ವೇಟ್ಟರ್, ಕಸ ಗುಡಿಸುವವರು ಸೇರಿದಂತೆ ಸಣ್ಣ ಸಮುದಾಯದವರಿಗೆ ಟಿಕೆಟ್ ಕೊಟ್ಟಾಗ ಎಲ್ಲರು ಆಶ್ಚರ್ಯವಾಗಿದ್ದರು. ಆಗ ಎಲ್ಲರೂ ಗೆದ್ದಿದ್ದರು. ನಾವು ಕಾಂಗ್ರೆಸ್ ಪಕ್ಷಕ್ಕಾಗಿ ದುಡಿದಿದ್ದೇವೆ, ನಮಗೆ ಅಧಿಕಾರ ಸಿಗುತ್ತೋ ಇಲ್ಲವೋ ಎಂಬ ಭಾವನೆ ಬೇಡ. ಕಾರ್ಯಾಧ್ಯಕ್ಷರಾದ ಚಂದ್ರಶೇಖರ್ ಹಾಗೂ ಮಂಜುನಾಥ್ ಭಂಡಾರಿ ಅವರು ಸಮೀಕ್ಷೆ ಮಾಡಿಸಿದ್ದಾರೆ. ಹೀಗಾಗಿ ಜಿಬಿಎ ಚುನಾವಣೆಯಲ್ಲಿ ಒಳ್ಳೆಯ ಕಾರ್ಯಕರ್ತ ಗೆಲ್ಲುವ ಅರ್ಹತೆ ಇದ್ದರೆ, ಹಣವಿಲ್ಲದಿದ್ದರೂ ನಿಮಗೆ ಟಿಕೆಟ್ ಸಿಗುವುದು ಗ್ಯಾರಂಟಿ ಎಂದು ಭರವಸೆ ನೀಡಿದರು. ಮುಂದಿನ 2 ವರ್ಷ ಕಾಂಗ್ರೆಸ್ ಕಾರ್ಯಕರ್ತರ ವರ್ಷ. ಈ ಎರಡು ವರ್ಷ ರಾಜ್ಯದ ಚುನಾವಣೆ ಹಾಗೂ ನಂತರದ ಒಂದು ವರ್ಷ ಲೋಕಸಭೆ ಚುನಾವಣೆಯಲ್ಲಿ ನಾವು ಸಕ್ರಿಯವಾಗಿ ಭಾಗವಹಿಸಿ ಬಿಜೆಪಿಯನ್ನು ಮಣಿಸಬೇಕಾಗುತ್ತದೆ ಎಂದರು.

ಇಂದು ನೀತಿ ಆಯೋಗದ ಸಭೆ

ಪುಟ 0➡ ಸಭೆ ಅಧ್ಯಕ್ಷತೆಯನ್ನು ಪ್ರಧಾನಿ ಮೋದಿ ವಹಿಸಲಿದ್ದು, 3 ವರ್ಷಗಳ ಬಳಿಕ ಇದೇ ಮೊದಲ ಬಾರಿ ಕರ್ನಾಟಕದ ಸಿಎಂ ಡಿಕೆಶಿ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಅವರ ಪ್ರತಿನಿಧಿ ಭಾಗಿಯಾಗಿದ್ದರು. ಇದಕ್ಕೂ ಮೊದಲು ಅಂದಿನ ಸಿಎಂ ಬಸವರಾಜ ಬೊಮ್ಮಾಯಿ ಸಭೆಗೆ ಹಾಜರಾಗಿದ್ದರು. ಈ ಸಭೆಯಲ್ಲಿ ವಿವಿಧ ರಾಜ್ಯಗಳ ಸಿಎಂ, ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳು ಭಾಗವಹಿಸಿ ಸಮಗ್ರ ಮಾನವ ಅಭಿವೃದ್ಧಿ ಚೌಕಟ್ಟಿನ ಕುರಿತು ಚರ್ಚಿಸಲಿದ್ದಾರೆ.

ಈ ಚೌಕಟ್ಟು 4 ಪ್ರಮುಖ ಸ್ತಂಭಗಳಾದ ಮೂಲಭೂತ ಮಾನವ ಸಂಪನ್ಮೂಲ, ಭವಿಷ್ಯಕ್ಕೆ ಸಿದ್ಧ ಕೌಶಲಗಳು, ಉತ್ಪಾದಕ ಉದ್ಯೋಗ, ಉದ್ಯಮಶೀಲತೆ, ಆರೋಗ್ಯ, ಅಭಿವೃದ್ಧಿ, ಸಮಾನತೆ, ಘನತೆ ಆಧಾರಿತವಾಗಿದೆ. ಉದ್ಯಮಶೀಲತೆಯನ್ನು ಉತ್ತೇಜಿಸುವುದು, ಕೌಶಲ್ಯಾಭಿವೃದ್ಧಿ, ಸುಸ್ಥಿರ ಉದ್ಯೋಗಾವಕಾಶ ಸೃಷ್ಟಿ ಕುರಿತೂ ಚರ್ಚೆ ನಡೆಯಲಿದೆ. ಆಡಳಿತ ಸುಧಾರಣೆಗಳು, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ, ಸಮನ್ವಯ, ಪಾಲುದಾರಿಕೆಗಳು, ದತ್ತಾಂಶ ಆಧಾರಿತ ವ್ಯವಸ್ಥೆಗಳ ನೆರವಿನಿಂದ ಅನುಷ್ಠಾನ ಮಾರ್ಗಸೂಚಿಯನ್ನು ರೂಪಿಸುವುದರ ಮೇಲೆ ಚರ್ಚೆಗಳು ಕೇಂದ್ರೀಕರಿಸಿರಲಿವೆ ಎನ್ನಲಾಗಿದೆ.

ಸೋನಿಯಾಗೆ ಧನ್ಯವಾದ ಹೇಳಿದ ಸಿಎಂ

ಪುಟ 0➡ ಸಂಜೆ ಐಎಎಸ್ ಅಧಿಕಾರಿಗಳ ಜತೆ ಔತಣಕೂಟದಲ್ಲಿ ಭಾಗಿಯಾದರು. ಔತಣಕೂಟದ ವೇಳೆ ಉಪ ಮುಖ್ಯಮಂತ್ರಿ, ಹೊಸದಿಲ್ಲಿ ವಿಶೇಷ ಪ್ರತಿನಿಧಿ ಇದ್ದರು.

ಬಂಡಾಯ ಕ್ಯಾಂಪ್ ಸೇರಿದ 19 ಟಿಎಂಸಿ ಸಂಸದರು

ಪುಟ 0➡ ಪಕ್ಷಾಂತರ ವಿರೋಧಿ ನಿಯಮಗಳಡಿ ಅನರ್ಹತೆಯನ್ನು ತಪ್ಪಿಸುವ ಉದ್ದೇಶದಿಂದ, ಈ ಗುಂಪು ಟಿಎಂಸಿಗೆ ರಾಜೀನಾಮೆ ನೀಡದೆ ಎನ್‌ಡಿಎಗೆ ಬೆಂಬಲ ನೀಡುವ ಮೂಲಕ ಪ್ರತ್ಯೇಕ ಬಣವಾಗಿ ಕಾರ್ಯನಿರ್ವಹಿಸಲು ಸಿದ್ಧತೆ ನಡೆಸುತ್ತಿದೆ.

ಸ್ಪೀಕರ್ ಓಂ ಬಿರ್ಲಾಗೆ ಪತ್ರ: ಟಿಎಂಸಿ ಪ್ರಸ್ತುತ 28 ಲೋಕಸಭಾ ಸಂಸದರನ್ನು ಹೊಂದಿದೆ. ಬಸಿರ್‌ಹತ್ ಸಂಸದ ಹಾಜಿ ನೂರುಲ್ ಇಸ್ಲಾಂ ನಿಧನದ ನಂತರ ಒಂದು ಸ್ಥಾನ ತೆರವಾಗಿದೆ. ಎನ್‌ಡಿಎಗೆ ತಮ್ಮ ಗುಂಪಿನ ಬೆಂಬಲ ತಿಳಿಸಲು ಬಂಡಾಯ ನಾಯಕಿ ಕಾಕೋಲಿ ಘೋಷ್ ದಸ್ತಿದಾರ್ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆಯಲು ಯೋಜಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ದಸ್ತಿದಾರ್ ಅವರೇ ಲೋಕಸಭೆಯಲ್ಲಿ ಪಕ್ಷದ ಮುಖ್ಯ ಸಚೇತಕರಾಗಿ ಮುಂದುವರಿದಿದ್ದಾರೆ ಎಂದು ಭಿನ್ನಮತೀಯ ಸಂಸದರು ವಾದಿಸಿದ್ದಾರೆ.

ರಾಹುಲ್- ಅಭಿಷೇಕ್ ಭೇಟಿ: ಇಂಡಿ ಕೂಟದ ಸಮನ್ವಯ ಬಲಪಡಿಸುವ ಪ್ರಯತ್ನಗಳ ನಡುವೆ ರಾಹುಲ್ ಗಾಂಧಿ ಮತ್ತು ಅಭಿಷೇಕ್ ಬ್ಯಾನರ್ಜಿ ದೆಹಲಿಯಲ್ಲಿ ಭೇಟಿಯಾಗಿದ್ದಾರೆ. ಈ ಸಭೆ, ಮಮತಾ ಬ್ಯಾನರ್ಜಿ, ಸೋನಿಯಾ ಗಾಂಧಿ ನಡುವಿನ ಚರ್ಚೆಯ ಬೆನ್ನಲ್ಲೇ ನಡೆದಿದೆ.

ರಾಜ್ಯಸಭಾ ಸದಸ್ಯೆ ಸುಶ್ಮಿತಾ ದೇವ್ ರಾಜೀನಾಮೆ: ರಾಜ್ಯಸಭಾ ಸಂಸದೆ ಸುಶ್ಮಿತಾ ದೇವ್ ತಮ್ಮ ಸಂಸದ ಸ್ಥಾನಕ್ಕೆ ಮತ್ತು ಎಲ್ಲಾ ಟಿಎಂಸಿ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದು, ಸುಖೇಂದು ಶೇಖರ್ ರಾಯ್ ನಂತರ ಈ ವಾರ ರಾಜೀನಾಮೆ ನೀಡಿದ ಎರಡನೇ ಟಿಎಂಸಿ ರಾಜ್ಯಸಭಾ ಸದಸ್ಯರಾಗಿದ್ದಾರೆ. ಅವರ ರಾಜೀನಾಮೆಯನ್ನು ಸಭಾಪತಿ ಸಿ.ಪಿ. ರಾಧಾಕೃಷ್ಣನ್ ಅಂಗೀಕರಿಸಿದ್ದಾರೆ.

ರೋಗಿಗಳಿಗೆ ಸಹಾಯವಾಣಿ

ಪುಟ 0➡ **ಮಳೆಗಾಲದ ಆರೋಗ್ಯ ಸಿದ್ಧತೆಗೆ ಕ್ರಮ:** ಸಾಂಕ್ರಾಮಿಕ ರೋಗಗಳನ್ನು ತಡೆಯುವ ನಿಟ್ಟಿನಲ್ಲಿ ಮಳೆಗಾಲ ಮತ್ತು ಚಳಿಗಾಲದಲ್ಲಿ ಜನಜಾಗೃತಿ ಮೂಡಿಸಲಾಗುತ್ತಿದೆ. ಸಾರ್ವಜನಿಕರು ಸೋಂಕು ಕಾಯಿಲೆಗಳಿಗೆ ಸ್ವಯಂಪ್ರೇರಿತವಾಗಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಬೇಕು. ಸಾಂಕ್ರಾಮಿಕ ರೋಗವನ್ನು ತಡೆಯುವ ನಿಟ್ಟಿನಲ್ಲಿ ಅಂಗಡಿ, ಮನೆ ಸೇರಿ ಕಟ್ಟಡಗಳ ಮುಂಭಾಗ ನೀರು ಶೇಖರಣೆ ಮಾಡದಂತೆ ಸೂಚನೆ ನೀಡಲಾಗಿದೆ. ಒಂದು ವೇಳೆ ಉಲ್ಲಂಘಿಸಿದರೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯ ಸಂಸ್ಥೆಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದು ಯು.ಟಿ. ಖಾದರ್ ಹೇಳಿದರು. ಶಿವಮೊಗ್ಗ, ಶಿರಸಿ, ಸಾಗರದಲ್ಲಿ ಹೆಚ್ಚಾಗಿ ಕಂಡುಬರುವ ಕ್ಯಾಸನೂರು ಅರಣ್ಯ ರೋಗಕ್ಕೆ (ಕೆಎಫ್‌ಡಿ) ಹಿಂದೆ ಇದ್ದ ವ್ಯಾಕ್ಸಿನ್‌ನ್ನು ನಿಷೇಧಿಸಲಾಗಿದ್ದು, ಹೊಸ ವ್ಯಾಕ್ಸಿನ್ ಕಂಡುಹಿಡಿದಿಲ್ಲ, ಹೀಗಾಗಿ ತೈಲ ನೀಡಲಾಗುತ್ತಿದೆ. ಹಾವು ಕಡಿತಕ್ಕೆ ಸಂಬಂಧಿಸಿದಂತೆ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 10 ಆಂಟಿವೆನಂ ಔಷಧ ಇಟ್ಟುಕೊಳ್ಳಬೇಕು ಎಂದು ಸೂಚನೆ ನೀಡಲಾಗಿದೆ. ಕೆಎಫ್‌ಡಿ ಹಾಗೂ ಹಾವು ಕಡಿತಕ್ಕೆ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ರಕ್ತಸಂಗ್ರಹ ಬಗ್ಗೆ ಮಾಹಿತಿಗೆ ಮನವಿ

ಪುಟ 0➡ ಹಾವು ಕಚ್ಚಿದವರನ್ನು ತ್ವರಿತವಾಗಿ ಆಸ್ಪತ್ರೆಗೆ ಸೇರಿಸಿದವರಿಗೆ ಶ್ಲಾಘನೆಯ ಪ್ರಮಾಣಪತ್ರ ನೀಡಿ, ಈ ಕಾರ್ಯವನ್ನು ಪ್ರೋತ್ಸಾಹಿಸಲಾಗುವುದು. ಅಲ್ಲದೆ, ರಾಜ್ಯದಲ್ಲಿ ಕಣ್ಣಿಗೆ ಸಂಬಂಧಿಸಿ ಆರೋಗ್ಯ ಇಲಾಖೆಯಲ್ಲಿ ಯಾವೆಲ್ಲ ಯೋಜನೆಗಳಿವೆ, ಯಾವ ಸಮಸ್ಯೆಗಳಿವೆ, ಪರಿಹಾರ ಹೇಗೆ ಎಂಬ ಬಗ್ಗೆ ವಿಷನ್ ಕಮಿಟಿ ರಚಿಸಲಾಗುವುದು ಎಂದು ತಿಳಿಸಿದರು.

ನರೇಂದ್ರ ಮೋದಿ ದೀರ್ಘಾವಧಿ

ಪುಟ 0➡ ಸರ್ಕಾರದ ಉದ್ದೇಶ ಸರಿಯಾಗಿದ್ದರೆ ವೇಗದ ಅಭಿವೃದ್ಧಿಯೂ ಸಾಧ್ಯ ಎಂಬುದನ್ನು ಜನರು ಕಳೆದ 12 ವರ್ಷಗಳಲ್ಲಿ ಕಂಡಿದ್ದಾರೆ ಎಂದು ಮೋದಿ ಹೇಳಿದರು. ತಮ್ಮ ಆಡಳಿತಾವಧಿಯಲ್ಲಿ 25 ಕೋಟಿಗೂ ಹೆಚ್ಚು ಜನರನ್ನು ಬಡತನದಿಂದ ಹೊರತಂದಿರುವುದು ಸರ್ಕಾರದ ನೀತಿಗಳ ಯಶಸ್ಸಿನ ಸಾಕ್ಷಿಯಾಗಿದೆ ಎಂದರು.

ಮೋದಿ ತಮ್ಮ ದಾಖಲೆ ಸಾಧನೆಯನ್ನು ವೈಯಕ್ತಿಕ ಯಶಸ್ಸಾಗಿ ಪರಿಗಣಿಸದೆ, ಅದು ಎನ್‌ಡಿಎ ಮೈತ್ರಿಕೂಟದ ಎಲ್ಲ ಪಕ್ಷಗಳು, ಕಾರ್ಯಕರ್ತರು ಹಾಗೂ ಜನರ ವಿಶ್ವಾಸದ ಫಲ ಎಂದು ಹೇಳಿದರು. ರಾಷ್ಟ್ರಸೇವೆ ತಮ್ಮ ಪಾಲಿಗೆ ಸಾಧನೆ ಅಲ್ಲ, ಸಾಧನೆಗಿಂತಲೂ ಒಂದು ಸಾಧನೆ (ಸಾಧನಾ ಮಾರ್ಗ) ಎಂದು ಬಣ್ಣಿಸಿದ ಅವರು, ವಿಕಸಿತ ಭಾರತದ ಗುರಿ ಸಾಧನೆಗಾಗಿ ಇನ್ನಷ್ಟು ಶ್ರಮಿಸುವಂತೆ ಮೈತ್ರಿ ನಾಯಕರಿಗೆ ಕರೆನೀಡಿದರು.

ವಿಕಸಿತ ಭಾರತಕ್ಕೆ ಎನ್‌ಡಿಎ ಸಂಕಲ್ಪ: ಎನ್‌ಡಿಎ ಮಹಾಸಭೆಯಲ್ಲಿ ಅಂಗೀಕರಿಸಲಾದ ನಿರ್ಣಯದಲ್ಲಿ, ಮೋದಿ ಅವರ ದೂರದೃಷ್ಟಿಯ ನಾಯಕತ್ವ ಮತ್ತು ಅವಿರತ ಸಾರ್ವಜನಿಕ ಸೇವೆಯನ್ನು ಶ್ಲಾಘಿಸಲಾಯಿತು. ಕಳೆದ 12 ವರ್ಷಗಳಲ್ಲಿ ಜನಕೇಂದ್ರಿತ ಅಭಿವೃದ್ಧಿ, ಭಾಗವಹಿಸುವ ಪ್ರಜಾಪ್ರಭುತ್ವ ಮತ್ತು ಫಲಿತಾಂಶಾಧಾರಿತ ಆಡಳಿತದ ಸಮನ್ವಯ ಸಾಧಿಸಲಾಗಿದೆ ಎಂದು ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ.

ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್, ಸಬ್ ಕಾ ಪ್ರಯಾಸ್ ತತ್ತ್ವದಡಿ ದೇಶದಲ್ಲಿ ಪರಿವರ್ತನಾತ್ಮಕ ಆಡಳಿತ ನೀಡಲಾಗಿದೆ. ಜನರ ನಿರಂತರ ಬೆಂಬಲಕ್ಕೆ ಕೃತಜ್ಞತೆ ಸಲ್ಲಿಸುವ ಎನ್‌ಡಿಎ, 2047ರೊಳಗೆ ವಿಕಸಿತ ಭಾರತ ನಿರ್ಮಾಣದ ಗುರಿಯತ್ತ ಇನ್ನಷ್ಟು ಬದ್ಧತೆಯಿಂದ ಕಾರ್ಯನಿರ್ವಹಿಸುವುದಾಗಿ ಘೋಷಿಸಿತು. 22 ಎನ್‌ಡಿಎ ಆಡಳಿತದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಹಾಗೂ ಮೈತ್ರಿ ಪಕ್ಷಗಳ ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು.

ನಾಯಕರಿಂದ ಭಾರೀ ಪ್ರಶಂಸೆ: ಗೃಹ ಸಚಿವ ಅಮಿತ್ ಶಾ ಅವರು ಮಾತನಾಡಿ, 62 ವರ್ಷಗಳ ದಾಖಲೆಯನ್ನು ಮೋದಿ ಮುರಿದಿದ್ದಾರೆ. ಇಂದಿನ ಕಾರ್ಯಕ್ಷಮತೆಯ ರಾಜಕಾರಣದಲ್ಲಿ ಜನರು ನಿರಂತರವಾಗಿ ವಿಶ್ವಾಸ ವ್ಯಕ್ತಪಡಿಸಿರುವುದು ಅವರ ಜನಮನ್ನಣೆಯ ಸಂಕೇತ ಎಂದು ಹೇಳಿದರು. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಾತನಾಡಿ, ಯಾರನ್ನೂ ಪ್ರಚೋದಿಸುವುದಿಲ್ಲ, ಆದರೆ ಯಾರಾದರೂ ಪ್ರಚೋದಿಸಿದರೆ ಬಿಡುವುದಿಲ್ಲ ಎಂಬ ಸ್ಪಷ್ಟ ರಾಷ್ಟ್ರೀಯ ಭದ್ರತಾ ನೀತಿಯನ್ನು ಮೋದಿ ಸರ್ಕಾರ ಅನುಸರಿಸಿದೆ ಎಂದು ಅಭಿಪ್ರಾಯಪಟ್ಟರು. ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು, ಮೋದಿ ಈ ಶತಮಾನವನ್ನು ಮುನ್ನಡೆಸುತ್ತಿದ್ದಾರೆ ಎಂದು ಶ್ಲಾಘಿಸಿದರು. ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ, 140 ಕೋಟಿ ಭಾರತೀಯರ ಆತ್ಮಗೌರವದ ಪ್ರತೀಕ ಮೋದಿ ಎಂದು ಬಣ್ಣಿಸಿದರು. ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ, 2047ರ ವಿಕಸಿತ ಭಾರತದ ಕನಸು ಮೋದಿ ನೇತೃತ್ವದಲ್ಲೇ ನನಸಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೋದಿ ಕಾಲದ ಬದಲಾವಣೆ

ವಿದ್ಯಾರ್ಥಿವೇತನ

- ಫಲಾನುಭವಿಗಳಲ್ಲಿ ಶೇ.58 ಎಸ್‌ಸಿ/ಎಸ್‌ಟಿ/ಒಬಿಸಿ ಸಮುದಾಯದ ವಿದ್ಯಾರ್ಥಿಗಳು
- ಪ್ರಧಾನಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)
- ಶೇ.44.2 ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ಮನೆ

ಜಾಗತಿಕ ನಾಯಕರಿಂದ ಅಭಿನಂದನೆಗಳ ಮಹಾಪೂರ

ಪ್ರಧಾನಿ ಮೋದಿ ಅವರ ದಾಖಲೆಯ ಸಾಧನೆಗೆ ವಿಶ್ವದ ಹಲವು ರಾಷ್ಟ್ರಗಳ ನಾಯಕರು ಅಭಿನಂದನೆ ಸಲ್ಲಿಸಿದ್ದಾರೆ. ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ, ಶ್ರೀಲಂಕಾ ಅಧ್ಯಕ್ಷ ಅನುರಾ ಕುಮಾರ ದಿಸ್ಸಾನಾಯಕೆ, ಮಾಲ್ಡೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು, ದಕ್ಷಿಣ ಕೊರಿಯಾ ಅಧ್ಯಕ್ಷ ಲೀ ಜೇ ಮ್ಯೂಂಗ್, ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಸೇರಿದಂತೆ ಹಲವು ನಾಯಕರು ಸಾಮಾಜಿಕ ಜಾಲತಾಣಗಳ ಮೂಲಕ ಹಾಗೂ ಅಧಿಕೃತ ಸಂದೇಶಗಳ ಮೂಲಕ ಶುಭಾಶಯ ಕೋರಿದ್ದಾರೆ.

ರಾಷ್ಟ್ರಪತಿ ಮುರ್ಮು ಮೆಚ್ಚುಗೆ

ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಅತಿ ದೀರ್ಘಾವಧಿಯ ನಿರಂತರ ಚುನಾಯಿತ ಪ್ರಧಾನಿಯಾಗಿ



ಹೊಸ ದಾಖಲೆ ನಿರ್ಮಿಸಿದ ಹಿನ್ನೆಲೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ವಿಶೇಷ ಅಭಿನಂದನಾ ಪತ್ರ ಬರೆದಿದ್ದಾರೆ. ಮೋದಿ ಆಡಳಿತಾವಧಿಯಲ್ಲಿ ದೇಶದ ಆಡಳಿತ ವ್ಯವಸ್ಥೆ, ಆರ್ಥಿಕ ಸ್ಥಿರತೆ ಹಾಗೂ ಸಾಮಾಜಿಕ ಪರಿವರ್ತನೆಯ ಕ್ಷೇತ್ರಗಳಲ್ಲಿ ಮಹತ್ವದ ಬದಲಾವಣೆಗಳು ಕಂಡುಬಂದಿವೆ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಸಾಮಾನ್ಯ ಕುಟುಂಬದಿಂದ ದೇಶದ ಅತ್ಯುನ್ನತ ಕಾರ್ಯನಿರ್ವಾಹಕ ಹುದ್ದೆಗೆ ಏರಿದ ಮೋದಿ ಅವರ ಪಯಣ ಭಾರತೀಯ ಪ್ರಜಾಪ್ರಭುತ್ವದ ಶಕ್ತಿಗೆ ಸಾಕ್ಷಿಯಾಗಿದೆ ಎಂದು ರಾಷ್ಟ್ರಪತಿ ಬಣ್ಣಿಸಿದ್ದಾರೆ. ಇದೇ ವೇಳೆ ಪ್ರಧಾನಿ ಮೋದಿ ಅವರು, ರಾಷ್ಟ್ರಪತಿಗಳಿಗೆ ಧನ್ಯವಾದ ಅರ್ಪಿಸಿದ್ದಾರೆ.

ಸಮಾಜಕ್ಕಾಗಿ ಬದುಕಿದ ಈಶ್ವರಪ್ಪ: ಪೇಜಾವರ ಶ್ರೀ

ಶಿವಮೊಗ್ಗ: ಸಮಾಜಕ್ಕಾಗಿ ಬದುಕುವುದೇ ನಿಜವಾದ ಜೀವನವಾಗಿದ್ದು, ಇಂತಹ ಜೀವನವನ್ನು ಸಮಾಜ ಸ್ಮರಿಸುತ್ತದೆ. ಅಂತಹ ಜೀವನ ಈಶ್ವರಪ್ಪನವರದ್ದಾಗಿದೆ ಎಂದು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಹೇಳಿದರು.

ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪನವರ 78ನೇ ಹುಟ್ಟುಹಬ್ಬದ ಪ್ರಯುಕ್ತ ಕೆ.ಎಸ್.ಈಶ್ವರಪ್ಪ ಅಭಿಮಾನಿ ಬಳಗದ ಸಹಕಾರದೊಂದಿಗೆ ಶ್ರೀಗಂಧ ಸಂಸ್ಥೆ, ಮಾರಿಕಾಂಬಾ ಮೈಕ್ರೋ ಫೈನಾನ್ಸ್ ವತಿಯಿಂದ ಮಲ್ಲೇಶ್ವರ ನಗರದಲ್ಲಿ ಬುಧವಾರ ಆಯೋಜಿಸಿದ್ದ ಸಾಮೂಹಿಕ ಸತ್ಯನಾರಾಯಣ ಪೂಜೆ, ಸಾಮೂಹಿಕ ರುದ್ರ ಪಠಣ, ಮಂಗಳನಿಧಿ ಸಮರ್ಪಣೆ, ಸಂಗೀತಾ ಭಿವಂದನೆ ಸಮೂಹ ಗಾಯನ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು. ಧರ್ಮ, ಹಿಂದುತ್ವದ ಪ್ರಶ್ನೆ ಬಂದಾಗ ಅವನ್ನು ಸಮರ್ಥನೆ ಮಾಡಿಕೊಳ್ಳುವ ಅವರು, ಎಂದಿಗೂ ಧರ್ಮ ಹಾಗೂ ಹಿಂದುತ್ವವನ್ನು ಬಿಟ್ಟುಕೊಡದ ವ್ಯಕ್ತಿಯಾಗಿದ್ದಾರೆ. ಸಮಾಜದ ಪರವಾಗಿ ಬದುಕುವುದೇ ನಿಜವಾದ ಬದುಕೆಂದು ಭಾವಿಸಿದ್ದಾರೆ. ಸಾಂಸ್ಕೃತಿಕ, ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡುತ್ತಾ ಸಮಾಜದೊಂದಿಗೆ ಬೆರೆತು ಜೀವನ ನಡೆಸುತ್ತಿದ್ದಾರೆ ಎಂದು ಶ್ಲಾಘಿಸಿದರು.



ಕಾರ್ಯಕ್ರಮದಲ್ಲಿ ಶ್ರೀ ಮಾದರ ಚೆನ್ನಯ್ಯ ಸ್ವಾಮೀಜಿ, ಡಾ. ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ, ಶ್ರೀ ನಾದಮಯಾನಂದನಾಥ ಸ್ವಾಮೀಜಿ, ಆರ್‌ಎಸ್‌ಎಸ್ ದಕ್ಷಿಣ ಪ್ರಾಂತ ಸಹಕಾರ್ಯವಾಹ ಪಟ್ಟಾಭಿರಾಮ, ವಿಪ ಶಾಸಕ ಡಿ.ಎಸ್. ಅರುಣ್, ಕೆ.ಇ. ಕಾಂತೇಶ್ ಪಾಲ್ಗೊಂಡಿದ್ದರು.



ಹೊಸದಿಲ್ಲಿಯ ಕರ್ನಾಟಕ ಭವನದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಡಿಸಿಎಂ ಡಾ.ಜಿ ಪರಮೇಶ್ವರ, ಸಚಿವ ಕೃಷ್ಣಬೈರೇಗೌಡ ಸಮ್ಮುಖದಲ್ಲಿ ಐಎಎಸ್ ಅಧಿಕಾರಿಗಳ ಜತೆಗೆ ಸಭೆ ನಡೆಸಿದರು. ಸಭೆಯಲ್ಲಿ ರಾಜ್ಯ ಸರ್ಕಾರದ ವಿಶೇಷ ಪ್ರತಿನಿಧಿ ಟಿ.ಬಿ ಜಯಚಂದ್ರ, ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಇದ್ದರು.

ಕುಟುಂಬದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ: ರೆಡ್ಡಿ

ಬಳ್ಳಾರಿ: ನಮ್ಮ ಕುಟುಂಬದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ, ಬಳ್ಳಾರಿ ನಗರ ಕ್ಷೇತ್ರ ಮಹಿಳಾ ಮೀಸಲಾತಿ ಆದರೆ ಮಾತ್ರ ಪತ್ನಿ ಅರುಣಾಲಕ್ಷ್ಮೀ 2028ರ ಚುನಾವಣೆಯಲ್ಲಿ ಸ್ಪರ್ಧೆ, ಇಲ್ಲಾಂದ್ರೆ ಸಹೋದರ ಗಾಲಿ ಸೋಮಶೇಖರ್ ರೆಡ್ಡಿ ಅವರೇ ಸ್ಪರ್ಧೆ ಮಾಡುತ್ತಾರೆ. ಇಬ್ಬರೂ ಸಕ್ರಿಯವಾಗಿ ಕೆಲಸ ಮಾಡ್ತಿದ್ದಾರೆ, ಈ ವಿಚಾರದಲ್ಲಿ ಯಾವುದೇ ನಮ್ಮಲ್ಲಿ ಒಡಕಿಲ್ಲ, ಬಿನ್ನಾಭಿಪ್ರಾಯವಿಲ್ಲ ಎಂದು ಮಾಜಿ ಸಚಿವ, ಗಂಗಾವತಿ ಶಾಸಕ ಗಾಲಿ ಜನಾರ್ಧನ ರೆಡ್ಡಿ ಸ್ಪಷ್ಟಪಡಿಸಿದರು.



ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದರು. ಕಳೆದ ಬಾರಿ ಕೆಟ್ಟ ಘಳಿಗೆ ಹಿನ್ನೆಲೆ ಕ್ಷೇತ್ರ ಇನ್ನೊಬ್ಬರ ಪಾಲಾಯ್ತು. ಆದರೆ, ಈ ಬಾರಿ ಹಾಗೆ ಆಗೋಕೆ ಬಿಡೋಲ್ಲ, ಕ್ಷೇತ್ರ ಮರು ವಿಂಗಡಣೆಗೆ ಟಿಎಂಸಿ ಅವರ ಬೆಂಬಲ ಸಿಕ್ಕಿದೆ, ಮೀಸಲಾತಿ ಬದಲಾದರೆ ನೋಡೋಣ, ಇಲ್ಲಾಂದ್ರೆ ಸಹೋದರ ಗಾಲಿ ಸೋಮಶೇಖರ್ ರೆಡ್ಡಿ ಅವರೇ ಸ್ಪರ್ಧೆ ಮಾಡುತ್ತಾರೆ. ಕ್ಷೇತ್ರದ ಜನರು ಬಿಜೆಪಿ ಗೆಲ್ಲಿಸಲು ತುದಿಗಾಲ ಮೇಲೆ ನಿಂತಿದ್ದಾರೆ. ಈ ವಿಚಾರದಲ್ಲಿ ಅಪಪ್ರಚಾರ ಬೇಡ ಎಂದರು.

ಮುಂಬರುವ ಚುನಾವಣೆಯಲ್ಲಿ ಗಂಗಾವತಿ ಕ್ಷೇತ್ರದಿಂದಲೇ ಸ್ಪರ್ಧೆ ಮಾಡುತ್ತಾರೆಯೇ ಎನ್ನುವ ಪ್ರಶ್ನೆಗೆ ಉತ್ತರಿಸಿದರು. ಇದನ್ನು ಹೈ ಕಮಾಂಡ್ ವರಿಷ್ಠರು ತೀರ್ಮಾನ ಮಾಡುತ್ತಾರೆ. 028ರಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ತರಬೇಕು ಎನ್ನುವ ಗುರಿ ನಮ್ಮದಿದೆ. ಹಳೇ ಬಸ್ ಚಾಲಕ ಮಾತ್ರ ಬದಲಾಗಿದ್ದಾರೆ. ಈಗಲೇ ಎಲ್ಲವನ್ನೂ ಹೇಳೋಕೆ ಆಗೋಲ್ಲ, ರಾಜ್ಯದ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ವಹಿಸಿಕೊಂಡು ಕೆಲದಿನಗಳು ಕಳೆದಿವೆ. ಈಗಲೇ ಮಾತನಾಡುವುದು ಸರಿಯಲ್ಲ, ಕನಿಷ್ಠ 3 ತಿಂಗಳು ಬೇಕು, ಕಾದು ನೋಡೋಣ ಎಂದರು.

ಕಿರುಸುದ್ದಿ

ಮೈಸೂರಿನಲ್ಲಿ ಹುಲಿ ಸೆರೆ

ಮೈಸೂರು: ಜಿಲ್ಲೆಯ ಹುಣಸೂರು ತಾಲೂಕಿನ ತಟ್ಟೆಕೆರೆ ಬಳಿ ಇರುವ ಕಾಂಗ್ರೆಸ್‌ನ ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಅವರ ತೋಟದಲ್ಲಿ ಅರಣ್ಯ ಇಲಾಖೆ ಇಟ್ಟಿದ್ದ ಬೋನಿಗೆ ಹುಲಿ ಸೆರೆಯಾಗಿದೆ. ಕಳೆದ ಒಂದು ತಿಂಗಳಿಂದ ತಟ್ಟೆಕೆರೆ ಗ್ರಾಮ ಹಾಗೂ ಆಸುಪಾಸಿನ ಗ್ರಾಮಗಳಲ್ಲಿ ಹುಲಿ ಕಾಣಿಸಿಕೊಂಡು, ವಾರದ ಹಿಂದೆ ಜಾನುವಾರು ಭೇಟಿಯಾಡಿ ಸ್ಥಳೀಯರಲ್ಲಿ ಆತಂಕ ಸೃಷ್ಟಿಸಿತ್ತು. ಅರಣ್ಯ ಇಲಾಖೆ ಹುಲಿ ಪತ್ತೆ ಕಾರ್ಯಾಚರಣೆಗೆ 10 ಸಿಸಿ ಕ್ಯಾಮೆರಾ ಅಳವಡಿಸಿ, ಅದರ ಚಲನ ವಲನ ಗಮನಿಸಿ ಬೋನು ಇಟ್ಟಿದ್ದರು. ಈಗ ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಅವರ ತೋಟದಲ್ಲಿಟ್ಟಿದ್ದ ಬೋನಿಗೆ ಹೊಕ್ಕ ಹುಲಿ ಸೆರೆಯಾಗಿದೆ. ಸ್ಥಳೀಯರು ಎರಡು ಹುಲಿ ಇವೆ ಎನ್ನುತ್ತಿದ್ದಾರೆ ಈಗ ಒಂದು ಬೋನಿಗೆ ಬಿದ್ದಿದೆ. ಇನ್ನೊಂದು ಹುಲಿ ಇದ್ದರೆ ಅದನ್ನೂ ಸೆರೆ ಹಿಡಿಯಲಾಗುವುದು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

ಗುಂಡು ಹಾರಿಸಿಕೊಂಡು ಗೃಹಿಣಿ ಆತ್ಮಹತ್ಯೆ

ಚಿಕ್ಕಮಗಳೂರು: ನಗರದ ಹಾಲೇನಹಳ್ಳಿ ಬಡಾವಣೆಯಲ್ಲಿ ಗೃಹಿಣಿಯೊಬ್ಬರು ರಿವಾಲ್ವಾರ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತರನ್ನು ಸುಮಾ (55) ಎಂದು ಗುರುತಿಸಲಾಗಿದೆ. ಘಟನೆ ನಡೆದ ವೇಳೆ ಮನೆಯಲ್ಲಿ ಯಾರೂ ಇರಲಿಲ್ಲ ಎಂದು ತಿಳಿದುಬಂದಿದೆ. ಮೃತರ ಪತಿ ರಾಜೇಶ್ ಕಾಫಿ ಉದ್ಯಮಿಯಾಗಿದ್ದಾರೆ. ಪ್ರಾಥಮಿಕ ಮಾಹಿತಿ ಪ್ರಕಾರ, ಸುಮಾ ಅವರು ಡೆತ್ ನೋಟ್ ಬರೆದಿಟ್ಟು ಪರವಾನಗಿ ಹೊಂದಿದ ರಿವಾಲ್ವಾರ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿದ್ದಾರೆ. ಸಾವಿಗೆ ನಿಖರ ಕಾರಣ ತಿಳಿದುಬಂದಿಲ್ಲ, ಆತ್ಮಹತ್ಯೆಗೆ ಅನಾರೋಗ್ಯ ಕಾರಣ ಇರಬಹುದೆಂದು ಶಂಕಿಸಲಾಗಿದೆ. ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ಕುಮಾರ್ ದಯಾಮ ಭೇಟಿ ನೀಡಿ ಪರಿಶೀಲಿಸಿದ್ದಾರೆ. ರಿವಾಲ್ವಾರ್ ಮತ್ತು ಡೆತ್ ನೋಟ್ ವಶಕ್ಕೆ ಪಡೆಯಲಾಗಿದೆ. ಮೇಲ್ನೋಟಕ್ಕೆ ಆತ್ಮಹತ್ಯೆಯಂತೆ ಕಾಣುತ್ತಿದೆ. ತನಿಖೆ ಮುಂದುವರಿಸಲಾಗುವುದು ಎಂದು ಈ ವೇಳೆ ಎಸ್ಪಿ ತಿಳಿಸಿದ್ದಾರೆ. ಬಸವನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಎರಡು ಲಾರಿ ಡಿಕ್ಕಿ: ವ್ಯಕ್ತಿ ಸಜೀವ ದಹನ



ಬಳ್ಳಾರಿ: ಎರಡು ಲಾರಿ ಮುಖಾಮುಖಿ ಡಿಕ್ಕಿಯಿಂದ, ಎರಡು ಲಾರಿಗಳು ಬೆಂಕಿಗೆ ಆಹುತಿಯಾಗಿದ್ದು, ವ್ಯಕ್ತಿಯೊಬ್ಬ ಸಜೀವ ದಹನವಾದ ದಾರುಣ ಘಟನೆ ಸಮೀಪದ ಗಡಿ ಭಾಗದ ಬಾಜಿರಕಲ್ಲು ಟೋಲ್ ಪ್ಲಾಜಾ ಬಳಿ ಬುಧವಾರ ನಡೆದಿದೆ. ಡಿ.ಹಿರಾಳ ಹಾಗೂ ಬಳ್ಳಾರಿ ರಸ್ತೆಗೆ ಹೊಂದಿಕೊಂಡ ಆಂಧ್ರಗಡಿ ಭಾಗದ ಆಂಧ್ರದ ಅನಂತಪುರ ಜಿಲ್ಲೆಯ ಡಿ.ಹೀರಾಳ್ ಮಂಡಲ ವ್ಯಾಪ್ತಿಯ ಟೋಲ್ ಪ್ಲಾಜಾ ಬಳಿ ಎರಡೂ ಲಾರಿಗಳ ಡಿಕ್ಕಿಯ ರಭಸಕ್ಕೆ ಕೆಲ ಹೊತ್ತಿನಲ್ಲೇ ಎರಡು ಲಾರಿಗಳಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಲಾರಿಯಲ್ಲಿ ಸಿಲುಕಿದ ಚಾಲಕ ದೀಕ್ಷಿತ್ ಎನ್ನುವ ವ್ಯಕ್ತಿ ಹೊರ ಬರಲಾಗದೇ ಬೆಂಕಿಯ ತೀವ್ರತೆಗೆ ವಾಹನದಲ್ಲಿ ಮೃತಪಟ್ಟಿದ್ದಾನೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಪಂಚರ್ ಆಗಿದ್ದ ಸಿಮೆಂಟ್ ಟ್ಯಾಂಕರ್ ಒಂದು ರಸ್ತೆ ಬದಿಯಲ್ಲಿ ನಿಂತಿತ್ತು. ಈ ವೇಳೆ ರಾಂಪುರ ಕಡೆಯಿಂದ ಬಂದ ಲಾರಿ ಟ್ಯಾಂಕರ್ ಡಿಕ್ಕಿ ಹೊಡೆದಿದೆ. ಕ್ಷಣಾರ್ಧದಲ್ಲೇ ಎರಡು ಲಾರಿಗಳು ಸಂಪೂರ್ಣ ಬೆಂಕಿಗೆ ಆಹುತಿಯಾಗಿವೆ.

12 ವರ್ಷಗಳಿಂದ ದೇಶದ ಪ್ರಧಾನ ಸೇವಕರಾಗಿ ಕೆಲಸ ನಿರ್ವಹಿಸಿದ ನರೇಂದ್ರ ಮೋದಿ

ಮೋದಿ ಯಶಸ್ಸಿಗೆ ಪೂಜೆ

ಬೆಂಗಳೂರು: ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಚುನಾಯಿತ ಪ್ರಧಾನಿಗಳಾಗಿ ಕಳೆದ 12 ವರ್ಷಗಳಿಂದ ದೇಶದ ಪ್ರಧಾನ ಸೇವಕರಾಗಿ ಕೆಲಸ ನಿರ್ವಹಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬುಧವಾರ ರಾಜ್ಯಾದ್ಯಂತ ಬಿಜೆಪಿ ನಾಯಕರು, ಮುಖಂಡರು, ಕಾರ್ಯಕರ್ತರು ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಬೆಂಗಳೂರು ಮಲ್ಲೇಶ್ವರದ ಶ್ರೀ ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು. ಬಳಿಕ ಮಾತನಾಡಿದ ವಿಜಯೇಂದ್ರ, ಮೋದಿ ಅವರು 43,99 ದಿನಗಳು ನಿರಂತರವಾಗಿ ಪ್ರಧಾನಮಂತ್ರಿಗಳಾಗಿ, ದೇಶದ ಪ್ರಧಾನ ಸೇವಕ ಎಂಬ ಭಾವನೆಯಿಂದ ಭಾರತವನ್ನು ಮುನ್ನಡೆಸುತ್ತಿದ್ದಾರೆ. ಇದೊಂದು ದಾಖಲೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಬಣ್ಣಿಸಿದ್ದಾರೆ.

ದೇಶದ ಹೆಮ್ಮೆಯ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2014ರ ಮೇ ತಿಂಗಳಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿ, ಸತತ 3 ಬಾರಿಗೆ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಾರೆ. ಅಲ್ಲದೇ ಪ್ರಜಾಸತ್ತಾತ್ಮಕವಾಗಿ ಚುನಾಯಿತ ಪ್ರಧಾನಿಯಾಗಿ ಅವರು ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಪ್ರತಿಯೊಬ್ಬ ಭಾರತೀಯರು ಇದು ಹೆಮ್ಮೆ ಪಡುವ ವಿಚಾರ ಎಂದು ಹೇಳಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ವಿಕಸಿತ ಭಾರತ, ಆತ್ಮನಿರ್ಭರ ಭಾರತದ ಕನಸು ಈಡೇರಲಿ ಎಂದು ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿದ್ದೇವೆ. ಮೋದಿ ಅವರಿಗೆ ಇನ್ನಷ್ಟು ಹೆಚ್ಚು ಆಯಸ್ಸು ಕೊಟ್ಟು, ಹೆಚ್ಚು ಶಕ್ತಿ ಕೊಟ್ಟು, ಹೆಚ್ಚು ದಿನಗಳ ಕಾಲ ಪ್ರಧಾನಿಯಾಗಿ ಕೆಲಸ ಮಾಡುವ ಶಕ್ತಿಯನ್ನು ಭಗವಂತನು ದಯಪಾಲಿಸಲಿ ಎಂದು ಪ್ರಾರ್ಥನೆ ಸಲ್ಲಿಸಿದ್ದಾಗಿ ವಿವರಿಸಿದರು.

ಒಂದು ದಿನವೂ ವಿಶ್ರಾಂತಿ ಪಡೆಯದೇ ಭ್ರಷ್ಟಾಚಾರ ರಹಿತ ಆಡಳಿತವನ್ನು ಮೋದಿ ಅವರು ನೀಡುತ್ತಿದ್ದಾರೆ. ಜಾಗತಿಕ ಸವಾಲುಗಳ ನಡುವೆ ಮೂಲಭೂತ ಸೌಕರ್ಯ, ಕೃಷಿ ಕ್ಷೇತ್ರ, ಆರೋಗ್ಯ ಕ್ಷೇತ್ರ ಸೇರಿ ಎಲ್ಲ ಕ್ಷೇತ್ರಗಳಲ್ಲಿ ಭಾರತವನ್ನು ಮುನ್ನಡೆಸುತ್ತಿದ್ದಾರೆ. ಇದರಿಂದ ಭಾರತ ಜಗತ್ತಿನ 4ನೇ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ. ಇದಕ್ಕೆ ಮೋದಿ ಅವರ ದಿಟ್ಟ ನಾಯಕತ್ವ ಕಾರಣ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಉಸ್ತುವಾರಿ ಮತ್ತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ. ರಾಧಾ ಮೋಹನ್ ದಾಸ್ ಅಗರವಾಲ್, ರಾಜ್ಯ ಸಹಉಸ್ತುವಾರಿ ಸುಧಾಕರ್ ರೆಡ್ಡಿ, ಶಾಸಕ ಡಾ. ಸಿ.ಎನ್. ಅಶ್ವತ್ಥ ನಾರಾಯಣ, ರಾಜ್ಯ ಉಪಾಧ್ಯಕ್ಷ ಮುರುಗೇಶ್ ನಿರಾಣಿ, ಶಾಸಕರಾದ ಬಸವರಾಜ ಮತ್ತಿಮಡು, ಡಾ. ಶಿವರಾಜ್ ಪಾಟೀಲ್, ವಿಪ ಸದಸ್ಯ ಪಿ.ಎಚ್. ಪೂಜಾರ್, ಎಸ್‌ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತು, ಪ್ರಕೋಷ್ಠಗಳ ರಾಜ್ಯ ಸಂಯೋಜಕ ಎಸ್. ದತ್ತಾತ್ರೀ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಪಕ್ಷದ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.



ಆಯಸ್ಸು, ಆರೋಗ್ಯ ವೃದ್ಧಿಗೆ ಪ್ರಾರ್ಥನೆ: ಅಗರವಾಲ್

ಶೇಷಾದ್ರಿಪುರ ವಾರ್ಡಿನ (ಫೈಪ್‌ಲೈನ್) ಶ್ರೀರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಕರ್ನಾಟಕ ರಾಜ್ಯ ಉಸ್ತುವಾರಿ ಮತ್ತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ. ರಾಧಾಮೋಹನ್ ದಾಸ್ ಅಗರವಾಲ್ ಅವರು ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾರತದ ಚುನಾಯಿತ ಪ್ರಧಾನಿಗಳಾಗಿ ಸುದೀರ್ಘ ಕಾಲ ಸೇವೆ ಸಲ್ಲಿಸಿದ್ದಾರೆ. ಮೋದಿ ಅವರು ಮಾಡಿದ ಸೇವೆ ಐತಿಹಾಸಿಕ ದಾಖಲೆಯಾಗಿದೆ ಎಂದು ಹೇಳಿದರು. ಪ್ರಧಾನಿಯವರ ಆಯಸ್ಸು, ಆರೋಗ್ಯ ವೃದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿ ವಿಶೇಷ ಪೂಜೆ ನೆರವೇರಿಸಲಾಗಿದೆ ಎಂದು ತಿಳಿಸಿದರು.

ಸಂಪೂರ್ಣ ಡಿಜಿಟಲೀಕರಣ



ಬೆಂಗಳೂರು: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಐಎಡಿಬಿ) ಮೂಲಕ ನಡೆಯುವ ಭೂಸ್ವಾಧೀನ ಮತ್ತು ನಿವೇಶನ ಮಂಜೂರಾತಿ ಯವರೆಗಿನ ಪ್ರತಿಯೊಂದು ಪ್ರಕ್ರಿಯೆಯೂ ಇನ್ನು ಮುಂದೆ ಡಿಜಿಟಲ್ ರೂಪದಲ್ಲಿ ನಡೆಯಲಿದ್ದು, ಈ ಸಂಬಂಧದ ಕೆಲಸಗಳನ್ನು ಮುಂದಿನ ನೂರು ದಿನಗಳಲ್ಲಿ ಮುಗಿಸಬೇಕು ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಸೂಚನೆ ನೀಡಿದ್ದಾರೆ.

ನೂತನ ಸರಕಾರ ಅಸ್ತಿತ್ವಕ್ಕೆ ಬಂದ ಬಳಿಕ ಅವರು ಖನಿಜ ಭವನದಲ್ಲಿ ಬುಧವಾರ ತಮ್ಮ ಇಲಾಖೆಯ 2ನೇ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಈ ಸಭೆಯಲ್ಲಿ ಅವರು ನೂರು ದಿನಗಳಲ್ಲಿ ಮಾಡಬೇಕಾದ ಕೆಲಸಗಳೇನೇನು ಎಂದು ಸ್ಪಷ್ಟಪಡಿಸಿದರು. ಡಿಜಿಟಲ್ ರೂಪದಲ್ಲಿ ಕಾರ್ಯನಿರ್ವಹಿಸುವುದರಿಂದ ರೈತರು, ಉದ್ಯಮಿಗಳು ಸೇರಿದಂತೆ ಎಲ್ಲರಿಗೂ ಅನುಕೂಲ ವಾಗಲಿದೆ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಪ್ರತಿಯೊಂದು ಮಾಹಿತಿಯೂ ಶಾಶ್ವತವಾಗಿ ಉಳಿಯುತ್ತದೆ: ಕೈಗಾರಿಕಾ ನಿವೇಶನದ ಮಂಜೂರಾತಿ, ಅದರ ಸ್ಥಿತಿಗತಿ, ಅಲ್ಲಿರುವ ಕೈಗಾರಿಕೆ, ಮಾಡಿರುವ ಹೂಡಿಕೆ, ಆಗಿರುವ ಉದ್ಯೋಗಸೃಷ್ಟಿ, ಸಂತ್ರಸ್ತ ರೈತರಿಗೆ ಕೊಟ್ಟಿರುವ ಪರಿಹಾರ, ಕೋರ್ಟ್ ಕೇಸಿನ ವಿವರಗಳು, ಹೂಡಿಕೆದಾರರಿಗೆ ಕೊಟ್ಟಿರುವ ಕಾಲಾವಕಾಶ ಮುಂತಾದ ವಿವರಗಳು ಡಿಜಿಟಲೀಕರಣದಿಂದ ಕ್ಷಣಾರ್ಧದಲ್ಲಿ ಸಿಗಲಿವೆ. ಬಹಳ ಹಿಂದಿನ ದಾಖಲೆಗಳನ್ನು ಕಾಪಾಡುವ ಕಷ್ಟವೂ ಇದರಿಂದ ತಪ್ಪಲಿದ್ದು, ಪ್ರತಿಯೊಂದು ಮಾಹಿತಿಯೂ ಶಾಶ್ವತವಾಗಿ ಉಳಿಯಲಿದೆ ಎಂದು ಅವರು ವಿವರಿಸಿದ್ದಾರೆ. ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಖುಷ್ಬೂ ಗೋಯಲ್ ಚೌಧರಿ, ಕೆಐಎಡಿಬಿ ಸಿಇಒ ಗೋವಿಂದ ರೆಡ್ಡಿ, ಅರವಿಂದ ಗಲಗಲಿ ಇದ್ದರು.

ಪಾರದರ್ಶಕತೆಗೆ ಒತ್ತು: ಪಾಟೀಲ್

ಹಿಂದೆ ಎಷ್ಟೋ ಪ್ರಕರಣಗಳಲ್ಲಿ ದಾಖಲೆಗಳು ಸರಿಯಾಗಿಲ್ಲದೆ ಒಂದೊಂದೇ ಜಮೀನಿಗೆ ಎರಡೆರಡು ಬಾರಿ ಪರಿಹಾರ ಕೊಟ್ಟಿರುವ ಪ್ರಕರಣಗಳು ಕೂಡ ಸಂಭವಿಸಿವೆ. ಹೊಸ ವ್ಯವಸ್ಥೆಯಿಂದ ಸಂಪೂರ್ಣ ಪಾರದರ್ಶಕತೆ ಬರಲಿದ್ದು, ಹೂಡಿಕೆದಾರರು ತಾವು ಇರುವಲ್ಲಿಂದಲೇ ತಮಗೆ ಬೇಕಾದ ಮಾಹಿತಿ ಪಡೆದುಕೊಳ್ಳಬಹುದು. ಇಲ್ಲಿ ಮಧ್ಯವರ್ತಿಗಳ ಕಾಟ ಇರುವುದಿಲ್ಲ ಎಂದು ಅವರು ನುಡಿದಿದ್ದಾರೆ.

ಮೋದಿಯವರದ್ದು ಅನುಪಮ ಸಾಧನೆ: ರಾಘವೇಶ್ವರ ಭಾರತೀ ಶ್ರೀ

ಬೆಂಗಳೂರು: ಭಾರತದಂತಹ ಬೃಹತ್ ಪ್ರಜಾಪ್ರಭುತ್ವ ದೇಶದಲ್ಲಿ ಪ್ರಧಾನಿಯಾಗುವುದೇ ಒಂದು ಸಾಧನೆಯಾಗಿದೆ. ಅದರಲ್ಲೂ ಅತಿಹೆಚ್ಚು ಅವಧಿಗೆ ಪ್ರಧಾನಿಯಾಗಿ ದಾಖಲೆ ನಿರ್ಮಿಸಿರುವ ನರೇಂದ್ರ ಮೋದಿಯವರದ್ದು ಅನುಪಮ ಸಾಧನೆ ಎಂದು ರಾಮಚಂದ್ರಾಪುರ ಮಠದ ಶ್ರೀರಾಘವೇಶ್ವರ ಭಾರತೀ ಸ್ವಾಮೀಜಿ ತಿಳಿಸಿದ್ದಾರೆ.



ಅತಿಹೆಚ್ಚು ಅವಧಿಗೆ ಪ್ರಧಾನಿಯಾಗಿ ದಾಖಲೆ ನಿರ್ಮಿಸಿರುವ ನರೇಂದ್ರ ಮೋದಿ ಅವರಿಗೆ ಅಭಿನಂದನೆ ಸಲ್ಲಿಸಿರುವ ಅವರು, ಅನೇಕ ಜನಪರ ಕಾರ್ಯಕ್ರಮಗಳ ಜೊತೆಗೆ ದೇಶವನ್ನು ಸರಿಯಾದ ದಿಕ್ಕಿನೆಡೆಗೆ ಕೊಂಡೊಯ್ಯುತ್ತಿರುವುದು ಶ್ಲಾಘನೀಯವಾಗಿದೆ. ದೇಶಕ್ಕೆ ಇನ್ನಷ್ಟು ಸಮಯ ಇನ್ನೂ ಹೆಚ್ಚಿನ ಸೇವೆಸಲ್ಲಿಸುವ ಶಕ್ತಿ ಅವರಿಗೆ ಪ್ರಾಪ್ತವಾಗಲಿ ಎಂದು ಶ್ರೀಕರಾರ್ಚಿತ ದೇವತಾ ಸಾನ್ನಿಧ್ಯದಲ್ಲಿ ಪ್ರಾರ್ಥಿಸುತ್ತೇವೆ ಹಾಗೂ ಮುಂದೆ ದೇಶವನ್ನು ಮುನ್ನಡೆಸುವ ನಾಯಕರೂ ಕೂಡ ಮೋದಿಯವರಂತವರೇ ಬರುವಂತಾಗಲಿ ಎಂದು ಶ್ರೀಗಳು ಶುಭ ಹಾರೈಸಿದ್ದಾರೆ.

ಆರ್‌ಎಸ್‌ಎಸ್‌ಗೆ ಜಗತ್ತಿನ ಮನ್ನಣೆ ಸಿಕ್ಕಿದೆ: ಸಂಸದ ಬೊಮ್ಮಾಯಿ

ಗದಗ: ಆರ್‌ಎಸ್‌ಎಸ್‌ಗೆ ಸುದೀರ್ಘವಾದ ಇತಿಹಾಸ ಇದೆ. ಕಾಂಗ್ರೆಸ್ ವಿದೇಶಿಯರಿಂದ ಸ್ಥಾಪನೆ ಆಗಿರೋದು. ಆರ್‌ಎಸ್‌ಎಸ್ ಸ್ವದೇಶಿಯರಿಂದ ಸ್ಥಾಪನೆಯಾಗಿರೋದು. ಹೀಗಾಗಿ ಇದಕ್ಕೆ ಮನ್ನಣೆ ಎನ್ನುವ ಪ್ರಶ್ನೆ ಬರೋದಿಲ್ಲ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ನಗರದಲ್ಲಿ ಆರ್‌ಎಸ್‌ಎಸ್ ಕುರಿತು ಸಚಿವ ಪ್ರಿಯಾಂಕ ಖರ್ಗೆ ಹೇಳಿಕೆ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಬಸವರಾಜ ಬೊಮ್ಮಾಯಿ ಅವರು, ರಿಜಿಸ್ಟರ್ ಹಾಗೂ ಅನ್ ರಿಜಿಸ್ಟರ್ ಸಂಸ್ಥೆಗಳು ಸಾಕಷ್ಟು ಇವೆ. ಈ ದೇಶದ ಕಾನೂನಿನಲ್ಲಿ ಸಾಕಷ್ಟು ಅವಕಾಶವಿದೆ. ಎಲ್ಲಕ್ಕಿಂತ ಹೆಚ್ಚು ಆರ್‌ಎಸ್‌ಎಸ್ ಜನಸೇವೆಯಲ್ಲಿ ಇಡೀ ಜಗತ್ತಿನಲ್ಲಿ ಶ್ರೇಷ್ಠವಾಗಿದೆ. ಆರ್‌ಎಸ್‌ಎಸ್ ಜಗತ್ತಿನಲ್ಲಿ ಅತೀ ದೊಡ್ಡ ಸಂಸ್ಥೆಯಾಗಿದೆ ಎಂದು ಹೇಳಿದರು. ಕಾಲಕಾಲಕ್ಕೆ ಕೆಲವರು ಈ ರೀತಿ ಪ್ರಶ್ನೆ ಮಾಡುತ್ತಾರೆ. ಅದಕ್ಕೆ ಜಗ್ಗದ ಬಗ್ಗದೆ ಸೇವೆಯನ್ನು ಮುಂದುವರೆಸಿಕೊಂಡು ಹೋಗುತ್ತದೆ. ನಮಗೆ ರಾಜಕೀಯ ಮೌಲ್ಯಗಳ ಆರ್‌ಎಸ್‌ಎಸ್ ಪ್ರೇರಿತ ಎಂದು ಅವರು ಹೇಳಿದರು.

ಲಂಚ ಸ್ವೀಕಾರ: ಎಎಸ್‌ಐ, ಮಹಿಳಾ ಹೆಡ್ ಕಾನ್‌ಸ್ಟೇಬಲ್ ಅಮಾನತು

ಕಲಬುರಗಿ: ನಗರದ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪೋಕ್ಸೋ ಪ್ರಕರಣದಲ್ಲಿ ಸಹಾಯ ಮಾಡುವುದಾಗಿ ಹೇಳಿ ಲಂಚದ ಬೇಡಿಕೆ ಇಟ್ಟ ಆರೋಪದ ಹಿನ್ನೆಲೆಯಲ್ಲಿ ಎಎಸ್‌ಐ ಹಾಗೂ ಮಹಿಳಾ ಹೆಡ್ ಕಾನ್‌ಸ್ಟೇಬಲ್ ಅವರನ್ನು ಅಮಾನತುಗೊಳಿಸಿ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ಆದೇಶ ಹೊರಡಿಸಿದ್ದಾರೆ.

ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯ ಗುನ್ನೆ ಸಂಖ್ಯೆ 61/2026ರಲ್ಲಿ ಬಿಎನ್‌ಎಸ್ ಕಲಂ 64(2)(ಎಂ) ಹಾಗೂ ಪೋಕ್ಸೋ ಕಾಯ್ದೆಯ ಕಲಂ 4 ಮತ್ತು 6ರಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಕಿಯ ಹೇಳಿಕೆ ಪಡೆದುಕೊಳ್ಳುವ ವಿಚಾರದಲ್ಲಿ ತನಿಖಾ ಸಹಾಯಕ ಸಿಬ್ಬಂದಿಯಾಗಿದ್ದ ಜ್ಯೋತಿ (ಮಹಿಳಾ ಹೆಡ್ ಕಾನ್‌ಸ್ಟೇಬಲ್) ಹಾಗೂ ಶಿವಶರಣಪ್ಪ (ಎಎಸ್‌ಐ) ಅವರು ದೂರುದಾರರನ್ನು ಠಾಣೆಗೆ ಕರೆಯಿಸಿಕೊಂಡು ಪ್ರಕರಣದಲ್ಲಿ ಸಹಾಯ ಮಾಡುವುದಾಗಿ ಹೇಳಿ 10,000 ರೂ.ಲಂಚದ ಬೇಡಿಕೆ ಇಟ್ಟಿದ್ದಾರೆ ಎನ್ನಲಾಗಿದೆ. ಈ ಸಂಬಂಧ ದೂರು ಬಂದ ಹಿನ್ನೆಲೆಯಲ್ಲಿ, ಜೂನ್ 7ರಂದು ಬೆಳಿಗ್ಗೆ 11.30 ಗಂಟೆ ಸುಮಾರಿಗೆ ದೂರುದಾರರಿಂದ 9,000 ರೂ. ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಇಬ್ಬರನ್ನೂ ಬಲೆಗೆ ಬೀಳಿಸಿದ್ದಾರೆ.

ನಾಳೆ ಕೊಲ್ಲೂರು ಕ್ಷೇತ್ರಕ್ಕೆ ತಮಿಳ್ನಾಡು ಸಿಎಂ

ಬೈಂದೂರು: ತ.ನಾಡು ಸಿಎಂ ಜೋಸೆಫ್ ವಿಜಯ್ ಅವರು ಜೂನ್ 12 ರಂದು ದಕ್ಷಿಣ ಭಾರತದ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ. ಶುಕ್ರವಾರ ಬೆಳಿಗ್ಗೆ 12.30ಕ್ಕೆ ಸಿಎಂ ವಿಜಯ್ ಅವರು ವಿಶೇಷ ವಿಮಾನದ ಮೂಲಕ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಅಲ್ಲಿಂದ ರಸ್ತೆ ಮಾರ್ಗದ ಮೂಲಕ ಕೊಲ್ಲೂರಿಗೆ ಪ್ರಯಾಣ ಬೆಳೆಸಲಿದ್ದಾರೆ. ಅಂದು ಸಂಜೆ 3 ಗಂಟೆಗೆ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಕ್ಕೆ ತಲುಪಲಿರುವ ಅವರು, ದೇವಿಯ ಸನ್ನಿಧಿಯಲ್ಲಿ ನಡೆಯಲಿರುವ ವಿಶೇಷ ಪೂಜಾ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ.

ಪೊಲೀಸ್ ಇಲಾಖೆಗೆ ಭದ್ರತೆಯ ಸೂಚನೆ: ತಮಿಳುನಾಡು ಮುಖ್ಯಮಂತ್ರಿಗಳ ಭೇಟಿಯ ಹಿನ್ನೆಲೆಯಲ್ಲಿ ಅವರು ಸಂಚರಿಸಲಿರುವ ರಸ್ತೆ ಮಾರ್ಗ ಹಾಗೂ ದೇವಸ್ಥಾನದ ಆವರಣದಲ್ಲಿ ಯಾವುದೇ ಲೋಪದೋಷಗಳಾಗದಂತೆ ಸೂಕ್ತ ಭದ್ರತಾ ವ್ಯವಸ್ಥೆಯನ್ನು ಕೈಗೊಳ್ಳಬೇಕು ಎಂದು ಪೊಲೀಸ್ ಇಲಾಖೆಗೆ ಈಗಾಗಲೇ ಅಗತ್ಯ ಸೂಚನೆಗಳನ್ನು ನೀಡಲಾಗಿದೆ.

ಕಾಞಂಗಾಡಿನಲ್ಲಿ ಬಾಂಗ್ಲಾ ಯುವತಿ ಸೆರೆ

ಕಾಸರಗೋಡು: ಬಾಂಗ್ಲಾ ದೇಶದಿಂದ ಅಕ್ರಮವಾಗಿ ಕೇರಳಕ್ಕೆ ಬಂದು ವಾಸಿಸುತ್ತಿದ್ದ ಯುವತಿಯನ್ನು ಕಾಞಂಗಾಡಿನಿಂದ ಹೊಸದುರ್ಗ ಪೊಲೀಸರು ಬಂಧಿಸಿದ್ದಾರೆ. ಇವರ ಬೆನ್ನಲ್ಲೇ ಆಕೆಯ ಜತೆಗೆ ಇಲ್ಲಿಗೆ ಬಂದಿರುವ ಕುಟುಂಬದವರ ಪತ್ತೆಗಾಗಿ ಪೊಲೀಸರು ವ್ಯಾಪಕ ಶೋಧ ಕೈಗೊಂಡಿದ್ದಾರೆ. ಬಾಂಗ್ಲಾ ದೇಶದ ಪ್ರಜೆಯಾಗಿರುವ ಸೆಲ್ಮಾ ಕೌತುಲಿಯಾ (31) ಎಂಬಾಕೆಯನ್ನು ಮಂಗಳವಾರ ಕಾಞಂಗಾಡು ರೈಲು ನಿಲ್ದಾಣದಿಂದ ಪೊಲೀಸರು ಬಂಧಿಸಿದ್ದರು. ಈಕೆ ಮಲಪ್ಪುರಂನಿಂದ ಮಲಬಾರ್ ಎಕ್ಸ್‌ಪ್ರೆಸ್ ರೈಲುಗಾಡಿಯಲ್ಲಿ ಕಾಞಂಗಾಡು ರೈಲು ನಿಲ್ದಾಣದಲ್ಲಿ ಬಂದಿಳಿಯುತ್ತಿದ್ದಂತೆ ಸಂಶಯಗೊಂಡ ಪೊಲೀಸರು ವಿಚಾರಣೆಗೊಳಪಡಿಸಿದಾಗ ಆಕೆ ಬಾಂಗ್ಲಾ ದೇಶದ ಪ್ರಜೆಯಾಗಿರುವುದು ಸ್ಪಷ್ಟಗೊಂಡಿತು.

ಜೂ.28ರಂದು ಪೋಲಿಯೋ ಲಸಿಕೆ

ಬೆಂಗಳೂರು: ರಾಜ್ಯದಲ್ಲಿ 5 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಲಸಿಕೆ ನೀಡುವ ಉದ್ದೇಶದಿಂದ ಜೂ.28ರಂದು ರಾಷ್ಟ್ರೀಯ ಲಸಿಕಾ ದಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತ್ವಿಕ್ ಪಾಂಡೆ ತಿಳಿಸಿದ್ದಾರೆ. ಭಾರತವು ಕಳೆದ 14 ವರ್ಷಗಳಿಗೂ ಮೇಲ್ಪಟ್ಟು ಪೋಲಿಯೊ ಮುಕ್ತ ರಾಷ್ಟ್ರ ವಾಗಿದ್ದರೂ, ಜಗತ್ತಿನ ಕೆಲವು ಭಾಗಗಳಲ್ಲಿ ಹಾಗೂ ಭಾರತದ ನೆರೆ ರಾಷ್ಟ್ರಗಳಲ್ಲಿ ವೈಲ್ಡ್ ಪೋಲಿಯೋ ವೈರಸ್ ಹರಡುವಿಕೆ ಈ ಮುನ್ನೆಚ್ಚರಿಕೆ ಕ್ರಮ ಅತ್ಯಗತ್ಯವಾಗಿದೆ ಎಂದರು.

ಕಸ ಸಂಸ್ಕರಣೆಗಾಗಿ ದಿಲ್ಲಿ ಮೂಲದ ಕಂಪನಿಗೆ 39,000 ಕೋಟಿ ರೂ. ಟೆಂಡರ್

ಘನತ್ಯಾಜ್ಯ ಟೆಂಡರ್ ಅವ್ಯವಹಾರ: ಅಶೋಕ

ಬೆಂಗಳೂರು: ಬೆಂಗಳೂರಿನಲ್ಲಿ ಕಸ ಸಂಸ್ಕರಣೆ ಮಾಡುವ ನೆಪದಲ್ಲಿ ಕಾಂಗ್ರೆಸ್ ಸರ್ಕಾರ 39,000 ಕೋಟಿ ರೂ. ಹಗರಣ ನಡೆಸಿದೆ. 35 ವರ್ಷಗಳ ಸುದೀರ್ಘ ಅವಧಿಗೆ ಎಂಎಸ್‌ಡಬ್ಲ್ಯು ಸಲ್ಯೂಶನ್ಸ್ ಲಿಮಿಟೆಡ್‌ಗೆ ನೀಡುತ್ತಿರುವ ಟೆಂಡರ್‌ನ ಒಟ್ಟು ಮೊತ್ತದಲ್ಲಿ 10,000 ಕೋಟಿ ರೂ. ಕಿಕ್‌ಬ್ಯಾಕ್ ಪಡೆಯಲಾಗಿದೆ ಎಂದು ಪ್ರತಿಪಕ್ಷ ಆರ್.ಅಶೋಕ ಆರೋಪಿಸಿದ್ದಾರೆ.

ವಿಧಾನಸೌಧದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಬಿಜೆಪಿ ಸರ್ಕಾರವಿದ್ದಾಗ ಸ್ವಚ್ಛತೆಯಲ್ಲಿ ಅತ್ಯುತ್ತಮ ನಗರ ಎಂಬ ಹೆಗ್ಗಳಿಕೆ ಬೆಂಗಳೂರಿಗೆ ಸಿಕ್ಕಿತ್ತು. ಈಗ ಬೆಂಗಳೂರು ಬೆಚ್ಚಿಬೀಳುವಂತಹ 39,000 ಕೋಟಿ ರೂ. ಹಗರಣವನ್ನು ಕಾಂಗ್ರೆಸ್ ಸರ್ಕಾರ ಕಸದ ಹೆಸರಲ್ಲಿ ಮಾಡಿದೆ. ದೇಶದ ಇತಿಹಾಸದಲ್ಲಿ ಕಸದಲ್ಲಿ ಲೂಟಿ ಮಾಡಿರುವ ಹಗರಣ ಇದೇ ಮೊದಲು. ಪ್ರತಿ ವರ್ಷ ಬೆಂಗಳೂರಿನಲ್ಲಿ ಕಸ ಸಂಗ್ರಹ ಮತ್ತು ಸಾಗಣೆಗೆ 514 ಕೋಟಿ ರೂ. ಮತ್ತು ಸಂಸ್ಕರಣೆ ಮತ್ತು ವಿಲೇವಾರಿಗೆ 380 ಕೋಟಿ ರೂ. ಖರ್ಚು ಮಾಡಲಾಗುತ್ತಿದೆ. 11,000 ಪೌರಕಾರ್ಮಿಕರಿಗೆ ವರ್ಷಕ್ಕೆ 444 ಕೋಟಿ ರೂ. ಸಂಬಳ ನೀಡಲಾಗುತ್ತಿದೆ. ಎಲ್ಲ ಸೇರಿ ಸೇರಿ ವರ್ಷಕ್ಕೆ ಒಟ್ಟು 1,344 ಕೋಟಿ ರೂ. ಖರ್ಚಾಗುತ್ತದೆ ಎಂದರು. ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಇದ್ದರು.



ರಾಜ್ಯಪಾಲರಿಗೆ ಹಾಗೂ ಲೋಕಾಯುಕ್ತರಿಗೆ ದೂರು

ಪ್ರತಿಪಕ್ಷ ನಾಯಕ ಆರ್.ಅಶೋಕ ಅವರು ಲೋಕಭವನಕ್ಕೆ ತೆರಳಿ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರನ್ನು ಭೇಟಿಯಾಗಿ ಈ ಕುರಿತು ದೂರು ನೀಡಿದರು. ಬಳಿಕ ಲೋಕಾಯುಕ್ತ ಕಚೇರಿಗೆ ತೆರಳಿ, ಲೋಕಾಯುಕ್ತ ರಿಜಿಸ್ಟ್ರಾರ್ ಅವರಿಗೂ ದೂರು ನೀಡಿದರು.

ಆರ್. ಅಶೋಕ್ ಆರೋಪಕ್ಕೆ ಸಿಎಂ ಡಿಕೆಶಿ ತಿರುಗೇಟು

ನವದೆಹಲಿ: ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್ ಅವರು ಬೆಂಗಳೂರು ಕಸ ಮಾಫಿಯಾ ಗ್ಯಾಂಗಿನ ಏಜೆಂಟರಾಗಿ ಮಾತನಾಡುತ್ತಿದ್ದಾರೆ. ಈ ಮಾಫಿಯಾ ನಿಯಂತ್ರಿಸಬೇಕು ಎಂದು ನಾನು ಈ ಹಿಂದೆ ಅವರೊಂದಿಗೆ ಚರ್ಚೆ ಮಾಡಿದ್ದೆ. ಈಗ ಅಶೋಕ್ ಅವರು ಮಾಫಿಯಾದ ವಕ್ತಾರರಾಗಿರುವುದು ನನಗೆ ಆಶ್ಚರ್ಯವಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿರುಗೇಟು ನೀಡಿದರು. ದೆಹಲಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ್ ಅವರಿಗೆ ಏನೇನು ಕಸ ಬೇಕೋ ಲಾರಿಯಲ್ಲಿ ತುಂಬಿ ಕಳುಹಿಸಿಕೊಡೋಣ ಎಂದು ತಿಳಿಸಿದರು.

ಯಾವ ತನಿಖೆ ಬೇಕಾದರೂ ಮಾಡಿಸಲಿ: ಈಗ ಕಸ ವಿಲೇವಾರಿಗೆ 6 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡುತ್ತಾರೆ. ನಮ್ಮಲ್ಲಿ ಎಲ್ಲೂ ಜಾಗ ಲಭ್ಯವಾಗಲಿಲ್ಲ, ಹೀಗಾಗಿ ದೊಡ್ಡಬಳ್ಳಾಪುರದಲ್ಲಿ ಜಾಗ ಖರೀದಿ ಮಾಡಲು ತೀರ್ಮಾನಿಸಲಾಗಿದೆ. ಅವರು ಯಾವ ತನಿಖೆ ಬೇಕಾದರೂ ಮಾಡಲಿ. ಎಲ್ಲಾದರೂ ವರದಿ ನೀಡಲಿ. ಎದುರಿಸಲು ನಾನು ಸಿದ್ಧ ಎಂದರು.

ಗ್ರಾಮೀಣ ಆರೋಗ್ಯ ಸೇವೆ ಬಲಪಡಿಸಲು ತೀರ್ಮಾನ: ಯು.ಟಿ.ಖಾದರ್

ಡಿಎಚ್‌ಒ ಮೂಲಕ ಸರ್ಕಾರಿ ಹುದ್ದೆಗೆ ನೇಮಕ

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿ, ಗುತ್ತಿಗೆ ನೌಕರರ ಖಾಯಂ ನೇಮಕ ಹಾಗೂ ಗ್ರಾಮೀಣ ಆರೋಗ್ಯ ಸೇವೆ ಬಲಪಡಿಸುವ ಕುರಿತು ಶೀಘ್ರದಲ್ಲಿಯೇ ಮಹತ್ವದ ತೀರ್ಮಾನಗಳನ್ನು ಕೈಗೊಳ್ಳುವುದಾಗಿ ಆರೋಗ್ಯ ಸಚಿವ ಯು.ಟಿ.ಖಾದರ್ ತಿಳಿಸಿದರು.

ಬುಧವಾರ ನಗರದ ಆರೋಗ್ಯಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಲಾಖೆಯ ಕಾರ್ಯಕ್ರಮ/ಯೋಜನೆಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಆರೋಗ್ಯ ಸಚಿವ ಯು.ಟಿ.ಖಾದರ್ ಅವರು, ರಾಜ್ಯದಲ್ಲಿ ಪ್ರಸ್ತುತ 1,280 ಎಂಬಿಬಿಎಸ್ ವೈದ್ಯರು, 924 ತಜ್ಞ ವೈದ್ಯರು ಹಾಗೂ 892 ನರ್ಸ್‌ಗಳ ಕೊರತೆ ಇದೆ. ಈ ಹಿನ್ನೆಲೆಯಲ್ಲಿ ನೇರ ಸಂದರ್ಶನದ ಮೂಲಕ ತಕ್ಷಣವೇ 200 ವೈದ್ಯರನ್ನು ನೇಮಕ ಮಾಡಿಕೊಳ್ಳಲು ಸೂಚಿಸಿದರು. ಡಿಎಚ್‌ಒ ಮೂಲಕ ಸರ್ಕಾರಿ ಹುದ್ದೆ ನೇಮಕಕ್ಕೆ ತೀರ್ಮಾನಿಸಿದ್ದು, ನೇಮಕಗೊಳ್ಳುವ ಎಂಬಿಬಿಎಸ್ ವೈದ್ಯರಿಗೆ ತಿಂಗಳಿಗೆ 1.10 ಲಕ್ಷ ರೂ. ವೇತನ ನೀಡಲು ಸರ್ಕಾರ ನಿರ್ಧರಿಸಲಾಗಿದೆ ಎಂದರು.

ಗುತ್ತಿಗೆ ನೌಕರರಿಗೆ ಖಾಯಂ ಸೇವೆಯ ಭರವಸೆ: ಹೊಸದಾಗಿ ನೇಮಕವಾಗುವ ವೈದ್ಯರು ಗ್ರಾಮೀಣ ಭಾಗಗಳಲ್ಲಿ ಕಡ್ಡಾಯ ಸೇವೆ ಸಲ್ಲಿಸಬೇಕು ಎಂದು ಸೂಚಿಸಿದರು. ಜತೆಗೆ 60 ವರ್ಷ ವಯಸ್ಸಿನಲ್ಲಿ ನಿವೃತ್ತರಾಗಿರುವ ವೈದ್ಯರನ್ನು 70 ವರ್ಷ ವಯಸ್ಸಿನವರೆಗೆ ಗುತ್ತಿಗೆ ಆಧಾರದಲ್ಲಿ ಸೇವೆಗೆ ಬಳಸಿಕೊಳ್ಳುವ ಪ್ರಸ್ತಾವನೆ ಇದೆ ಎಂದರು.



ಔಷಧಿ ದರ ಏರಿಕೆ ತಡೆಗೆ ಕೇಂದ್ರಕ್ಕೆ ಮನವಿ

ಔಷಧಿಗಳ ಬೆಲೆ ಏರಿಕೆಯನ್ನು ತಡೆಯಲು ಕುರಿತು ಕೇಂದ್ರ ಸಚಿವರನ್ನು ಭೇಟಿ ಮಾಡಿ ಚರ್ಚಿಸಲಾಗುವುದು. ಸಾರ್ವಜನಿಕರ ಹಿತದೃಷ್ಟಿಯಿಂದ ಔಷಧಿ ದರ ಹೆಚ್ಚಿಸದಂತೆ ಮನವಿ ಮಾಡಲಾಗುತ್ತದೆ. ಸರ್ಕಾರಿ ಉಗ್ರಾಣಗಳಿಗೆ ಪೂರೈಕೆಯಾಗುವ ಔಷಧಿಗಳ ಗುಣಮಟ್ಟವನ್ನು ಕಡ್ಡಾಯವಾಗಿ ಮರುಪರಿಶೀಲನೆ ನಡೆಸಲು ತೀರ್ಮಾನಿಸಲಾಗಿದೆ. ಈಗಾಗಲೇ 81 ಅತ್ಯಗತ್ಯ ಔಷಧಿಗಳ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಮುಂದಿನ ದಿನಗಳಲ್ಲಿ ಆರೋಗ್ಯ ಸುರಕ್ಷಾ ಸಮಿತಿ ಮೂಲಕ ನೇರ ಖರೀದಿ ವ್ಯವಸ್ಥೆ ಜಾರಿಗೆ ತರಲು ಇಲಾಖೆ ಚಿಂತನೆ ನಡೆಸಿದೆ ಎಂದು ಸಚಿವರು ತಿಳಿಸಿದರು.

ಪ್ರಕಟಣೆ

MANJUNATHA G S S/O SEETHARAMAIAH G T ... NO. 28 INCHARA SHANKARA LAYOUT OLD R T NAGAR DATTAGALLI MYSORE 570033 ... MANJUNATH G S ... 09.06.2026 ... KA1419900000916 ... EPIC No. IQG5856174 ...

[illegible]

ಸಾರ್ವಜನಿಕ ಪ್ರಕಟಣೆ

[illegible]

ಶ್ರೀನಿವಾಸ್ ಎಸ್, ವಕೀಲರು
ನಂ.59, ... ಬೆಂಗಳೂರು-560090.
ಮೊ: 8197604964
ಇಮೇಲ್: srinivas.stg12@gmail.com
ಬೆಂಗಳೂರು, ದಿನಾಂಕ: 10-06-2026

IN THE COURT OF THE HON'BLE I ADDITIONAL CIVIL JUDGE AT K.G.F.
O.S. No.439/ 2022

Plaintiff: Sri. Harry Varghese Babu,
Vs.
Defendants: Smt. Banumathi, And others

PUBLIC NOTICE
IN HOSA DIGANTHA NEWSPAPER

It is hereby informed that One Sri. Harry Varghese Babu, S/o Late Anthoney Peter & Late Smt. Anthonyammal Aged about 51 years, Residing at #4, 7th Cross, E.G.I. Pura, Vivek Nagar Post, Bangalore - 560047 being the Plaintiff had filed a suit for Permanent Injunction and other reliefs on the file of the Hon'ble I Additional Civil Judge & J.M.F.C., K.G.F in respect of vacant site measuring East to West 40 feet and North to South 30 feet bearing V.P. Khatha No. 265/29 and vacant site measuring East to West 40 feet and North to South 30 feet bearing V.P. Khatha No. 265/44 both are situated at Krishnapuram Village, K.G.F. Taluk coming within the limits of Ghattakamadenahalli Grama Panchayath.

It is hereby informed that one Sri. Syed Yousuff, S/o Syed Gaffar Saheb, Aged about 64 years, Residing at #23, Keelagani Village, Emmenatha, Mulbagal Taluk, Kolar District - 563 136, Aadhaar No. 43717083 3210, being the proposed Defendant No. 3 shall appear before the Hon'ble I Additional Civil Judge at K.G.F. You are hereby informed to appear before this Court in person or by a pleader duly instructed 09.07.2026 at 11.00 a.m. and to file your showcase, why the relief prayed for could not be granted. Take further notice that in case of default, the case will be heard and desided exparte.

Given under my hand and seal of the court on this 09.06.2026.

By the Order of the Court
Sheristedhar, Hon'ble 1st Additional Civil Judge, K.G.F.

G.Advocate for Plaintiff: **K.C.Manjunath,** B.A. LL.B., KAR 2815/2006, Advocate Robertsonpet, K.G.F
Place: K.G.F, Date: 09.06.2026

ಮಾನ್ಯ ... ನ್ಯಾಯಾಲಯ, ಬೆಂಗಳೂರು ...
ಅಸಲು ದಾವೆ ಸಂಖ್ಯೆ: 5018/2026

[illegible]

ಮಾನ್ಯ ... ನ್ಯಾಯಾಲಯ ...

[illegible]

IN THE COURT OF THE PRL CIVIL JUDGE AND JMFC AT ANEKAL
C.Misc. No. 905/2026

BETWEEN: 1. Smt. Jayamma, W/o Late Krishnappa, aged about 56 years, R/at #004, LIG-3, 89, KHB Colony, Suryacity, Chandapura, Anekal Taluk, Bangalore District. **2. Sri. Manjunath,** S/o Late Krishnappa, aged about 48 years, R/at No.199/B, 2nd Cross, Sri Sai Residency, Hennagara Gate, Yellammanagara, Chandapura, Anekal Taluk, Bangalore District. **3. Sri. Arun Kumar,** S/o Late Krishnappa, aged about 43 years, R/at #004, LIG-3, 89, KHB Colony, Suryacity, Chandapura, Anekal Taluk, Bangalore District. **4. Smt. Savitha,** D/o Late Krishnappa, aged about 43 years, R/at No.274, 1st Main, Ramakrishna Layout, Giddenahalli, RMV Extension, 2nd Stage, Bangalore North, Bangalore ...**Petitioners.**

AND: The Tahasildhar, Anekal Taluk ...**Respondent**

NOTICE

Whereas the petitioners have filed the above petition for seeking the death certificate of petitioners father namely **Munivenkatappa** S/o Late Krishnappa who was died on 04-09-1963 at Sarjapura Village, Sarjapura Hobli, Anekal Taluk, Bangalore District before the Prl Civil Judge and JMFC at Anekal, whereas the above petition is fixed for hearing date on **10/07/2026** at **11.00 AM** if anybody interest in this matter regard to appear in this court in person or by a pleader to file objections the same of you failing which the petition will be disposed on enquiry.

Given under my hand and seal of the Court on this 09/06/2026

By order of the Court, Sheristedar Civil Judge (Jr.Dvn) and JMFC Court, Anekal

Advocate for Petitioner: **Sri. Sunil. D**
Office at STB Complex, Attibele Main Road, Anekal Town, Anekal Taluk, Bangalore District.

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಶ್ರೀನಿವಾಸಪುರ
ಸಿ.ಮಿಸ್. ನಂ. 39 /2026

[illegible]

ದಿನಾಂಕ 13.07.2026 ... 11.00 ಗಂಟೆಗೆ ...

... 09.06.2026 ...

ದಿನಾಂಕ: 08/06/2026, ಸ್ಥಳ: ಶ್ರೀನಿವಾಸಪುರ

ಮಾಗಡಿ ಯೋಜನಾ ಪ್ರಾಧಿಕಾರ

ನಂ. 297/5588, ಬಾಗೇಗೌಡ ಬಡಾವಣೆ, ತಿರುಮಲೆ ರಸ್ತೆ, ಮಾಗಡಿ ಟೌನ್
ಬೆಂಗಳೂರು ದಕ್ಷಿಣ ಜಿಲ್ಲೆ – 562120. ದೂರವಾಣಿ ಸಂಖ್ಯೆ: 2774 5057

ಸಂಖ್ಯೆ: ಮಾಯೋಪ್ರಾ/ಶಾ.ವ/ಪ್ರಾ.ಪ್ರ.ಪ/10/2025–26/304 ದಿನಾಂಕ: 09.06.2026

ಪ್ರಕಟಣೆ

ಮಾಗಡಿ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಈ ಕೆಳಕಂಡ ಅರ್ಜಿದಾರರು ಪ್ರಸ್ತಾಪಿತ ಪ್ರದೇಶದಲ್ಲಿ 'ವಸತಿ - School Offering higher primary school courses' ಉದ್ದೇಶದ ಕಟ್ಟಡ ಕಟ್ಟಲು ಸಂಬಂಧಿಸಿದ ಸ್ಥಳೀಯ ಸಂಸ್ಥೆಯಿಂದ ಕಟ್ಟಡ ಪರವಾನಗಿ ಪಡೆಯುವ ಸಂಬಂಧ ಈ ಕಛೇರಿ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿರುತ್ತಾರೆ. ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

ಅರ್ಜಿದಾರರ ಹೆಸರು	ತಾಲ್ಲೂಕು, ಹೋಬಳಿ, ಗ್ರಾಮ	ಸರ್ವೆ ನಂ.	ವಿಸ್ತೀರ್ಣ (ಎಕರೆ/ ಗುಂಟೆ)	ಉದ್ದೇಶ	ಸ್ವತ್ತಿನ ಸಂಖ್ಯೆ ಮತ್ತು ಪಿ.ಐ.ಡಿ ಸಂ.
ಶ್ರೀಮತಿ ರಮ್ಯ ವೈ.ವಿ. ಮತ್ತು ಶ್ರೀ ಕೆಂಚಪ್ಪ ಕೆ	ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಚುಂಚನಕುಪ್ಪೆ ಗ್ರಾಮ.	40/10	01ಎ–00ಗು	ವಸತಿ School Offering Higher Primary School courses	ಸ್ವತ್ತಿನ ಸಂಖ್ಯೆ 40, ಪಿ.ಐ.ಡಿ ಸಂ. 150200300700830727
		40/11	01ಎ–20ಗು		
			02ಎ–20ಗು		

ಸದರಿ ಪ್ರಸ್ತಾವನೆಗಳ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಲಿಖಿತವಾಗಿ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ಅವಧಿ ಮುಗಿದ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– **ಸದಸ್ಯ ಕಾರ್ಯದರ್ಶಿ ಹಾಗೂ ಜಂಟಿ ನಿರ್ದೇಶಕರು**
ಮಾಗಡಿ ಯೋಜನಾ ಪ್ರಾಧಿಕಾರ, ಮಾಗಡಿ.

DIPR/BSD/99/SA/2026-27

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು – 572 103 – ದೂರವಾಣಿ : 0816–2272280
email : tudatmk2009@yahoo.co.in; website : tumakuru.uda.gov.in.

ಸಂಖ್ಯೆ/TUDA-LBPAS-000235/2025-26/CLU ದಿನಾಂಕ: 05–06–2026

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರನ್ವಯ)

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳು ಇದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸದೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾ ಯೋಜನೆಯಂತೆ ಭೂ ಉಪಯೋಗ	ಕೋರಿರುವ ಭೂ ಉಪಯೋಗ
1	ಬಿ.ಎಸ್. ನಾಗೇಂದ್ರ ರಾವ್ ಬಿನ್ ಶಿವಣ್ಣ	ತುಮಕೂರು	ಕಸಬಾ ಉತ್ತರ	[illegible]	21/1 A2	0 ಎಕರೆ 16 ಗುಂಟೆ	ವ್ಯವಸಾಯ	ವಸತಿ
					21/8	00 ಎಕರೆ 21 ಗುಂಟೆ ಪೈಕಿ (0-01 ಗುಂಟೆ 'ಖ' ಖರಾಬು ಹೊರತುಪಡಿಸಿ) ಪೈಕಿ 0 ಎಕರೆ 20 ಗುಂಟೆ		
2	ಹೆಚ್.ಆರ್. ಭಾರತಿ ಕೋಂ ಹೆಚ್.ಎಸ್. ಗುರುನಾಥ				21/4	0 ಎಕರೆ 17 ಗುಂಟೆ		
					21/6	0 ಎಕರೆ 15 ಗುಂಟೆ		
					21/3	00 ಎಕರೆ 20 ಗುಂಟೆ ಪೈಕಿ (0-01 ಗುಂಟೆ 'ಖ' ಖರಾಬು ಹೊರತುಪಡಿಸಿ) 00 ಎಕರೆ 19 ಗುಂಟೆ		
					21/9	0 ಎಕರೆ 15 ಗುಂಟೆ		
		ಒಟ್ಟು				02 ಎಕರೆ 22 ಗುಂಟೆ		

ಷರಾ : ಪ್ರಶ್ನಿತ ಜಮೀನಿನಲ್ಲಿ ಪ್ರಾಧಿಕಾರದ ನಿಯಮಗಳನ್ವಯ ಹಾಗೂ ಕಾನೂನು ಬದ್ಧವಾಗಿ ವಿನ್ಯಾಸ ಅನುಮೋದನೆ ಪಡೆದು ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ನಿವೇಶನಗಳನ್ನು ನೀಡುವ ಮತ್ತು ಕಾಮಗಾರಿ ಕೆಲಸಗಳಲ್ಲಿ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರರವರ ಕಛೇರಿ, ನೀಸ&ಒಚ (ಪಶ್ಚಿಮ) ವಿಭಾಗ, ವಾಣಿವಿಲಾಸ ಆವರಣ, ಯಾದವಗಿರಿ, ಮೈಸೂರು-570020

ಟೆಂಡರ್ ಪ್ರಕಟಣೆ ಸಂಖ್ಯೆ:ಮೈಮನಪಾ/ಕಾಇಂ/ನೀಸ&ಒಚ(ಪಶ್ಚಿಮ)/ಸ.ಅ/ಟಿಎನ್–05/260/2026–27 ದಿನಾಂಕ:10.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನಗಳಲ್ಲಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ)	ಸಂಜೆ 5.30 ಗಂಟೆ ನಂತರ: ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಸಂಜೆ 4.30 ಗಂಟೆ ಒಳಗೆ: ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಸಂಜೆ 4.30 ಗಂಟೆ ನಂತರ: ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	Kw-1, Kw-2, Kw-3 & Goods Tendar	08 ಸಂಖ್ಯೆಗಳು	265.71	10.06.2026	17.06.2026	18.06.2026

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ನಲ್ಲಿ ಅಥವಾ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು
ನೀಸ&ಒಚ (ಪಶ್ಚಿಮ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಾಸಾಸಂಇ/ಮೈಸೂರು/293/ಶಿರಡಿಸಾಯಿ/2026–27

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ನಯೋಸ/CLU–535/2025–26/795/2026–27 ದಿನಾಂಕ: 09.06.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ** ವಲಯದಿಂದ **ವಸತಿ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀಮತಿ ಎನ್. ಮಂಜುಳ ವಾಣಿ ಮತ್ತು ಇತರರು	ಬೆಂಗಳೂರು ಪೂರ್ವ	ಬಿದರಹಳ್ಳಿ	ಚೀಮಸಂದ್ರ	7/1	3–25	ವ್ಯವಸಾಯ ವಲಯ	ವಸತಿ

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ಜಮೀನಿನ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಾಯವಾಣಿ/ವಾಟ್ಸಪ್: 94831 66622 (24 x 7). X @BDAOfficialGoK

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

BEFORE MOTOR ACCIDENTS CLAIMS TRIBUNAL AT BENGALURU (SCCH-13)
M.V.C. No. 1865 of 2026

BETWEEN: Mr. Kumar H.R. ... PETITIONER
AND: Mr. Mohammed Arif and another ... **RESPONDENTS**

NOTICE TO RESPONDENT No.1

Mr. Mohammed Arif, 49 years, S/o Khadar Sab @ Khader Saheb, R/at No.141, 6th Main Road, HBR Layout, Kalyan Nagar, Bengaluru-560 043. (RC Owner of A/R No. KA-01-AC-4404)

Whereas the petitioner above named has filed a petition against you seeking compensation of Rs.75,00,000/- for the injuries suffered by him in Road Traffic Accident on 28-01-2026 at about 07-10 a.m., on Cubbon Road, Near Manekshaw Parade Ground, Gate No.02, Shivajinagar, Bengaluru, involving the Autorickshaw bearing No. KA-01-AC-4404, owned by you. You are hereby summoned to appear before this court in person or by a pleader on **14-07-2026** at 11:00 A.M to answer the same, failing which the petition will be disposed off exparte.

Given under my hand and seal of this court on 04-06-2026.

By order of the court, Assistant Registrar, Court of Small Causes, Bangalore

Advocate for Petitioner: **LAWYERS NET**
#2, Kilari Road, Avenue Road Cross, Bangalore-560 053

IN THE COURT OF THE XVIII ADDL JUDGE, COURT OF SMALL CAUSES AND ACJM AT BENGALURU
M.V.C. 6054/2025 (SCCH-04)

ATLURI LAKSHMI NARAYANA ... PETITIONER
-V/s-
M/S UNITED INDIA INSURANCE COMPANY Ltd., & 2 others ... RESPONDENTS

NOTICE TO RESPONDENT No.2 and 3

2) **K. KIRAN KUMAR,** S/o Madhusudhan Rao, Aged about 52 years, Hindu, R/at: D.No.24, Anantha Arcade, TCP Road, Kalasipalyam, Bangalore-560002. (Owner of Bus Reg. No. KA01-AB-7605) ... **RESPONDENT No.2**
3) **MUPPETI VASU,** S/o M.Ramaswamy Naidu, Aged about 46 years, Hindu, R/at: Thirumallapura, near Hessaraghatta Lake, TB Post, Bangalore North Taluk, Bangalore-560089. (Driver of Bus Reg. No. KA01-AB-7605) ... **RESPONDENT No.3**

Whereas, the above named ATLURI LAKSHMI NARAYANA, petitioner, has made an application to this court U/S 166 of MV Act, praying for the compensation of Rs.25,00,000/- (Rupees: Twenty Five lakhs only) for the injuries sustained by him due to the road accident caused by the bus bearing reg.no KA01-AB-7605, dated 27.01.2019 at about 01:00 PM at Srikalahasti to Tirupati main road, Cherlopalli cross road, near Ankamma Temple, Srikalahasti, Chittoor District, AP-517641

You both are hereby warned to appear in this court in person or by pleader duly instructed on **30-06-2026** at 11:00 O'clock in the forenoon, to show cause against the application, failing wherein, the said application will be determined ex parte.

Given under my hand and seal of the court on 06-06-2026.

By order of the court, Assistant Registrar, Court of Small Causes, Bangalore.

M. JAYACHANDRA REDDY, Advocate
D.No. 6-52/1, Akkaram Palli, TIRUPATI, AP - 517507.

IN THE COURT OF THE HON'BLE III ADDL SENIOR CIVIL JUDGE & CJM AT KOLAR.
F.D.P. No. 1/2023

Petitioner: Mehrunnisa.
V/S
Respondents: Mohammed Khaleelulla & others.

NOTICE UNDER ORDER 5 RULE 20 OF C.P.C TO THE LR's OF RESPONDENT No: 6 to 8 & 10.

6) **Srinivasa @ Seenappa,** S/o Krishnappa, Aged about 52 years, **7) K.V.Krishnappa,** S/o K.Venkataravanappa, Aged about 58 years, **8) Lakshminarayana,** S/o K.Venkataravanapa, Aged about 52 years, **10) Nagaraj,** S/o Venkataravanappa, Aged about 46 years, All are R/at Near Shankar Vidhyalaya, Opposite to RTO Office, Bangarpet Road, Kolar.

Whereas the above said petitioners has filed the above petition for the relief of final decree over the suit schedule properties against the Respondents, in which the above said person are the Respondent No. 6 to 8 and 10. The above said case is posted to 02.07.2026 for your appearance

Notice is hereby given to you to appear in this court on the said date at 11-AM in person or through an advocate duly authorized as per law and participate in the proceedings. If you failed to appear, the case will be dealt with heard, and decided in your absence.

Given under my hand and seal of the Court on this 06.06.2026.

By order of the Court
Sheristedar, HON'BLE III ADDL SENIOR CIVIL JUDGE & CJM AT KOLAR.

Advocate for Plaintiff **Sri. A.V.Ananda.**
Anand & Anand Advocates, 1st Floor, Opp: Champak Photo Studio, M.G.Road, Kolar Town-563101

IN THE COURT OF 28TH ADDL. CITY CIVIL JUDGE MAYOHALL AT BANGALORE (CCH No. 29)
O.S. No. 26098/2008

Between: Shivaprasad dead by his L.Rs Devi S Prasad & Kum Charishma ...**Plaintiff**
VS
Smt. Jayamma & her L.Rs & others ...**Defendants**

NOTICE / SUMMONS TO THE LR'S DEFENDANTS No. 1 & 8

1(a). **Sri. L.A. Nanda Kumar,** Aged about 45 years, S/o Late. Jayamma, **1(b). Sri. L.A. Vijaya Kumar,** Aged about 43 years, S/o Late. Jayamma, **1(c) L.A. Nalini Jayanthi,** Aged about 41 years, D/o Late Jayamma, All are residing at 49/5, 5th Main, 12th Cross, Ground Floor, Wilson Garden, Bangalore-560 027.
8) **Sri. N. Prashanth,** Aged about 32 years, S/o Late. N.P. Narasimha Murthy, R/at. U-56, 1st Floor, 6th Temple Road, Balamurugappathy Temple, Malleswaram, Bangalore-560 003.

WHEREAS, the above named plaintiff instituted a suit against you for Partition and Separate Possession and Permanent Injunction in respect of the schedule property.

You are hereby summoned / Notice to appear in this court **on 25-06-2026 at 11.0 AM** in either in person or through an Advocate/pleader to answer the questions to the same. Failing which the suit will be heard and determined as Ex-parte.

SCHEDULE IMMOVEABLE PROPERTY

All that part and parcel of the property bearing Municipal No.28, New No.41 (comprised in old No. 271/1) Situated at 1st Main Road, Rajamahal Guttahalli, Bangalore, measuring East to West 43 feet, North to South 100 feet, bounded on the:-
East : Seethappa's House, **West by** : Papanna's Property, **North by** : Corporation Road, **South by** : Road (Kempaiah's Property)

Given under my hand and seal of this court, this the 09th day June 2026.

By Order of the Court, Deputy Registrar, City Civil Court, Mayo Hall Unit, Bengaluru.

ADVOCATE FOR PETITIONERS
A. VENKATASWAMY & NIRMALA VENKATASWAMY Advocates
"Nyaya Kuteera", No. 110/1, 4th Main, 9th Cross, Malleshwaram, Bangalore-560 003.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು ಲೋಕೋಪಯೋಗಿ, ಇಲಾಖೆ ಶಿರಸಿ ವಿಭಾಗ ಶಿರಸಿ

ಕ್ರಸಂ: ಪಿಬಿ/5054 KRDCL/ಅಧಿಸೂಚನೆ: 2026–27/781 ದಿನಾಂಕ: 05.06.2026

ಇ–ಟೆಂಡರ್ ಅಧಿಸೂಚನೆ IFT-KW-4
ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ–ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ–ಪ್ರೋಕ್‌ನಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನಿತರ ವಿವರಗಳನ್ನು ವೀಕ್ಷಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನಿತರ ವಿವರಗಳು ಈ ಕೆಳಗಿನಂತಿವೆ. (ಒಟ್ಟು 1 ಕಾಮಗಾರಿ)

(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 22–06–2026 (16.00 ಗಂಟೆವರೆಗೆ) (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 23–06–2026 (16.00 ಗಂಟೆವರೆಗೆ) (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 24–06–2026 (16.30 ಗಂಟೆಗೆ) (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 25–06–2026 (16.00 ಗಂಟೆಗೆ)

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಶಿರಸಿ(ಉತ್ತರ ಕನ್ನಡ ಜಿಲ್ಲೆ)

DIPR/KWR/KSMCA/200/26-27 dt. 09.06.2026

ದೊಡ್ಡ, 20ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು
ಕ್ರಿ.ಮಿಸ್. ನಂ. 5102/2026

[illegible]

ದಿನಾಂಕ: 23.06.2026 ... 11 ಗಂಟೆಗೆ ...

ದಿನಾಂಕ : 15.05.2026 ...

[illegible]

IN THE COURT OF PRL THE J.M.F.C AT KUNIGAL
Crl.Mis.No. 38/2026

Petitioners: Sri.Pillaiah @ Raju S/o Late Thimmaiah Aged about 60 years, R/o Yeliyur Village, Huthridurga Hobli, Kunigal Taluk, Tumkur District.
V/S
Respondent:- The Tahsildar, Kunigal Taluk, Kunigal, Tumkur District.

The petitioners have filed the petition under section 13(3) of Birth and death act before the Hon'ble Prl JMFC court Kunigal to get the death certificate of Sri, Thimmaiah S/o Late Thimmaiah C Path, who died on 10.06.1972, at Yeliyur Village, Huthridurga Hobli, Kunigal Taluk, Tumkur District. For which anybody is having any objection may file their objection before the court on 30.07.2026.

If anybody one not filed any objection the matter will be dealt and 'heard order will be passed in favour of the petitioners as prayed in the and petition.

Given under my seal and signature on this day of 29.04.2026.

Sd/& Sherathedar, Hon'ble Prl JMFC court Kunigal
SHARATH.Y.G, Advocate for Petitioner

BEFORE THE MOTOR ACCIDENT CLAIMS TRIBUNAL AT BANGALORE
M V C. No.1318/2026

BETWEEN: Rithish B.M & others ...**PETITIONER**
AND: Abhinash Kumar Jha ...RESPONDENT

NOTICE TO RESPONDENT

Abhinash Kumar Jha, S/o Mayananda Jha, R/at No.376, 1st floor, 7th cross, 1st stage, 2nd Block, Moodalapalya, Kalyan Nagar, Bangalore-560072. (Owner of the Vehicle bearing Reg No. KA-41-MD-4033)

WHEREAS, the petitioner in MVC. No. 1318/2026, has filed the above claim petition against the respondents seeking compensation for a Sum of Rs.20,00,000/- for the injuries sustained by petitioner, in a road traffic accident involving your vehicle Car bearing Reg No.KA-41-MD-4033, which occurred on 20-12-2025 at about 06:15 P.M, near Bannikuppe Gate, 'U' turn, Bangalore to Hyderabad, NH-44 Road, Chikkaballapura, you are hereby directed to be present before the Hon'ble court (Mayo Hall SCCH-21) on **21-07-2026** at 11:00 A.M. personally or through a pleader in the above case, duly instructed by you, failing which the matter will be heard in your absence, placing you Ex-parte.

Given under my hand and seal of the court on this 05-06-2026.

By order of the Court, Sheristedar, Court of Small Causes, Mayo Hall Unit, Bangalore.

Advocate for petitioner: **M. SUBRAMANI.**
No.13, 12th Cross, Udayaravi Divine Paradise Building, 3rd floor, Cubbonpet, Bangalore -560002.

BEFORE THE COURT OF SMALL CAUSES AND M.A.C.T. AT BENGALURU (SCCH-3)
M.V.C. No. 6501/2025

Sri. Vishnu Mohan & Ors ...**Petitioners** -V/s-
Sri. Vishwasa Kumara.U. & Anr ...**Respondents**

NOTICE TO RESPONDENT No.1

Sri. Vishwasa Kumar. U, S/o Sri. Umesh Chandra Barik, R/o No. 210, Madanayakanahalli, Madavara post, Bengaluru North, Bengaluru Rural Dist- 562 123. (Owner of Eicher Canter bearing No. KA-52-C-0801)

Take notice that the above petition is filed against you by the petitioners for the recovery of compensation of Rs. 25,00,000/- (Rupees Twenty five lakhs only) due to the accidental death of Late. H.K.Siddeshwara Guptha involving your vehicle Eicher Canter bearing Regn.NO. KA-52-C-0801 you are the owner of the vehicle. The accident occurred on 29.11.2024 at about 12:30 p.m. (noon) on Kodikonda Sira road, NH-544C near Haresamudram Cross, Madakasira Mandal, Sri. Sathya Sai Dist. Andrapradesh.

The hearing of the said case is fixed to be held on **22/07/2026** at **11:00 AM.** You are hereby directed to appear on that day before the Hon'ble Court personally or through your advocate, failing which the matter will be determined ex-parte.

Given under my hand seal of the Court on this 21/05/2026

By order of the Court, Assistant Registrar, Court of Small Causes, Bengaluru

Advocate For Petitioner: **S. Malathi**
No.3/2, 1st Floor, Gandhi Bazaar, Basavanagudi, Bengaluru- 560 004.

ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ

ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560 001. ದೂರವಾಣಿ: 080–22133370

ಸಂಖ್ಯೆ: 06/2026–27 ದಿನಾಂಕ: 09.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ದೊಡ್ಡಬಳ್ಳಾಪುರ ಉಪವಿಭಾಗಕ್ಕೆ** ಸಂಬಂಧಿಸಿದಂತೆ **01 ಸಂಖ್ಯೆಯ (ರೂ. 350.00 ಲಕ್ಷಗಳ)** ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಕಾಮಗಾರಿಯ **ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೊಸೆಸಿಂಗ್ ಶುಲ್ಕವನ್ನು ಕೆಪಿಪಿ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.**

(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 24.06.2026 ಸಂಜೆ 4.00 ಗಂಟೆಯವರೆಗೆ.**
(2) ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 25.06.2026 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಸಹಿ/– ಕಾರ್ಯಪಾಲಕ ಅಭಿಯಂತರರು.

ವಾಸಾಸಂಇ/ಉಪಿ–ಸಿ.ಪಿ/1084/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ ಕೊಪ್ಪಳ

ಸಂಖ್ಯೆ: ಸನೀಅಅವಿ/ಕೊಪ್ಪಳ/ತಾಶಾ–2/2026–27/762 ದಿನಾಂಕ: 05/06/2026

ಅಲ್ಪಾವಧಿ ಕೊಟೇಷನ್ ಟೆಂಡರ್ ಪ್ರಕಟಣೆ

ವಿಷಯ: ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ರೌಡಕುಂದ–ಸೋಮಲಾಪುರ ಏತ ನೀರಾವರಿ ಯೋಜನೆಯ (ಮುಂದುವರೆದ) ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಲು ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಕಾಂಪೋನೆಂಟಗಳ ದರಗಳನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವ ಅಲ್ಪಾವಧಿ ಕೊಟೇಶನ್ ಕರೆಯುವ ಕುರಿತು.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ಎಂಐಡಿ/54/ಎಲ್‌ಐಎಸ್/2025 ದಿನಾಂಕ: 04–07–2025.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಈ ವಿಭಾಗದ ವ್ಯಾಪ್ತಿಯಲ್ಲಿ ಬರುವ ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ರೌಡಕುಂದ–ಸೋಮಲಾಪುರ ಏತ ನೀರಾವರಿ ಯೋಜನೆಯ (ಮುಂದುವರೆದ) ಕಾಮಗಾರಿಯ ಅಂದಾಜು **ಪಟ್ಟಿ ಮೊತ್ತ 650.00 ಲಕ್ಷಗಳು** ತಯಾರಿಸಲು ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಕಾಂಪೋನೆಂಟ್ಸ್‌ಗಳ ದರಗಳ ಆಹ್ವಾನಕ್ಕಾಗಿ ಸೀಲ್ ಕೊಟೇಶನ್ಗಳನ್ನು ಕರೆಯಲಾಗಿದೆ. ಕೊಟೇಶನ್‌ಗಳಲ್ಲಿ 2026–27ನೇ ಸಾಲಿನ ಮಾರುಕಟ್ಟೆಯ ದರಗಳನ್ನು ಅಳವಡಿಸಿ ಅಂದಾಜು ಪಟ್ಟಿಗಳನ್ನು ತಯಾರಿಸಲು ಮಾತ್ರ ಪರಿಗಣಿಸಲಾಗುವುದು. ಸಲ್ಲಿಸುವ ಕೊಟೇಶನ್‌ಗಳಲ್ಲಿ ಪ್ರತ್ಯೇಕವಾಗಿ/ಐಟಂವಾರು ದರಗಳನ್ನು ನಮೂದಿಸಿ ಸಲ್ಲಿಸುವುದು.

ಆದರಿಂದ ಗುತ್ತಿಗೆದಾರರು ಒಂದು ಮುಚ್ಚಿದ ಲಕೋಟೆಯಲ್ಲಿ ಈ ಕೆಳಗೆ ಗೊತ್ತು ಪಡಿಸಿದ ಕಾಂಪೋನೆಂಟ್ಸ್‌ಗಳ ದರಗಳನ್ನು ನಮೂದಿಸಿ ಈ ಕಚೇರಿಗೆ ಸಲ್ಲಿಸಬೇಕಾಗಿದೆ.

ಗುತ್ತಿಗೆದಾರರು ದಾಖಲೆಗಳೊಂದಿಗೆ ಕೊಟೇಷನ್‌ಗಳನ್ನು ಮುಚ್ಚಿದ ಲಕೋಟೆಯಲ್ಲಿ ಕಚೇರಿಗೆ ಕೊನೆಯ ದಿನಾಂಕ: **–15–06–2026** ರಂದು ಸಮಯ 16.00 ಗಂಟೆವರೆಗೆ ಸಲ್ಲಿಸಬಹುದಾಗಿದೆ, ಕೊಟೇಷನ್‌ಗಳನ್ನು ತೆರೆಯುವ ದಿನಾಂಕ: **16–06–2026**ರಂದು ಸಮಯ 11.00 ಗಂಟೆಗೆ.

ಗುತ್ತಿಗೆದಾರರು ಈ ಕೆಳಗಿನ ನಮೂನೆಯಲ್ಲಿ ಹೆಚ್ಚುವರಿ ಮಾಹಿತಿಯನ್ನು ಸಲ್ಲಿಸುವ ವಿವರ

ಕ್ರ.ಸಂ	ಐಟಂ ವಿವರ	ಗುತ್ತಿಗೆದಾರರು ನಮೂದಿಸುವ ದರ
1	Design, manufacture, supply, erection, trail running, performance testing and commissioning of vertical turbine pump of approved make conforming to IS: 1710 having specified pump output under specified operating head coupled to LT motor of adequate HP rating operating at 0.433 KV with flexible coupling, self water lubricated thrust bearings, discharge Tee with flanged end for connecting delivery pipe with all other standard accessories and safety devices and all other ancillary operations complete as per specifications, terms and conditions of contract per HP.	
2	Supplying at site of Work Erection and Commissioning of FCMA SOFT STARTER 300HP/225KW-INDOOR TYPE-AL BUSBAR including labour, material, machinery, loading and unloading complete with all lead and lift as per direction of Engineer In charge.	
3	Supplying at site of Work Erection and Commissioning of MOTOR CAPACITOR FEEDER 120kVAR-INDOOR TYPE-AL BUSBAR including labour, material, machinery, loading and unloading complete with all lead and lift as per direction of Engineer In charge.	
4	Supply, delivery and erection at site brand new pilot operated pressure relief valve of 100mm dia with maximum permissible pressure (7.1 kg/cm2) with the following specifications.1. The valve should be activated by line pressure and controlled by 2 way diaphragm operated, adjustable pilot valve. 2. The valve should have direct sealing diaphragm.3. Pressure Relief Valve should be installed on a tee junction, which should modulate automatically to maintain preset inlet pressure and relieve the excess pressure out of the net work.4. Pressure gauge of 0-24 kg/cm2 range and shall comply with BS 1780.Material of Construction.a) Body and Bonnet - Ductile Iron ISO 1083 grade 450-10 b) Diaphragm - Natural rubber (N.R) Standard c) Spring SST 302 d) Pilot Valve - Brass ISO 426e) Coating - Electrically applied oven baked polyester f) End Connection - Flanges as per IS with loading and unloading charges.complete as per the direction of Engineer In charge.	
5	SET OF TOOLS Supply and delivery at site of brand new set of tools for operation and maintenance of pumping machineries. Tool kit set comprise a)double end spanner 1/4"inch to 1"-1set b) 11"insulated screw driver-1no and 8" insulated screw driver-1no c)Line tester-1no d)8" insulated cutting pillar-1 no, e)hammer with handle-1kg and 5kg-1no each f)pipe wrench 24",18" and 12"-1 no each g)wire brush-1set, h)ring spanner 1/4" to 1"-1set,puller insulated 8"-1 no j)grease gun-1no k)testing equipment oil testing kit,motorised megger of 5KV,mannual megger of 1KV,digital multi meter, tung tester-1no, including cost of all materials, labour etc..	

ರುಜು
ಅರ್ಜಿದಾರರ ಹೆಸರು

ಕೊಟೇಷನ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **15–06–2026** : ಸಮಯ 16.00 ಗಂಟೆಯ ವರೆಗೆ
ಕೊಟೇಷನ್‌ಗಳನ್ನು ತೆರೆಯುವ ದಿನಾಂಕ : **16–06–2026** : ಸಮಯ 11.00 ಗಂಟೆಗೆ ಸಾಧ್ಯವಾದಲ್ಲಿ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/151/ಕೆಎಸ್‌ಎಂಸಿಎ/2026–27

4,399 ದಿನಗಳ ಸತತ ಆಡಳಿತ



ನೆಹರೂ ದಾಖಲೆ ಮುರಿದ ಮೋದಿ

ಭಾರತದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಜೂನ್ 10, 2026 ಒಂದು ಮೈಲುಗಲ್ಲಿನ ದಿನವಾಗಿ ದಾಖಲಾಯಿತು. ಪ್ರಧಾನಿ ನರೇಂದ್ರ ಮೋದಿ ಅವರು ಅವಿಚ್ಛಿನ್ನವಾಗಿ 4,399 ದಿನಗಳನ್ನು ಅಧಿಕಾರದಲ್ಲಿ ಪೂರೈಸಿ, ದೇಶದ ಮೊದಲ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರ ಚುನಾಯಿತ ಅಧಿಕಾರಾವಧಿಯ ದಾಖಲೆಯನ್ನು ಮೀರಿ ನಿಂತರು. ಆರು ದಶಕಗಳಿಗೂ ಹೆಚ್ಚು ಕಾಲ ಅಭೇದ್ಯವಾಗಿ ಉಳಿದಿದ್ದ ಈ ದಾಖಲೆ ಈಗ ಕೇವಲ ಒಂದು ದಿನದ ಅಂತರದಿಂದ ಪತನಗೊಂಡಿದೆ ನೆಹರೂ 4,398 ದಿನ, ಮೋದಿ 4,399 ದಿನ. ಇದು ಬರೀ ಒಂದು ಸಂಖ್ಯೆಯ ಆಟಗಿನ ಸಂಗತಿ. ಮೂರು ಸತತ ಲೋಕಸಭಾ ಚುನಾವಣೆಗಳಲ್ಲಿ 2014, 2019, 2024 ಜನಾದೇಶ ಗಳಿಸಿ, ಒಂದೇ ನಾಯಕನ ನೇತೃತ್ವದಲ್ಲಿ ಸರ್ಕಾರ ಮುನ್ನಡೆದ ಅಪರೂಪದ ಪರ್ವ ಇದು. ಅದೇ ಸಂದರ್ಭದಲ್ಲಿ ಕೇಂದ್ರದ ಎನ್‌ಡಿಎ ಸರ್ಕಾರ 12 ವರ್ಷಗಳನ್ನು ಪೂರೈಸಿ 13ನೇ ವರ್ಷಕ್ಕೆ ಕಾಲಿಟ್ಟಿದೆ. ಈ 12 ವರ್ಷಗಳ ಸಾಧನೆಯನ್ನು ಇಲ್ಲಿ ಬಿಂಬಿಸಲಾಗಿದೆ.

ಮೋದಿ ಹೆಸರಿನ ವಿಶಿಷ್ಟ ದಾಖಲೆಗಳು

- ಸ್ವಾತಂತ್ರ್ಯಾ ನಂತರ ಜನಿಸಿದ ಮೊದಲ ಪ್ರಧಾನಿ.
- ಎರಡು ಪೂರ್ಣ ಅವಧಿ ಮುಗಿಸಿ ಮೂರನೇ ಬಾರಿ ಬಹುಮತದೊಂದಿಗೆ ಮರಳಿದ ಮೊದಲ ಕಾಂಗ್ರೆಸೇತರ ನಾಯಕ.
- ಹಿಂದಿಯೇತರ ರಾಜ್ಯದಿಂದ (ಗುಜರಾತ್) ಬಂದ ಅತಿ ದೀರ್ಘಾವಧಿ ಪ್ರಧಾನಿ.
- ಪ್ರಧಾನಿಯಾಗುವ ಮುನ್ನ ಅತಿ ದೀರ್ಘ ಕಾಲ ಮುಖ್ಯಮಂತ್ರಿ ಅನುಭವ ಹೊಂದಿದ ನಾಯಕ.
- ಸಾಮಾಜಿಕ ಜಾಲತಾಣಗಳಲ್ಲಿ ವಿಶ್ವದ ಅತಿ ಹೆಚ್ಚು ಹಿಂಬಾಲಕರನ್ನು ಹೊಂದಿರುವ ನಾಯಕರಲ್ಲಿ ಒಬ್ಬರು.

ದಾಖಲೆಯ ತಿರುಳು: ಆ ಒಂದು ದಿನದ ಕಥೆ

- ಮೋದಿ ಅವಧಿ: 4,399 ದಿನ (ಮೇ 26, 2014ರಿಂದ ಜೂನ್ 10, 2026ರವರೆಗೆ ಸತತ).
- ನೆಹರೂ ಚುನಾಯಿತ ಅವಧಿ: 4,398 ದಿನ (ಮೇ 13, 1952ರಿಂದ ಮೇ 27, 1964ರವರೆಗೆ).
- ನೆಹರೂ 194752ರ ಅವಧಿಯಲ್ಲಿ ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಿದ್ದರು. ಮೊದಲ ಸಾರ್ವತ್ರಿಕ ಚುನಾವಣೆ 195152ರಲ್ಲಿ ನಡೆದ ಬಳಿಕವೇ ಅವರು 'ಚುನಾಯಿತ' ಪ್ರಧಾನಿಯಾದರು. ಆದ್ದರಿಂದ ಹೋಲಿಕೆಗೆ 1952ರ ನಂತರದ ಅವಧಿಯನ್ನು ಪರಿಗಣಿಸಲಾಗಿದೆ.
- ನೆಹರೂ ಅವರ ಒಟ್ಟು ಅವಧಿ (194764): 6,130 ದಿನ ಅಥವಾ ಸುಮಾರು 16 ವರ್ಷ 286 ದಿನ ಒಟ್ಟಾರೆ ಅವಧಿಯಲ್ಲಿ ಇಂದಿಗೂ ಮೊದಲ ಸ್ಥಾನ.

ಸಂಖ್ಯೆ ದಾಟಿದ ಸಂದೇಶ

ಒಂದು ದಿನದ ಅಂತರ, ಆದರೆ ಅದರ ಸಾಂಕೇತಿಕ ತೂಕ ಬೃಹತ್ತಾದದ್ದು. ಭಾರತದ ಚುನಾವಣಾ ಭೂಪಟವನ್ನೇ ಮರುರೂಪಿಸಿದ ಒಂದು ರಾಜಕೀಯ ಯುಗದ ಸ್ಪಷ್ಟ ಗುರುತಾಗಿ ಈ ದಾಖಲೆ ನಿಲ್ಲುತ್ತದೆ. ಒಟ್ಟು ಅವಧಿಯಲ್ಲಿ ನೆಹರೂ ಇನ್ನೂ ಮುಂದಿದ್ದರೂ, 'ಚುನಾಯಿತ ಜನಾದೇಶದ ಸತತ ಆಡಳಿತ' ಎಂಬ ಮಾನದಂಡದಲ್ಲಿ ಮೋದಿ ಹೊಸ ಅಧ್ಯಾಯ ಬರೆದಿದ್ದಾರೆ. ಸ್ವಾತಂತ್ರ್ಯಾ ನಂತರ ಜನಿಸಿದ, ಕಾಂಗ್ರೆಸೇತರ, ಹಿಂದಿಯೇತರ ರಾಜ್ಯದಿಂದ ಬಂದ ನಾಯಕನೊಬ್ಬ ಈ ಸ್ಥಾನಕ್ಕೆ ಏರಿರುವುದು ಭಾರತದ ಪ್ರಜಾಪ್ರಭುತ್ವದ ಬದಲಾದ ಸ್ವರೂಪವನ್ನೂ ಪ್ರತಿಬಿಂಬಿಸುತ್ತದೆ.

ಅಧಿಕಾರಾವಧಿಯ ಏಣಿ: ಯಾರು ಎಷ್ಟು ದಿನ?

ಒಟ್ಟು ಅಧಿಕಾರಾವಧಿಯ ಲೆಕ್ಕದಲ್ಲಿ ನೆಹರೂ, ಇಂದಿರಾ ಗಾಂಧಿ ಮತ್ತು ಮೋದಿ ಈ ಮೂವರೇ ಅಗ್ರ ಮೂರು ಸ್ಥಾನಗಳಲ್ಲಿ ಇದ್ದಾರೆ. ಆದರೆ 'ಅವಿಚ್ಛಿನ್ನ ಚುನಾಯಿತ ಅವಧಿ'ಯ ಮಾನದಂಡದಲ್ಲಿ ಮೋದಿ ಈಗ ಅಗ್ರಸ್ಥಾನ ಗಳಿಸಿದ್ದಾರೆ.

ಪ್ರಧಾನಿ	ಅವಧಿ	ಒಟ್ಟು ದಿನ	ಪಕ್ಷ
ಜವಾಹರಲಾಲ್ ನೆಹರೂ	19471964	6,130	ಕಾಂಗ್ರೆಸ್
ಇಂದಿರಾ ಗಾಂಧಿ	196677, 198084	5,829	ಕಾಂಗ್ರೆಸ್
ನರೇಂದ್ರ ಮೋದಿ	2014ಇಂದಿನವರೆಗೆ	4,399	ಬಿಜೆಪಿ
ಮನಮೋಹನ್ ಸಿಂಗ್	20042014	3,656	ಕಾಂಗ್ರೆಸ್
ಅಟಲ್ ಬಿಹಾರಿ ವಾಜಪೇಯಿ	ಮೂರು ಅವಧಿ	2,272	ಬಿಜೆಪಿ

(ಸೂಚನೆ: ವಾಜಪೇಯಿ ಅವರ 2,272 ದಿನ ಮೂರು ಪ್ರತ್ಯೇಕ ಅವಧಿಗಳ ಒಟ್ಟು ಮೊತ್ತ. ಮೋದಿ ಈ ದಾಖಲೆಯನ್ನು 2020ರಲ್ಲೇ ದಾಟಿ, ದೀರ್ಘಾವಧಿ ಕಾಂಗ್ರೆಸೇತರ ಪ್ರಧಾನಿ ಎನಿಸಿದ್ದರು.)

ಮೋದಿ ದಾಟಿಬಂದ ದಾಖಲೆಗಳು

- **2020** (ಆಗಸ್ಟ್): ವಾಜಪೇಯಿ ಅವರ 2,272 ದಿನಗಳ ದಾಖಲೆ ಮೀರಿ ಅತಿ ದೀರ್ಘಾವಧಿ ಕಾಂಗ್ರೆಸೇತರ ಪ್ರಧಾನಿ.
- **2025** (ಜುಲೈ): ಇಂದಿರಾ ಗಾಂಧಿ ಅವರ ಸತತ ಅವಧಿಯ (11 ವರ್ಷ 59 ದಿನ) ದಾಖಲೆ.
- **2025:** ಸತತ ಅವಧಿಯಲ್ಲಿ ಇಂದಿರಾ ಅವರ 4,077 ದಿನಗಳ ದಾಖಲೆ ದಾಟಿ ಎರಡನೇ ಸ್ಥಾನ.
- **2026** (ಮಾರ್ಚ್): ಸಿಕ್ಕಿಂ ಮಾಜಿ ಸಿಎಂ ಪವನ್ ಕುಮಾರ್ ಚಾಮ್ಲಿಂಗ್ ಅವರ 8,930 ದಿನಗಳ ದಾಖಲೆ ಮೀರಿ (ಸಿಎಂ + ಪಿಎಂ ಸೇರಿ 8,931 ದಿನ) ಚುನಾಯಿತ ಸರ್ಕಾರದ ಅತಿ ದೀರ್ಘಾವಧಿ ಮುಖ್ಯಸ್ಥ.
- **2026** (ಜೂನ್ 10): ನೆಹರೂ ಅವರ ಚುನಾಯಿತ ಅವಧಿ ಮೀರಿ ಅಗ್ರಸ್ಥಾನ.

ಕಾರ್ಯಾಂಗದ ನಾಯಕನಾಗಿ 24 ವರ್ಷ

ಮೋದಿ ಅವರ ಆಡಳಿತ ಯಾನ 2001ರ ಅಕ್ಟೋಬರ್ 7ರಂದು ಗುಜರಾತ್ ಮುಖ್ಯಮಂತ್ರಿಯಾಗಿ ಪ್ರಾರಂಭವಾಯಿತು. ಭೂಕಂಪ, ಬರ, ರಾಜಕೀಯ ಅಸ್ಥಿರತೆಯ ಸವಾಲುಗಳ ನಡುವೆ ಆರಂಭಗೊಂಡ ಆ ಪಯಣ, ಸತತ 13 ವರ್ಷಗಳ ಕಾಲ ಅವರನ್ನು ಗುಜರಾತಿನ ಅತಿ ದೀರ್ಘಾವಧಿ ಮುಖ್ಯಮಂತ್ರಿಯಾಗಿಸಿತು. 2014ರ ಮೇ 26ರಂದು ರಾಷ್ಟ್ರ ರಾಜಕೀಯಕ್ಕೆ ಕಾಲಿಟ್ಟ ಬಳಿಕ, ಅಂದರೆ ಸಿಎಂ ಮತ್ತು ಪಿಎಂ ಎರಡೂ ಸೇರಿ ಒಟ್ಟು ಸುಮಾರು 24 ವರ್ಷಗಳ ಕಾರ್ಯಾಂಗ ಅನುಭವ ಅವರ ಬೆನ್ನಿಗಿದೆ. ಸ್ವಾತಂತ್ರ್ಯಾ ನಂತರ ಜನಿಸಿದ ಮೊದಲ ಪ್ರಧಾನಿ, ಎರಡು ಪೂರ್ಣ ಅವಧಿ ಮುಗಿಸಿ ಮೂರನೇ ಬಾರಿ ಬಹುಮತದೊಂದಿಗೆ ಮರಳಿದ ಮೊದಲ ಕಾಂಗ್ರೆಸೇತರ ನಾಯಕ ಎಂಬ ವಿಶಿಷ್ಟತೆಗಳೂ ಅವರ ಹೆಸರಿನಲ್ಲಿವೆ.

ಮೂರು ಜನಾದೇಶಗಳ ಬಲ

ಈ ದೀರ್ಘಾವಧಿಯ ಆಡಿಪಾಯ ಮೂರು ಸತತ ಲೋಕಸಭಾ ಗೆಲುವುಗಳಲ್ಲಿದೆ. 2014ರಲ್ಲಿ ಬಿಜೆಪಿ ಸ್ವತಂತ್ರ ಬಹುಮತದೊಂದಿಗೆ 282 ಸ್ಥಾನ ಗೆದ್ದರೆ, 2019ರಲ್ಲಿ ಆ ಸಂಖ್ಯೆ 303ಕ್ಕೆ ಏರಿತು. 2024ರಲ್ಲಿ ಮೂರನೇ ಸತತ ಗೆಲುವಿನೊಂದಿಗೆ ಮೋದಿ ಎನ್‌ಡಿಎ ಸರ್ಕಾರವನ್ನು ಮುನ್ನಡೆಸಿದರು. 1984ರ ಕಾಂಗ್ರೆಸ್ ಅಲೆಯ ಬಳಿಕ ಸತತ ಎರಡು ಸಾರ್ವತ್ರಿಕ ಚುನಾವಣೆಗಳಲ್ಲಿ ಸ್ಪಷ್ಟ ಬಹುಮತ ಪಡೆದ ಏಕೈಕ ಪಕ್ಷ ಎಂಬ ಹೆಗ್ಗಳಿಕೆಯೂ ಬಿಜೆಪಿಗೆ ಸಂದಿತು.

ಚುನಾವಣೆ	ಬಿಜೆಪಿ ಸ್ಥಾನ	ಫಲಿತಾಂಶ	ಅವಧಿ
2014	282 ಸ್ಥಾನ	ಸ್ವತಂತ್ರ ಬಹುಮತ	ಮೊದಲ ಅವಧಿ
2019	303 ಸ್ಥಾನ	ಸ್ವತಂತ್ರ ಬಹುಮತ	ಎರಡನೇ ಅವಧಿ
2024	292 ಸ್ಥಾನ	ಎನ್ಡಿಎ ನೇತೃತ್ವ ಸತತ ಮೂರನೇ ಗೆಲುವು	ಮೂರನೇ ಅವಧಿ



ಜಾಗತಿಕ ವೇದಿಕೆಯಲ್ಲಿ ಭಾರತದ ಸ್ಥಾನ

ಈ ರಾಜಕೀಯ ಸ್ಥಿರತೆಯ ಹಿನ್ನೆಲೆಯಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ತನ್ನ ಛಾಪು ಮೂಡಿಸಿದೆ ಎಂಬುದು ಬೆಂಬಲಿಗರ ವಾದ. ವಿಶ್ವದ ಪ್ರಮುಖ ಆರ್ಥಿಕತೆಗಳ ಸಾಲಿನಲ್ಲಿ ಭಾರತ ಸ್ಥಾನ ಪಡೆದಿದ್ದು, ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳಲ್ಲಿ ದೇಶದ ಪಾತ್ರ ಹೆಚ್ಚು ಪ್ರಭಾವಶಾಲಿಯಾಗಿ ಪರಿಗಣಿಸಲ್ಪಡುತ್ತಿದೆ ಎಂದು ಹೇಳಲಾಗುತ್ತಿದೆ. ಮೈಲುಗಲ್ಲಿನ ಸಂದರ್ಭದಲ್ಲಿ ಅಮೆರಿಕದ ಸೆನೆಟರ್‌ಗಳಿಂದ ಹಿಡಿದು ಜಾಗತಿಕ ಉದ್ಯಮ ನಾಯಕರವರೆಗೆ ಹಲವರಿಂದ ಬಂದ ಅಭಿನಂದನಾ ಸಂದೇಶಗಳು ಈ ಬದಲಾದ ಸ್ಥಾನಮಾನವನ್ನು ಸೂಚಿಸುತ್ತವೆ. ಆದರೆ ಇಂಥ ಮೌಲ್ಯಮಾಪನಗಳು ರಾಜಕೀಯ ದೃಷ್ಟಿಕೋನವನ್ನು ಅವಲಂಬಿಸಿರುತ್ತವೆ ಎಂಬುದನ್ನೂ ಗಮನಿಸಬೇಕು; ವಿರೋಧ ಪಕ್ಷಗಳು ಆಡಳಿತದ ಸಾಧನೆ-ವೈಫಲ್ಯಗಳ ಬಗ್ಗೆ ತಮ್ಮದೇ ವಿಭಿನ್ನ ಮೌಲ್ಯಮಾಪನ ಮುಂದಿಡುತ್ತವೆ.

ಜಾಗತಿಕ ನಾಯಕತ್ವ

ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆ ದೇಶದ ಗಡಿಗಳನ್ನು ಮೀರಿ ಜಾಗತಿಕ ಮಟ್ಟದಲ್ಲಿಯೂ ಅಗ್ರಸ್ಥಾನದಲ್ಲಿದೆ. ಜಾಗತಿಕ ಸಮೀಕ್ಷಾ ಸಂಸ್ಥೆ ಮಾರ್ನಿಂಗ್ ಕನ್ಸಲ್ಟ್ ಪ್ರಕಟಿಸಿರುವ ಗ್ಲೋಬಲ್ ಲೀಡರ್ ಅಪ್ರೂವಲ್ ರೇಟಿಂಗ್ ಟ್ರ್ಯಾಕರ್ ಪ್ರಕಾರ, 2026ರ ಏಪ್ರಿಲ್ ವೇಳೆಗೆ ಪ್ರಧಾನಿ ಮೋದಿ ಅವರು ಶೇ.70 ಅನುಮೋದನೆ ಪಡೆದು ವಿಶ್ವದ ಪ್ರಮುಖ ನಾಯಕರ ಪೈಕಿ ಮೊದಲ ಸ್ಥಾನದಲ್ಲಿದ್ದಾರೆ. ಸಮೀಕ್ಷೆಯ ಪ್ರಕಾರ, ಮೋದಿ ಅವರ ಪರವಾಗಿ ಶೇ.70 ಜನರು ಅಭಿಪ್ರಾಯ ವ್ಯಕ್ತಪಡಿಸಿದ್ದರೆ, ಶೇ.24 ಜನರು ಅಸಮ್ಮತಿ ಸೂಚಿಸಿದ್ದಾರೆ. ಉಳಿದ ಶೇ.6 ಜನರು ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಜೇ-ಮ್ಯುಂಗ್ ಶೇ.63 ಅನುಮೋದನೆ ದರದೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ. ಜೆಕ್ ಗಣರಾಜ್ಯದ ಆಂಡ್ರೇಜ್ ಬಾಬಿಸ್ ಶೇ.55 ದರದೊಂದಿಗೆ ಮೂರನೇ ಸ್ಥಾನದಲ್ಲಿದ್ದರೆ, ಕೆನಡಾದ ಮಾರ್ಕ್ ಕಾರ್ನಿ ಶೇ.54 ಹಾಗೂ ಜಪಾನ್‌ನ ಸನಾಏ ತಕೈಚಿ ಶೇ.53 ಅನುಮೋದನೆ ದರದೊಂದಿಗೆ ನಂತರದ ಸ್ಥಾನಗಳನ್ನು ಪಡೆದಿದ್ದಾರೆ.



12 ವರ್ಷಗಳ ಮೋದಿ ಸರ್ಕಾರ

ಬಡವರ ಕಲ್ಯಾಣ

25 ಕೋಟಿ ಜನ ಬಡತನದಿಂದ ಹೊರಗೆ

81 ಕೋಟಿಗೆ ಉಚಿತ ಆಹಾರ!

04 ಕೋಟಿ+ ಪಕ್ಕಾ ಮನೆ ನಿರ್ಮಾಣ (ಪಿಎಂ ಆವಾಸ್)

12 ಕೋಟಿ+ ಶೌಚಾಲಯ ನಿರ್ಮಾಣ

16 ಕೋಟಿ+ ಗ್ರಾಮೀಣ ಕುಟುಂಬಗಳಿಗೆ ನಳದ ನೀರಿನ ಸಂಪರ್ಕ

ಹಣಕಾಸು ಕ್ರಾಂತಿ

58 ಕೋಟಿ+ ಜನಧನ್ ಖಾತೆಗಳು

51 ಲಕ್ಷ ಕೋಟಿ ರೂ. - ಎಂಜೆ (ಜನಧನ್-ಆಧಾರ್-ಮೊಬೈಲ್) ಮೂಲಕ ನೇರ ಹಣ ವರ್ಗಾವಣೆ

25 ದಶಲಕ್ಷ ರೂ. ಡಿಬಿಟಿ ಫಲಾನುಭವಿಗಳ ವ್ಯಾಪ್ತಿ



ರೈತರ ಬೆಂಬಲ

- 4 ಲಕ್ಷ ಕೋಟಿ ರೂ. - ಪಿಎಂ-ಕಿಸಾನ್ ಯೋಜನೆಯಡಿ ರೈತರ ಖಾತೆಗಳಿಗೆ ನೇರ ವರ್ಗಾವಣೆ
- ಎಂಎಸ್‌ಪಿ ಏರಿಕೆ - ಬೆಳೆಗಳಿಗೆ ಹೆಚ್ಚಿನ ಕನಿಷ್ಠ ಬೆಂಬಲ ಬೆಲೆ
- ಬೀಜದಿಂದ ಮಾರುಕಟ್ಟೆವರೆಗೆ - ರೈತರಿಗೆ ಸಮಗ್ರ ನೆರವು

ಉದ್ಯಮಶೀಲ ಭಾರತ

57 ಕೋಟಿ+ ಮುದ್ರಾ ಯೋಜನೆಯ ಸಾಲಗಳು

17,000 ಕೋಟಿ ರೂ. ಪಿಎಂ ಸ್ವನಿಧಿ ಯೋಜನೆಯಡಿ ಬೀದಿಬದಿ ವ್ಯಾಪಾರಿಗಳಿಗೆ ಸಾಲ

15,000 ಕೋಟಿ ರೂ. ಸ್ಟ್ಯಾಂಡ್‌ಅಪ್ ಇಂಡಿಯಾ ಯೋಜನೆಯಡಿ ಎಸ್‌ಸಿ/ಎಸ್‌ಟಿ ಉದ್ಯಮಿಗಳಿಗೆ ನೆರವು

ಮಹಿಳಾ ಸಬಲೀಕರಣ

75% ಪಿಎಂ ಆವಾಸ್ ಮನೆಗಳ ಮಾಲೀಕತ್ವ ಮಹಿಳೆಯರ ಹೆಸರಿನಲ್ಲಿ

43 % ಪಿಎಂ ಸ್ವನಿಧಿ ಫಲಾನುಭವಿಗಳಲ್ಲಿ ಮಹಿಳೆಯರು

ಉಜ್ವಲಾ ಯೋಜನೆ - 10 ಕೋಟಿಗೂ ಅಧಿಕ ಉಚಿತ ಎಲ್‌ಪಿಜಿ ಸಂಪರ್ಕಗಳು

ಆರೋಗ್ಯ ಭಾರತ

60 ಕೋಟಿ+ - ಆಯುಷ್ಮಾನ್ ಭಾರತ್ ಫಲಾನುಭವಿಗಳು

5 ಲಕ್ಷ ರೂ. ಒಂದು ಕುಟುಂಬಕ್ಕೆ ಆರೋಗ್ಯ ವಿಮೆ

3 ಪಟ್ಟು, ಏಮ್ಸ್ ಸಂಸ್ಥೆಗಳ ಸಂಖ್ಯೆ ಹೆಚ್ಚಳ, ವೈದ್ಯಕೀಯ ಶಿಕ್ಷಣ - ಹೊಸ ವೈದ್ಯಕೀಯ ಕಾಲೇಜುಗಳು ಏರಿಕೆ

1 ಆರ್ಥಿಕ ಬೆಳವಣಿಗೆ

2025-26ರಲ್ಲಿ ಭಾರತದ ಜಿಡಿಪಿ 345 ಲಕ್ಷ ಕೋಟಿ ರೂ. ದಾಟುವ ನಿರೀಕ್ಷೆ.

2014ರಲ್ಲಿ 2 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಿದ್ದ ಭಾರತ ಈಗ 4 ಟ್ರಿಲಿಯನ್ ಡಾಲರ್ ಆರ್ಥಿಕತೆಯತ್ತ ಸಾಗಿದ್ದು, ಮುಂದಿನ ಎರಡು ವರ್ಷಗಳಲ್ಲಿ 5 ಟ್ರಿಲಿಯನ್ ಡಾಲರ್ ಗುರಿ ಸಾಧಿಸುವ ವಿಶ್ವಾಸ ವ್ಯಕ್ತಪಡಿಸಲಾಗಿದೆ.

ವಿಶ್ವ ಬ್ಯಾಂಕ್ ಪ್ರಕಾರ ಜಾಗತಿಕ ಜಿಡಿಪಿ ಬೆಳವಣಿಗೆಗೆ ಎರಡನೇ ಅತಿದೊಡ್ಡ ಕೊಡುಗೆದಾರ ರಾಷ್ಟ್ರವಾಗಿ ಭಾರತ ಹೊರಹೊಮ್ಮಿದೆ.

2 ಫ್ರ್ಯಾಜೈಲ್ ಫೈವ್‌ನಿಂದ ವೇಗದ ಆರ್ಥಿಕತೆ

2013ರಲ್ಲಿ ಫ್ರ್ಯಾಜೈಲ್ ಫೈವ್ ರಾಷ್ಟ್ರಗಳ ಪಟ್ಟಿಯಲ್ಲಿದ್ದ ಭಾರತ ಇಂದು ಜಗತ್ತಿನ ಅತಿ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿದೆ.

ಜಿಎಸ್‌ಟಿ, ಬ್ಯಾಂಕಿಂಗ್ ಸುಧಾರಣೆಗಳು ಮತ್ತು ಹಣದುಬ್ಬರ ನಿಯಂತ್ರಣವನ್ನು ಪ್ರಮುಖ ಕಾರಣಗಳಾಗಿ ಉಲ್ಲೇಖಿಸಲಾಗಿದೆ.

3 ತೆರಿಗೆದಾರರಿಗೆ ದೊಡ್ಡ ರಿಯಾಯಿತಿ

2014ರಲ್ಲಿ 2 ಲಕ್ಷ ರೂ.ವರೆಗೆ ಇದ್ದ ಆದಾಯ ತೆರಿಗೆ ವಿನಾಯಿತಿ ಮಿತಿ ಈಗ 12.75 ಲಕ್ಷ ರೂ.ಗೆ ಏರಿಕೆಯಾಗಿದೆ.

ತೆರಿಗೆ ಸ್ಲ್ಯಾಬ್ ಸರಳೀಕರಣದಿಂದ ಮಧ್ಯಮ ವರ್ಗಕ್ಕೆ ಹೆಚ್ಚಿನ ಲಾಭವಾಗಿದೆ.

ದೇಶೀಯ ಬಳಕೆ ಸುಮಾರು 2 ಲಕ್ಷ ಕೋಟಿ ರೂ.ಗೆ ಹೆಚ್ಚಳ ಕಂಡಿದೆ.

4 ಎಲೆಕ್ಟ್ರಾನಿಕ್ಸ್ ಕ್ರಾಂತಿ

- 25 ಲಕ್ಷಕ್ಕೂ ಹೆಚ್ಚು ಉದ್ಯೋಗ ಸೃಷ್ಟಿ.
- ಎಲೆಕ್ಟ್ರಾನಿಕ್ಸ್ ಉತ್ಪಾದನೆ 6 ಪಟ್ಟು ಏರಿಕೆ.
- ಎಲೆಕ್ಟ್ರಾನಿಕ್ಸ್ ರಫ್ತು 8 ಪಟ್ಟು ಏರಿಕೆ.
- ಭಾರತ ಜಾಗತಿಕ ಉತ್ಪಾದನಾ ಕೇಂದ್ರವಾಗಿ ಬೆಳೆಯುತ್ತಿದೆ.
- ಪಿಎಲ್‌ಐ ಯೋಜನೆ ಕೈಗಾರಿಕಾ ಬೆಳವಣಿಗೆಗೆ ಪ್ರಮುಖ ಆಧಾರವಾಗಿದೆ.

5 ಮೊಬೈಲ್ ಉತ್ಪಾದನೆಯಲ್ಲಿ ಜಿಗಿತ

- ಮೊಬೈಲ್ ಉತ್ಪಾದನೆ 28 ಪಟ್ಟು ಹೆಚ್ಚಳ.
- ಮೊಬೈಲ್ ರಫ್ತು 163 ಪಟ್ಟು ಏರಿಕೆ.

6 ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ಹೂಡಿಕೆ

- ಸೆಮಿಕಾನ್ ಇಂಡಿಯಾ ಯೋಜನೆಯಡಿ 1.64 ಲಕ್ಷ ಕೋಟಿ ರೂ. ಹೂಡಿಕೆ.
- 6 ರಾಜ್ಯಗಳಲ್ಲಿ 12 ಸೆಮಿಕಂಡಕ್ಟರ್ ಯೋಜನೆಗಳಿಗೆ ಅನುಮೋದನೆ.
- ಭಾರತವನ್ನು ಜಾಗತಿಕ ಚಿಪ್ ಉತ್ಪಾದನಾ ರಾಷ್ಟ್ರವನ್ನಾಗಿಸುವ ಗುರಿ.

7 ಮುಕ್ತ ವ್ಯಾಪಾರ ಒಪ್ಪಂದಗಳು

- 38 ರಾಷ್ಟ್ರಗಳೊಂದಿಗೆ 9 ಪ್ರಮುಖ ಎಫ್‌ಟಿಎಗಳು.
- 2024-26ರ ಅವಧಿಯಲ್ಲಿ 6 ಹೊಸ ಮುಕ್ತ ವ್ಯಾಪಾರ ಒಪ್ಪಂದಗಳಿಗೆ ಸಹಿ.

8 ದಾಖಲೆಮಟ್ಟದ ರಫ್ತು

- 2025-26ರಲ್ಲಿ ಒಟ್ಟು ರಫ್ತು 79 ಲಕ್ಷ ಕೋಟಿ ರೂ.ಗೆ ತಲುಪಿದೆ.
- 2014ರ 45 ಲಕ್ಷ ಕೋಟಿ ರೂ.ನಿಂದ ಸುಮಾರು ಶೇ.75 ಏರಿಕೆ.
- ರಫ್ತು ವೃದ್ಧಿಯಿಂದ ಕೈಗಾರಿಕಾ ಬೆಳವಣಿಗೆಗೆ ಉತ್ತೇಜನ ದೊರೆತಿದೆ.

9 ವಿದೇಶಿ ವಿನಿಮಯ ಸಂಗ್ರಹ

- 67 ಲಕ್ಷ ಕೋಟಿ ರೂ. ವಿದೇಶಿ ವಿನಿಮಯ ಮೀಸಲು.
- 11 ತಿಂಗಳ ಆಮದು ವೆಚ್ಚವನ್ನು ನಿರ್ವಹಿಸುವ ಸಾಮರ್ಥ್ಯ.
- ಬಾಹ್ಯ ಸಾಲದ ಶೇ.94ಕ್ಕೆ ಸಮಾನ ಭದ್ರತೆ.



10 ಡಿಜಿಟಲ್ ಇಂಡಿಯಾ

- ತಂತ್ರಜ್ಞಾನವನ್ನು ಆಡಳಿತದ ಕೇಂದ್ರಬಿಂದುವಾಗಿಸಲಾಗಿದೆ.
- ಪಾರದರ್ಶಕತೆ ಹೆಚ್ಚಳ, ಭ್ರಷ್ಟಾಚಾರದಲ್ಲಿ ಕಡಿತ.
- ಸರ್ಕಾರಿ ಯೋಜನೆಗಳ ಲಾಭ ನೇರವಾಗಿ ಫಲಾನುಭವಿಗಳಿಗೆ ತಲುಪುತ್ತಿದೆ.

11 ಸಾರ್ವಜನಿಕ ಬ್ಯಾಂಕುಗಳ ಪುನರುತ್ಥಾನ

- 2025-26ರಲ್ಲಿ ಸಾರ್ವಜನಿಕ ಬ್ಯಾಂಕ್‌ಗಳ ದಾಖಲೆಯ 2 ಲಕ್ಷ ಕೋಟಿ ರೂ. ಲಾಭ.
- ಸ್ಥೂಲ ಎನ್‌ಪಿಎ ಪ್ರಮಾಣ 2014ರ ಶೇ.4.4ರಿಂದ ಶೇ.1.93ಕ್ಕೆ ಇಳಿಕೆ.

12 ಭವಿಷ್ಯದ ಭಾರತಕ್ಕೆ ಬುನಾದಿ

ರಸ್ತೆ, ಸೇತುವೆ, ಸಂಸತ್ ಭವನ, ಭಾರತ ಮಂಟಪಂ, ಯಶೋಭೂಮಿ ಮೊದಲಾದ ಯೋಜನೆಗಳು ರಾಷ್ಟ್ರನಿರ್ಮಾಣದ ಸಂಕೇತಗಳಾಗಿ ಬಿಂಬಿತವಾಗಿವೆ. ಭೂಮಿ, ಜಲ ಮತ್ತು ವಾಯು ಸಂಪರ್ಕದಲ್ಲಿ ವೇಗದ ವಿಸ್ತರಣೆ.

ಸಂಪಾದಕೀಯ

ಸಂಭಾವ್ಯ ಅನಾವೃಷ್ಟಿ: ಎಚ್ಚರ ಅಗತ್ಯ

ಭಾರತದಿಂದ ಸಾವಿರಾರು ಮೈಲು ದೂರದಲ್ಲಿ ಪೆಸಿಫಿಕ್ ಸಾಗರದಲ್ಲಿ ಉಂಟಾಗುತ್ತಿರುವ ಪ್ರಕೃತಿ ಸಹಜ ಬೆಳವಣಿಗೆಯೊಂದು ಇಲ್ಲಿ ನಮ್ಮ ದೇಶದಲ್ಲಿ ಹಾಗೂ ಜಗತ್ತಿನಾದ್ಯಂತ ಆತಂಕ ಸೃಷ್ಟಿಸಿರುವುದು ವಿಚಿತ್ರವಾದರೂ ನಿಜ. ಪೆಸಿಫಿಕ್ ಸಾಗರದಲ್ಲಿ 'ಎಲ್ ನಿನೋ' ವಿದ್ಯಮಾನವು ರೂಪು ತಳೆಯುತ್ತಿರುವುದು ಹಾಗೂ ಅದು ಮುಂಗಾರು ಮಾರುತದ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು ಎಂಬ ವಿಷಯವು ರೈತರಲ್ಲಿ ಹಾಗೂ ದೇಶದ ಆರ್ಥಿಕ



ಪರಿಣತರಲ್ಲಿ ಆತಂಕ ಸೃಷ್ಟಿಸುತ್ತಿರುವುದು ಸಹಜವೇ ಆಗಿದೆ. 'ಜಾಗತಿಕ ಆರ್ಥಿಕ ವೇದಿಕೆ' (ಡಬ್ಲ್ಯುಇಎಫ್) ಕೂಡಾ ಎಲ್ ನಿನೋದಿಂದಾಗಿ ಜಗತ್ತಿನಾದ್ಯಂತ ಕೃಷಿಯ ಮೇಲೆ, ಇಂಧನ ಮತ್ತು ಆಹಾರ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಉಂಟಾಗಬಹುದು ಎಂದು ಎಚ್ಚರಿಸಿದೆ. ಎಲ್‌ನಿನೋದ ಪಶ್ಚಾತ್ ಪರಿಣಾಮಗಳು ಜಾಗತಿಕವಾಗಿ ಸವಾಲು ಸೃಷ್ಟಿಸಬಹುದೆಂದು ಹೇಳಿದೆ. ಪ್ರಬಲ ಎಲ್‌ನಿನೋ ಯಾವಾಗಲೂ ಭಾರತದಲ್ಲಿ ಅನಾವೃಷ್ಟಿಗೆ ಕಾರಣವಾಗಿರುವ ನಿದರ್ಶನಗಳಿರುವುದರಿಂದ ಭಾರತವಂತೂ ಈ ಕುರಿತಂತೆ ಹೆಚ್ಚು ಚಿಂತೆ ಪಡುವಂತಾಗಿದೆ.

ಭಾರತವು ಈಗಲೂ ಕೃಷಿಪ್ರಧಾನ ರಾಷ್ಟ್ರವಾಗಿರುವುದರಿಂದ ಹಾಗೂ ಇಲ್ಲಿನ ಕೃಷಿಯು ಮುಂಗಾರು ಮಳೆಯನ್ನೆ ಅಧಿಕವಾಗಿ ಅವಲಂಬಿಸಿರುವುದರಿಂದ ಕಡಿಮೆ ಮಳೆಯು ಕೃಷ್ಯುತ್ಪನ್ನದ ಮೇಲೆ ಪರಿಣಾಮ ಬೀರುವುದು ಖಂಡಿತವಾಗಿದೆ. ಈಗಾಗಲೆ ಮುಂಗಾರು ತಡವಾಗಿ ಕೇರಳಕ್ಕೆ ಆಗಮಿಸಿದ್ದು, ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದೆ ನಿರಾಶೆ ಮೂಡಿಸಿದೆ. ದೇಶದ ಇತರ ಭಾಗಗಳಿಗೆ ಅದು ವ್ಯಾಪಿಸುವ ಗತಿಯೂ ನಿಧಾನವಾಗಿದೆ. ಮುಂಗಾರು ಋತುವಿನ ಮಧ್ಯಭಾಗದಲ್ಲಿ ಎಲ್ ನಿನೋ ಪ್ರಭಾವ ಕಂಡುಬರಲಿದೆ ಎನ್ನಲಾಗಿದ್ದು, ಅದರಿಂದ ಮಳೆಯ ವ್ಯಾಪಕತೆ ಮತ್ತು ಪ್ರಮಾಣ ಇನ್ನಷ್ಟು ಕಡಿಮೆಯಾಗಬಹುದು. ಇದರಿಂದಾಗಿ ಕೃಷಿ ಕಾರ್ಯಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಲಿದ್ದು, ಆಹಾರ ಧಾನ್ಯಗಳ ಉತ್ಪಾದನೆಯೂ ಕುಂಠಿತವಾದೀತು. ರೈತರು ಎಂದಿನ ಕೃಷಿಯನ್ನು ಬಿಟ್ಟು ಕಡಿಮೆ ನೀರು ಬಳಸುವ ಪರ್ಯಾಯ ಬೆಳೆ ತೆಗೆಯಲು ಮುಂದಾಗಬಹುದು. ಇದರಿಂದ ಅಗತ್ಯ ವಸ್ತುಗಳ ಕೊರತೆ ಉಂಟಾಗಲಿದ್ದು, ಇದು ಸಹಜವಾಗಿಯೇ ಹಣದುಬ್ಬರಕ್ಕೆ ಕಾರಣವಾಗಲಿದೆ. ಎಲ್ ನಿನೋದಿಂದಾಗಿ ತಾಪಮಾನವೂ ಏರಿಕೆಯಾಗುವ ಸಾಧ್ಯತೆಗಳಿರುವುದರಿಂದ ಅದು ಅಧಿಕ ವಿದ್ಯುತ್ ಬಳಕೆ, ಹೆಚ್ಚು ಇಂಧನ ಬಳಕೆಗೆ ಕಾರಣವಾಗಲಿದೆ.

ಒಟ್ಟಿನಲ್ಲಿ ಎಲ್ ನಿನೋದಿಂದಾಗಬಹುದಾದ ಪ್ರತಿಕೂಲ ಪರಿಣಾಮಗಳನ್ನು ಎದುರಿಸಲು ಸೂಕ್ತ ಮುನ್ನೆಚ್ಚರಿಕೆ ವಹಿಸುವುದಂತೂ ಅಗತ್ಯವಾಗಿದೆ. ಲಭ್ಯ ಮಳೆ ನೀರಿನ ಸಮರ್ಪಕ ಬಳಕೆ, ನೀರಿನ ದುರುಪಯೋಗ ತಡೆ, ನೀರಾವರಿ ವ್ಯವಸ್ಥೆಯನ್ನು ಇನ್ನಷ್ಟು ಯೋಜನಾಬದ್ಧಗೊಳಿಸುವುದು ಮುಂತಾದ ಉಪಕ್ರಮಗಳತ್ತ ಗಮನ ಹರಿಸಬೇಕಾಗಿದೆ. ಇದು ಕೇವಲ ಆಡಳಿತದಿಂದಷ್ಟೇ ಆಗಬೇಕಾದ ಕಾರ್ಯವಲ್ಲ, ಸಾಮಾನ್ಯ ಜನರೂ ಈ ಬಗ್ಗೆ ಅರಿವು ಮೂಡಿಸಿಕೊಳ್ಳುವುದು ಅಗತ್ಯ.

ವೃದ್ಧಾಪ್ಯವೂ, ಜನಸಂಖ್ಯೆ ಕಣ್ಮರೆಯೂ...



ಮಕ್ಕಳಿರಲವ್ವ ಮನೆತುಂಬಾ ಎಂಬ ಮಾತು ಕೇಳಿ ಬಹು ವರ್ಷಗಳೇ ಆಗಿರಬೇಕು. ಹಿಂದಿನ ಕಾಲದಲ್ಲಿ ಮನೆ ತುಂಬಾ ಇದ್ದ ಮಕ್ಕಳು, ಕೆಲವೊಮ್ಮೆ ಆ ಕುಟುಂಬದ ಹಿರಿಯರಿಗೆ ಮನೆಯ ಮಕ್ಕಳ ಹೆಸರೇ ಮರೆತುಹೋಗುತ್ತಿದ್ದ ಸನ್ನಿವೇಶಗಳು ಎದುರಾಗಿದ್ದವು. ಅಂಥ ಕಾಲದಲ್ಲಿ ಹುಟ್ಟಿಕೊಂಡದ್ದೇ ಆರತಿಗೊಂದು, ಕೀರ್ತಿಗೊಂದು ಎಂಬ ಘೋಷಣೆ. ಭಾರತದಲ್ಲಿನ ಜನಸಂಖ್ಯಾ ಸ್ಫೋಟವನ್ನು ತಡೆಯದಿದ್ದರೆ, ಮುಂದೊಂದು ದಿನ ಇದೇ ಸಮಸ್ಯೆಯಾದೀತು ಎಂಬ ಆತಂಕದಲ್ಲೇ ಜನಸಂಖ್ಯಾ ನಿಯಂತ್ರಣಕ್ಕೆ ಸಾಲು ಸಾಲು ಯೋಜನೆಗಳನ್ನು ಘೋಷಿಸಿ ಅದರಲ್ಲೂ ಸಾಫಲ್ಯವೂ ಆದೆವು.

ಆದರೆ, ಇತ್ತೀಚಿನ ದಿನಗಳಲ್ಲಿ ನಮ್ಮ ಜನಸಂಖ್ಯಾ ನಿಯಂತ್ರಣ ಹಾದಿ ತಪ್ಪಿರುವ ಎಲ್ಲ ಸಾಧ್ಯತೆಗಳೂ ತೆರೆದುಕೊಳ್ಳುತ್ತಿವೆ. ಅಮೆರಿಕದ ಮ್ಯಾಗಜಿನ್ ದಿ ಎಕಾನಾಮಿಸ್ಟ್ ಭಾರತದ ಈ ಅಸಮತೋಲನ ಜನಸಂಖ್ಯಾ ನಿಯಂತ್ರಣದ ಬಗ್ಗೆ ಬಹುವಾಗಿಯೇ ಎಚ್ಚರಿಸಿದೆ. ಈಗಿನ ಬಹುತೇಕ ದೇಶಗಳು ಸಿರಿವಂತರಾದ ಮೇಲೆ ಜನಸಂಖ್ಯಾ ನಿಯಂತ್ರಣದ ಮಗದೊಂದು ಮುಖದ ಸಮಸ್ಯೆ ಅನುಭವಿಸುತ್ತಿದ್ದರೆ, ಭಾರತ ಶ್ರೀಮಂತ ದೇಶವಾಗುವ ಮೊದಲೇ ವೃದ್ಧಾಪ್ಯಕ್ಕೆ ಕಾಲಿಡುವ ಎಲ್ಲ ಸಂಭವಗಳೂ ಇವೆ ಎಂದು ಬಿಟ್ಟಿದೆ. ಇದಕ್ಕೆ ಅದು ತನ್ನದೇ ಆದ ಅಂಕಿ ಅಂಶ, ತರ್ಕಗಳು, ವಿಚಾರಗಳನ್ನೂ ಇಟ್ಟಿದೆ. ಇದನ್ನು ನೋಡಿದರೆ ಅದು ಸುಳ್ಳಲ್ಲ ಎಂದು ಅನ್ನಿಸದೇ ಇರದು.

ನೋಡಿ, ಅದೇ ಪತ್ರಿಕೆ ಕೊಟ್ಟ ಕೆಲವೊಂದು ಉದಾಹರಣೆಗಳನ್ನು ಇಲ್ಲಿಯೂ ಉಲ್ಲೇಖಿಸಿದ್ದೇನೆ. 1970ರ ದಶಕದಲ್ಲಿ ದಿಲ್ಲಿಯ ಕೊಳೆಗೇರಿಯೊಂದರಲ್ಲಿ ಪ್ರತಿ ಓಣಿಯೂ ಮಕ್ಕಳ ಕಲರವದಿಂದ ತುಂಬಿತ್ತು. ಆರು ಮಕ್ಕಳ ತಾಯಂದಿರು, ಹನ್ನೊಂದು ಮಕ್ಕಳ ಅಜ್ಜಂದಿರು ಆ ಕಾಲಕ್ಕೆ ಸಹಜ ಸಂಗತಿ. ಅದೇ ಕೊಳೆಗೇರಿಯಲ್ಲಿ ಬೆಳೆದು, ಹದಿನಾರನೇ ವಯಸ್ಸಿಗೆ ಮದುವೆಯಾದ ಪಾರುಲ್ ಗಾಯೆನ್ ಎಂಬ ಮಹಿಳೆ ಈಗ 58ರ ಹೊಸ್ತಿಲಲ್ಲಿ ನಿಂತಿದ್ದಾರೆ. ಅವರ ಮೂವರು ಮಕ್ಕಳಲ್ಲಿ ಇಬ್ಬರಿಗೆ ಮಾತ್ರ ಸಂತಾನವಾಗಿದೆ. ಇಬ್ಬರಿಗೂ ತಲಾ ಒಂದೇ ಮಗು. 'ಒಂದು ಮಗು ಎಂದರೆ ಏಕಾಂಗಿತನ' ಎಂದು ಅವರು ನಿಟ್ಟುಸಿರು ಬಿಡುತ್ತಾರೆ. ಈ ಒಂದು ನಿಟ್ಟುಸಿರಿನಲ್ಲಿ ಇಡೀ ಭಾರತದ ನಾಳೆಯ ಕಥೆ ಅಡಗಿದೆ ಎಂದು ಇದೇ ಪತ್ರಿಕೆ ತನ್ನ ಮುಖಪುಟಗಳಲ್ಲೇ ತೆರೆದಿಟ್ಟಿದೆ.

ಇದು ಎಂಥ ವಿಪರ್ಯಾಸ ನೋಡಿ. ಅರ್ಧ ಶತಮಾನದ ಹಿಂದೆ ಭಾರತವೆಂದರೆ ಜಗತ್ತಿಗೆ 'ಜನಸಂಖ್ಯಾ ಸ್ಫೋಟ'ದ ಭೀತಿಯ ಪ್ರತೀಕ. ಶಾಲೆಯ ಗೋಡೆಗಳ ಮೇಲೆ 'ಎರಡು ಅಥವಾ ಮೂರು ಮಕ್ಕಳು ಸಾಕು' ಎಂಬ ಘೋಷಣೆಗಳು ರಾರಾಜಿಸುತ್ತಿದ್ದವು. ತುರ್ತು ಪರಿಸ್ಥಿತಿಯ ಕರಾಳ ದಿನಗಳಲ್ಲಿ ಲಕ್ಷಾಂತರ ಬಡವರ ಮೇಲೆ ಬಲವಂತದ ಸಂತಾನಹರಣ ಶಸ್ತ್ರಚಿಕಿತ್ಸೆ ನಡೆಯಿತು. ಭಾರತ ಹಸಿವಿನಿಂದ ನಾಶವಾಗಲಿದೆ ಎಂದು ಪಾಶ್ಚಾತ್ಯ ಪಂಡಿತರು ಭವಿಷ್ಯ ನುಡಿದಿದ್ದರು. ಆದರೆ ಇಂದು? ಇದೇ ಬೇಸಿಗೆಯಲ್ಲಿ ಮುದ್ರಣವಾಗಲಿರುವ ಹೊಸ ಪಠ್ಯಪುಸ್ತಕಗಳು ಮಕ್ಕಳು 'ಹೆಚ್ಚಾದರೆ' ಅಲ್ಲ, 'ಕಡಿಮೆಯಾದರೆ' ಎದುರಾಗುವ ಅಪಾಯಗಳ ಬಗ್ಗೆ ಎಚ್ಚರಿಸಲಿವೆ. ಕಾಲಚಕ್ರ ಹೀಗೆ ತಿರುಗೀತೆಂದು ಯಾರು ತಾನೇ ಊಹಿಸಿದ್ದರು ಅಲ್ಲವೇ?

ತೀರಾ ಅಂಕಿಅಂಶಗಳ ಗೊಂದಾರಣ್ಯಕ್ಕೆ ಇಳಿಯುವ ಅಗತ್ಯವಿಲ್ಲ, ಇಲ್ಲಿ ಒಂದೇ ಒಂದು ಸಂಗತಿ ಸಾಕು. ಜನಸಂಖ್ಯೆ ಸ್ಥಿರವಾಗಿರಲು ಪ್ರತಿ ಮಹಿಳೆಗೆ ಸರಾಸರಿ 2.1 ಮಕ್ಕಳು ಜನಿಸಬೇಕು. ಭಾರತದಲ್ಲಿ ಆ ದರ ಈಗಾಗಲೇ 1.9ಕ್ಕೆ ಕುಸಿದಿದೆ, ಅಷ್ಟೇ ಅಲ್ಲ, ಈ ಕುಸಿತ ಮುಂದುವರಿದಿದೆ. ತಮಿಳುನಾಡು, ಪಶ್ಚಿಮ ಬಂಗಾಳದಂಥ ರಾಜ್ಯಗಳ ಜನನ ದರ ಈಗ ಫಿನ್ಲೆಂಡ್, ನಾರ್ವೆಯಂಥ ಯುರೋಪಿನ ವೃದ್ಧ ರಾಷ್ಟ್ರಗಳಿಗೆ ಸಮನಾಗಿದೆ. ಭಾರತದ ಜನಸಂಖ್ಯಾಶಾಸ್ತ್ರಕ್ಕೆ ಇನ್ನು ಮುಂದೆ ಹೋಲಿಕೆ ಸ್ಕ್ಯಾಂಡಿನೇವಿಯಾ ಎಂದರೆ ಆಘಾತವಾಗದೇ ಇರದು. ಬಡ ಉತ್ತರದ ರಾಜ್ಯಗಳಾದರೂ ಈ ಪ್ರವಾಹವನ್ನು ತಡೆದಾವು ಎಂಬ ನಿರೀಕ್ಷೆಯೂ ಹುಸಿಯಾಗುತ್ತಿದೆ. ಶತಮಾನದ ಅಂತ್ಯದೊಳಗೆ ಉತ್ತುಂಗ ತಲುಪಿ, ಬಳಿಕ ಸುಮಾರು 50 ಕೋಟಿಯಷ್ಟು ಜನ ಕರಗಿಹೋಗಬಹುದು ಎಂದು ಹೊಸ ಅಧ್ಯಯನಗಳು ಎಚ್ಚರಿಸುತ್ತಿವೆ. ಐವತ್ತು ಕೋಟಿ ಎಂದರೆ ಸುಮ್ಮನೆ ಅಲ್ಲ, ಒಂದು ಇಡೀ ನಾಗರಿಕತೆಯ ಗಾತ್ರದ ಜನಸಮುದಾಯ ನಿಃಶಬ್ದವಾಗಿ ಮಾಯವಾದಂತೆ.

ಮಹಾಭಾರತದಲ್ಲಿ ಒಂದು ಪ್ರಸಂಗವಿದೆ. ಅಗಸ್ತ್ಯ ಮಹರ್ಷಿ ಪತ್ನಿ ಲೋಪಾಮುದ್ರೆಯನ್ನು ಕೇಳುತ್ತಾನೆ. 'ನಿನಗೆ ಹತ್ತು ಒಳ್ಳೆಯ ಮಕ್ಕಳು ಬೇಕೋ, ಹತ್ತರ ಶೌರ್ಯವುಳ್ಳ ಒಬ್ಬನೇ ಮಹಾಪುತ್ರ ಬೇಕೋ?' ಲೋಪಾಮುದ್ರೆ ಒಬ್ಬನನ್ನೇ ಆರಿಸಿಕೊಳ್ಳುತ್ತಾಳೆ. ಇಂದಿನ ಭಾರತೀಯ ದಂಪತಿಗಳೆಲ್ಲ ಲೋಪಾಮುದ್ರೆಯ ದಾರಿ ಹಿಡಿದಿದ್ದಾರೆ. 'ಎರಡು ಮಕ್ಕಳಾದರೆ ಸಂಪನ್ಮೂಲ ಹಂಚಿಹೋಗುತ್ತದೆ, ಒಂದೇ ಮಗುವಿಗೆ ಎಲ್ಲವನ್ನೂ ಧಾರೆಯೆರೆಯುತ್ತೇವೆ' ಎಂಬುದು ಮಧ್ಯಮ ವರ್ಗದಿಂದ ಹಿಡಿದು ಬಿಹಾರದ ಬಡ ಕುಟುಂಬಗಳವರೆಗೆ ಈ ಚಿಂತನೆ ವ್ಯಾಪಿಸಿದೆ. ಖಾಸಗಿ ಶಾಲೆ, ಟ್ಯೂಷನ್, ಶಿಕ್ಷಣದ ಸ್ಪರ್ಧಾಕಣದಲ್ಲಿ ತನ್ನ ಮಗು ಹಿಂದೆ ಬೀಳಬಾರದೆಂಬ ಹಪಾಹಪಿ ಪೋಷಕರನ್ನು ಒಂದು ಅಥವಾ ಎರಡು ಮಗುವಿನ ಗಡಿಯೊಳಗೆ ಬಂಧಿಸಿದೆ. 'ನೂರು ಗಂಡುಮಕ್ಕಳ ತಾಯಿಯಾಗು' ಎಂಬ ಸಾಂಪ್ರದಾಯಿಕ ಆಶೀರ್ವಾದ ಈಗ ಕೇವಲ ಮದುವೆ ಮಂಟಪದ ಅಲಂಕಾರಿಕ ಮಾತು.

ಇದರ ಜತೆಗೆ ಅವಿಭಕ್ತ ಕುಟುಂಬವೆಂಬ ಭಾರತದ ಭದ್ರಕೋಟೆ ಕುಸಿದು ಬೀಳುತ್ತಿದೆ. ಅಜ್ಜ-ಅಜ್ಜಿ, ದೊಡ್ಡಪ್ಪ-ಚಿಕ್ಕಪ್ಪ, ಅತ್ತೆ-ಮಾವ ಎಲ್ಲರೂ ಒಂದೇ ಸೂರಿನಡಿ ಬದುಕುತ್ತಿದ್ದ ಮನೆಗಳ ಜಾಗದಲ್ಲಿ ಈಗ ಗಂಡ-ಹೆಂಡತಿ-ಒಂದು ಮಗುವಿನ ಪುಟ್ಟ ಫ್ಲ್ಯಾಟ್‌ಗಳು ತಲೆಯೆತ್ತಿವೆ. ಮಗು ನೋಡಿಕೊಳ್ಳಲು ಅಜ್ಜಿಯಿಲ್ಲ, ಅಂತೆಯೇ ವೃದ್ಧರನ್ನು ನೋಡಿಕೊಳ್ಳಲು ಮೊಮ್ಮಕ್ಕಳಿಲ್ಲ. ಟಿವಿ ಧಾರಾವಾಹಿಗಳು, ಸ್ಮಾರ್ಟ್‌ಫೋನ್‌ಗಳ ರೀಲ್‌ಗಳು ಹಳ್ಳಿಹಳ್ಳಿಗೂ 'ಪುಟ್ಟ ಕುಟುಂಬವೇ ಚೆಂದದ ಬದುಕು' ಎಂಬ ಕನಸನ್ನು ಬಿತ್ತುತ್ತಿವೆ. ಕೇರಳದಲ್ಲಿ ಹುಟ್ಟಿದ ಈ ಮನೋಭಾವ ಸಾಂಕ್ರಾಮಿಕದಂತೆ ಬಿಹಾರವನ್ನೂ ತಲುಪಿದೆ ಎನ್ನುತ್ತಾರೆ ಜನಸಂಖ್ಯಾ ತಜ್ಞರು.

ಹಳ್ಳಿಗಳ ಚಿತ್ರವಂತೂ ಇನ್ನಷ್ಟು ಮನಕಲಕುವಂಥದ್ದು. ದುಡಿಯುವ ಕೈಗಳೆಲ್ಲ ಮಹಾನಗರಗಳ ಕಾರ್ಖಾನೆ, ಹೋಟೆಲ್, ಕಚೇರಿಗಳತ್ತ ವಲಸೆ ಹೋಗುತ್ತಿವೆ. ಒಡಿಶಾದ ಹೆಣ್ಣುಮಕ್ಕಳು ಚೆನ್ನೈನ ವೃದ್ಧಾಶ್ರಮಗಳಲ್ಲಿ ಅಪರಿಚಿತ ವೃದ್ಧರ ಸೇವೆ ಮಾಡುತ್ತಿದ್ದರೆ, ಅವರದೇ ಊರಿನಲ್ಲಿ ಅವರ ಅಜ್ಜ-ಅಜ್ಜಿ ಯಾರ ಆಸರೆಯೂ ಇಲ್ಲದೆ ದಿನ ದೂಡುತ್ತಿದ್ದಾರೆ. ಹೆತ್ತ ಮಕ್ಕಳು ಕರೆಗೆ ಸಿಗದಾದಾಗ ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ನೋವು ತೋಡಿಕೊಳ್ಳುವ ವೃದ್ಧ ಪೋಷಕರ ಸಂಖ್ಯೆ ಬೆಳೆಯುತ್ತಿದೆ. ಊರ ಜಗುಲಿಗಳಲ್ಲಿ ಈಗ ಮಕ್ಕಳ ಆಟವಿಲ್ಲ, ಮುಪ್ಪಿನ ಕಾಯುವಿಕೆ ಮಾತ್ರ ಉಳಿದಿದೆ. ನೋಡಿ ಎಂಥಾ ವಿಪರ್ಯಾಸ.

ನಿಜವಾದ ಆತಂಕ ಇರುವುದು ಮುಂದಿನ ಚಿತ್ರದಲ್ಲಿ. ಆರಂಭದಲ್ಲೇ ಹೇಳಿದ ಹಾಗೆ, ಭಾರತ ಶ್ರೀಮಂತವಾಗುವ ಮುನ್ನವೇ ಮುದಿಯಾಗಲಿದೆ. ಯುರೋಪು, ಜಪಾನ್, ಚೀನಾ ವೃದ್ಧಾಪ್ಯದ ಹೊಸ್ತಿಲು ತಲುಪಿದಾಗ ಅವುಗಳ ಬೊಕ್ಕಸ ತುಂಬಿತ್ತು. ಪಿಂಚಣಿ, ಆರೋಗ್ಯ ವ್ಯವಸ್ಥೆ ಸಜ್ಜಾಗಿತ್ತು. ಆದರೆ ನಮ್ಮಲ್ಲಿ ಪಿಂಚಣಿಯ ಭದ್ರತೆ ಇರುವವರು ಬೆರಳೆಣಿಕೆಯಷ್ಟು ಮಂದಿ ಮಾತ್ರ. ಮಕ್ಕಳೇ ಮುಪ್ಪಿನ ಊರುಗೋಲು ಎಂಬ ನಂಬಿಕೆಯ ಮೇಲೆ ನಿಂತಿದ್ದ ಸಮಾಜದಲ್ಲಿ, ಆ ಮಕ್ಕಳೇ ಇಲ್ಲವಾದರೆ, ಇದ್ದರೂ ದುಡಿಮೆ ಅರಸಿ ದೂರದ ನಗರ ಸೇರಿದರೆ ವೃದ್ಧರ ಗತಿಯೇನು? ತಮಿಳುನಾಡಿನಲ್ಲಿ ಕಳೆದ ವರ್ಷವೊಂದರಲ್ಲೇ 1,200 ಶಾಲೆಗಳು ಮಕ್ಕಳಿಲ್ಲದೆ ಬಾಗಿಲು ಮುಚ್ಚಿವೆ. ಕುಂಭಮೇಳದಂಥ ಧಾರ್ಮಿಕ ಜಾತ್ರೆಗಳಲ್ಲಿ ವೃದ್ಧ ತಂದೆ-ತಾಯಂದಿರನ್ನು ಕರೆತಂದು ಕೈಬಿಟ್ಟು ಹೋಗುವ ಪ್ರಕರಣಗಳು ಹೆಚ್ಚುತ್ತಿವೆ ಎಂಬ ವರದಿಯಂತೂ ಕರುಳು ಹಿಂಡುತ್ತದೆ. ಒಂದೆಡೆ ಮಕ್ಕಳಿಲ್ಲದೆ ಮುಚ್ಚುತ್ತಿರುವ ಶಾಲೆಗಳು, ಇನ್ನೊಂದೆಡೆ ತಲೆಯೆತ್ತುತ್ತಿರುವ ವೃದ್ಧಾಶ್ರಮಗಳು. ಇದಕ್ಕಿಂತ ಮಾರ್ಮಿಕ ರೂಪಕ ಬೇಕೆ?

ಸರ್ಕಾರಗಳು ಎಚ್ಚೆತ್ತುಕೊಂಡಿವೆ ನಿಜ. ಆಂಧ್ರಪ್ರದೇಶ ಮೂರನೇ ಮಗುವಿಗೆ ನಗದು ಬಹುಮಾನ ಘೋಷಿಸಿದೆ. ಮಧ್ಯ ಪ್ರದೇಶವೂ ಹೆಚ್ಚಿನ ಮಕ್ಕಳಿಗಾಗಿ ಪ್ರೋತ್ಸಾಹ ನೀಡಲು ಸಿದ್ಧವಾಗಿದೆ. ಆರೆಸ್ಸೆಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರು ಜನಸಂಖ್ಯಾ ಸ್ಥಿರತೆಗಾಗಿ ಮೂರು ಮಕ್ಕಳನ್ನು ಪಡೆಯುವಂತೆ ಕರೆ ನೀಡಿದ್ದಾರೆ. ಆದರೆ ಜಗತ್ತಿನ ಅನುಭವ ಹೇಳುವ ಕಟು ಸತ್ಯವೆಂದರೆ, ಹಣದ ಆಮಿಷವಾಗಲೀ ಬೇರೊಬ್ಬರ ಉಪದೇಶವಾಗಲೀ ಈ ಪ್ರವಾಹವನ್ನು ಹಿಮ್ಮೆಟ್ಟಿಸಿದ ಉದಾಹರಣೆ ಇಲ್ಲವೇ ಇಲ್ಲ, ಎಪ್ಪತ್ತು ವರ್ಷಗಳಿಂದ ಇಳಿಯುತ್ತಲೇ ಬಂದಿರುವ ಜನನ ದರ ದಿಢೀರನೆ ಮೇಲೇರುವ ಪವಾಡ ಸಂಭವಿಸದು.

ಮುಂಬೈನ ಲೋಕಲ್ ರೈಲುಗಳ ನೂಕುನುಗ್ಗಲು, ಜಾತ್ರೆಗಳ ಜನಜಂಗುಳಿ, ಗಲ್ಲಿಗಲ್ಲಿಗಳ ಗದ್ದಲ ಇವೇ ಭಾರತದ ಗುರುತು ಎಂದು ನಂಬಿಕೊಂಡು ಬಂದವರು ನಾವು. ಜನವೇ ನಮ್ಮ ಶಕ್ತಿ, ಯುವಶಕ್ತಿಯೇ ನಮ್ಮ ಬಂಡವಾಳ ಎಂದು ಬೀಗಿದವರು ನಾವು. ಆದರೆ ಆ ಜನಸಾಗರದ ಅಲೆಗಳು ನಿಧಾನಕ್ಕೆ ಹಿಂದೆ ಸರಿಯುತ್ತಿವೆ. ಮಕ್ಕಳ ಕಲರವ ಕಿರಿದಾಗುತ್ತ, ಮನೆಯ ಜಗುಲಿಯಲ್ಲಿ ಒಬ್ಬಂಟಿ ವೃದ್ಧರ ಮೌನ ದಟ್ಟವಾಗುತ್ತ ಸಾಗಿರುವ ಈ ಪಯಣದ ಗಮ್ಯವೇನು ಎಂಬ ಪ್ರಶ್ನೆಗೆ ಈಗಲೇ ಉತ್ತರ ಹುಡುಕದಿದ್ದರೆ, ನಾಳೆ ಉತ್ತರ ಕೇಳುವವರೂ ಇರಲಿಕ್ಕಿಲ್ಲ, ಪಾರುಲ್ ಗಾಯೆನ್ ಅವರ ಮಾತು ಮತ್ತೆ ಮತ್ತೆ ಕಿವಿಯಲ್ಲಿ ಗುಂಯ್ಗುಡುತ್ತದೆ: 'ಒಂದು ಮಗು ಎಂದರೆ ಏಕಾಂಗಿತನ.' ನಾಳೆ ಇಡೀ ದೇಶಕ್ಕೇ ಆ ಒಂಟಿತನ ಕಾಡದಿರಲಿ.

ಬದಲಾಗದವುಗಳು

ಸುಜೀರ್ಣಮನ್ನಂ ಸುವಿಚಕ್ಷಣಃ ಸುತಃ ಸುಶಾಸಿತಾ ಸ್ತ್ರೀ ನೃಪತಿಃ ಸುಸೇವಿತಃ।
ಸುಚಿಂತ್ಯ ಚೋಕ್ತಂ ಸುವಿಚಾರ್ಯ ಯತ್ಕೃತಂ ಸುದೀರ್ಘ ಕಾಲೇಽಪಿ ನ ಯಾತಿ ವಿಕ್ರಿಯಾಂ ॥ - ಹಿತೋಪದೇಶ

ಚೆನ್ನಾಗಿ ಜೀರ್ಣಿಸಿದ ಅನ್ನ, ಚತುರನಾದ ಮಗ, ಚೆನ್ನಾಗಿ ಶಿಕ್ಷಿಸಲ್ಪಟ್ಟ ಸ್ತ್ರೀ, ಚೆನ್ನಾಗಿ ಸೇವಿಸಲ್ಪಟ್ಟ ದೊರೆ, ಪರ್ಯಾಲೋಚಿಸಿ ಆಡಿದ ಮಾತು, ಪೂರ್ವಾಪರ ವಿಮರ್ಶೆಯಿಂದ ಮಾಡಿದ ಕೆಲಸ - ಇವು ಎಷ್ಟು ಕಾಲದ ಮೇಲೂ ಬದಲಾವಣೆ ಹೊಂದುವುದಿಲ್ಲ - ಎಂಬುದು ಶ್ಲೋಕಾರ್ಥ.

ಸಮಾಜದಲ್ಲಿ ಕೆಲವು ವ್ಯಕ್ತಿಗಳು, ಕೆಲವಾರು ವಿಷಯಗಳು ಹಾಗೂ ಹಲವು



ವಸ್ತುಗಳು ಬದಲಾಗುತ್ತಿರುವುದನ್ನು ಕಾಣುತ್ತೇವೆ. ಈ ಬದಲಾವಣೆ ಕ್ಷಣದಲ್ಲಿಯೂ ಆಗಬಹುದು ಅಥವಾ ಕೆಲವಷ್ಟು ಸಮಯವನ್ನು ಪಡೆದುಕೊಳ್ಳಬಹುದು. ವ್ಯಕ್ತಿಯನ್ನು ನೋಡಿ 'ಇವನು ಹಿಂದಿನಂತಿಲ್ಲ ಬದಲಾಗಿದ್ದಾನೆ' ಎನ್ನುತ್ತೇವೆ. ಕೆಲವಷ್ಟು ಪ್ರದೇಶಗಳು ಬದಲಾಗಿರುವುದನ್ನು ಕಂಡಿದ್ದೇವೆ. ಹಾಗಿದ್ದರೆ ಬದಲಾವಣೆ ಜಗದ ನಿಯಮವೆನ್ನೋಣವೇ? ಹೌದು, ಇದು ಎಲ್ಲರ ಅನುಭವಕ್ಕೆ ಬರುವ ಸತ್ಯ.

ಬದಲಾಗುವ ಪ್ರಪಂಚದಲ್ಲಿ ಕೆಲವಷ್ಟು ಬದಲಾಗುವುದಿಲ್ಲ, ಅವುಗಳ ಬಗ್ಗೆ ಈ ಸುಭಾಷಿತ ಬೆಳಕು ಚೆಲ್ಲುತ್ತದೆ. ಚೆನ್ನಾಗಿ ಜೀರ್ಣವಾದ ಅನ್ನ ಶಕ್ತಿಯಾಗಿ ನಮ್ಮನ್ನು ಪೋಷಿಸುತ್ತದೆ. ಇದರಲ್ಲಿ ಯಾವ ಬದಲಾವಣೆಯೂ ಆಗದು. ಉಂಡ ಅನ್ನದ ಸ್ವಭಾವವೇ ಅದು. ತಿಂದ ಆಹಾರ ಜೀವಪೋಷಕವಾಗಿ ನಮ್ಮನ್ನು ಬದುಕಿಸುತ್ತದೆ.

ಮಕ್ಕಳು ದಾರಿ ತಪ್ಪುತ್ತಾರೆ. ಸಹವಾಸದಿಂದ ಬದಲಾಗುತ್ತಾರೆ ಎಂದುಕೊಳ್ಳುತ್ತೇವೆ. ಕೊಡಬೇಕಾದ ಸಂಸ್ಕಾರ ನೀಡಿ ಜೀವನದ ಓರೆ ಕೋರೆಗಳನ್ನು ತಿದ್ದಿ ತೀಡಿ ಚತುರನನ್ನಾಗಿ ಬೆಳೆಸಿದರೆ ಅವನೆಂದೂ ಬದಲಾಗಲಾರ. ಮಗನು ಕರ್ತವ್ಯದಿಂದ ಬದಲಾಗದ ರೀತಿಯಲ್ಲಿ ಚೆನ್ನಾಗಿ ಬೆಳೆಸುವ ಹೊಣೆ ಹೆತ್ತವರದ್ದು, ಅದನ್ನೆಂದೂ ಕಡೆಗಣಿಸಬಾರದು.

ಸಹಜವಾಗಿ ಸ್ತ್ರೀಯರು ಚಂಚಲೆಯರು ಎನ್ನುವ ಮಾತಿದೆ. ಯಾರು ಚಂಚಲರಲ್ಲ? ಎಲ್ಲರೂ ಚಂಚಲಸ್ವಭಾವದವರೇ.

ಆದರೆ ಸರಿಯಾದ ಶಿಕ್ಷಣ ನೀಡಿದರೆ, ಸಂಸ್ಕಾರದ ಜೊತೆಗೆ ತಿಳುವಳಿಕೆ ನೀಡಿದರೆ ಆದರ್ಶ ಗೃಹಿಣಿಯಾಗಬಲ್ಲಳು. ಮನೆಯವರ ಪಾಲಿಗೆ ಅದೃಷ್ಟ ಲಕ್ಷ್ಮಿಯಾಗಬಲ್ಲಳು. ಆಗುವ ಬೇಡದ ಬದಲಾವಣೆಗಳನ್ನು ತಡೆಯಬಲ್ಲಳು.

ರಾಜರ, ರಾಜಕೀಯ ಪುರುಷರ, ಹಿರಿಯರ ಸೇವೆಯನ್ನು ಚೆನ್ನಾಗಿ ಮಾಡಿದರೆ, ಜೊತೆಯಲ್ಲಿ ಸರಿಯಾದ ಮಾರ್ಗದರ್ಶನವಿದ್ದರೆ ಅವರೆಂದು ಬದಲಾಗುವುದಿಲ್ಲ, ಇವುಗಳಲ್ಲಿ ಕೊರತೆಯಾದರೆ ಅಥವಾ ಕರ್ತವ್ಯದಲ್ಲಿ ಲೋಪವೆಸಗಿದರೆ ಬದಲಾಗಬಹುದೇ ವಿನಾ ಕರ್ತವ್ಯವನ್ನು ಮರೆದರೆ ಬದಲಾಗರು.

ಸರಿಯಾಗಿ ಆಲೋಚಿಸಿ ಅರಿತು ಮಾತನಾಡಿದರೆ ಹಾಗೂ ಮಾಡುವ ಕೆಲಸವನ್ನು ಪೂರ್ವಾಪರ ವಿಮರ್ಶಿಸಿ ತೊಡಗಿಕೊಂಡರೆ ಬದಲಾವಣೆಯಾಗುವುದಿಲ್ಲ, ತೂಕದ ಮಾತು, ಎಚ್ಚರದ ನಡಿಗೆ ಇದನ್ನು ಚೆನ್ನಾಗಿ ಮುಂದುವರಿಯುವಂತೆ ಮಾಡುತ್ತದೆ.

ನಮ್ಮ ನಡೆ- ನುಡಿ- ವ್ಯವಹಾರಗಳಲ್ಲಿ ಈ ಸೂತ್ರರೂಪಿ ಅಂಶವನ್ನು ಅಳವಡಿಸಿಕೊಂಡರೆ ಮಾರಕ ಬದಲಾವಣೆಗೆ ತೆರೆದುಕೊಳ್ಳದೇ ಚೆನ್ನಾಗಿ ಮುನ್ನಡೆಯಲು ಸಾಧ್ಯ.

ರಿಸರ್ವ್ ಬ್ಯಾಂಕ್ ಚಿನ್ನ ಮಾರಿದೆ ಎನ್ನುವ 'ಬ್ಲೂಮ್' ಸುಳ್ಳು

ನಾರಾಯಣ ಯಾಜಿ

ಬ್ಲೂಮ್‌ಬರ್ಗ್ (Bloomerge) ಎನ್ನುವುದು ಅಮೇರಿಕದ ಹಣಕಾಸು ವಿಶ್ಲೇಷಣಾ ಸಂಸ್ಥೆ, ಪ್ರಪಂಚಾದ್ಯಂತದ ಶೇರು ಮಾರುಕಟ್ಟೆಗಳನ್ನು ವಿಮರ್ಶಿಸುವುದು ತನಗಿರುವ ವಿಶೇಷ ಅಧಿಕಾರ ಎಂದು ಅದು ತನಗೆ ತಾನೇ ಘೋಷಿಸಿಕೊಂಡಿದೆ. ನಮ್ಮ ದೇಶದ ಮಹಾಬುದ್ಧಿವಂತರೆಲ್ಲ ಅದನ್ನು ತಲೆಯ ಮೇಲೆ ಹೊತ್ತುಕುಣಿಯುತ್ತಾರೆ.

ಇದೇ ಬ್ಲೂಮ್‌ಬರ್ಗ್ ಜಾಗತಿಕ ಹಣಕಾಸು ಮಾರುಕಟ್ಟೆಯಲ್ಲಿ ಜೂನ್ 2ರಂದು ಭಾರಿ ಬಿರುಗಾಳಿ ಎಬ್ಬಿಸಿತು. ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ರೂಪಾಯಿಯನ್ನು ರಕ್ಷಿಸಲು ಬರೋಬ್ಬರಿ 12 ಬಿಲಿಯನ್ ಡಾಲರ್ ಮೌಲ್ಯದ ಚಿನ್ನವನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದೆ ಎನ್ನುವ ವರದಿಯನ್ನು ನ್ಯೂಯಾರ್ಕ್‌ನ ಹವಾನಿಯಂತ್ರಿತ ಕೋಣೆಗಳಲ್ಲಿ ಕುಳಿತು ಬರೆದು ಬಿಡುಗಡೆ ಮಾಡಿತು. ಈ ವಿಶ್ಲೇಷಣೆಯ ಹಿಂದಿರುವ ವ್ಯಕ್ತಿ ಬ್ಲೂಮ್ ಬರ್ಗ್ ಹಣಕಾಸು ಸಂಸ್ಥೆಯ ಹಿರಿಯ ಆರ್ಥಿಕ ವಿಶ್ಲೇಷಕ ಅಭಿಷೇಕ್ ಗುಪ್ತ ಎನ್ನುವ ಅನಿವಾಸಿ ಭಾರತೀಯ! ಈ ಸುದ್ದಿ ಭಾರತೀಯ ಮಾಧ್ಯಮಗಳಲ್ಲೂ ತಲ್ಲಣ ಸೃಷ್ಟಿಸಿತು. ಆದರೆ ಇದರ ಹಿಂದಿರುವ ಸತ್ಯವೇನು? ಆರ್‌ಬಿಐ ನಿಜವಾಗಿಯೂ ಬಂಗಾರ ಮಾರಿತೇ ಅಥವಾ ಇದು ಪಾಶ್ಚಾತ್ಯರ ಎಂದಿನ ಅಪಕ್ವ ಅಂದಾಜೇ ಎನ್ನುವುದನ್ನು ಅವಲೋಕಿಸಿದಾಗ ಕಂಡ ಸತ್ಯ, ಇದೊಂದು ಬುರುಡೆ ಎನ್ನುವುದು.

ಲೆಕ್ಕಾಚಾರ ತಲೆಕೆಳಗಾದದ್ದು ಎಲ್ಲಿ?

ಮೇ ತಿಂಗಳ ಅಂತ್ಯದಲ್ಲಿ ಅಮೆರಿಕ-ಇರಾನ್ ಸಂಘರ್ಷದ ಕಾರಣದಿಂದಾಗಿ ಜಾಗತಿಕ ತೈಲ ಮಾರುಕಟ್ಟೆ ಕದಡಿತು. ಭಾರತ ತನ್ನ ಅಗತ್ಯದ ಶೇಕಡಾ 85ರಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುವುದರಿಂದ, ದೇಶದಿಂದ ಡಾಲರ್ ಹೊರಹರಿವು ಹೆಚ್ಚಾಗಿ ರೂಪಾಯಿ ಮೌಲ್ಯ ಪ್ರತಿ ಡಾಲರ್‌ಗೆ 96.96ರ ಐತಿಹಾಸಿಕ ಕುಸಿತ ಕಂಡಿತು. ರಿಸರ್ವ್ ಬ್ಯಾಂಕಿನ ವಿದೇಶಿ ಕರೆನ್ಸಿ ಆಸ್ತಿಗಳು ಇದೇ ಸಮಯಕ್ಕೆ 7.5 ಬಿಲಿಯನ್ ಡಾಲರ್‌ನಷ್ಟು ಹೆಚ್ಚಾಗಿದ್ದವು. ಇದು ಬ್ಲೂಮ್‌ಬರ್ಗ್‌ನ ಗಮನಕ್ಕೆ ಬರಲೇ ಇಲ್ಲ, ರೂಪಾಯಿ ಕುಸಿತ ತಡೆಯಲು ಆರ್‌ಬಿಐ ತುರ್ತಾಗಿ ಚಿನ್ನವನ್ನು ಮಾರಿ ಡಾಲರ್ ಸಂಗ್ರಹಿಸಿದೆ ಎಂದು ಊಹಿಸಿತು. ಇದು ಕೇವಲ ಕಾಗದದ ಮೇಲಿನ ಊಹಾತ್ಮಕ ಲೆಕ್ಕಾಚಾರವೇ ಹೊರತು ವಾಸ್ತವವಲ್ಲ.

ಜಾಗತಿಕ ಮಾರುಕಟ್ಟೆಯ ಕಣ್ಣಾಮುಚ್ಚಾಲೆ ಆಟ

ವಾಸ್ತವವಾಗಿ ಬ್ಲೂಮ್‌ಬರ್ಗ್ ಎಡವಿದ್ದು ಜಾಗತಿಕ ಚಿನ್ನದ ಬೆಲೆಯ ಏರಿಳಿತವನ್ನು ಅರ್ಥೈಸಿಕೊಳ್ಳುವಲ್ಲಿ, ಮೇ ತಿಂಗಳ ಆರಂಭದಲ್ಲಿ ಪ್ರತಿ ಔನ್ಸ್ ಚಿನ್ನದ ಬೆಲೆ ಸುಮಾರು 4,629 ರಷ್ಟಿತ್ತು. ಆದರೆ ಅಮೆರಿಕದ ಡಾಲರ್ ಮತ್ತು ಬಾಂಡ್ ಇಳುವರಿ ಪ್ರಬಲಗೊಂಡಿದ್ದರಿಂದ ಮೇ ತಿಂಗಳ ಕೊನೆಯ ವಾರದಲ್ಲಿ ಚಿನ್ನದ ಬೆಲೆ ಭಾರಿ ಕುಸಿತ ಕಂಡು ಎರಡು ತಿಂಗಳ ಕನಿಷ್ಠ ಮಟ್ಟವಾದ 4,447.71 ಕ್ಕೆ ತಲುಪಿತು. ಆರ್‌ಬಿಐ ಬಳಿಯಿರುವ ಚಿನ್ನದ ಭೌತಿಕ ತೂಕ ಹಾಗೆಯೇ ಇದ್ದರೂ, ಜಾಗತಿಕ ಮಾರುಕಟ್ಟೆಯಲ್ಲಿ ಪ್ರತಿ ಔನ್ಸ್ ಚಿನ್ನದ ಬೆಲೆ ಹೀಗೆ ನೂರಾರು ಡಾಲರ್ ಕುಸಿದಾಗ, ಭಾರತದ ಒಟ್ಟು ವಿದೇಶಿ ವಿನಿಮಯ ಮೀಸಲು ನಿಧಿಯಲ್ಲಿ ಚಿನ್ನದ ಒಟ್ಟು ಡಾಲರ್ ಮೌಲ್ಯ



ಸಹಜವಾಗಿಯೇ ಬಿಲಿಯನ್‌ಗಟ್ಟಲೆ ಡಾಲರ್ ಇಳಿಕೆಯಾಯಿತು. ಇದನ್ನು ಬ್ಲೂಮ್‌ಬರ್ಗ್ 'ಚಿನ್ನದ ಮಾರಾಟ' ಎಂದು ತಪ್ಪಾಗಿ ಬರೆದು ಜಗತ್ತಿನ ದಿಕ್ಕು ತಪ್ಪಿಸಿತು!

ಬ್ಲೂಮ್‌ಬರ್ಗ್ ಭವಿಷ್ಯ ತಲೆಕೆಳಗಾದದ್ದು ಇದೇ ಮೊದಲೇನಲ್ಲ, ಭಾರತದ ಆರ್ಥಿಕತೆಯ ವಿಷಯದಲ್ಲಿ ಬ್ಲೂಮ್‌ಬರ್ಗ್‌ನ ಕಂಪ್ಯೂಟರ್ ಮಾಡೆಲ್‌ಗಳು ಹೀಗೆ ಮುಖಭಂಗ ಅನುಭವಿಸುತ್ತಿರುವುದು ಇದು ಮೊದಲೇನಲ್ಲ, ಹಿಂದೆ ಕೋವಿಡ್ ಸಾಂಕ್ರಾಮಿಕದ ಸಮಯದಲ್ಲಿ, ಭಾರತದ ಆರ್ಥಿಕತೆ ಚೇತರಿಸಿಕೊಳ್ಳಲು ದಶಕಗಳೇ ಬೇಕಾಗಬಹುದು, ಬ್ಯಾಂಕಿಂಗ್ ವಲಯ ಸಂಪೂರ್ಣ ಧೂಳೀಪಟವಾಗುತ್ತದೆ ಎಂದು ಬ್ಲೂಮ್ ಬರ್ಗ್ ಭವಿಷ್ಯ ನುಡಿದಿತ್ತು. ಆದರೆ ಭಾರತದ ಭದ್ರ ಆರ್ಥಿಕ ನೀತಿಗಳು ಮತ್ತು ಯುಪಿಐ ಆಧಾರಿತ ಡಿಜಿಟಲ್ ಕ್ರಾಂತಿ ಅವರ ಹಳಸಲು ಮಾಡೆಲ್‌ಗಳಿಗೆ ಅರ್ಥವಾಗಲೇ ಇಲ್ಲ, ಫಲಿತಾಂಶವಾಗಿ, ಜಗತ್ತಿನಲ್ಲೇ ಅತಿ ವೇಗವಾಗಿ ಚೇತರಿಸಿಕೊಂಡ ಆರ್ಥಿಕತೆಯಾಗಿ ಭಾರತ ಜಗತ್ತಿಗೆ ವಿಸ್ಮಯ ಮೂಡಿಸಿತು.

ಅದೇ ರೀತಿ 2022ರಲ್ಲಿ ರಷ್ಯಾ-ಉಕ್ರೇನ್ ಯುದ್ಧದ ವೇಳೆ ಭಾರತದ ಫಾರೆಕ್ಸ್ ನಿಧಿ ಖಾಲಿಯಾಗಿ ರೂಪಾಯಿ ಪಾತಾಳಕ್ಕೆ ಕುಸಿಯುತ್ತದೆ ಎಂದು ಇವರು ಊಹಿಸಿದ್ದರು. ಆದರೆ ಭಾರತ ಅತ್ಯಂತ ಚಾಣಾಕ್ಷತನದಿಂದ ರಷ್ಯಾದಿಂದ ರಿಯಾಯಿತಿ ದರದಲ್ಲಿ ತೈಲ ಖರೀದಿಸಿ ತನ್ನ ಬೊಕ್ಕಸವನ್ನು ಕಾಪಾಡಿಕೊಂಡಿತು. ತದನಂತರ ಬ್ಲೂಮ್‌ಬರ್ಗ್ ಸ್ವತಃ ಮುಖಭಂಗ ಮರೆತು ತನ್ನ ಜಾಗತಿಕ ಬಾಂಡ್ ಇಂಡೆಕ್ಸ್‌ನಲ್ಲಿ ಭಾರತವನ್ನು ಸೇರಿಸಿಕೊಳ್ಳಬೇಕಾಯಿತು! ಪಾಶ್ಚಾತ್ಯರ ಕೇವಲ 'ಡೇಟಾ ಕೋರಿಲೇಶನ್' ಸಾಫ್ಟ್‌ವೇರ್‌ಗಳಿಗೆ ಭಾರತದ ಸ್ಥಳೀಯ ಮಾರುಕಟ್ಟೆಯ ತಾಕತ್ತು ಅರ್ಥವಾಗುವುದಿಲ್ಲ ಎಂಬುದಕ್ಕೆ ಇವೇ ಸಾಕ್ಷಿ.

ಆರ್‌ಬಿಐ ಕೊಟ್ಟ ಖಡಕ್ ಸ್ಪಷ್ಟನೆ

ಈ ವರದಿ ಹರಡುತ್ತಿದ್ದಂತೆ ಆರ್‌ಬಿಐ ಮತ್ತು ಸರ್ಕಾರದ ಪ್ರೆಸ್ ಇನ್ಫರ್ಮೇಷನ್ ಬ್ಯೂರೋ ತಕ್ಷಣವೇ ರಂಗಕ್ಕಿಳಿದು ಈ ಸುಳ್ಳು ವರದಿಯನ್ನು ಸಾರಾಸಗಟಾಗಿ ತಿರಸ್ಕರಿಸಿದವು. ಆರ್‌ಬಿಐ ತನ್ನ ಅಧಿಕೃತ ಸ್ಪಷ್ಟನೆಯಲ್ಲಿ, ನಮ್ಮ ಭೌತಿಕ ಚಿನ್ನದ ದಾಸ್ತಾನು ಒಂದು ಗ್ರಾಂನಷ್ಟೂ ಕಡಿಮೆಯಾಗಿಲ್ಲ, ಸಾರ್ವಜನಿಕರು ಇಂತಹ ಊಹಾಪೋಹಗಳನ್ನು ನಂಬದೆ ಅಧಿಕೃತ ದತ್ತಾಂಶಗಳನ್ನು ಮಾತ್ರ ನಂಬಬೇಕು ಎಂದು ಖಡಕ್ ಆಗಿ ಎಚ್ಚರಿಸಿತು. ಪ್ರಸ್ತುತ ಜೂನ್ 2026 ರ ಆರ್‌ಬಿಐ ವರದಿಯ ಪ್ರಕಾರ ಕೂಡ ಭಾರತದ ಒಟ್ಟು ಚಿನ್ನದ ದಾಸ್ತಾನು

ಬ್ಲೂಮ್ ಬರ್ಗ್‌ನ ಕಂಪ್ಯೂಟರ್ ಮಾಡೆಲ್‌ಗಳು ಭಾರತದ ಆರ್ಥಿಕತೆಯ ವಿಷಯದಲ್ಲಿ ಪದೇಪದೇ ಮುಖಭಂಗ ಅನುಭವಿಸುತ್ತಿವೆ.

880.52 ಮೆಟ್ರಿಕ್ ಟನ್ ಭದ್ರವಾಗಿದೆ. ಭಾರತೀಯ ರೂಪಾಯಿಯನ್ನು ರಕ್ಷಿಸಲು ಆರ್‌ಬಿಐ ಬಳಿ ಈಗಾಗಲೇ 600 ಬಿಲಿಯನ್ ಡಾಲರ್‌ಗೂ ಅಧಿಕ ಬಲಿಷ್ಠ ವಿದೇಶಿ ವಿನಿಮಯ ನಿಧಿಯಿದೆ. ಹಾಗಿರುವಾಗ ಭಾರತ ಹೆಮ್ಮೆಯಿಂದ ಕಾಯ್ದುಕೊಂಡಿರುವ ಬಂಗಾರದ ದಾಸ್ತಾನನ್ನು ಮುಟ್ಟುವ ಯಾವ ಅಗತ್ಯವೂ ಆರ್‌ಬಿಐಗೆ ಇಲ್ಲ.

ಸ್ವದೇಶಕ್ಕೆ ಮರಳುತ್ತಿದೆ ಭಾರತದ ಭಾಗ್ಯಲಕ್ಷ್ಮಿ!

ಬ್ಲೂಮ್‌ಬರ್ಗ್ ಚಿನ್ನ ಮಾರಾಟದ ಕಟ್ಟುಕಥೆ ಹೆಣೆಯುತ್ತಿದ್ದರೆ, ಆರ್‌ಬಿಐ ಮಾತ್ರ ಮತ್ತೊಂದು ಐತಿಹಾಸಿಕ ಕಾರ್ಯಾಚರಣೆಯಲ್ಲಿ ನಿರತವಾಗಿತ್ತು. 1991ರ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ಅಡವಿಟ್ಟ ಮತ್ತು ನಂತರದ ದಿನಗಳಲ್ಲಿ ಸುರಕ್ಷತೆಗಾಗಿ ವಿದೇಶಗಳಲ್ಲಿ ಇಡಲಾಗಿದ್ದ ಚಿನ್ನವನ್ನು ಭಾರತ ಈಗ ಅತ್ಯಂತ ವ್ಯವಸ್ಥಿತವಾಗಿ ಸ್ವದೇಶಕ್ಕೆ ತರುತ್ತಿದೆ. 2022ರ ರಷ್ಯಾ-ಉಕ್ರೇನ್ ಯುದ್ಧದ ಬಳಿಕ ಪಾಶ್ಚಾತ್ಯ ದೇಶಗಳು ರಷ್ಯಾದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡ ರೀತಿ ನೋಡಿ ಎಚ್ಚೆತ್ತ ಆರ್‌ಬಿಐ, ತನ್ನ ಆಸ್ತಿಯನ್ನು ತನ್ನದೇ ಸುಪರ್ದಿಯಲ್ಲಿ ಇರಿಸಿಕೊಳ್ಳುವುದು ಸುರಕ್ಷಿತ ಎಂದು ನಿರ್ಧರಿಸಿತು. ಈ ವಿಷಯದಲ್ಲಿ ಕಳೆದ ಮೂರು ವರ್ಷಗಳಿಂದ ಈ ಕಾರ್ಯಾಚರಣೆ ತೀವ್ರಗೊಂಡಿದ್ದು, ಕೇವಲ 2025-26ರ ಆರ್ಥಿಕ ವರ್ಷವೊಂದರಲ್ಲೇ ಆರ್‌ಬಿಐ ಬರೋಬ್ಬರಿ 168.06 ಮೆಟ್ರಿಕ್ ಟನ್ ಚಿನ್ನವನ್ನು ಬ್ಯಾಂಕ್ ಆಫ್ ಇಂಗ್ಲೆಂಡ್‌ನಿಂದ ಭಾರತಕ್ಕೆ ಯಶಸ್ವಿಯಾಗಿ ತಂದಿದೆ. ವಿದೇಶಿ ಕೇಂದ್ರ ಬ್ಯಾಂಕ್ ಈ ಚಿನ್ನವನ್ನು ಧರ್ಮಕ್ಕೆ ಇರಿಸಿಕೊಳ್ಳುತ್ತಿರಲಿಲ್ಲ, ಅವುಗಳಲ್ಲಿ ಇರಿಸಿದ್ದಕ್ಕೆ ಚಿನ್ನದ ಬಾರೊಂದಕ್ಕೆ ಪ್ರತಿ ದಿನಕ್ಕೆ ಸುಮಾರು 3.5 ಪೆನ್ನಿಯಷ್ಟು ಬಾಡಿಗೆಯನ್ನು ವಿಧಿಸುತ್ತವೆ ಎನ್ನಲಾಗಿದೆ. ಈಗ ಒಟ್ಟು 880.52 ಟನ್‌ಗಳಲ್ಲಿ ಬರೋಬ್ಬರಿ ಶೇ.77 (ಸುಮಾರು 680.05 ಮೆಟ್ರಿಕ್ ಟನ್) ಚಿನ್ನ ಭಾರತದ ಮುಂಬಯಿ ಮತ್ತು ನಾಗ್ಪುರದ ಖಜಾನೆಯಲ್ಲಿ ಅತ್ಯಂತ ಸುರಕ್ಷಿತವಾಗಿರಿಸಲ್ಪಟ್ಟಿದೆ.

ಪಾಶ್ಚಾತ್ಯರ ಅಸಹನೆ

ಪಾಶ್ಚಾತ್ಯ ಹಣಕಾಸು ಮಾಧ್ಯಮಗಳು ಭಾರತದಂತಹ ಉದಯೋನ್ಮುಖ ಆರ್ಥಿಕತೆಗಳನ್ನು ಸದಾ 'ಅಪಾಯದ' ಕಣ್ಣುಗಳಿಂದಲೇ ನೋಡುತ್ತವೆ. ಸ್ಥಳೀಯ ನೀತಿಗಳು, ಆರ್‌ಬಿಐನ ಆಂತರಿಕ ಆರ್ಥಿಕ ತಂತ್ರಗಳು ಮತ್ತು ಭಾರತದ ಆರ್ಥಿಕತೆಯ ನೈಜ ಶಕ್ತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಬ್ಲೂಮ್‌ಬರ್ಗ್‌ನಂತಹ ಜಾಗತಿಕ ಸಂಸ್ಥೆಗಳು ವಿಫಲವಾಗಿವೆ ಎಂಬುದಕ್ಕೆ ಈ ಘಟನೆಯೇ ಸಾಕ್ಷಿ, ಭಾರತ ತನ್ನ ಚಿನ್ನವನ್ನು ಮಾರುತ್ತಿಲ್ಲ, ಬದಲಿಗೆ ತನ್ನ ಆರ್ಥಿಕ ಸಾರ್ವಭೌಮತ್ವವನ್ನು ಎತ್ತಿಹಿಡಿಯಲು ಬಂಗಾರವನ್ನು ಸ್ವದೇಶಕ್ಕೆ ತಂದು ಭದ್ರಪಡಿಸುತ್ತಿದೆ. ಇದೆಲ್ಲ ಪಾಶ್ಚಾತ್ಯರಿಗೆ ಅಸಹನೆ ಸೃಷ್ಟಿಸುತ್ತಿದೆ. ಭಾರತದ ವಿರುದ್ಧ ಅಪಪ್ರಚಾರ ಮಾಡಲು ಇದೂ ಒಂದು ಕಾರಣವಾಗಿದೆ.

ನೆಹರೂಗಿಂತ ಮೋದಿಗೆ ಸವಾಲುಗಳು ಹೆಚ್ಚು...ಯಶಸ್ಸೂ ಹೆಚ್ಚು!

ಸಾಲ್ವಟೋರ್ ಬಾಬೋನ್ಸ್

ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಜೂನ್ 10ರಂದು, ಅತಿ ದೀರ್ಘ ಕಾಲ ಆಡಳಿತ ನಡೆಸಿದ ದಾಖಲೆ ಮಾಡಿದರೆಂದೂ, ಈ ನಿಟ್ಟಿನಲ್ಲಿ ಜವಾಹರ್‌ಲಾಲ್ ನೆಹರೂ ದೀರ್ಘಕಾಲ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ ದಾಖಲೆಯನ್ನು ಮುರಿದರೆಂದೂ ಅಂತರ್ಜಾಲದಲ್ಲಿ ಸುದ್ದಿಗಳು ಹರಿದಾಡಿದ್ದನ್ನು ಗಮನಿಸಿದೆ.

ನೆಹರೂ ಚುನಾವಣೆಯಲ್ಲಿ ಸ್ಪರ್ಧಿಸಿ ಪ್ರಧಾನಿಯಾಗುವ ದಕ್ಕಿಂತಲೂ ಮೊದಲು ನಾಲ್ಕೂವರೆ ವರ್ಷ ಕಾಲ ಆಡಳಿತ ನಡೆಸಿದ್ದರು. ಭಾರತಕ್ಕೆ ಸ್ವಾತಂತ್ರ್ಯ ದೊರಕಿದಾಗಲೆ ಅವರು ಪ್ರಧಾನಿಯಾಗಿದ್ದು, ಚುನಾಯಿತ ಪ್ರಧಾನಿಯಾಗಿ ಅವರು 1952ರಲ್ಲಷ್ಟೇ ಅಧಿಕಾರ ಸ್ವೀಕರಿಸಿದರು. ಅವರ ಪುತ್ರಿ ಇಂದಿರಾಗಾಂಧಿ ಎರಡು ಅವಧಿಗೆ ಪ್ರಧಾನಿಯಾಗಿದ್ದರು. ಮೊದಲ ಅವಧಿ ಹಲವಾರು ವಿವಾದಗಳಿಂದ ಕೊನೆಗೊಂಡರೆ, ಎರಡನೆಯದು ಅವರ ಹತ್ಯೆಯಿಂದ ಕೊನೆಗೊಂಡಿತು.

ಇವರಿಗೆ ಹೋಲಿಸಿದರೆ ನರೇಂದ್ರ ಮೋದಿಯವರು ಅತ್ಯಂತ ಯಶಸ್ವಿ 'ಆಧುನಿಕ ರಾಜಕಾರಣಿ' ಎಂಬ ಹಿರಿಮೆ ಪಡೆದಿದ್ದಾರೆ. ಅವರದು ನೆಹರೂ ಮತ್ತು ಇಂದಿರಾ ಗಾಂಧಿಗಿಂತಲೂ ಹೆಚ್ಚಾಗಿ ಜರ್ಮನಿಯ ಎಂಜೆಲಾ ಮಾರ್ಕೆಲ್ ಅವರ ಮಾದರಿಯ ಆಡಳಿತ ಎಂದು ಹೇಳಬಹುದು. ಪ್ರಧಾನಿ ಮೋದಿಯವರು ಕಬ್ಬಿಣದ ಹಸ್ತದಿಂದ ದೇಶವಾಳುತ್ತಾರೆ ಎಂಬುದಾಗಿ ಅವರ ಟೀಕಾಕಾರರು ಹೇಳುವುದುಂಟು. ಆದರೆ ಭಾರತವನ್ನು ಆಳಲು ಕಬ್ಬಿಣದ ಹಸ್ತವೇ ಬೇಕಾಗುತ್ತದೆ.

ನಿಜವಾಗಿ ನೆಹರೂ ಭಾರತದಲ್ಲಿ ಆಡಳಿತ ನಡೆಸಿದವರಲ್ಲ, ಕೇವಲ ಆಳ್ವಿಕೆ ನಡೆಸಿದ್ದಷ್ಟೇ ಎಂದು ಹೇಳಬಹುದು. ಮೋದಿಯವರು ಹಾಗಲ್ಲ, ಅವರು ದೇಶದ ಚುಕ್ಕಾಣಿ ಹಿಡಿದು ಅದನ್ನು ಮುನ್ನಡೆಸಿದವರು. ದೇಶವೆಂಬ ಹಡಗಿನ ಚುಕ್ಕಾಣಿ ಹಿಡಿದು ಈ ರೀತಿ ಮುನ್ನಡೆಸಬಲ್ಲ ನಾಯಕನು ರಾಜಕೀಯ ಗಾಳಿ ಬೀಸುವ ದಿಕ್ಕನ್ನು ಅರಿಯುವ ಮತ್ತು ಚುನಾವಣಾ ಅಲೆಗಳನ್ನು ನಿಭಾಯಿಸುವ ಸಾಮರ್ಥ್ಯ ಹೊಂದಿರಬೇಕಾಗುತ್ತದೆ. ಮೋದಿ ಅಂತಹ ಸಾಮರ್ಥ್ಯ ಹೊಂದಿದವರು.



ದೇಶದ ಆಳ್ವಿಕೆಯನ್ನು ಯಾವನೇ ಸರ್ವಾಧಿಕಾರಿ ಕೂಡಾ ನಡೆಸಬಲ್ಲ, ಈ ರೀತಿ ಆಳುವವನು ಸಮಾಜಕ್ಕಾಗಿ ಏನಾದರೂ ಮಾಡುವ ಬದಲಾಗಿ ಸಮಾಜವನ್ನೆ ತನಗೆ ತಕ್ಕಂತೆ ಬದಲಿಸಿಕೊಳ್ಳುತ್ತಾನೆ. ಆತ ಸಮಾಜಕ್ಕೆ ತನ್ನನ್ನು ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ, ಸಮಾಜವೇ ಆತನಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತದೆ.

ನೆಹರೂ ಭಾರೀ ಬಹುಮತದೊಂದಿಗೆ ಸ್ವತಂತ್ರ ಭಾರತದ ಪ್ರಧಾನಿಯಾಗಿ ಅಧಿಕಾರ ಹಿಡಿದರು. ಅವರ ಆಳ್ವಿಕೆಯುದ್ದಕ್ಕೂ ಈ ಬಹುಮತ ಅವರೊಂದಿಗೇ ಇತ್ತು. ಪತ್ರಿಕೆಗಳು ಅವರನ್ನು ಟೀಕಿಸಿದಾಗ ಆ ಪತ್ರಿಕೆಗಳ ಮೇಲೆಯೇ ಸೆನ್ಸಾರ್‌ಶಿಪ್ ಹೇರಿದರು. ಕೈಗಾರಿಕೋದ್ಯಮಿಗಳು ಅವರ ಪಂಚವಾರ್ಷಿಕ ಯೋಜನೆಯನ್ನು ವಿರೋಧಿಸಿದಾಗ ಅವರು ಕೈಗಾರಿಕೆಗಳನ್ನೇ ರಾಷ್ಟ್ರೀಕರಣಗೊಳಿಸಿದರು. ತಮಗೆ ಬೇಕಾದಂತೆ ನಡಕೊಂಡರು. ಆದರೆ ಮೋದಿಯವರು ಅಂತಹ ಹೆಜ್ಜೆಯಿಡಲಿಲ್ಲ.

ಮೋದಿಯವರು ಮೂರು ಪ್ರಮುಖ ಗುರಿಗಳೊಂದಿಗೆ ಪ್ರಧಾನಿ ಪಟ್ಟಕ್ಕೇರಿದ್ದರು. ಆ ಗುರಿಗಳಲ್ಲಿ ಒಂದಾದ ಸಂವಿಧಾನದ 370ನೇ ವಿಧಿ ರದ್ದತಿಗೆ ಅವರಿಗೆ 5 ವರ್ಷಗಳು ಬೇಕಾದವು. ಮತ್ತೊಂದು ಗುರಿಯಾದ ಅಯೋಧ್ಯೆ ಶ್ರೀರಾಮ ಮಂದಿರ ನಿರ್ಮಿಸಲು ಸುಮಾರು 10 ವರ್ಷಗಳು ಬೇಕಾದವು. ಸಮಾನ ನಾಗರಿಕ ಸಂಹಿತೆ ಜಾರಿಗೊಳಿಸುವ ಅವರ ಮತ್ತೊಂದು ಗುರಿ ಇನ್ನೂ ಈಡೇರದೆ ಬಾಕಿ ಉಳಿದಿದೆ. ಬಹುಶಃ 2029ರೊಳಗೆ ಅದು ಸಾಧ್ಯವಾಗುವುದು ಕಷ್ಟ. ಏಕೆಂದರೆ ಮೋದಿ ಮತ್ತು ಬಿಜೆಪಿ ಎಚ್ಚರಿಕೆಯ ನಡೆ ಇಡಬೇಕಾಗಿದೆ. ಆಗಿಂದಾಗ್ಗೆ ಭಾರತದಲ್ಲಿ ಚುನಾವಣೆಗಳು ನಡೆಯುತ್ತಲೇ ಇರುತ್ತವೆ. ಕೇಂದ್ರದಲ್ಲಿ ಅಲ್ಲದಿದ್ದರೂ ರಾಜ್ಯಗಳಲ್ಲಿ ಚುನಾವಣೆ ನಡೆಯುತ್ತಿದ್ದು, ಬಿಜೆಪಿ ಅದನ್ನು ಗೆಲ್ಲಬೇಕಾಗುತ್ತದೆ.

ತಾವು ಎದುರಿಸಿದ 3 ಲೋಕಸಭಾ ಚುನಾವಣೆಗಳಲ್ಲಿ ನೆಹರೂ ಯಾವತ್ತಿಗೂ ಶೇ. 40ಕ್ಕಿಂತ ಕಡಿಮೆ ಓಟು ಪಡೆದವರಲ್ಲ, ಲೋಕಸಭೆಯಲ್ಲಿ ಅವರಿಗೆ ಯಾವಾಗಲೂ ಮೂರನೇ ಎರಡರಷ್ಟು ಬಹುಮತ ಇರುತ್ತಿತ್ತು. 1951ರಿಂದ 1962ರ ಚುನಾವಣೆ ತನಕ ಯಾವುದೇ ವಿರೋಧ ಪಕ್ಷವು ಶೇ. 11ಕ್ಕಿಂತ ಹೆಚ್ಚು ಮತ ಗಳಿಸಲಿಲ್ಲ, ನೆಹರೂ ಚುನಾವಣೆಗಳನ್ನು ಎದುರಿಸಿದರು ನಿಜ. ಆದರೆ ಅವರು ವಿರೋಧ ಪಕ್ಷಗಳನ್ನು ಎದುರಿಸಲಿಲ್ಲ.

ಇದಕ್ಕೆ ಹೋಲಿಸಿದರೆ, ನರೇಂದ್ರ ಮೋದಿಯವರ ಬಿಜೆಪಿ ಚುನಾವಣೆಗಳಲ್ಲಿ ಶೇ. 40ಕ್ಕಿಂತ ಹೆಚ್ಚು ಮತ ಗಳಿಸಲಿಲ್ಲ, ವಿರೋಧ ಪಕ್ಷಗಳು ದುರ್ಬಲಗೊಂಡಿದ್ದರೂ ಸದಾ ಕಾಲ ಮೋದಿ ಸರಕಾರಕ್ಕೆ ಅಪಾಯವೊಡ್ಡುತ್ತಲೇ ಇರುತ್ತವೆ.

ಭಾರತದ ಚುನಾವಣಾ ವಿಶ್ಲೇಷಕರು (ಮೋದಿ ಪರ ಮತ್ತು ಮೋದಿ ವಿರೋಧಿ ಇಬ್ಬರೂ) ಬಿಜೆಪಿ ಈಗ ಭಾರತೀಯ ರಾಜಕಾರಣದ ಬಹುದೊಡ್ಡ ಶಕ್ತಿಯಾಗಿದ್ದು ಅದನ್ನು ತಡೆಯುವವರಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಅವರು 2024ರ ಜೂನ್‌ನ ಮನಸ್ಥಿತಿಯನ್ನು ಮರೆಯುತ್ತಿದ್ದಾರೆ. ಅಂದು ಇದೇ ವಿಶ್ಲೇಷಣಾಕಾರರು ಬಿಜೆಪಿ ದುರ್ಬಲಗೊಳ್ಳುತ್ತಿವೆ ಹಾಗೂ ಮೋದಿ ಪ್ರಧಾನಿ ಪಟ್ಟದಿಂದ ಕೆಳಗಿಳಿಯಬಹುದು ಎಂದು ಹೇಳುತ್ತಿದ್ದರು.

ವಿದೇಶಿ ವಿಶ್ಲೇಷಣಾಕಾರರ ಅಭಿಮತದಂತೆ ನರೇಂದ್ರ ಮೋದಿಯವರು ಒಬ್ಬ ಅಪರೂಪದ ರಾಜಕಾರಣಿ. ಆದರೆ ನಿರಂಕುಶ ಆಡಳಿತಗಾರನಲ್ಲ, ಬಿಜೆಪಿ ಸಮಯಕ್ಕೆ ತಕ್ಕಂತೆ ಬಾಗಲು ಸಿದ್ಧವಿರುವುದರಿಂದಲೇ ಅದು ಗೆಲ್ಲುತ್ತಿದೆಯೇ ಹೊರತು ಬೇರಾವ ವಾಮಮಾರ್ಗದಿಂದಲ್ಲ, ಪ್ರಧಾನಿ ನರೇಂದ್ರ ಮೋದಿಯವರು ಸ್ಥಿತಿಸ್ಥಾಪಕತ್ವ ಗುಣ ಹೊಂದಿರುವುದೇ ಅವರು ದೀರ್ಘಕಾಲ ಆಡಳಿತದಲ್ಲಿ ಉಳಿದಿರುವುದಕ್ಕೆ ಕಾರಣವಾಗಿದೆ. ಅವರು ಅತ್ಯಂತ ಕಠಿಣ ಆಡಳಿತಗಾರರಾಗಿ ಕಂಡುಬಂದರೂ ಅತ್ಯಂತ ಕೌಶಲದಿಂದ ಆಡಳಿತ ನಡೆಸುತ್ತಾರೆ. ನಿಜ, ಅವರಿಗೂ ಹಲವಾರು ಗುರಿಗಳಿವೆ. ಅದನ್ನು ಅವರು ಸಾಧಿಸಲೂ ಬಹುದು. ಆದರೆ ಅವರು ನೇರ ದಾರಿಯಲ್ಲಿ ನಡೆದು ಅದನ್ನು ಸಾಧಿಸಲಾಗದಂತೆ ಭಾರತೀಯ ವ್ಯವಸ್ಥೆಯಲ್ಲಿ ಹಲವಾರು ತೊಡಕುಗಳಿವೆ.

ಜರ್ಮನಿಯ ಚಾನ್ಸಲರ್ ಆಗಿ ಎಂಜೆಲಾ ಮಾರ್ಕೆಲ್ 5,860 ದಿನ ಆಡಳಿತ ನಡೆಸಿದ್ದರು. ಆಕೆಯ ದಾಖಲೆಯನ್ನು ಮುರಿಯಲು ಪ್ರಧಾನಿ ಮೋದಿಯವರು 2029ರ ಚುನಾವಣೆಯನ್ನೂ ಗೆಲ್ಲಬೇಕಾಗುತ್ತದೆ ಹಾಗೂ 2030ರ ಜೂನ್ 10ರ ವರೆಗೆ ತಮ್ಮ ಪ್ರಧಾನಿ ಪಟ್ಟವನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಇದೊಂದು ಅತೀ ದೊಡ್ಡ ಸವಾಲು. ಆದರೆ ಅವರು ಈ ಸವಾಲನ್ನು ಗೆಲ್ಲುವರೆಂದು ನಾನಂತೂ ಬೆಟ್ ಕಟ್ಟಬಲ್ಲೆ.

(ಲೇಖಕರು ಸಿಡ್ನಿ ವಿಶ್ವವಿದ್ಯಾಲಯದ ಪ್ರೊಫೆಸರ್)

ಕಿರುಸುದ್ದಿ

ನಾಳೆ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ

ದೊಡ್ಡಬಳ್ಳಾಪುರ: ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ವಕೀಲರ ಸಂಘ, ದೊಡ್ಡಬಳ್ಳಾಪುರ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯನ್ನು ಜೂ. 12 ರಂದು ಆಚರಿಸಲಾಗುತ್ತಿದೆ. ಬೆಳಗ್ಗೆ 9.30ಕ್ಕೆ ದೊಡ್ಡಬಳ್ಳಾಪುರ ತಾಲ್ಲೂಕಿನ ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದ ಬ್ಯಾಂಕ್ ಸರ್ಕಲ್ ಬಳಿ ಜಾಗೃತಿ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನಂತರ ದೊಡ್ಡಬಳ್ಳಾಪುರ ತಾಲ್ಲೂಕಿನ ಬಾಶೆಟ್ಟಿಹಳ್ಳಿಯ ಸರ್ಕಾರಿ ಪ್ರೌಢ ಶಾಲೆಯ ಕುಂಬ್ಳೆ ಶಾರದಮ್ಮ, ಕುಂಬ್ಳೆ ನಂಜುಂಡಯ್ಯನವರ ಸಭಾಂಗಣದಲ್ಲಿ ಬೆಳಗ್ಗೆ 10. 30ಕ್ಕೆ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿದೆ. ಜಿಲ್ಲಾ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾಗಿರುವ ಬಿ.ಎಸ್ ರೇಖಾ ಅವರು ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ -2026 ರ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಬಾಲಕಾರ್ಮಿಕರ ಯೋಜನಾ ಸೊಸೈಟಿ ಅಧ್ಯಕ್ಷರಾಗಿರುವ ಡಾ. ಕೆ. ಎನ್. ಅನುರಾಧ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀಶೈಲ ಭೀಮಸೇನ ಬಾಗಡಿ, ತಾಲ್ಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷೆ ನಿರ್ಮಲ ಕೆ, ತಾಲ್ಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿ ಡಿ. ಕ್ರಾಂತಿ ಕಿರಣ್ ಭಾಗವಹಿಸಲಿದ್ದಾರೆ.

ಈಚನೂರು ಸುತ್ತಮುತ್ತ ಕೊಳವೆಬಾವಿ ಕೇಬಲ್ ಕಳ್ಳತನ

ತಿಪಟೂರು: ತಾಲೂಕಿನ ಈಚನೂರು ಗ್ರಾಮ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೊಳವೆಬಾವಿಗಳಿಗೆ ಅಳವಡಿಸಲಾಗಿದ್ದ ವಿದ್ಯುತ್ ಕೇಬಲ್‌ಗಳ ಕಳ್ಳತನ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರೈತರು ತೀವ್ರ ಆತಂಕ ಮತ್ತು ಆಕ್ರೋಶ ವ್ಯಕ್ತಪಡಿಸಿದ್ದು, ಒಂದೇ ದಿನದಲ್ಲಿ 20ಕ್ಕೂ ಹೆಚ್ಚು ರೈತರ ಕೊಳವೆಬಾವಿ ಕೇಬಲ್‌ಗಳನ್ನು ಕಳ್ಳರು ಕತ್ತರಿಸಿ ಕೊಂಡೊಯ್ದಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದ್ದು, ಲಕ್ಷಾಂತರ ರೂಪಾಯಿ ಮೌಲ್ಯದ ನಷ್ಟ ಉಂಟಾಗಿದೆ ಎಂದು ರೈತರು ದೂರಿದ್ದಾರೆ. ಈಚನೂರು, ಸುತ್ತಮುತ್ತಲಿನ ಹಳ್ಳಿಗಳು ಹಾಗೂ ಕೃಷಿ ಪ್ರದೇಶಗಳಲ್ಲಿ ಜಮೀನುಗಳಿಗೆ ನೀರುಹಾಯಿಸಲು ಬಳಸುವ ಕೊಳವೆಬಾವಿಗಳಿಗೆ ಸ್ಟಾರ್ಟರ್ ಬಾಕ್ಸ್‌ನಿಂದ ಮೋಟಾರ್ ವರೆಗೆ ಅಳವಡಿಸಲಾಗಿದ್ದ ವಿದ್ಯುತ್ ಕೇಬಲ್‌ಗಳನ್ನು ದುಷ್ಕರ್ಮಿಗಳು ರಾತ್ರಿ ವೇಳೆ ಕಳ್ಳತನ ಮಾಡಿದ್ದಾರೆ. ಕೇಬಲ್‌ಗಳು ಮೇಲ್ಮುಖವಾಗಿ ಅಳವಡಿಸಲಾಗಿದ್ದ ಕಾರಣ ಕಳ್ಳರಿಗೆ ಅವುಗಳನ್ನು ಕತ್ತರಿಸಿ ಸಾಗಿಸಲು ಸುಲಭವಾಗಿರುವ ಸಾಧ್ಯತೆ ಇದೆ ಎಂದು ರೈತರು ಅಭಿಪ್ರಾಯಪಟ್ಟಿದ್ದಾರೆ. ಪ್ರತಿಯೊಬ್ಬ ರೈತರ ಜಮೀನಿನಿಂದ ಸರಾಸರಿ 15 ರಿಂದ 20 ಮೀಟರ್‌ಗಳಷ್ಟು ಕೇಬಲ್‌ಗಳನ್ನು ಕಳ್ಳತನ ಮಾಡಲಾಗಿದೆ. ಒಟ್ಟಾರೆ 20ಕ್ಕೂ ಹೆಚ್ಚು ರೈತರು ಈ ಕಳ್ಳತನದ ಬಲಿಯಾಗಿದ್ದು, ಸುಮಾರು 300 ಮೀಟರ್‌ಗಿಂತಲೂ ಹೆಚ್ಚಿನ ಕೇಬಲ್‌ಗಳು ಕಳ್ಳರ ಪಾಲಾಗಿವೆ ಎಂದು ಅಂದಾಜಿಸಲಾಗಿದೆ. ಕೇಬಲ್ ಕಳ್ಳತನವಾಗಿರುವ ಸಂಕಷ್ಟ ರೈತರಿಗೆ ಒಂದೆಡೆಯಾದರೆ ಪೊಲೀಸರ ನಡೆ ಮತ್ತೊಷ್ಟು ಸಂಕಷ್ಟ ಉಂಟುಮಾಡಿದೆ ಕಳ್ಳತನ ನಡೆದಿರುವ ಬಗ್ಗೆ ದೂರು ನೀಡಿದರೂ ಸಹ ಯಾವುದೇ ಪ್ರಕರಣಗಳನ್ನು ದಾಖಲಿಸಿಕೊಳ್ಳದೆ ತನಿಖೆಯನ್ನು ನಡೆಸದೆ ಮುಂದೂಡುತ್ತಿರುವುದು ಹಲವಾರು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಕಳ್ಳತನದ ಘಟನೆಗಳು ಬೆಳಕಿಗೆ ಬಂದ ನಂತರ ಹಲವು ರೈತರು ಒಟ್ಟಾಗಿ ತಿಪಟೂರು ಗ್ರಾಮಾಂತರ ಪೊಲೀಸ್ ಠಾಣೆಗೆ ತೆರಳಿ ದೂರು ಸಲ್ಲಿಸಲು ಮುಂದಾಗಿದ್ದಾರೆ. ಆದರೆ ತಮ್ಮ ದೂರಿಗೆ ಅಧಿಕಾರಿಗಳು ನಿರೀಕ್ಷಿತ ರೀತಿಯಲ್ಲಿ ಸ್ಪಂದಿಸುತ್ತಿಲ್ಲ ಎಂದು ರೈತರು ಆರೋಪಿಸಿದ್ದಾರೆ. ನಮ್ಮ ಜಮೀನಿನಲ್ಲಿ ಕಳ್ಳತನ ನಡೆದಿದೆ. ಕೃಷಿ ಕೆಲಸಗಳು ಸ್ಥಗಿತಗೊಂಡಿವೆ. ತಕ್ಷಣ ತನಿಖೆ ನಡೆಸಿ ಆರೋಪಿಗಳನ್ನು ಪತ್ತೆಹಚ್ಚಬೇಕೆಂದು ಮನವಿ ಮಾಡಿದರೂ ಸ್ಪಷ್ಟವಾದ ಕ್ರಮ ಕಾಣಿಸುತ್ತಿಲ್ಲ ಎಂದು ಕೇಬಲ್ ಕಳ್ಳತನಕ್ಕೊಳಗಾದ ರೈತರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಹದೇವಪ್ಪಗೆ ಸಚಿವ ಸ್ಥಾನ ನೀಡಿ

ಸೂಲಿಬೆಲೆ: ಸುದೀರ್ಘ ರಾಜಕಾರಣ ಜೊತೆಗೆ ಹಿಂದುಳಿದ ವರ್ಗಗಳ ಧ್ವನಿಯಾಗಿ ಹೋರಾಟ ಮಾಡಿದ್ದ ಹಿರಿಯ ಶಾಸಕ ಎಚ್.ಸಿ.ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಅಣ್ಣಯ್ಯ ಮನವಿ ಮಾಡಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಹೆಚ್.ಸಿ.ಮಹದೇವಪ್ಪ ಅವರು ಸಾಮಾಜಿಕ ನ್ಯಾಯದ ಪರವಾಗಿ, ಧ್ವನಿಇಲ್ಲದವರ ಪರವಾಗಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಸಿಂದ ಪರವಾಗಿ ಮುಖ್ಯವಾಗಿ ದಲಿತ ಚಳುವಳಿಗಳ ಜೊತೆ ಹೆಜ್ಜೆ ಹಾಕುವ ಮೂಲಕ ಅನೇಕ ಕಾಯಿದೆಗಳನ್ನು ತರಲು ಪ್ರಮುಖ ಪಾತ್ರ ವಹಿಸಿದ್ದಾರೆ. ಸದಾಕಾಲ ಸಿದ್ದರಾಮಯ್ಯ ಅವರ ಒಡನಾಡಿಯಾಗಿದ್ದ ಮಹದೇವಪ್ಪ ಅವರಿಗೆ ಸಚಿವ ಸ್ಥಾನ ಕೊಡಿಸದೆ ಸಿದ್ದರಾಮಯ್ಯ ಅವರು ಕೂಡ ದ್ರೋಹ ಮಾಡಿದಂತಾಗಿದೆ. ಇತ್ತೀಚೆಗೆ ನಡೆದ ಒಳಮೀಸಲಾತಿ ಹೋರಾಟದ ಸಂದರ್ಭದಲ್ಲಿ ಎಡ ಮತ್ತು ಬಲ ಪಂಗಡವನ್ನು ಒಟ್ಟಾಗಿ ಕರೆದುಕೊಂಡು ಹೋಗಿ ಕಾಯ್ದೆ ಜಾರಿಗೆ ತರಲು ಶ್ರಮಿಸಿದ್ದಾರೆ ಎಂದರು. ಆದ್ದರಿಂದ ಕೂಡಲೆ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಸಿಎಂ ಸಿದ್ದರಾಮಯ್ಯ ಅವರು ಕೂಡಲೆ ಮಹದೇವಪ್ಪ ಅವರಿಗೆ ಸಚಿವ ಸ್ಥಾನ ಕೊಡಿಸಬೇಕು. ಇಲ್ಲವಾದರೆ ಮುಂದಿನ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ , ಗ್ರಾಮ ಪಂಚಾಯತ್ ಚುನಾವಣೆಗಳಲ್ಲಿ ಹಾಗೂ 2028ರ ವಿಧಾನಸಭಾ ಚುನಾವಣೆಯಲ್ಲಿ ಸಹ ದಲಿತ ಸಮುದಾಯ ಕಾಂಗ್ರೆಸ್ ಪಕ್ಷಕ್ಕೆ ತಕ್ಕಪಾಠ ಕಲಿಸುತ್ತದೆ ಎಂದು ಎಚ್ಚರಿಕೆ ಸಹ ನೀಡುತ್ತಿದ್ದೇವೆ ಎಂದರು.

ದಸಂಸ ಬೆಂಗಳೂರು ವಿಭಾಗೀಯ ಸಂಚಾಲಕ ಮಂಜುನಾಥ್ ಅಣ್ಣಯ್ಯ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಚಾಲಕ ಲೋಕೇಶ್, ತಾಲೂಕು ಸಂಚಾಲಕ ಎಸ್.ನಾರಾಯಣಸ್ವಾಮಿ ಹಾಜರಿದ್ದರು.

ಶಿವನಾಪುರ ಪಂಚಾಯಿತಿ ವ್ಯಾಪ್ತಿಯಲ್ಲಿ ಮೂಲಸೌಕರ್ಯ ಕೊರತೆ | ಅಧಿಕಾರಿಗಳದ್ದು ಮಾತ್ರ ಜಾಣ ಧೋರಣೆ

ಕುಡಿಯುವ ನೀರಿಗೂ ಸ್ಥಳೀಯರ ಪರದಾಟ

ತಾವರೆಕೆರೆ ಟಿ.ನಾಗರಾಜ್

ತಾವರೆಕೆರೆ: ಹೊಸಕೋಟೆ ತಾಲೂಕಿನ ನಂದಗುಡಿ ಹೋಬಳಿಯ ಶಿವನಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮೂಲ ಸೌಕರ್ಯಗಳ ಕೊರತೆಯಿಂದ ಗ್ರಾಮಸ್ಥರು ಸಂಕಷ್ಟ ಅನುಭವಿಸುತ್ತಿದ್ದಾರೆ.

ಶಿವನಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಶಿವನಾಪುರ, ಗಂಜಿಲಹಳ್ಳಿ, ಮಾಲಿಯಪ್ಪನಹಳ್ಳಿ, ಭೀಮಾಪುರ, ಕೊರಡಹಳ್ಳಿ, ಮೊತಕದಹಳ್ಳಿ, ಹರಳನಹಳ್ಳಿ, ಸಿ.ಟಿ. ಗೊಲ್ಲಹಳ್ಳಿ, ಡಿ. ಶೆಟ್ಟಹಳ್ಳಿ, ದೊಡ್ಡೇನಹಳ್ಳಿ, ಸತ್ಯವಾರ, ಎಂ. ಹೊಸಹಳ್ಳಿ ಹಾಗೂ ಬಿಸನಹಳ್ಳಿ ಸೇರಿದಂತೆ 13 ಗ್ರಾಮಗಳು ಒಳಪಟ್ಟಿವೆ. ಸುಮಾರು 9,500ಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ ಈ ಪಂಚಾಯಿತಿಯಲ್ಲಿ 23 ಚುನಾಯಿತ ಸದಸ್ಯರಿದ್ದಾರೆ.

ಪಂಚಾಯಿತಿಗೆ ವರ್ಷಕ್ಕೆ ಲಕ್ಷಾಂತರ ರೂಪಾಯಿ ತೆರಿಗೆ ಸಂಗ್ರಹವಾಗುತ್ತಿದ್ದರೂ, ಹಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ, ಚರಂಡಿ ಸ್ವಚ್ಛತೆ ಕೊರತೆ, ಬೀದಿ ದೀಪಗಳ ನಿರ್ವಹಣೆಯ ಅಭಾವ ಹಾಗೂ ರಸ್ತೆ ಸಮಸ್ಯೆಗಳು ಜನರನ್ನು ಕಾಡುತ್ತಿವೆ. ಹಲವೆಡೆ ಚರಂಡಿಯ ನೀರು ರಸ್ತೆ ಮೇಲೆ ಹರಿಯುತ್ತಿದ್ದು, ದುರ್ವಾಸನೆಯಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ.

ಗ್ರಾಮಸ್ಥರ ಆರೋಪದಂತೆ, ಸಮಸ್ಯೆಗಳ ಬಗ್ಗೆ ಹಲವು ಬಾರಿ ಅಧಿಕಾರಿಗಳ ಗಮನಕ್ಕೆ ತಂದರೂ ಶಾಶ್ವತ ಪರಿಹಾರ ದೊರಕಿಲ್ಲ. ಇದರಿಂದ ಸರ್ಕಾರ ಮತ್ತು ಸ್ಥಳೀಯ ಆಡಳಿತದ ಮೇಲಿನ ಜನರ ನಂಬಿಕೆ ಕುಗ್ಗುತ್ತಿದೆ. ಪಂಚಾಯಿತಿ ಚುನಾವಣೆಗಳು ವಿಳಂಬವಾಗುತ್ತಿರುವುದರಿಂದ ಜನಪ್ರತಿನಿಧಿಗಳ ಕೊರತೆ ಕೂಡ ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆಯಾಗುತ್ತಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಗ್ರಾಮದಲ್ಲಿ ಕುಡಿಯುವ ಶುದ್ಧ ನೀರಿನ ಘಟಕ ಕಳೆದ ಸುಮಾರು ಆರು ತಿಂಗಳಿನಿಂದ ಕೆಟ್ಟು ನಿಂತಿದ್ದು, ಜನರು ಶುದ್ಧ ಕುಡಿಯುವ ನೀರಿಗಾಗಿ ಪರದಾಡುವಂತಾಗಿದೆ. ಸಮರ್ಪಕ ಚರಂಡಿ ವ್ಯವಸ್ಥೆಯ ಕೊರತೆಯಿಂದ ಮಳೆ ಬಂದರೂ, ಬಾರದಿದ್ದರೂ ಗ್ರಾಮದ ಮಧ್ಯಭಾಗದ ರಸ್ತೆಯ ಮೇಲೆ ನೀರು ಹರಿಯುತ್ತಲೇ ಇರುತ್ತದೆ. ಈ ಸಮಸ್ಯೆಯಿಂದ ಗ್ರಾಮಸ್ಥರು ಹಾಗೂ ಶಾಲಾ ವಾಹನಗಳಲ್ಲಿ ಸಂಚರಿಸುವ ಮಕ್ಕಳು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಹಲವು ಬಾರಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಗ್ರಾಮದ ನ್ಯಾಯಬೆಲೆ ಅಂಗಡಿ ಇದ್ದರೂ, ಸುಮಾರು 2.3 ಕಿಲೋಮೀಟರ್ ದೂರದ ಮೊತಕದಹಳ್ಳಿ ಗ್ರಾಮಕ್ಕೆ ಪಡಿತರ ಪಡೆಯಲು ತೆರಳಬೇಕಾದ ಪರಿಸ್ಥಿತಿ ಇದೆ. ಸರ್ವರ್ ಸಮಸ್ಯೆಗಳು ಎದುರಾದಾಗ ಎರಡು ಅಥವಾ ಮೂರು ಬಾರಿ ಅಲೆದಾಡಬೇಕಾಗುತ್ತದೆ. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಗಮನಹರಿಸಿಲ್ಲ ಎಂದು ಗ್ರಾಮಸ್ಥ ನಾಗೇಶ್ ಅವರು ಆಕ್ರೋಶ ವ್ಯಕ್ತಪಡಿಸಿದರು.

ಶಿವನಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅನೇಕ ಗ್ರಾಮಗಳಲ್ಲಿ ಬೀದಿ ದೀಪ, ಕಸ ವಿಲೇವಾರಿ, ಕುಡಿಯುವ ನೀರು, ಶಾಲೆ ಹಾಗೂ ಆರೋಗ್ಯ ಸಂಬಂಧಿತ ಸಮಸ್ಯೆಗಳು ಮುಂದುವರಿದಿವೆ. ಇದರಿಂದ ಗ್ರಾಮಸ್ಥರಲ್ಲಿ ಸರ್ಕಾರದ ಮೇಲಿನ ನಂಬಿಕೆ ಕುಗ್ಗುತ್ತಿದ್ದು, ಪಂಚಾಯಿತಿ ಚುನಾವಣೆ ವಿಳಂಬವಾಗುತ್ತಿರುವುದರಿಂದ ಅಭಿವೃದ್ಧಿ ಕಾರ್ಯಗಳು ಹಿನ್ನಡೆ ಅನುಭವಿಸುತ್ತಿವೆ ಎಂಬ ಅಭಿಪ್ರಾಯವೂ ವ್ಯಕ್ತವಾಗುತ್ತಿದೆ.

ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ವೆಂಕಟರಮಣಪ್ಪ ಮಾತನಾಡಿ, ರಾಜ್ಯದಲ್ಲಿ ಹೊಸ ಮುಖ್ಯಮಂತ್ರಿಗಳು ಅಧಿಕಾರ ವಹಿಸಿಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ನಡೆಸಿದರೆ ಗ್ರಾಮಗಳ ಅಭಿವೃದ್ಧಿಗೆ ವೇಗ ಸಿಗಲಿದೆ ಎಂದು ಆಶಾಭಾವನೆ ವ್ಯಕ್ತಪಡಿಸಿದರು.



ದಿಗಂತ ವಿಶೇಷ

ಅಧಿಕಾರಿಗಳ ಸ್ಪಷ್ಟನೆ

ಶಿವನಾಪುರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗೋವಿಂದೇಗೌಡ ಪ್ರತಿಕ್ರಿಯಿಸಿ, ಪಂಚಾಯಿತಿಗೆ ವರ್ಷಕ್ಕೆ ಸುಮಾರು 77 ಲಕ್ಷಕ್ಕೂ ಅಧಿಕ ತೆರಿಗೆ ಸಂಗ್ರಹವಾಗುತ್ತಿದೆ. ಆದರೆ 2025-26ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನ ಬಿಡುಗಡೆಯಾಗಿಲ್ಲ, ಗ್ರಾಮಗಳ ಸಮಸ್ಯೆಗಳನ್ನು ಪರಿಹರಿಸಲು ಕ್ರಿಯಾ ಯೋಜನೆ ಸಿದ್ಧಪಡಿಸಿ ಅನುಮತಿ ಪಡೆಯಲಾಗಿದೆ. ನೀರಿನ ಸಮಸ್ಯೆ ಇರುವ ಗ್ರಾಮಗಳಿಗೆ ಖಾಸಗಿ ಬೋರ್‌ವೆಲ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಬೀದಿ ದೀಪ, ಚರಂಡಿ ಸ್ವಚ್ಛತೆ ಸೇರಿದಂತೆ ಕೆಲವು ಕಾಮಗಾರಿಗಳನ್ನು ಈಗಾಗಲೇ ಕೈಗೆತ್ತಿಕೊಳ್ಳಲಾಗಿದ್ದು, ಉಳಿದ ಸಮಸ್ಯೆಗಳನ್ನೂ ಹಂತ ಹಂತವಾಗಿ ಪರಿಹರಿಸಲಾಗುವುದು ಎಂದು ತಿಳಿಸಿದರು.

ಪ್ರೊ. ಕೃಷ್ಣಪ್ಪ ಜಯಂತಿ ಆಚರಣೆ



ದೇವನಹಳ್ಳಿ: ಪಟ್ಟಣದ ಪರಿವೀಕ್ಷಣಾ ಮಂದಿರದ ಸಭಾಂಗಣದಲ್ಲಿ ಬಹುಜನ ಹಾಗೂ ದಲಿತ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ದಲಿತ ಜ್ಯೋತಿ, ಧೀಮಂತ ನಾಯಕ ಪ್ರೊಫೆಸರ್ ಬಿ. ಕೃಷ್ಣಪ್ಪ ಅವರ 88ನೇ ಜನ್ಮಜಯಂತಿಯನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಡಾ. ಬಿ.ಆರ್. ಅಂಬೇಡ್ಕರ್ ಬಹುಜನ ಸಂಘರ್ಷ ಸಮಿತಿ (ಎಬಿಎಸ್‌ಎಸ್) ರಾಜ್ಯಾಧ್ಯಕ್ಷ ಹೆಗ್ಗನಹಳ್ಳಿ ಮುನಿರಾಜು, ಪ್ರೊ. ಬಿ. ಕೃಷ್ಣಪ್ಪ ಅವರು 1974ರಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯನ್ನು ಸ್ಥಾಪಿಸಿ ದಲಿತರು, ಹಿಂದುಳಿದ ವರ್ಗಗಳು ಹಾಗೂ ರೈತರ ಹಕ್ಕುಗಳಿಗಾಗಿ ನಿರಂತರ ಹೋರಾಟ ನಡೆಸಿದ ಮಹಾನ್ ನಾಯಕರು ಎಂದು ಸ್ಮರಿಸಿದರು. ಅವರ ಹೋರಾಟದ ಫಲವಾಗಿ ಸಂವಿಧಾನಬದ್ಧ ಹಕ್ಕುಗಳು ಸಮಾಜದ ತಳಮಟ್ಟದ ಜನರಿಗೆ ತಲುಪುವಂತಾಯಿತು ಎಂದರು.

ಪ್ರೊ. ಬಿ. ಕೃಷ್ಣಪ್ಪ ಅವರ ಆದರ್ಶಗಳು, ಸಾಮಾಜಿಕ ನ್ಯಾಯದ ಚಿಂತನೆಗಳು ಮತ್ತು ಹೋರಾಟದ ಮನೋಭಾವವನ್ನು ಪ್ರತಿಯೊಬ್ಬರೂ ಅಳವಡಿಸಿಕೊಂಡು ಸಮಾನತೆಯ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಅವರು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಮಾದಿಗ ಸಂಘಟನೆಗಳ ಒಕ್ಕೂಟದ ರಾಜ್ಯ ಸಂಚಾಲಕ ಬೆಂಗಳೂರು ಕೇಶವಮೂರ್ತಿ, ಬಹುಜನ ಸೇವಾ ಸಮಿತಿಯ ರಾಜ್ಯಾಧ್ಯಕ್ಷ ಹಾಗೂ ಪತ್ರಕರ್ತ ಪೂಜಪ್ಪ, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಕಾರಹಳ್ಳಿ ಶ್ರೀನಿವಾಸ್, ಕಿತ್ತೂರು ರಾಣಿ ಚನ್ನಮ್ಮ ಮಹಿಳಾ ಅಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷೆ ಉಮಾಮಹೇಶ್ವರಿ, ಹಿರಿಯ ಹೋರಾಟಗಾರ ಹಾಗೂ ಸಾಹಿತಿ ರಾಮಣ್ಣ, ಕರ್ನಾಟಕ ಮಾದಿಗ ದಂಡೋರ ಜಿಲ್ಲಾ ಅಧ್ಯಕ್ಷ ಜಿ. ಮಾರಪ್ಪ, ಕಲ್ಲುವಾರಿ ಪ್ರಾರ್ಥನಾ ಮಂದಿರದ ಅಧ್ಯಕ್ಷ ಎಂ. ನಂಜೇಮರಿ, ಬಿಎಸ್‌ಎಸ್ ರಾಜ್ಯ ಕಾರ್ಯಾಧ್ಯಕ್ಷ ಬಿ.ವಿ. ರವಿಕುಮಾರ್, ಅಕ್ಕಯ್ಯಮ್ಮ, ರಾಜ್ಯ ಸಮಿತಿ ಸದಸ್ಯ ಬೊಮ್ಮವಾರ ಮಂಜುನಾಥ್ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾರಹಳ್ಳಿ ಮುನಿರಾಜು ಸೇರಿದಂತೆ ವಿವಿಧ ಸಂಘಟನೆಗಳ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಪದಾಧಿಕಾರಿಗಳು, ಸದಸ್ಯರು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು.

ಮುಚ್ಚುವ ಹಂತದಲ್ಲಿ ಸರ್ಕಾರಿ ಶಾಲೆ | ಶಿಕ್ಷಕರ ಬೇಸರ

ಒಬ್ಬ ವಿದ್ಯಾರ್ಥಿಗೆ ಓರ್ವ ಶಿಕ್ಷಕ!





ಕುಣಿಗಲ್: ಸರ್ಕಾರಿ ಶಾಲೆಗಳ ಉಳಿವಿಗಾಗಿ ಖಾಸಗಿ ಶಾಲೆಗಳಿಗೆ ಪೈಪೋಟಿಯಾಗಿ ಸರ್ಕಾರ ದ್ವಿಭಾಷಾ ಮಾಧ್ಯಮ ಆರಂಭಿಸಿದ್ದರೂ ಶಾಲೆಗಳಲ್ಲಿ ಹಾಜರಾತಿ ಸಂಖ್ಯೆ ಹೆಚ್ಚಾಗದೆ ವರ್ಷ ದಿಂದ ವರ್ಷಕ್ಕೆ ಇಳಿಮುಖ ವಾಗುತ್ತಿರುವುದರಿಂದ ಸರ್ಕಾರಿ ಶಾಲೆಗಳ ಮುಚ್ಚುವ ಹಂತ ತಲುಪುತ್ತಿವೆ ಎಂದು ಶಿಕ್ಷಕರು ಬೇಸರ ವ್ಯಕ್ತಪಡಿಸಿದರು.

ಸರ್ಕಾರ ಸರ್ಕಾರಿ ಶಾಲೆಗಳ ಉಳಿವಿಗಾಗಿ ಮತ್ತು ಹಾಜರಾತಿ ಸಂಖ್ಯೆ ಹೆಚ್ಚಿಸಲು, ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಮಧ್ಯಾಹ್ನದ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ ಪಠ್ಯಪುಸ್ತಕಗಳ ಜೊತೆ ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದರೂ ಪೋಷಕರು ಮಾತ್ರ ಖಾಸಗಿ ಶಾಲೆಗಳತ್ತ ಮುಖ ಮಾಡುತ್ತಾ ನಮ್ಮೂರ ಶಾಲೆಗಳನ್ನು ಕಡೆಗಣಿಸುತ್ತಿದ್ದಾರೆ.

ಇದರಿಂದ ನಮ್ಮೂರಿನ, ನಮ್ಮ ಪೂರ್ವಿಕರು ಓದಿದ ಶಾಲೆ ಮುಚ್ಚುವ ಹಂತದಲ್ಲಿವೆ ಇದಕ್ಕೆ ತಾಲ್ಲೂಕಿನ ಯಡಿಯೂರು ಹೋಬಳಿ ಕಣಗುಣಿ ಮತ್ತು ಅವರ ಗೆರೆ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಗಳು ತಾಜಾ ಉದಾಹರಣೆ ಯಾಗಿವೆ.

ಕಣಗುಣಿ ಗ್ರಾಮ ಮಾಜಿ ಸಚಿವ ಡಿ. ನಾಗರಾಜಯ್ಯನವರ ಮತ್ತು ಬಿಜೆಪಿ ಮುಖಂಡ ಕೃಷ್ಣಕುಮಾರ್‌ರವರ ಸ್ವಗ್ರಾಮ 1961ರಲ್ಲಿ ಆರಂಭವಾದ ಶಾಲೆ, ಶಾಲೆಯ ಕಟ್ಟಡವು ತುಂಬಾ ಚೆನ್ನಾಗಿದೆ, ಶಿಕ್ಷಕರು ಉತ್ಸುಕರಾಗಿದ್ದಾರೆ ಆದರೆ ಒಬ್ಬನೇ ವಿದ್ಯಾರ್ಥಿ ಒಬ್ಬರೇ ಶಿಕ್ಷಕರು ಕಳೆದ ವರ್ಷ ಮೂರು ಮಕ್ಕಳಿದ್ದರೂ ಈ ಬಾರಿ ಎರಡನೇ ತರಗತಿ ವ್ಯಾಸಂಗ ಮಾಡುತ್ತಿರುವ ಸಮರ್ಥ ಎಂಬ ಒಬ್ಬನೇ ವಿದ್ಯಾರ್ಥಿ ಇದ್ದಾನೆ.

ಅವರಗೆರೆ ಶಾಲೆ 1960ರಲ್ಲಿ ಪ್ರಾರಂಭಗೊಂಡು ಕೊರೋನದ ವರ್ಷದವರೆಗೂ 13 ರಿಂದ 14 ವಿದ್ಯಾರ್ಥಿಗಳಿದ್ದರೂ ಇಂದು ಕೇವಲ ಎರಡನೇ ತರಗತಿ ವ್ಯಾಸಂಗ ಮಾಡುತ್ತಿರುವ ಸುಚಿತ್ ಮತ್ತು ಮಣಿಕಾಂತ ಎಂಬ ಇಬ್ಬರು ವಿದ್ಯಾರ್ಥಿಗಳಿದ್ದಾರೆ, ಇಂದು ಶಾಲೆಯಲ್ಲಿ ಒಬ್ಬ ವಿದ್ಯಾರ್ಥಿ ಮಾತ್ರ ಹಾಜರಿದ್ದನು ಒಬ್ಬರೇ ಶಿಕ್ಷಕರು, ಇಲ್ಲಿ ಶಾಲಾ ಕೊಠಡಿ ಮಳೆ ಬಂದರೆ ಸಾಕು ಸೋರುತ್ತಿದೆ, ಬಿಸಿಯೂಟದ ಕೊಠಡಿಯ ಮೇಲ್ ಚಾವಣಿ ಯಲ್ಲಿ ಸಿಮೆಂಟ್ ಚಕ್ಕೆಗಳು ಉದುರಿ ಬೀಳುತ್ತಿವೆ, ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ರಿಪೇರಿ ಮಾಡಿಕೊಡಲು ಅರ್ಜಿ ಕೊಟ್ಟರು ಪ್ರಯೋಜನವಾಗಿಲ್ಲ ಎಂದು ಶಿಕ್ಷಕರು ತಿಳಿಸಿದ್ದಾರೆ ಕಟ್ಟಡ ರಿಪೇರಿ ಆಗಬೇಕಾಗಿದೆ ಇಲ್ಲೂ ಶಿಕ್ಷಕರು ಬಹಳ ಆಸಕ್ತಿಯಿಂದ ಇದ್ದಾರೆ ಆದರೆ ಈ ಬಾರಿ ಈ ಗ್ರಾಮದಲ್ಲಿ ಶಾಲೆಗೆ ಸೇರುವ ಮಕ್ಕಳಿಲ್ಲದೆ ಹಾಜರಾತಿ ಇಳಿಮುಖವಾಗಿದೆ ಶಾಲೆ ಮುಚ್ಚುವ ಹಂತ ತಲುಪಿದೆ.

ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುತ್ತಿಲ್ಲ

ಬಿಇಒ ಮಮತಾ ಮಣಿ ಮಾತನಾಡಿ, ನಮ್ಮ ಸರ್ಕಾರಿ ಶಾಲೆಗಳಲ್ಲಿ ಉತ್ತಮ ಶಿಕ್ಷಕರಿದ್ದಾರೆ, ಸರ್ಕಾರ ಶಾಲಾ ಅಭಿವೃದ್ಧಿಗೆ ಮತ್ತು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಎಲ್ಲವನ್ನು ಉಚಿತವಾಗಿ ನೀಡುತ್ತಿದೆ, ಕೆಲವು ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ತರಗತಿಗಳು ನಡೆಯುತ್ತಿವೆ. ಈ ವರ್ಷದಿಂದ ಒಂದ ರಿಂದ ಐದನೇ ತರಗತಿಯವರೆಗೆ ಎಲ್ಲಾ ಶಾಲೆಗಳಲ್ಲೂ ದ್ವಿಭಾಷಾ ಮಾಧ್ಯಮ ಆರಂಭಿಸಿದ್ದೇವೆ ಸರ್ಕಾರಿ ಶಾಲೆಗಳಲ್ಲಿ ಶಾಲಾ ಹಾಜರಾತಿ ಹೆಚ್ಚಿಸಲು ನಾವು ಮತ್ತು ನಮ್ಮ ಶಿಕ್ಷಕರು ಸಾಕಷ್ಟು ಶ್ರಮ ಹಾಕಿದ್ದೇವೆ ಆದರೂ ಪೋಷಕರು ಸರ್ಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಲು ಮುಂದಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮೋದಿ ಹೆಸರಿನಲ್ಲಿ ಪೂಜೆ, ಸಿಹಿ ವಿತರಣೆ



ವಿಜಯಪುರ: ಮೋದಿ ನೇತೃತ್ವದ ಕೇಂದ್ರ ಸರ್ಕಾರ ಬಡವರ ಜೀವನಮಟ್ಟ ಸುಧಾರಣೆಗೆ ಹಲವು ಜನಪರ ಯೋಜನೆಗಳನ್ನು ಜಾರಿಗೆ ತಂದಿದೆ. ಜನರು ಈ ಯೋಜನೆಗಳ ಸದುಪಯೋಗ ಪಡೆದು ಆರ್ಥಿಕವಾಗಿ ಮತ್ತಷ್ಟು ಅಭಿವೃದ್ಧಿ ಹೊಂದಬೇಕು ಎಂದು ಬಿಜೆಪಿ ಟೌನ್ ಘಟಕದ ಅಧ್ಯಕ್ಷ ವೆಂಕಟೇಶ ಪ್ರಭು ತಿಳಿಸಿದರು.

ಪ್ರಧಾನಿ ಮೋದಿ ಅವರು ಅಧಿಕಾರ ವಹಿಸಿಕೊಂಡು 12 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಪಟ್ಟಣದ ಓಂಕಾರೇಶ್ವರಸ್ವಾಮಿ ದೇವಾಲಯದಲ್ಲಿ ಬಿಜೆಪಿ ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಸಿಹಿ ವಿತರಿಸಿ ಮಾತನಾಡಿದರು. ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಅಭಿವೃದ್ಧಿಗಾಗಿ ಹಲವು ಮಹತ್ವದ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಸ್ವಚ್ಛತೆ, ಡಿಜಿಟಲ್ ತಂತ್ರಜ್ಞಾನ, ಮೂಲಸೌಕರ್ಯ ಮತ್ತು ಬಡವರ ಕಲ್ಯಾಣಕ್ಕೆ ಒತ್ತು ನೀಡುವ ಮೂಲಕ ಭಾರತದ ಪ್ರಗತಿಗೆ ಕೊಡುಗೆ ನೀಡಿದ್ದಾರೆ ಎಂದರು. ಪ್ರಧಾನಿ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರವು ಬಡವರ ಕಲ್ಯಾಣಕ್ಕೆ ವಿಶೇಷ ಒತ್ತು ನೀಡಿದೆ. ಬಡ ಮತ್ತು ಹಿಂದುಳಿದ ವರ್ಗಗಳ ಜೀವನಮಟ್ಟ ಸುಧಾರಿಸಲು ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಈ ಯೋಜನೆಗಳು ಬಡ ಜನರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ನೆರವಾಗಿವೆ ಎಂದರು.

ಬಿಜೆಪಿ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಧರ್ಮಪುರ ಅನಿಲ್ ಮಾತನಾಡಿ, ಮೋದಿ ಅವರ ಆಡಳಿತಾವಧಿಯಲ್ಲಿ ಮೂಲಸೌಕರ್ಯ, ಡಿಜಿಟಲ್ ಕ್ರಾಂತಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿ ಕಂಡುಬಂದಿದೆ. ಆಡಳಿತದ ದಕ್ಷತೆಯಿಂದ ಸರ್ಕಾರದ ಮೇಲಿನ ಸಾರ್ವಜನಿಕರ ವಿಶ್ವಾಸ ಹೆಚ್ಚಾಗಿದೆ ಎಂದು ಹೇಳಿದರು.

ಬುಲೆಟ್ ರಾಮಚಂದ್ರಪ್ಪ, ಆಟೋಮೊಬೈಲ್ ನಾರಾಯಣಸ್ವಾಮಿ, ದಿನೇಶ್, ಚಂದ್ರಣ್ಣ, ಮುನಿಸೊಣ್ಣೇಗೌಡ, ಸೊಣ್ಣೇಗೌಡ, ವೀಣಾ, ತಾಯಮ್ಮ, ವರದರಾಜು, ಚಂದ್ರಶೇಖರ್, ರಾಘವ, ಅಜಿತ್, ಸಾಗರ್, ಪುರ ಚಂದ್ರು ಇದ್ದರು.

ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ವಿನೋದ್ ರಾಜ್ ಮನವಿ

ಪ್ರಕೃತಿ ಸಂರಕ್ಷಣೆಯ ಕಾಳಜಿ ಬೆಳೆಸಿ

ನೆಲಮಂಗಲ: ವಿದ್ಯಾರ್ಥಿಗಳಲ್ಲಿ ಬಾಲ್ಯದಿಂದಲೇ ಪ್ರಕೃತಿಯ ಬಗ್ಗೆ ಕಾಳಜಿ ಬೆಳೆಸಿದರೆ, ಅವರು ಪರಿಸರದ ಸಂರಕ್ಷಣೆ ಮತ್ತು ಪೋಷಣೆಯ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುತ್ತಾರೆ ಎಂದು ನಟ ವಿನೋದ್ ರಾಜ್ ಹೇಳಿದರು.

ತಾಲೂಕಿನ ಗೊಲ್ಲಹಳ್ಳಿ ಹಿತಚಿಂತನ್ ಪಬ್ಲಿಕ್ ಶಾಲೆಯ ಆವರಣದಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಸಸಿ ನೆಟ್ಟು ಮಾತನಾಡಿದ ಅವರು, ಪರಿಸರವನ್ನು ಉಳಿಸುವ ಮೂಲಕ ಉತ್ತಮ ಭವಿಷ್ಯ ನಿರ್ಮಿಸಲು ಸಾಧ್ಯವೆಂದರು. ಬೆಂಗಳೂರು ನಗರದ ಗದ್ದಲಮಯ ಜೀವನವನ್ನು ಬಿಟ್ಟು ಸೋಲದೇವನಹಳ್ಳಿಯ ಪ್ರಕೃತಿಯ ಮಡಿಲಿನಲ್ಲಿ ನೆಲೆಸಿರುವುದಾಗಿ ತಿಳಿಸಿದ ಅವರು, ತಮ್ಮ ತೋಟದಲ್ಲಿ ನೂರಾರು ಮರಗಳನ್ನು ಬೆಳೆಸಿದ್ದು, ಸಾವಿರಾರು ಪಕ್ಷಿಗಳು ಹಾಗೂ ಪ್ರಾಣಿಗಳಿಗೆ ಆಶ್ರಯ ಕಲ್ಪಿಸಿರುವುದಾಗಿ ಹೇಳಿದರು. ಇಂದಿನ ಮಕ್ಕಳು ಪ್ರಕೃತಿಯ ಬಗ್ಗೆ ಕಾಳಜಿ ವಹಿಸಿದರೆ ಮಾತ್ರ ಮುಂದಿನ ಪೀಳಿಗೆಯವರು ಆರೋಗ್ಯವಂತ ಜೀವನ ನಡೆಸಲು ಸಾಧ್ಯ. ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಮೊದಲ ಜವಾಬ್ದಾರಿಯಾಗಬೇಕು ಎಂದು ಕರೆ ನೀಡಿದರು. ಹಿತ ಚಿಂತನ್ ಚಾರಿಟಬಲ್ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ರಾಮಸ್ವಾಮಿ ಮಾತನಾಡಿ, ಮಕ್ಕಳ ಸರ್ವತೋಮುಖ ಬೆಳವಣಿಗೆಯ ಜೊತೆಗೆ ಸಾಮಾಜಿಕ ಜವಾಬ್ದಾರಿ ಹಾಗೂ ಪರಿಸರದ ಬಗ್ಗೆ ಅರಿವು ಮೂಡಿಸುವುದು ಶಿಕ್ಷಣ ಸಂಸ್ಥೆಗಳ ಪ್ರಮುಖ ಕರ್ತವ್ಯವಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳು ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಂಡು ಸಮಾಜಕ್ಕೆ ಆದರ್ಶ ವ್ಯಕ್ತಿಗಳಾಗಬೇಕು. ಪರಿಸರ ಸಂರಕ್ಷಣೆಯಲ್ಲಿ ನಟ ವಿನೋದ್ ರಾಜ್ ಅವರ ಪಾತ್ರ ಮಹತ್ವದ್ದಾಗಿದ್ದು, ಅವರು ಕಾರ್ಯಕ್ರಮಕ್ಕೆ ಆಗಮಿಸಿ ಮಕ್ಕಳಿಗೆ ಮಾರ್ಗದರ್ಶನ ನೀಡಿರುವುದು ಸಂತಸದ ವಿಷಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಕಾರ್ಯದರ್ಶಿ ರಮೇಶ್, ಪ್ರಾಂಶುಪಾಲ ಗಿರೀಶ್ ವಿ. ಗಾಣಿಗ್ಗರ್, ಕೋ-ಆರ್ಡಿನೇಟರ್ ಶೋಭಾ, ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಚೆಕ್ ವಿತರಣೆ

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಗಿಡಗಳನ್ನು ನೆಟ್ಟು ಅವುಗಳ ಪೋಷಣೆ ಮತ್ತು ಸಂರಕ್ಷಣೆಯ ಜವಾಬ್ದಾರಿ ವಹಿಸಿಕೊಂಡಿದ್ದ ವೃಕ್ಷಪೋಷಕ ಕುಟುಂಬಗಳ ವಿದ್ಯಾರ್ಥಿಗಳಿಗೆ ಟ್ರಸ್ಟ್ ವತಿಯಿಂದ ಆರ್ಥಿಕ ನೆರವಿನ ಚೆಕ್‌ಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಯ ಬಗ್ಗೆ ಪ್ರತಿಜ್ಞೆ ಸ್ವೀಕರಿಸಿದರು.

ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಎಸ್. ಮುರಳೀಧರ ಕಿವಿಮಾತು

ಎಲ್ಲರೂ ತಾಯಿ ಹೆಸರಲ್ಲಿ ಒಂದು ಗಿಡ ನೆಡಿ

ತಾವರೆಕೆರೆ: ಭವಿಷ್ಯದ ಸುಭದ್ರದೇಶದ ನಿರ್ಮಾಣಕ್ಕಾಗಿ ತಾಯಿಯ ಹೆಸರಲ್ಲಿ ಒಂದುಗಿಡ ನೆಡಬೇಕು ಎಂದು ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಎಸ್. ಮುರಳೀಧರ ತಿಳಿಸಿದರು.

ಹೊಸಕೋಟೆ ತಾಲೂಕಿನ ಅನುಪಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವಪರಿಸರ ದಿನಾಚರಣೆ ಅಂಗವಾಗಿ ಶಾಲಾ ಆವರಣದಲ್ಲಿ ದೇಶದ ಹೆಮ್ಮೆಯ ಪ್ರಧಾನಮಂತ್ರಿಗಳಾದ ಮೋದೀಜಿಯವರ ಆಶಯದಂತೆ ತಾಯಿಯ ಹೆಸರಲ್ಲಿ ಗಿಡನೆಡುವ ಮತ್ತು ವಿತರಿಸುವ ಹಾಗೂ ವಿದ್ಯಾರ್ಥಿಗಳಿಗೆ ಪಠ್ಯ ಪರಿಕರ ಲೇಖನ ಸಾಮಗ್ರಿ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಜನಸಂಖ್ಯೆ ಹೆಚ್ಚಾದಂತೆ ವಸತಿ ನಿರ್ಮಾಣಕ್ಕಾಗಿ ನಗರೀಕರಣಕ್ಕಾಗಿ ಮರಗಳ ಮಾರಣಹೋಮ ಅರಣ್ಯ ನಾಶ ಹೆಚ್ಚಾಗಿದ್ದು ಜಾಗತಿಕ ತಾಪಮಾನ ಕೂಡ ಅಧಿಕವಾಗಿ ಪರಿಸರದ ಅಸಮತೋಲನ ಉಂಟಾಗಿ ಅತಿವೃಷ್ಟಿ ಅನಾವೃಷ್ಟಿಯಂತಹ ಪ್ರಕೃತಿ ವಿಕೋಪ ಹೆಚ್ಚಾಗುತ್ತಿದೆ ಆದ್ದರಿಂದ ಶಾಲಾದಿನಗಳಲ್ಲೆ ಮಕ್ಕಳಿಗೆ ಪರಿಸರ ಜಾಗೃತಿಯ ಅರಿವು ಮೂಡಿಸಿ ಗಿಡನೆಡುವುದರ ಮಹತ್ವದ ಬಗ್ಗೆ ತಿಳಿಸುವುದಲ್ಲದೆ, ಪ್ರತಿಯೊಂದಕ್ಕೂ ಸರ್ಕಾರವನ್ನೆ ಅವಲಂಭಿಸುವುದು ದೂಷಿಸುವುದರ ಬದಲಿಗೆ ಸೇವಾ ಮನೋಭಾವ ರೂಢಿಸಿಕೊಳ್ಳಬೇಕು ಎಂದರು. ನಗರಸಭೆ ಮಾಜಿ ಅಧ್ಯಕ್ಷ ಹೇಮಂತ್ ಕುಮಾರ್ ಮಾತನಾಡಿ, ಪರಿಸರ ದಿನಾಚರಣೆ ಕೇವಲ ಒಂದು ದಿನಕ್ಕೆ ಸೀಮಿತವಾಗ ಬಾರದು ಪ್ರತಿನಿತ್ಯ ಗಿಡಮರಗಳನ್ನು ಬೆಳೆಸುವ ಜೊತೆಗೆ ಇರುವ ಅರಣ್ಯಪ್ರದೇಶವನ್ನು ರಕ್ಷಿಸಬೇಕು ಯಾಕೆಂದರೆ ಅರಣ್ಯ ನಾಶದಿಂದ ಇತ್ತೀಚೆಗೆ ಕಾಡುಪ್ರಾಣಿಗಳು ನಾಡಿಗೆ ಬಂದುಕೊಡುತ್ತಿರುವ ತೊಂದರೆಗಳು ಹೆಚ್ಚಾಗಿವೆ ಹಾಗೂ ಉಳ್ಳವರು ಆರ್ಥಿಕ ಅಶಕ್ತರ ನೆರವಿಗೆ ಬರಬೇಕು ಇವೆರಡು ಕೂಡ ಇಂದಿನಿಂದಲೆ ನಮ್ಮ ಮಕ್ಕಳಿಗೆ ತಿಳಿಸಿದರೆ ಸುಭದ್ರದೇಶ ನಿರ್ಮಾಣವಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ಪಿಎಲ್ ಡಿ ಬ್ಯಾಂಕ್ ಮಾಜಿ ವ್ಯವಸ್ಥಾಪಕರಾದ ನಾಗಭೂಷಣ್, ಎಸ್ ಡಿ ಎಂ ಸಿ ಅಧ್ಯಕ್ಷ ಗೌರಿಶಂಕರ್, ಮುಖ್ಯ ಶಿಕ್ಷಕ ಛಾಯಾಕುಮಾರ್ ಮುಖಂಡರಾದ ಪೋಸ್ಟ್ ಮುರಳಿ ಹಾಗೂ ಇತರರು ಇದ್ದರು.



ಪರಿಸರದ ಸಮತೋಲನ ಕಾಪಾಡಿ: ಅರಣ್ಯಾಧಿಕಾರಿ ಗೀತಾ ಚೌಹಾಣ್

ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ



ಹಸಿರು ಗ್ರಾಮ ನಿರ್ಮಾಣ ಮಾಡಿ

ಗ್ರಾಮವನ್ನು ಹಸಿರು ಗ್ರಾಮವನ್ನಾಗಿ ರೂಪಿಸುವ ಉದ್ದೇಶದಿಂದ ವಿವಿಧ ಪ್ರದೇಶಗಳಲ್ಲಿ ಗಿಡಗಳನ್ನು ನೆಡುವ ಕಾರ್ಯವನ್ನು ಪಂಚಾಯಿತಿಯಿಂದ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಪರಿಸರ ಸಂರಕ್ಷಣೆಯಲ್ಲಿ ಸಾರ್ವಜನಿಕರು, ಯುವಕರು ಹಾಗೂ ಶಾಲಾ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಬೇಕು ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷ ಕಾಂತರಾಜು ಮನವಿ ಮಾಡಿದರು.

ತಾವರೆಕೆರೆ: ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಪರಿಸರದ ಸಮತೋಲನ ಕಾಪಾಡಲು ಪ್ರತಿಯೊಬ್ಬರೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಅರಣ್ಯಾಧಿಕಾರಿ ಗೀತಾ ಚೌಹಾಣ್ ತಿಳಿಸಿದರು.

ಹೊಸಕೋಟೆ ತಾಲ್ಲೂಕಿನ ಸಮೇತನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಡುವತ್ತಿ ಗ್ರಾಮದ ಗುಂಡುತೋಪಿನಲ್ಲಿ ವಿಶ್ವ ಪರಿಸರ ದಿನಾಚರಣೆ ಹಾಗೂ ವನಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸಸಿಗಳನ್ನು ನೆಡುವುದಷ್ಟೇ ಸಾಕಾಗುವುದಿಲ್ಲ, ಅವುಗಳನ್ನು ಪೋಷಿಸಿ ಬೆಳೆಸುವ ಮೂಲಕ ಮುಂದಿನ ಪೀಳಿಗೆಗೆ ಹಸಿರುಮಯ ಹಾಗೂ ಆರೋಗ್ಯಕರ ಪರಿಸರವನ್ನು ಉಳಿಸಿಕೊಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಅವರು ತಿಳಿಸಿದರು. ಎಂದು ಕರೆ ನೀಡಿದರು. ಹವಾಮಾನ ವೈಪರೀತ್ಯ, ಹೆಚ್ಚುತ್ತಿರುವ ಉಷ್ಣಾಂಶ ಹಾಗೂ ಪರಿಸರ ಮಾಲಿನ್ಯವನ್ನು ನಿಯಂತ್ರಿಸಲು ವೃಕ್ಷಸಂಪತ್ತಿನ ವೃದ್ಧಿ ಅತ್ಯಗತ್ಯವಾಗಿದೆ.

ಪ್ರತಿಯೊಬ್ಬರೂ ವರ್ಷಕ್ಕೆ ಕನಿಷ್ಠ ಒಂದು ಗಿಡವನ್ನು ನೆಟ್ಟು ಅದರ ಸಂರಕ್ಷಣೆಯ ಹೊಣೆ ಹೊತ್ತುಕೊಳ್ಳಬೇಕು ಎಂದು ಕರೆ ನೀಡಿದರು. ಇಂತಹ ವನಮಹೋತ್ಸವ ಕಾರ್ಯಕ್ರಮಗಳು ಜನರಲ್ಲಿ ಪರಿಸರ ಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಹೇಳಿದರು. ನೆಡಲಾದ ಗಿಡಗಳ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಗ್ರಾಮ ಮಟ್ಟದಲ್ಲಿ ಹಸಿರು ವಾತಾವರಣ ನಿರ್ಮಾಣಕ್ಕೆ ಪಂಚಾಯಿತಿ ಬದ್ಧವಾಗಿದೆ ಎಂದು ಅವರು ಹೇಳಿದರು. ವನಮಹೋತ್ಸವದಂತಹ ಕಾರ್ಯಕ್ರಮಗಳು ಪರಿಸರದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ಸಾಮಾಜಿಕ ಹೊಣೆಗಾರಿಕೆಯನ್ನು ಹೆಚ್ಚಿಸುತ್ತವೆ ಎಂದು ಅಭಿಪ್ರಾಯಪಟ್ಟರು.

ಎಸ್.ಬಿ.ಜಿ. ಪ್ರತಿಭಾ, ಹೊಸಕೋಟೆ ತಾಲ್ಲೂಕು ಅರಣ್ಯ ಇಲಾಖೆಯ ಸಿಬ್ಬಂದಿ, ಪಂಚಾಯಿತಿ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಕಿರುಸುದ್ದಿ

ನಾಳೆ ಪುಸ್ತಕ ಬಿಡುಗಡೆ

• **ಬೆಂಗಳೂರು:** ಥಿಂಕರ್ಸ್ ಫೋರಂ ಕರ್ನಾಟಕ ವತಿಯಿಂದ ಡಾ. ಮಾಲಿನಿ ಭಟ್ಟಾಚಾರ್ಯ ಅವರು ರಚಿಸಿರುವ ಸ್ವಯಂಸೇವಕ್ ಪುಸ್ತಕದ ಬಿಡುಗಡೆ ಮತ್ತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಜೂನ್ 12 ರ ಸಂಜೆ 6:30ಕ್ಕೆ ಬೆಂಗಳೂರಿನ ನೃಪತುಂಗ ರಸ್ತೆ ಬಳಿ ಇರುವ ದಿ ಮಿಥಿಕ್ ಸೊಸೈಟಿಯ ಸಭಾಂಗಣದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ಎಂ. ಮದನ್ ಗೋಪಾಲ್ ಹಾಗೂ ಪ್ರಮುಖ ರಾಜಕೀಯ-ಧಾರ್ಮಿಕ ವಿಶ್ಲೇಷಕ ಜೆರೋಮ್ ಆಂಟೋ ಭಾಗವಹಿಸಲಿದ್ದಾರೆ. ಪ್ರಸ್ತುತ ಅಜೀಂ ಪ್ರೇಮ್ ಜೀ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೃತಿಯ ಲೇಖಕಿ ಡಾ. ಮಾಲಿನಿ ಭಟ್ಟಾಚಾರ್ಯ ಅವರು ಸಂವಾದದಲ್ಲಿ ಉಪಸ್ಥಿತರಿರಲಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಸಂಘ ಪರಿವಾರದ ಕಾರ್ಯವೈಖರಿ ಹಾಗೂ ಸಮಾಜದ ಮೇಲಿನ ಅದರ ಪ್ರಭಾವದ ಕುರಿತು ಆಳವಾದ ವಿಶ್ಲೇಷಣೆ ಒಳಗೊಂಡಿರುವ ಈ ಕೃತಿಯ ಕುರಿತು ಮಹತ್ವದ ಚರ್ಚೆಗಳು ನಡೆಯಲಿವೆ ಎಂದು ಸಂಘಟಕರು ತಿಳಿಸಿದ್ದಾರೆ.

ರಾಮಲಿಂಗಾರೆಡ್ಡಿಗೆ ಮತ್ತೆ ಅವಕಾಶ ನೀಡಿ

• **ಬೆಂಗಳೂರು:** ಮುಜರಾಯಿ ಇಲಾಖೆಯ ಅಭಿವೃದ್ಧಿಗಾಗಿ ಶ್ರಮಿಸಿರುವ ಹಾಗೂ ಅರ್ಚಕರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ, ದೇವಾಲಯಗಳ ಆದಾಯವನ್ನು ಹೆಚ್ಚಿಸಿರುವ ರಾಮಲಿಂಗಾರೆಡ್ಡಿ ಅವರಿಗೆ ಇಲಾಖೆಯಲ್ಲಿ ಮತ್ತೆ ಅವಕಾಶ ನೀಡಬೇಕು ಎಂದು ರಾಜ್ಯ ಮುಜರಾಯಿ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ನೌಕರರ ಸಂಘ ಒತ್ತಾಯಿಸಿದೆ. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಸಂಘದ ಶ್ರೀವತ್ಸ ಮಾತನಾಡಿ, ರಾಮಲಿಂಗಾರೆಡ್ಡಿ ಅವರು ಈ ಹಿಂದೆ ಮುಜರಾಯಿ ಖಾತೆ ವಹಿಸಿಕೊಂಡ ಮೇಲೆ ಸಾಕಷ್ಟು ಬದಲಾವಣೆಗಳಾಗಿವೆ. ಸಚಿವರಾಗಿದ್ದಾಗ ದೇವಾಲಯಗಳ ಅಭಿವೃದ್ಧಿಗೆ ಕ್ರಮ ಕೈಗೊಂಡಿದ್ದರು. ಅವರಿಗೆ ಈ ಬಾರಿಯೂ ಆ ಇಲಾಖೆಯನ್ನೇ ನೀಡಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಲಾಗಿದೆ ಎಂದರು. ಜುಲೈ 15ರಿಂದ ಆಗಸ್ಟ್ 15 ರವರೆಗೂ ರಾಜ್ಯದ ಎಲ್ಲಾ ಮುಜರಾಯಿ ದೇವಸ್ಥಾನಗಳಲ್ಲಿ ಬೃಹತ್ ಸಮಾವೇಶ ನಡೆಸಿ, ರಾಮಲಿಂಗಾರೆಡ್ಡಿ ಅವರಿಗೆ ಅಭಿನಂದನೆ ಸಲ್ಲಿಸಲು ನಿರ್ಧರಿಸಲಾಗಿದೆ. ಡಿ.ಕೆ. ಶಿವಕುಮಾರ್ ಅವರನ್ನೂ ಸಮಾರಂಭಕ್ಕೆ ಆಹ್ವಾನಿಸಲಾಗುತ್ತದೆ. ಆ ವೇಳೆಗೆ ಮುಜರಾಯಿ ಖಾತೆಯನ್ನು ರಾಮಲಿಂಗಾರೆಡ್ಡಿ ಅವರಿಗೆ ವಹಿಸದಿದ್ದರೆ, ಅಭಿನಂದನಾ ಸಮಾರಂಭದ ಬದಲು ಹೋರಾಟ ನಡೆಸಬೇಕಾಗುತ್ತದೆ ಎಂದು ಹೇಳಿದರು.

ಭಗವಾನ್ ವಿರುದ್ಧ ಸೂಕ್ತ ಕಾನೂನು ಆಗ್ರಹ

• **ಬೆಂಗಳೂರು:** ಹಿಂದು ಧರ್ಮ, ಪ್ರಭು ಶ್ರೀರಾಮ, ಶ್ರೀಕೃಷ್ಣ, ಭಗವದ್ಗೀತೆ ಹಾಗೂ ಹಿಂದೂ ಧಾರ್ಮಿಕ ನಂಬಿಕೆಗಳ ಕುರಿತು ಅವಹೇಳನಕಾರಿ ಮತ್ತು ಪ್ರಚೋದನಕಾರಿ ಹೇಳಿಕೆಗಳನ್ನು ನೀಡಿರುವ ಪ್ರೊ. ಕೆ.ಎಸ್.ಭಗವಾನ್ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿ ಹಿಂದೂ ಜನಜಾಗೃತಿ ಸಮಿತಿಯು ಕರ್ನಾಟಕ ರಾಜ್ಯದ ಪೊಲೀಸ್ ಮಹಾನಿರ್ದೇಶಕರಿಗೆ ದೂರು ಸಲ್ಲಿಸಿದೆ. ದಾವಣಗೆರೆ ಜಿಲ್ಲೆಯ ಹರಿಹರದಲ್ಲಿರುವ ಬಿ.ಕೃಷ್ಣಪ್ಪ ಮೈತ್ರಿವನದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಪ್ರೊ.ಕೆ.ಎಸ್.ಭಗವಾನ್ ಅವರು ಪ್ರಭು ಶ್ರೀರಾಮ ಹಾಗೂ ಹಿಂದೂ ಧಾರ್ಮಿಕ ಪರಂಪರೆಗಳ ಕುರಿತು ಅವಹೇಳನಕಾರಿ ಮತ್ತು ವಿವಾದಾತ್ಮಕ ಹೇಳಿಕೆಗಳನ್ನು ನೀಡಿರುವುದು ಕೋಟ್ಯಂತರ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆಯನ್ನುಂಟುಮಾಡಿದೆ ಎಂದು ಸಮಿತಿ ದೂರಿದೆ.

ರಾಜ್ಯ ಸರ್ಕಾರಕ್ಕೆ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಎಚ್. ಕಾಂತರಾಜು ಎಚ್ಚರಿಕೆ

ಹೊರಗುತ್ತಿಗೆ ನೇಮಕಾತಿ ಪದ್ಧತಿ ಕಂಟಕ

• **ಬೆಂಗಳೂರು:** ಕರ್ನಾಟಕ ರಾಜ್ಯವೂ ಸೇರಿದಂತೆ ದೇಶದಲ್ಲಿ ಚಾಲ್ತಿಯಲ್ಲಿರುವ ಹೊರಗುತ್ತಿಗೆ ನೇಮಕಾತಿ ಪದ್ಧತಿ ಸಾಮಾಜಿಕ ನ್ಯಾಯ ತತ್ವ ಮತ್ತು ಸಂವಿಧಾನದ ಸಮಾನತೆಯ ಗುರಿ ಸಾಧನೆಗೆ ಕಂಟಕಪ್ರಾಯವಾಗಿದೆ ಎಂದು ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಎಚ್. ಕಾಂತರಾಜ ಎಚ್ಚರಿಸಿದ್ದಾರೆ.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಒಬಿಸಿ ಮತ್ತು ಅಲ್ಪಸಂಖ್ಯಾತರ ಘಟಕದ ವತಿಯಿಂದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಏರ್ಪಡಿಸಲಾಗಿದ್ದ ವಿಚಾರಸಂಕಿರಣದಲ್ಲಿ ಪ್ರಧಾನ ಭಾಷಣ ಮಾಡಿದ ಅವರು, ಈ ಬಗ್ಗೆ ಗಂಭೀರ ಸಾರ್ವಜನಿಕ ಸಂವಾದ ಅಗತ್ಯವೆಂದು ಪ್ರತಿಪಾದಿಸಿದರು. ರಾಜ್ಯದಲ್ಲಿ ಸುಮಾರು ಶೇ. 40 ರಷ್ಟು ಉದ್ಯೋಗಗಳನ್ನು ಹೊರಗುತ್ತಿಗೆ ಮೂಲಕವೇ ಭರ್ತಿ ಮಾಡಲಾಗುತ್ತಿದ್ದು ಯಾವುದೇ ಮೀಸಲಾತಿ ನಿಯಮ ಪಾಲಿಸದಿರುವುದರಿಂದ ದಲಿತ ಮತ್ತು ಹಿಂದುಳಿದ ವರ್ಗಗಳ ಜನರಿಗೆ ವಂಚನೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಸಾಮಾಜಿಕ ಸಮಾನತೆಯ ಉದ್ದೇಶದಿಂದ ಸಂವಿಧಾನದಲ್ಲಿ ಖಾತರಿಪಡಿಸಲಾಗಿರುವ ಮೀಸಲಾತಿ ಸೌಲಭ್ಯದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸದ್ಯ ಮುನ್ನೆಲೆಗೆ ಬಂದಿರುವ ಒಳಮೀಸಲಾತಿ, ಕೆನೆಪದರ ಪ್ರಸ್ತಾಪ ಮತ್ತು ಮತಾಂತರಗೊಂಡವರ ಹಕ್ಕುಗಳ ಬಗ್ಗೆಯೂ ಚರ್ಚೆಯಾಗಬೇಕಿದೆ ಎಂದು ನುಡಿದರು. ಸಾಮಾಜಿಕ ನ್ಯಾಯ ಸಿದ್ಧಾಂತ ಮತ್ತು ಸಂವಿಧಾನದ ನಿರ್ದೇಶಕ ತತ್ವಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಜತೆಗೆ ಜನಪ್ರತಿನಿಧಿಗಳಿಗೂ ಸಂವಿಧಾನದ ಮೂಲ ಆಶಯಗಳನ್ನು ಮನವರಿಕೆ ಮಾಡಿಕೊಡುವ ಅಗತ್ಯವಿದೆ ಎಂದು ಸಲಹೆ ನೀಡಿದರು. ವಿಧಾನ ಪರಿಷತ್ತಿನ ಸದಸ್ಯ ರಮೇಶ್ ಬಾಬು ಮಾತನಾಡಿ, ಸ್ವಾತಂತ್ರ್ಯ ಆಂದೋಲನದ ಮೂಲಕ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಹೊರಹೊಮ್ಮಿರುವ ಭಾರತದ ಸಂವಿಧಾನ ಜಗತ್ತಿಗೆ ಮಾದರಿಯಾಗಿದೆ ಎಂದು ವಿಶ್ಲೇಷಿಸಿದರು.



ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಹಾಗೂ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ಸಂರಕ್ಷಣೆಗೆ ಭದ್ರತೆ ಒದಗಿಸುವ ಮೂಲಕ ಭಾರತದ ಸಂವಿಧಾನ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಎತ್ತಿಹಿಡಿದಿದೆ ಎಂದು ವಿವರಿಸಿದರು. ಬಿಸಿಯು ಕುಲಪತಿ ಪ್ರೊ.ರಮೇಶ್ ಬಿ. ಮಾತನಾಡಿ, ಜಾತ್ಯತೀತ, ಪ್ರಜಾಸತ್ತಾತ್ಮಕ ಮತ್ತು ಸಮಸಮಾಜ ನಿರ್ಮಾಣದ ನಿಟ್ಟಿನಲ್ಲಿ ತಮ್ಮ ಜವಾಬ್ದಾರಿ ನಿರ್ವಹಿಸಲು ವಿದ್ಯಾರ್ಥಿಗಳು ಸಂವಿಧಾನದ ಆಶಯಗಳ ಬಗ್ಗೆ ಗಂಭೀರ ಅಧ್ಯಯನ ಮತ್ತು ಚರ್ಚೆ ನಡೆಸಬೇಕೆಂದು ಸೂಚಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಡಾ.ಎಚ್.ಆರ್. ಜಯಪಾಲ್ ಮತ್ತು ನೈರುತ್ಯ ರೈಲ್ವೆಯ ಹಿರಿಯ ಅಧಿಕಾರಿ ಡಾ.ಕುಸುಮ ಹರಿಪ್ರಸಾದ್, ಮಹಾರಾಣಿ ಕ್ಲಸ್ಟರ್ ವಿವಿ ಪ್ರಭಾರ ಕುಲಪತಿ ಪ್ರೊ.ಕೆ.ವೈ. ನಾರಾಯಣಸ್ವಾಮಿ, ಸಿಂಡಿಕೇಟ್ ಸದಸ್ಯ ಶಿವಕುಮಾರ್ ಸೇರಿದಂತೆ ಇತರರಿದ್ದರು.

ವಿದ್ಯಾರ್ಥಿಗಳಿಗೆ ಬ್ಯಾಗ್ ವಿತರಣೆ



• **ಶಿರಾ:** ಒಂದು ಹಳ್ಳಿಗೆ ದೇವಸ್ಥಾನ ಎಷ್ಟು ಮುಖ್ಯವೋ ಶಾಲೆಯೂ ಕೂಡ ಅಷ್ಟೇ ಮುಖ್ಯ. ಈ ನಿಟ್ಟಿನಲ್ಲಿ ಪ್ರತಿ ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕಬೇಕೆಂಬ ಉದ್ದೇಶದಿಂದ, ನನ್ನ 6 ವರ್ಷದ ಅಧಿಕಾರದಲ್ಲಿ 6 ಶಾಲೆಗಳನ್ನು ಹೈಟೆಕ್ ಮಾದರಿಯಲ್ಲಿ ನಿರ್ಮಿಸಿದ್ದೇನೆ ಎಂದು ವಿಧಾನಪರಿಷತ್ ಸದಸ್ಯ ಚಿದಾನಂದ್ ಎಂ.ಗೌಡ ಹೇಳಿದರು.

ಅವರು ಬುಧವಾರ ಶಿರಾ ತಾಲೂಕು ತಾವರೆಕೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯ 224 ವಿದ್ಯಾರ್ಥಿಗಳಿಗೆ ಉಚಿತವಾಗಿ ಸ್ಕೂಲ್ ಬ್ಯಾಗ್‌ಗಳನ್ನು ವಿತರಿಸಿ ಮಾತನಾಡಿದರು. ನಾನು ಬೇರೆಯವರನ್ನು ಮೆಚ್ಚಿಸಲು ಸಮಾಜಸೇವೆ ಮಾಡುತ್ತಿಲ್ಲ, ನನ್ನ ಆತ್ಮತೃಪ್ತಿಗಾಗಿ ಕೆಲಸ ಮಾಡುತ್ತಿದ್ದೇನೆ. ತಾವರೆಕೆರೆ ಗ್ರಾಮದಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯನ್ನು ಹೈಟೆಕ್ ಮಾದರಿಯಲ್ಲಿ ನಿರ್ಮಿಸಿದ್ದೇನೆ. ಸರಕಾರದ ಅನುದಾನ 50 ಲಕ್ಷ ರೂ. ನನ್ನ ಕೈಯಿಂದ 50 ಲಕ್ಷ ರೂ. ಹಣ ಹಾಕಿ ಒಟ್ಟು 1 ಕೋಟಿಯಲ್ಲಿ ಸುಮಾರು 10 ಕೊಠಡಿಗಳನ್ನು ನಿರ್ಮಿಸಿದ್ದೇನೆ. ಇದರಿಂದ ಗ್ರಾಮೀಣ ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕಬೇಕೆಂಬುದೇ ನನ್ನ ಉದ್ದೇಶ ಎಂದರು.

ರಾಜ್ಯ ಸರಕಾರ ರಾಜ್ಯದಲ್ಲಿನ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿ. ಯುವಕರಿಗೆ ಉದ್ಯೋಗ ನೀಡಿ, ನಿಮ್ಮ ಗ್ಯಾರಂಟಿ ಯೋಜನೆಗಳಿಂದ ಯುವಕರ ಭವಿಷ್ಯ ಹಸನಾಗುವುದಿಲ್ಲ, ಎಂದ ಅವರು ಸರ್ಕಾರಿ ಶಾಲಾ ವಿದ್ಯಾರ್ಥಿಗಳಲ್ಲಿ ಅದ್ಭುತವಾದ ಪ್ರತಿಭೆಯಿರುತ್ತದೆ. ವಿದ್ಯಾರ್ಥಿಗಳು ಸಮಯ ಪ್ರಜ್ಞೆ ಅಳವಡಿಸಿಕೊಂಡು,

> ▸▸ **ಪ್ರತಿ ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕಬೇಕೆಂಬುದೇ ಉದ್ದೇಶ: ಚಿದಾನಂದ್ ಎಂ.ಗೌಡ**

ಕಷ್ಟಪಟ್ಟು ಓದಿ ಉನ್ನತ ಹುದ್ದೆಗಳನ್ನು ಅಲಂಕರಿಸುವ ಮೂಲಕ ಪೋಷಕರಿಗೆ ಹಾಗೂ ಶಾಲೆಗೆ ಕೀರ್ತಿ ತರಬೇಕು ಎಂದು ಸಲಹೆ ನೀಡಿದರು.

ಪೂನಂ ಆಂಗ್ಲ ಮಾಧ್ಯಮ ಶಾಲೆಯ ಅಧ್ಯಕ್ಷರಾದ ಡಾ.ಬಿ.ಗೋವಿಂದಪ್ಪ ಮಾತನಾಡಿ, ವಿಧಾನ ಪರಿಷತ್ ಸದಸ್ಯರಾದ ಚಿದಾನಂದ್ ಎಂ.ಗೌಡ ಅವರು ಶಿಕ್ಷಣ ಭೀಷ್ಮ ಎಂದರೆ ತಪ್ಪಾಗಲಾರದು. ಅವರು ಬರದ ನಾಡಾದ ಶಿರಾ ತಾಲೂಕಿನಲ್ಲಿ ಶಿಕ್ಷಣದ ಕ್ರಾಂತಿ ಮಾಡಿದ್ದಾರೆ. ನೂರಾರು ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಿದ್ದಾರೆ. ಸರ್ಕಾರಿ ಶಾಲೆಗಳನ್ನು ಹೈಟೆಕ್ ಶಾಲೆಗಳನ್ನಾಗಿ ನಿರ್ಮಿಸಿದ್ದಾರೆ. ಇಂತಹ ಶಿಕ್ಷಣ ತಜ್ಞ ಚಿದಾನಂದ್ ಎಂ.ಗೌಡ ಅವರು ಶಿಕ್ಷಣ ಸಚಿವರಾಗಬೇಕೆಂಬುದು ನನ್ನ ಆಶಯ ಎಂದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾದ ಹೊನ್ನಗೊಂಡನಹಳ್ಳಿ ಚಿಕ್ಕಣ್ಣ, ಜಿಲ್ಲಾ ಕಾರ್ಯದರ್ಶಿ ಕುಮಾರ್ ಮಾಸ್ಟರ್, ಎಸ್.ಡಿ.ಎಂ.ಸಿ. ಅಧ್ಯಕ್ಷ ಮಹಂತೇಶ್, ಸದಸ್ಯರಾದ ಶಿವಕುಮಾರ್, ಎಸ್.ವಿ.ಆಶಾ, ಮುಖ್ಯಶಿಕ್ಷಕ ದ್ರಾಕ್ಷಾಯಿಣಮ್ಮ, ಎಸ್ಸಿ ಮೋರ್ಚಾ ಅಧ್ಯಕ್ಷ ತೇಜಸ್ವರ್, ಭೀರೇಶ್ವರ ಕ್ರೆಡಿಟ್ ಕೋ-ಆಪರೇಟೀವ್ ನಿರ್ದೇಶಕ ರಂಗನಾಥ್, ಮಾಜಿ ಗ್ರಾ.ಪಂ. ಸದಸ್ಯ ಶಿವು ಸ್ನೇಹಪ್ರಿಯ, ಸತ್ಯಭಾಮ, ಗೌಡಪ್ಪ, ಮೂಗನಹಳ್ಳಿ ರಾಮು ಸೇರಿದಂತೆ ಹಲವರು ಹಾಜರಿದ್ದರು.

ಪರಾಮರ್ಶನಾ ಸಭೆ ಯಶಸ್ವಿ: ಕೆ-ರೈಡ್



• **ಬೆಂಗಳೂರು:** ಬೆಂಗಳೂರು ಉಪನಗರ ರೈಲು ಯೋಜನೆಗೆ ಆರ್ಥಿಕ ನೆರವು ನೀಡುವ ಪ್ರಕ್ರಿಯೆಯಲ್ಲಿ ಪ್ರಮುಖ ಮೈಲಿಗಲ್ಲಾಗಬಹುದಾದ ಕೆಆರ್‌ಐಡಿಇ ಧನಸಹಾಯ ಪರಾಮರ್ಶನಾ ಮಿಷನ್ ಜೊತೆಗಿನ ಪರಾಮರ್ಶನಾ ಸಭೆ ಯಶಸ್ವಿಯಾಗಿದೆ ಎಂದು ಕೆ-ರೈಡ್ ತಿಳಿಸಿದೆ.

ಜರ್ಮನಿಯ ಅಭಿವೃದ್ಧಿ ಬ್ಯಾಂಕ್ , ಯುರೋಪಿಯನ್ ಇನ್ವೆಸ್ಟ್‌ಮೆಂಟ್ ಬ್ಯಾಂಕ್ ಮತ್ತು ಡಾಯ್ಚ ಬಾನ್ ಸಂಸ್ಥೆಗಳ ಪ್ರಮುಖ ಪ್ರತಿನಿಧಿಗಳನ್ನೊಳಗೊಂಡ ಜಾಗತಿಕ ನಿಯೋಗವು ಈ ಪರಾಮರ್ಶನಾ ಸಭೆಯಲ್ಲಿ ಭಾಗವಹಿಸಿತ್ತು. ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣ್ ಸಿಂಗ್ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಯೋಜನೆಯ ಪ್ರಗತಿಗೆ ಸಂಬಂಧಿಸಿದಂತೆ ಹಲವು ನಿರ್ಣಾಯಕ ವಿಷಯಗಳ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು ಎಂದು ಕೆ-ರೈಡ್ ಮಾಹಿತಿ ನೀಡಿದೆ.

ಸಭೆಯಲ್ಲಿ ರೈಲುಗಳ ಖರೀದಿ ಮತ್ತು ನಿರ್ವಹಣೆ, ಟೆಂಡರ್ ಮತ್ತು ಸಂಗ್ರಹಣೆ ಪ್ರಕ್ರಿಯೆಗಳು, ಯೋಜನೆ ಅನುಷ್ಠಾನದ ವೇಗ ಮತ್ತು ಕಾರ್ಯವಿಧಾನ, ಕೆಆರ್‌ಐಡಿಇ ಮತ್ತು ಬಿ-ರೈಡ್ ವಿಭಜನಾ ಪ್ರಕ್ರಿಯೆ, ಪರಿಸರ ಮತ್ತು ಸಾಮಾಜಿಕ ಚೌಕಟ್ಟನ್ನು ಬಲಪಡಿಸುವ ಬಗ್ಗೆ ಚರ್ಚಿಸಲಾಗಿದೆ. ಕಳೆದ ಕೆಲವು ತಿಂಗಳಲ್ಲಿ ಬೆಂಗಳೂರು ಉಪನಗರ ರೈಲು ಯೋಜನೆಯು ಸಾಧಿಸಿರುವ ಗಣನೀಯ ಪ್ರಗತಿಯನ್ನು ವಿದೇಶಿ ನಿಯೋಗವು ಮುಕ್ತಕಂಠದಿಂದ ಶ್ಲಾಘಿಸಿದೆ. ಅಲ್ಲದೆ, ಯೋಜನೆಯನ್ನು ಮುನ್ನಡೆಸುವಲ್ಲಿ ಕೆಆರ್‌ಐಡಿಇ ತಂಡದ ಬದ್ಧತೆಗೆ ಮೆಚ್ಚುಗೆ ವ್ಯಕ್ತಪಡಿಸಿದೆ ಎಂದು ಕೆ-ರೈಡ್ ಮಾಹಿತಿ ಹಂಚಿಕೊಂಡಿದೆ.

ದಾಖಲಾತಿ ಪ್ರಮಾಣದಲ್ಲಿ ಕುಸಿತ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಶಾಲಾ-ಕಾಲೇಜುಗಳ ದಾಖಲಾತಿ ಪ್ರಮಾಣದಲ್ಲಿ ಈ ವರ್ಷ ಕುಸಿತ ಕಂಡುಬಂದಿದೆ.ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ದಾಖಲಾತಿ ಸಂಖ್ಯೆಯು ಬರೋಬ್ಬರಿ ಶೇ.50 ರಷ್ಟು ಕುಸಿದಿದೆ.

ಕಳೆದ ಶೈಕ್ಷಣಿಕ ವರ್ಷದಲ್ಲಿ ಜಿಬಿಎ ವ್ಯಾಪ್ತಿಯ ವಿವಿಧ ಶಾಲಾ ಹಾಗೂ ಕಾಲೇಜುಗಳಲ್ಲಿ 23 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ದಾಖಲಾತಿ ಪಡೆದುಕೊಂಡಿದ್ದರು. ಆದರೆ, ಈ ಬಾರಿ ದಾಖಲಾತಿ ಪ್ರಕ್ರಿಯೆಯು ಅಂತಿಮ ಹಂತವನ್ನು ತಲುಪುತ್ತಿದ್ದರೂ, ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಕೇವಲ 10,350ಕ್ಕೆ ಸೀಮಿತವಾಗಿದೆ ಎಂದು ತಿಳಿದು ಬಂದಿದೆ. ಜಿಬಿಎ ಶಾಲೆಗಳನ್ನು ಶಿಕ್ಷಣ ಇಲಾಖೆಗೆ ಹಸ್ತಾಂತರಿಸುವ ಪ್ರಸ್ತಾಪ, ಹೊರಗುತ್ತಿಗೆ ಆಧಾರದ ಮೇಲೆ ಶಿಕ್ಷಕರ ನೇಮಕಾತಿ ಕುರಿತಾದ ಅನಿಶ್ಚಿತತೆ ಹಾಗೂ ದಿನೇ ದಿನೇ ಕುಸಿಯುತ್ತಿರುವ ಶಿಕ್ಷಣದ ಗುಣಮಟ್ಟದ ಬಗ್ಗೆ ಪೋಷಕರಲ್ಲಿ ಮೂಡಿರುವ ಆತಂಕಗಳು ಈ ಬಾರಿಯ ದಾಖಲಾತಿ ಕುಸಿತಕ್ಕೆ ಪ್ರಮುಖ ಕಾರಣಗಳಾಗಿವೆ ಎನ್ನಲಾಗುತ್ತಿದೆ. ಶಾಲೆಗಳ ಆಡಳಿತ ಮತ್ತು ನಿರ್ವಹಣೆ ವೈಫಲ್ಯ , ಕನಿಷ್ಠ ಮೂಲಭೂತ ಸೌಕರ್ಯಗಳ ಕೊರತೆ ಕಾರಣಗಳಿಂದಾಗಿಯೂ ದಾಖಲಾತಿ ಕುಸಿತಕ್ಕೆ ಕಾರಣ ಎಂದು ಸಾರ್ವಜನಿಕರು ಹೇಳುತ್ತಿದ್ದಾರೆ. ದಾಖಲಾತಿ ಪ್ರಮಾಣ ಹೆಚ್ಚಿಸಬೇಕು. ಈ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ಸಂಬಂಧಪಟ್ಟ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಗಮನಹರಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಜಿಬಿಎ ವ್ಯಾಪ್ತಿಯ ಶಿಕ್ಷಣ ಸಂಸ್ಥೆಗಳು

- ಶಿಶುವಿಹಾರಗಳು (ನರ್ಸರಿ)-93
- ಪ್ರಾಥಮಿಕ ಶಾಲೆಗಳು-18
- ಪ್ರೌಢಶಾಲೆಗಳು-36
- ಪದವಿ ಪೂರ್ವ (ಪಿಯು) ಕಾಲೇಜುಗಳು-21
- ಪದವಿ ಕಾಲೇಜುಗಳು- 4
- ಸ್ನಾತಕೋತ್ತರ ಕೇಂದ್ರಗಳು-2
- ಒಟ್ಟು-174

ಆಂಜನೇಯ ದೇಗುಲದಲ್ಲಿ ಪೂಜೆ

• **ಶಿರಾ:** ಭಾರತದ ಹೆಮ್ಮೆಯ ಪ್ರಧಾನಮಂತ್ರಿ ಹಾಗೂ ಪ್ರಧಾನಸೇವಕರಾದ ನರೇಂದ್ರ ಮೋದಿ ಅವರು ಜನಸೇವೆಯಲ್ಲಿ 4399 ದಿನಗಳ ಐತಿಹಾಸಿಕ ದಾಖಲೆಯನ್ನು ನಿರ್ಮಿಸಿರುವ ಹಿನ್ನೆಲೆಯಲ್ಲಿ, ಅವರ ಉತ್ತಮ ಆರೋಗ್ಯ, ದೀರ್ಘಾಯುಷ್ಯ, ಸುಖ-ಸಮೃದ್ಧಿ ಹಾಗೂ ನಿರಂತರ ಯಶಸ್ಸಿಗಾಗಿ ನಗರ ಮಂಡಲದ ವತಿಯಿಂದ ವಿಶೇಷ ಪೂಜೆ ಹಾಗೂ ಪ್ರಾರ್ಥನೆ ಹಮ್ಮಿಕೊಳ್ಳಲಾಗಿತ್ತು.

ಎಂಎಲ್‌ಸಿ ಚಿದಾನಂದ್ ಎಂ. ಗೌಡ ಮಾತನಾಡಿ, ದೇಶವನ್ನು ಪ್ರಗತಿಯ ಪಥದಲ್ಲಿ ಮುನ್ನಡೆಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರು ಅಪ್ರತಿಮ ಜನಸೇವೆಯ ಮೂಲಕ 4399 ದಿನಗಳ ಐತಿಹಾಸಿಕ ಸಾಧನೆ ಮಾಡಿದ್ದಾರೆ. ಅವರ ಸಶಕ್ತ ನಾಯಕತ್ವ ದೇಶಕ್ಕೆ ಮತ್ತಷ್ಟು ಕಾಲ ಸಿಗುವಂತಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಲಾಗಿದೆ ಎಂದರು. ದೇವಸ್ಥಾನದಲ್ಲಿ ವಿಶೇಷ ಅರ್ಚನೆ ಮತ್ತು ಮಹಾಮಂಗಳಾರತಿ ನೆರವೇರಿಸಿದ ಬಳಿಕ, ನೆರೆದಿದ್ದ ಭಕ್ತಾದಿಗಳಿಗೆ ಹಾಗೂ ಸಾರ್ವಜನಿಕರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ನಿಕಟ ಪೂರ್ವ ಜಿಲ್ಲಾಧ್ಯಕ್ಷರಾದ ಹನುಮಂತೇಗೌಡ, ಹಿರಿಯ ಮುಖಂಡರು ಹಾಗೂ ಮಾಜಿ ಅಧ್ಯಕ್ಷರಾದ ಡಾ. ಬಿ.ಜಿ.ಗೋವಿಂದಪ್ಪ ,ಜಿಲ್ಲಾ ಉಪಾಧ್ಯಕ್ಷರಾದ ಚಿಕ್ಕಣ್ಣ, ಜಿಲ್ಲಾ ಕಾರ್ಯದರ್ಶಿ ಕುಮಾರ್ ಮಾಸ್ಟರ್, ನಗರ ಮಂಡಲ ಅಧ್ಯಕ್ಷರಾದ ಗಿರಿಧರ್, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷರಾದ



ಉಮಾ ವಿಜಯರಾಜ್, ಪ್ರಧಾನ ಕಾರ್ಯದರ್ಶಿಗಳಾದ ಪುರುಷೋತ್ತಮ್ ಮತ್ತು ಭಾಸ್ಕರ್, ಉಪಾಧ್ಯಕ್ಷರಾದ ಬೊಪ್ಪರಾಯಪ್ಪ ಮತ್ತು ನಾಗರಾಜ್ ಗೌಡ,ಕಾರ್ಯದರ್ಶಿ ಧೀರೇಶ್, ಸೈಯಾದ್ ಬಾಬಾ, ನಗರ ಮಹಿಳಾ ಮೋರ್ಚಾ ಅಧ್ಯಕ್ಷರಾದ ನಾಗರತ್ನಮ್ಮ, ಲಲಿತಮ್ಮ, ಅರುಣ, ತಿಮ್ಮರಾ ಜಮ್ಮ, ಶೋಭ, ವಿಜಯಮ್ಮ, ಸುಶೀಲಮ್ಮ, ಮಂಜುಳ, ಉಷಾ, ಕೌಸಲ್ಯ, ಎಸ್ಸಿ ಮೋರ್ಚಾ ಅಧ್ಯಕ್ಷರಾದ ತೇಜಸ್ವರ್, ಯುವ ಮೋರ್ಚಾ ಅಧ್ಯಕ್ಷರಾದ ತಡಕಲೂರು ಹರೀಶ್ ಹಾಗೂ ಅನೇಕ ಮುಖಂಡರು ಕಾರ್ಯಕರ್ತರು ಇದ್ದರು.

ಅಭಿವೃದ್ಧಿ ಕೆಲಸ ಆಗುತ್ತಿಲ್ಲ: ಬಿಜೆಪಿ

• **ಬೆಂಗಳೂರು:** ನಗರದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಆಗುತ್ತಿಲ್ಲ, ಯಾವುದೇ ಮೂಲಭೂತ ಸೌಕರ್ಯ ತಲುಪಿಸುವ ಯೋಜನೆಯಿಲ್ಲ, ಇದು ಬ್ರ್ಯಾಂಡ್ ಅಲ್ಲ ಬ್ಯಾಡ್ ಬೆಂಗಳೂರು ಎಂದು ಕರ್ನಾಟಕ ರಾಜ್ಯ ಬಿಜೆಪಿ ಉಸ್ತುವಾರಿ ಡಾ. ರಾಧಾಮೋಹನ್ ದಾಸ್ ಅಗ್ರವಾಲ್ ಟೀಕಿಸಿದರು.

ಜಕ್ಕೂರು ಏರೋಡ್ರೋಮ್ ಬಳಿ ಬುಧವಾರ ನಡೆದ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಶಕ್ತಿಕೇಂದ್ರ ಪ್ರಮುಖರ ಸಭೆಯಲ್ಲಿ ಭಾಗವಹಿಸಿದ ಅವರು, 2028ರ ಚುನಾವಣೆಯಲ್ಲಿ ಬ್ಯಾಟರಾಯನಪುರ ಕ್ಷೇತ್ರದಲ್ಲಿ ಭಾರತೀಯ ಜನತಾ ಪಕ್ಷ ಗೆಲ್ಲಬೇಕು. ನಮ್ಮ ಶಕ್ತಿಕೇಂದ್ರದ ಎಲ್ಲಾ ಮುಖಂಡರು ಹೆಚ್ಚಿನ ಶ್ರಮವಹಿಸಿ ಸಂಘಟನೆ ಕೆಲಸವನ್ನು ಮಾಡಿ ಮುಂದಿನ 2028ರ ಚುನಾವಣೆಯಲ್ಲಿ ಬ್ಯಾಟರಾಯನಪುರ ಗೆಲ್ಲುವ ಸಂಕಲ್ಪ ಮಾಡಬೇಕು ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಸಹ-ಉಸ್ತುವಾರಿ ಸುಧಾಕರ ರೆಡ್ಡಿ ಮಾತನಾಡಿ, ಕರ್ನಾಟಕದಲ್ಲಿ ಭ್ರಷ್ಟಾಚಾರ ನಡೆಸುತ್ತಿರುವ ಸರ್ಕಾರ ಬಂದಿದೆ. ಮುಂದಿನ ದಿನದಲ್ಲಿ ಜನ ತಕ್ಕ ಪಾಠ ಕಲಿಸುತ್ತಾರೆ ಎಂದು ಹೇಳಿದರು.

ರಾಜ್ಯ ಕಾರ್ಯದರ್ಶಿ ಎಚ್.ಸಿ.ತಮ್ಮೇಶ್ ಗೌಡ ಮಾತನಾಡಿ, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿ ಕಾರ್ಯಕರ್ತರು ಮನೆ ಮನೆ ಸಂಪರ್ಕ ಮಾಡಿ ಸಂಘಟನೆಯನ್ನು ಬಲಪಡಿಸುವ ಕೆಲಸ ನಡೆಯುತ್ತಿದೆ. ಜೊತೆಗೆ ಜಿಬಿಎ ಚುನಾವಣೆ ಹಾಗೂ ಯಾವುದೇ



ಸಂದರ್ಭದಲ್ಲಿ ವಿಧಾನಸಭಾ ಚುನಾವಣೆ ಬಂದರು ಕೂಡ ಗೆಲ್ಲುವ ಸಾಮರ್ಥ್ಯ ಬಿಜೆಪಿ ಸಂಘಟನೆಗೆ ಇದೆ. ಅಭಿವೃದ್ಧಿ ಮಾಡದ ಶಾಸಕರ ವಿರುದ್ಧ ದೊಡ್ಡ ಆಂದೋಲನ ಪ್ರಾರಂಭ ಆಗಲಿದ್ದು ಬ್ಯಾಟರಾಯನಪುರ ಜನಜಾಗೃತಿ ಅಭಿಯಾನವನ್ನು ಪ್ರಾರಂಭ ಮಾಡುತ್ತೇವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಮಂಡಲ ಅಧ್ಯಕ್ಷ ಕೃಷ್ಣಮೂರ್ತಿ, ಬಿಎಲ್‌ಎ-1 ಮಧುಸೂದನ್, ಯುವ ಮೋರ್ಚಾ ರಾಜ್ಯ ಕಾರ್ಯದರ್ಶಿ ದೀಪಕ್ ಕುಮಾರ್ ಭಾಗವಹಿಸಿದ್ದರು.

ವಿದ್ಯಾರ್ಥಿಗಳಿಂದ ಹೃದಯಸ್ಪರ್ಶಿ ಗೌರವ ಸಮರ್ಪಣೆ

ಇಬ್ಬರು ನಿವೃತ್ತ ಪ್ರಾಂಶುಪಾಲರಿಗೆ ಬೀಳ್ಕೊಡುಗೆ

• **ಪಾವಗಡ:** ಶಿಸ್ತುಬದ್ಧ ಶಿಕ್ಷಣಕ್ಕೆ ಆದ್ಯತೆ ನೀಡಿ ಕಾಲೇಜಿನ ಅಭಿವೃದ್ಧಿ ಕಾರ್ಯಗಳೊಂದಿಗೆ ಸಾವಿರಾರು ವಿದ್ಯಾರ್ಥಿಗಳಿಗೆ ಭವಿಷ್ಯ ರೂಪಿಸಿ ವೃತ್ತಿ ನಿವೃತ್ತರಾದ ಪ್ರಾಂಶುಪಾಲ ಪ್ರೊ.ಕೆ.ಒ.ಮಾರಪ್ಪ ಮತ್ತು ಪ್ರೊ. ಶಿವಾನಂದಯ್ಯ ಜೀವನ ಸುಖಮಯವಾಗಿರಲಿ ಎಂದು ಶಾಸಕ ಎಚ್.ವಿ.ವೆಂಕಟೇಶ್ ಆಶಯ ವ್ಯಕ್ತಪಡಿಸಿದರು.

ಪಟ್ಟಣದ ಕುರುಬರಹಳ್ಳಿ ಗೇಟ್ ಬಳಿಯ ಸರ್ಕಾರಿ ಮಹಿಳಾ ಪ್ರಥಮದರ್ಜೆ ಕಾಲೇಜಿನಲ್ಲಿ ಇಬ್ಬರು ಪ್ರಾಂಶುಪಾಲರ ನಿವೃತ್ತಿ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಆಧುನಿಕಯುಗದಲ್ಲಿ ಶಿಕ್ಷಣದಿಂದ ಮಾತ್ರ ಸಾಧನೆ, ಬದಲಾವಣೆಗಳು ಸಾಧ್ಯವಿದೆ, ವಿದ್ಯಾರ್ಥಿಗಳು ಆಸಕ್ತಿಯಿಂದ ವಿದ್ಯಾಭ್ಯಾಸ ಮಾಡಿ ಉನ್ನತ ಸ್ಥಾನಮಾನಗಳನ್ನು ಪಡೆದುಕೊಳ್ಳಬೇಕು, ತಮ್ಮ ಪೋಷಕರಿಗೆ ಸೇವೆ ಮಾಡಿಕೊಂಡು ಋಣ ತೀರಿಸಬೇಕು ಎಂದರು. ಯುವಜನತೆ ದುಶ್ಚಟಗಳಿಂದ ದೂರ ಉಳಿಯಬೇಕು, ಪ್ರೀತಿ,ಪ್ರೇಮಾ ಎಂಬುದರ ಗೋಜಿಗೆ ಹೋಗದೆ ಹೆತ್ತವರ ಮಾರ್ಗದರ್ಶನದಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳಬೇಕು. ಕಾಲೇಜಿನಲ್ಲಿ ಯಾವುದೇ ಸಮಸ್ಯೆಗಳಿದ್ದರೂ



ಪ್ರಾಂಶುಪಾಲರು ನಮ್ಮ ತಂದೆ ಮಾಜಿ ಸಚಿವ ವೆಂಕಟರಮಣಪ್ಪ ಬಳಿ ಬಂದು ಕೆಲಸ ಮಾಡಿಸಿಕೊಳ್ಳುತ್ತಿದ್ದರು, ಮುಂದೆಯೂ ಕಾಲೇಜು ಅಭಿವೃದ್ಧಿಗೆ ನಾನು ಶ್ರಮಿಸುವೆ ಎಂದರು.

ನಿವೃತ್ತ ಪ್ರಾಂಶುಪಾಲ ಕೆ.ಒ.ಮಾರಪ್ಪ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆ ತೃಪ್ತಿ ತಂದಿದೆ, ಮಾಜಿ ಸಚಿವ ದಿ.ವೆಂಕಟರಮಣಪ್ಪರವರ ಕಾರ್ಯವೈಖರಿಯಿಂದ ನೂತನ ಕಾಲೇಜಿನಲ್ಲಿ ಅಭಿವೃದ್ಧಿ ಕೆಲಸಗಳಾಗಿವೆ, ಸಂಸದರು, ಎಂಎಲ್‌ಸಿಗಳು ಅಭಿವೃದ್ಧಿಗೆ ಕೈಜೋಡಿಸಿದ್ದರಿಂದ ಉತ್ತಮ ಕಾಲೇಜು ನಿರ್ಮಾಣವಾಗಿದೆ ಎಂದು ಹೇಳಿದರು. ವಿಶ್ರಾಂತ ಪ್ರಾಂಶುಪಾಲ ಶಿವಾನಂದಯ್ಯ ಮಾತನಾಡಿ, ಕಾಲೇಜಿಗೆ ಬಂದಾಗಿನಿಂದ ಬೆನ್ನುತಟ್ಟಿ ಪ್ರೋತ್ಸಾಹ ನೀಡಿದ ಶಾಸಕರು ಸಹಕಾರ ನೀಡಿದ ಸಿಡಿಸಿ ತಂಡ, ಉಪನ್ಯಾಸಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳನ್ನು ಎಂದಿಗೂ ಮರೆಯಲಾಗದು ಎಂದು ಸ್ಮರಿಸಿದರು.

ಈ ವೇಳೆ ಪ್ರಾಂಶುಪಾಲ ಅನಂತರಾಜು, ಸಿಐ ಸುರೇಶ್, ಪುರಸಭೆ ಮಾಜಿ ಅಧ್ಯಕ್ಷ ರಾಜೇಶ್, ಸದಸ್ಯರಾದ ಟೆಂಕಾಲಯರವಿ, ಮುಖಂಡರಾದ ಶಂಕರರೆಡ್ಡಿ, ಶೇಷಗಿರಿ, ಹನುಮಂತರಾಯಪ್ಪ ಇದ್ದರು.

ಅಧಿಕಾರಿಗಳ ಜತೆ ಆಯುಕ್ತರ ಸಭೆ

• **ಬೆಂಗಳೂರು:** ನಗರದ ಪ್ರಮುಖ ಮಾರುಕಟ್ಟೆಯಾದ ಕೆ.ಆರ್.ಮಾರುಕಟ್ಟೆಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ಬೆನ್ನಲ್ಲೆ ಕೇಂದ್ರ ನಗರ ಪಾಲಿಕೆಯ ಅಭಿವೃದ್ಧಿ ಅಪರ ಆಯುಕ್ತ ವೆಂಕಟಾಚಲಪತಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅಗತ್ಯ ಸೂಚನೆ ನೀಡಿದರು.

ತಳಮಹಡಿಯಲ್ಲಿರುವ ಹೂವಿನ ಮಾರುಕಟ್ಟೆಯನ್ನು ಸ್ವಚ್ಛಗೊಳಿಸಿ.ಮಾರುಕಟ್ಟೆ ಮುಂಭಾಗದ ಕೊತ್ತಂಬರಿ ಸೊಪ್ಪು ಮಾರುವ ಸ್ಥಳದಲ್ಲಿ ಮಳೆ ಬಂದಾಗ ನೀರು ನಿಂತು ಸಾಕಷ್ಟು ಗಲೀಜು ಆಗುವುದರಿಂದ ಸದರಿ ಸ್ಥಳದಲ್ಲಿ ಗುಂಡಿಗಳನ್ನು ಮುಚ್ಚಿ ಸಂಪೂರ್ಣ ಕಾಂಕ್ರಿಟ್ ಹಾಕಲು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಹೆಚ್ಚುವರಿ ಮಾರ್ಷಲ್‌ಗಳ ನಿಯೋಜನೆ: ಸ್ವಚ್ಛತೆ ಕಾರ್ಯ ನಿರ್ವಹಣೆಗೆ ಹೆಚ್ಚುವರಿ ಮಾರ್ಷಲಗಳನ್ನು ನಿಯೋಜನೆ ಮಾಡಿಕೊಂಡು ಸ್ವಚ್ಛತೆ ಕಾರ್ಯ ಸಮರ್ಪಕವಾಗಿ ನಡೆಸಿ. 1ನೇ ಮಹಡಿಯಲ್ಲಿರುವ ಶೌಚಾಲಯವನ್ನು ಸಾರ್ವಜನಿಕ ಬಳಕೆಗೆ ನೀಡುವಂತೆ ನಿರ್ದೇಶಿಸಿದರು.

ಒತ್ತುವರಿ ತೆರವುಗೊಳಿಸಿ: ಕೆ.ಆರ್.ಮಾರುಕಟ್ಟೆ ಕಟ್ಟಡದಲ್ಲಿರುವ ಮಳಿಗೆಗಳು ಹಾಗೂ ಮುಂಭಾಗದಲ್ಲಿನ ಒತ್ತುವರಿಗಳನ್ನು ಗುರುತಿಸಿ ಒತ್ತುವರಿದಾರರಿಗೆ ಅವರ ಸಾಮಾನು ಸರಂಜಾಮು ತೆರವುಗೊಳಿಸಲು ಕಾಲಾವಕಾಶ ನೀಡಿ. ನೀಡಿದ ಕಾಲಾವಕಾಶದಲ್ಲಿ ಅವರು ತೆರವುಗೊಳಿಸದಿದ್ದಲ್ಲಿ ನಗರ ಪಾಲಿಕೆಯಿಂದ ತೆರವುಗೊಳಿಸಲು ತಿಳಿಸಿದರು.



ಮಾರುಕಟ್ಟೆ ಮುಂಭಾಗದಲ್ಲಿ ವ್ಯಾಪಾರಿಗಳಿಗೆ ವ್ಯಾಪಾರ ಸ್ಥಳ ನಿಗದಿಪಡಿಸಿ ಲೈನಿಂಗ್ ಮಾಡಿಕೊಡಿ. ನಿಗದಿಪಡಿಸಿದ ಸ್ಥಳ ಬಿಟ್ಟು ಸಂಚಾರಕ್ಕೆ ತೊಂದರೆ ಮಾಡುವ ವ್ಯಾಪಾರಿಗಳಿಗೆ ದಂಡ ವಿಧಿಸಿ. ತ್ಯಾಜ್ಯ ಸಮರ್ಪಕ ನಿರ್ವಹಣೆಗಾಗಿ ಶೆಡ್ ನಿರ್ಮಾಣಕ್ಕೆ ಕೂಡಲೇ ಕ್ರಮ ವಹಿಸಲು ಸೂಚಿಸಿದರು.

ಚುನಾಯಿತ ಪ್ರಧಾನಿಯಾಗಿ ದೀರ್ಘ ಸೇವೆ

ಪ್ರಧಾನಿಗೆ ಕೇಂದ್ರ ಸಂಪುಟ ಗೌರವ



ಭಾರತ್ ಮಂಟಪಂನಲ್ಲಿ ನಡೆದ ಎನ್‌ಡಿಎ ಸಭೆಯಲ್ಲಿ ಪ್ರಧಾನಿ ಮೋದಿ ಹಾಗೂ ಇತರ ಬಿಜೆಪಿ ನಾಯಕರು.

ಹೊಸದಿಲ್ಲಿ: ದೇಶದಲ್ಲಿ ಸತತ ಚುನಾಯಿತ ಪ್ರಧಾನಿಯಾಗಿ ಸುದೀರ್ಘ ಸೇವೆ ಸಲ್ಲಿಸಿದ ದಾಖಲೆ ಬರೆದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೇಂದ್ರ ಸಂಪುಟ ಬುಧವಾರ ಗೌರವ ಸಲ್ಲಿಸಿದೆ. ಸಂಪುಟ ಸಭೆಯಲ್ಲಿ ಎದ್ದು ನಿಂತು ಚಪ್ಪಾಳೆ ತಟ್ಟಿ ಸಂಪುಟ ಸದಸ್ಯರು ತಮ್ಮ ನಾಯಕನಿಗೆ ಅಭಿನಂದನೆ ಸಲ್ಲಿಸಿದರು.

ದೇಶದಲ್ಲಿ ಸುದೀರ್ಘಾವಧಿಗೆ ಸೇವೆ ಸಲ್ಲಿಸುತ್ತಿರುವ ಚುನಾಯಿತ ಪ್ರಧಾನಿಯಾಗಿ ಸೇವೆ ಸಲ್ಲಿಸುತ್ತಿರುವ ನೆಲೆಯಲ್ಲಿ ತಮಗೆ ಅಭಿನಂದನೆ ಸಲ್ಲಿಸಿರುವುದಕ್ಕಾಗಿ ತಮ್ಮನ್ನು ಅಭಿನಂದಿಸಿದ ಸಂಪುಟ ಸಹೋದ್ಯೋಗಿಗಳಿಗೆ ಮೋದಿಯವರು ಕೃತಜ್ಞತೆ ಸಲ್ಲಿಸಿದರಲ್ಲದೆ ಆ ಕ್ಷಣಗಳನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದಾರೆ. ಇದೇ ವೇಳೆ, 140ಕೋಟಿ ಭಾರತೀಯರ ಆಕಾಂಕ್ಷೆಗಳನ್ನು ಪ್ರತಿನಿಧಿಸುವ ವಿಕಸಿತ ಭಾರತದ ಸಾಕಾರದೆಡೆಗೆ ಇನ್ನಷ್ಟು ಹೆಚ್ಚಿನ ಹುರುಪು ಮತ್ತು ವೇಗದೊಂದಿಗೆ ಕೆಲಸ ಮಾಡುವ ನಮ್ಮ ಪ್ರಯತ್ನಗಳು ಮುಂದುವರಿಯಲಿವೆ ಎಂದಿದ್ದಾರೆ.

ದೇಶ ಮೊದಲು ಎಂಬ ಸಂಕಲ್ಪತೊಟ್ಟ ನಾಯಕನಿಗೆ ಜನಬೆಂಬಲ: ಇದೇ ವೇಳೆ ಸಂಪುಟ ಕೈಗೊಂಡ ನಿರ್ಣಯವೊಂದರಲ್ಲಿ, ''ಈ ಸಂದರ್ಭವು ಭಾರತೀಯ ಪ್ರಜಾತಾಂತ್ರಿಕ ಪ್ರಜ್ಞೆ, ಸಾರ್ವಜನಿಕ ನಂಬಿಕೆ, ಸಾರ್ವಜನಿಕ ಭಾಗೀದಾರಿಕೆಯ ಶಕ್ತಿಯ ಸಂಕೇತವಾಗಿ ನಿಂತಿದೆ. ಇದು 'ರಾಷ್ಟ್ರವೇ ಮೊದಲು 'ಎಂಬ ಸಂಕಲ್ಪದಿಂದ ಮಾರ್ಗದರ್ಶಿತವಾದ ನಾಯಕನೊಬ್ಬನ ಮೇಲೆ ದೇಶದ ಜನತೆ ಇಟ್ಟ ನಂಬಿಕೆ ಮತ್ತು ಅವರಿಗೆ ನೀಡಿದ ಅಭೂತಪೂರ್ವ ಬೆಂಬಲವನ್ನು ಪ್ರತಿಬಿಂಬಿಸುತ್ತದೆ ''ಎಂದು ತಿಳಿಸಿದೆ.

ಅಲ್ಲದೆ ಪ್ರಧಾನಿ ಮೋದಿಯವರು ಸರಕಾರದ ಮುಖ್ಯಸ್ಥರಾಗಿ ಸತತ ನೆಲೆಯಲ್ಲಿ 25ವರ್ಷಗಳನ್ನು ಪೂರೈಸುತ್ತಿರುವ ಐತಿಹಾಸಿಕ ಮೈಲುಗಲ್ಲನ್ನು ಸಮೀಪಿಸಿದ ಬಗೆಗೂ ಸಂಪುಟ ಉಲ್ಲೇಖಿಸಿದೆ. ಸೂಕ್ಷ್ಮ ಸಂವೇದನೆ, ಸಂಯಮ, ಸದುದ್ದೇಶ ಮತ್ತು ದೃಢಬದ್ಧತೆಗಳನ್ನು ಹೊಂದಿದ ನಾಯಕತ್ವವನ್ನು ಅಭಿನಂದಿಸಿ 6 ದಶಕಗಳ ಬಳಿಕ ದೇಶದ ಜನತೆ ಎನ್‌ಡಿಎ ಸರಕಾರಕ್ಕೆ ಸತತ 3ನೇ ಬಾರಿಗೆ ಜನಾದೇಶ ನೀಡಿರುವುದನ್ನು ಒತ್ತಿ ಹೇಳಿದೆ.

ಪ್ರಧಾನಿ ಮೋದಿಯವರ ಜೀವನವು ರಾಷ್ಟ್ರ ನಿರ್ಮಾಣ ಮತ್ತು ಸೇವೆಗೆ ನಿರಂತರ ಸಮರ್ಪಣೆಯ ಸಂಕೇತವಾಗಿದೆ. 2014ರಲ್ಲಿ ಅವರು ಮಾಡಿದ ''ಪ್ರಧಾನ್ ಸೇವಕ್''ಘೋಷಣೆಯನ್ನು ನಿರ್ಣಯ ಬೊಟ್ಟು ಮಾಡಿದ್ದು,ಫ, 'ಸಬ್‌ಕಾ ಸಾಥ್, ಸಬ್ ಕಾ ವಿಕಾಸ್'ಮಂತ್ರಕ್ಕೆ ಕಂಕಣಬದ್ಧರಾಗಿ ಕಾರ್ಯ ನಿರ್ವಹಿಸುತ್ತಿರುವುದಕ್ಕಾಗಿ ಅಭಿಮಾನ ವ್ಯಕ್ತಪಡಿಸಿದೆ. ನರೇಂದ್ರ ಮೋದಿಯವರು ಬುಧವಾರ ಪ್ರಜಾತಾಂತ್ರಿಕವಾಗಿ ಅತ್ಯಂತ ಸುದೀರ್ಘಾವಧಿಗೆ ಆಯ್ಕೆಯಾದ ಭಾರತದ ಪ್ರಧಾನಿ ಎಂಬ ದಾಖಲೆ ಮಾಡಿದ ನರೇಂದ್ರ ಮೋದಿಯವರು 4,399ದಿನಗಳನ್ನು ಅಧಿಕಾರದಲ್ಲಿ ಪೂರೈಸುವ ಮೂಲಕ ಪ್ರಥಮ ಪ್ರಧಾನಿ ಜವಹರಲಾಲ್ ನೆಹರೂ ಅವರ ಧಾಖಲೆಯನ್ನು ಮುರಿದರು. 1947ರಿಂದ1952ರವರೆಗೆ ಯಾವುದೇ ಚುನಾವಣೆ ಇಲ್ಲದೆಯೇ ಮಧ್ಯಂತರ ಸರಕಾರದ ನೇತೃತ್ವ ವಹಿಸಿದ್ದ ನೆಹರೂ 1952ರ ಮೇ 13ರಂದು ಮೊದಲ ಚುನಾಯಿತ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡರು.ಅವರು 1964ರ ಮೇ 27ರವರೆಗೆ ಅಧಿಕಾರದಲ್ಲಿದ್ದರು. ಈ ಮೂಲಕ ಅವರು 4,398ದಿನಗಳ ಕಾಲ ಅಧಿಕಾರದಲ್ಲಿದ್ದು ದಾಖಲೆ ಮಾಡಿದ್ದರು. ಇದೀಗ ಅವರ ದಾಖಲೆಯನ್ನು ನರೇಂದ್ರ ಮೋದಿಯವರು ಮೀರಿ ಹೊಸ ದಾಖಲೆ ಬರೆದಿದ್ದಾರೆ. ಮೋದಿಯವರು 2014ರ ಮೇ26ರಂದು ಸಾರ್ವತ್ರಿಕ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿ ಅಧಿಕಾರಕ್ಕೆ ಬಂದು 2019ರಲ್ಲಿ ಇನ್ನಷ್ಟು ಬಲಿಷ್ಠ ಬಹುಮತದೊಂದಿಗೆ ಮರಳಿ ಅಧಿಕಾರಕ್ಕೆ ಬಂದು, 2024ರ ಜೂ.9ರಂದು ಮೂರನೇ ಬಾರಿಗೆ ಅಧಿಕಾರಕ್ಕೆ ಬಂದು ದೇಶದ ಕಾಂಗ್ರೆಸ್ಸೇತರ ಪ್ರಧಾನಿಯಾಗಿ ಇಂತಹ ಒಂದು ಅಪೂರ್ವ ಸಾಧನೆಗೈದಿದ್ದಾರೆ . ಎನ್‌ಡಿಎ ಬುಧವಾರ ದಿಲ್ಲಿಯಲ್ಲಿ ಈ ಬಗ್ಗೆ ವಿಶೇಷ ಸಂಭ್ರಮಾಚರಣೆ ನಡೆಸಿತು.

ಬತ್ತಳಿಕೆಯಲ್ಲಿ 190 ಸಿಡಿತಲೆಗಳು

2026ರ ಜನವರಿಯವರೆಗೆ ಭಾರತ 190 ಸಿಡಿತಲೆಗಳನ್ನು ದಾಸ್ತಾನು ಇರಿಸಿದೆ. ಹಿಂದಿನ ವರ್ಷಕ್ಕಿಂತ ಸಿಡಿತಲೆಗಳ ಸಂಖ್ಯೆ ಹೆಚ್ಚಾಗಿದೆ. ಯುದ್ಧ ವಿಮಾನಗಳು (ಆಕಾಶ), ಭೂ ಆಧಾರಿತ ಕ್ಷಿಪಣಿಗಳು (ಭೂಮಿ) ಮತ್ತು ಅಣ್ವಸ್ತ್ರ ಕ್ಷಿಪಣಿ ಸಾಮರ್ಥ್ಯವುಳ್ಳ ಸಬ್‌ಮೆರೀನ್‌ಗಳಲ್ಲಿ (ಸಮುದ್ರ) ನಿಯೋಜನೆ ಮಾಡಲಾಗಿದೆ ಎಂದು ಸಿಪ್ರಿ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ನೋ ಫಸ್ಟ್ ಯೂಸ್ ಭಾರತದ ಪರಮಾಣು ನೀತಿ

12 ಪರಮಾಣು ಸಿಡಿತಲೆಗಳ ಸಕ್ರಿಯ ನಿಯೋಜನೆ



ಬದಲಾಗುವುದೇ ಭಾರತದ ಹಳೆಯ ಶಾಂತಿ ನೀತಿ?

ಸುದ್ದಿ ಸಮಗ್ರ

ಭಾರತ ಇದೇ ಮೊದಲ ಬಾರಿಗೆ 12 ಪರಮಾಣು ಸಿಡಿತಲೆಗಳನ್ನು ನಿಯೋಜನೆ ಮಾಡಿರುವುದಾಗಿ ಸ್ಟಾಕ್‌ಹೋಮ್ ಅಂತಾರಾಷ್ಟ್ರೀಯ ಶಾಂತಿ ಸಂಶೋಧನಾ ಸಂಸ್ಥೆ (ಸಿಪ್ರಿ) ತನ್ನ ಇತ್ತೀಚಿನ ವರದಿಯಲ್ಲಿ ಉಲ್ಲೇಖಿಸಿದೆ. ಮೊದಲು ಪ್ರಯೋಗಿಸುವುದಿಲ್ಲ ಎಂಬುದು ಭಾರತದ ಪರಮಾಣು ನೀತಿಯಾಗಿದೆ. ಆದರೆ ಈ ನೀತಿಯಲ್ಲಿ ಕೇಂದ್ರ ಸರ್ಕಾರ ಮಹತ್ವದ ಬದಲಾವಣೆ ಮಾಡಿಕೊಂಡಂತೆ ಕಂಡುಬರುತ್ತಿದೆ. ಯಾಕೆಂದರೆ, ಇದೇ ಮೊದಲ ಬಾರಿಗೆ ಭಾರತವು 12 ಪರಮಾಣು ಸಿಡಿತಲೆಗಳನ್ನು ನಿಯೋಜನೆ ಮಾಡಿದ್ದು, ಈ ಬೆಳವಣಿಗೆಯಿಂದ ಭಾರತದ ಪರಮಾಣು ನೀತಿ ಬದಲಾಗುತ್ತಿರುವ ಮುನ್ಸೂಚನೆ ಎಂದು ವಿಶ್ಲೇಷಿಸಲಾಗುತ್ತಿದೆ. ದ್ರೋಹಿ ಪಾಕಿಸ್ತಾನ ಹಾಗೂ ಚೀನಾದ ಸದ್ದಡಗಿಸಲು ಭಾರತ ಯುದ್ಧ ಸನ್ನದ್ಧತೆ ನಡೆಸುತ್ತಿದೆ. ಭಾರತದ ಪರಮಾಣು ನೀತಿ ವಿಚಾರವಾದ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ದ್ರೋಹಿ ಸದ್ದಡಗಿಸಲು ದ್ವಾದಶ ಅಣು ಸಿಡಿತಲೆ

ಮೊದಲು ಬಳಸುವುದಿಲ್ಲ

ಭಾರತವು ಇನ್ನೂ ಸಹ ಮೊದಲು ಬಳಸುವುದಿಲ್ಲ (ನೋ ಫಸ್ಟ್ ಯೂಸ್ - ಎನ್‌ಎಫ್‌ಯು) ನೀತಿಯನ್ನೇ ಅನುಸರಿಸುತ್ತಿದೆ. ಇದರ ಪ್ರಕಾರ, ಭಾರತ ಯಾವುದೇ ರಾಷ್ಟ್ರಗಳ ಮೇಲೆ ಪರಮಾಣು ದಾಳಿಯನ್ನು ಮೊದಲು ಮಾಡದಿರುವ ಬದ್ಧತೆಯನ್ನು ಪಾಲಿಸಲಿದೆ. ಆದರೆ 12 ಸಿಡಿತಲೆಗಳ ಸಕ್ರಿಯ ನಿಯೋಜನೆ ಹಿಂದೆ ಭಾರತದ ನೀತಿ ಬದಲಾಗುವುದೇ ಎಂಬ ಪ್ರಶ್ನೆ ಮೂಡಿಸುತ್ತದೆ.

12 ಸಿಡಿತಲೆಗಳ ನಿಯೋಜನೆ, ಸನ್ನದ್ಧ

ಭಾರತ ಇದೇ ಮೊದಲ ಬಾರಿಗೆ 12 ಪರಮಾಣು ಸಿಡಿತಲೆಗಳನ್ನು ನಿಯೋಜನೆ ಮಾಡಿಕೊಂಡಿದೆ. ಪರಮಾಣು ಸಂಗ್ರಹಾಗಾರಗಳಲ್ಲಿ ಸಿಡಿತಲೆಗಳನ್ನು ದಾಸ್ತಾನು ಸಂಗ್ರಹಿಸಿಟ್ಟಿಲ್ಲ, ನಿಯೋಜಿಸಿದ 12 ಸಿಡಿತಲೆಗಳು ಸಕ್ರಿಯವಾಗಿ ಕಾರ್ಯಾಚರಣೆಗೆ ಸಿದ್ಧವಾಗಿವೆ. ಶಾಂತಿಯ ಸಂದರ್ಭದಲ್ಲೂ ಕೆಲವು ಪರಮಾಣು ಸಿಡಿತಲೆಗಳನ್ನು ಅವುಗಳ ಉಡಾವಣಾ ವಾಹನಗಳಿಗೆ ಜೋಡಿಸುವ ಸಾಧ್ಯತೆಯಿದೆ. ಇತ್ತೀಚೆಗೆ ಸಾಗರೋತ್ತರ ಗಸ್ತಿನಲ್ಲಿ ಪರಿಸರಕ್ಕೆ ಕಡಿಮೆ ಹಾನಿ ಮಾಡುವ ಕ್ಷಿಪಣಿಗಳು ಮತ್ತು ಅಣ್ವಸ್ತ್ರ ಕ್ಷಿಪಣಿಗಳನ್ನು ನಿಯೋಜಿಸಲ್ಪಟ್ಟ ಜಲಾಂತರ್ಗಾಮಿಗಳ ಬಳಕೆಯನ್ನು ಭಾರತ ಹೆಚ್ಚಿಸಿರುವುದು ಈ ಬೆಳವಣಿಗೆಯ ಭಾಗವಾಗಿದೆ.

ಯುದ್ಧ ಸನ್ನದ್ಧತೆ ಯಾಕೆ?

ಭಾರತದ ಪ್ರಮುಖ ಶತ್ರುಗಳಾದ ಪಾಕಿಸ್ತಾನ ಮತ್ತು ಚೀನಾ ಎರಡೂ ಪರಮಾಣು ರಾಷ್ಟ್ರಗಳಾಗಿವೆ. ಚೀನಾ (620) + ಪಾಕಿಸ್ತಾನ (170) ಸೇರಿದರೆ ಒಟ್ಟು 790 ಅಣು ಸಿಡಿತಲೆಗಳನ್ನು ಹೊಂದಿವೆ. ಇತ್ತೀಚೆಗೆ ಚೀನಾ ತನ್ನ ಪರಮಾಣು ಸಾಮರ್ಥ್ಯವನ್ನು ಹೆಚ್ಚಿಸುತ್ತಲೇ ಬಂದಿದೆ. ಆಪರೇಷನ್ ಸಿಂದೂರ ಬಳಿಕ ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದಲ್ಲಿ ರಕ್ಷಣಾ ಉತ್ಪಾದನೆ ಮತ್ತು ಖರೀದಿಗೆ ಹೆಚ್ಚು ಉತ್ತೇಜನವನ್ನು ನೀಡಲಾಗುತ್ತಿದ್ದು, ಭಾರತ ಯುದ್ಧ ಸನ್ನದ್ಧತೆ ನಡೆಸುತ್ತಿದೆ.

ಅಣ್ವಸ್ತ್ರಕ್ಕಾಗಿ ಪಾಕಿಸ್ತಾನ ಕೋಟ್ಯಂತರ ಖರ್ಚು!

ಸೌದಿ ಅರೇಬಿಯಾ, ಅಮೆರಿಕ ಸೇರಿದಂತೆ ಎಲ್ಲೇ ಹೋದರೂ ಸಾಲ ಮಾಡಿಕೊಳ್ಳುವ ಭಿಕಾರಿ ಪಾಕಿಸ್ತಾನವು ಕಳೆದೊಂದು ವರ್ಷದಲ್ಲಿ ಪರಮಾಣು ಚಟುವಟಿಕೆಗಳಿಗಾಗಿ 1.5 ಶತಕೋಟಿ ಡಾಲರ್ ಖರ್ಚು ಮಾಡಿದೆ. ಇದು ಭಾರತಕ್ಕಿಂತ ಕಡಿಮೆಯಿದ್ದರೂ, ಪಾಕ್ ವೆಚ್ಚವು ಆತಂಕಕಾರಿ. ತನ್ನ ಬಳಿ 170 ಪರಮಾಣು ಸಿಡಿತಲೆಗಳನ್ನು ಇರುವ ಪಾಕಿಸ್ತಾನ, ಇನ್ನಷ್ಟು ಶೇಖರಣೆಗಾಗಿ ಹಣ ವ್ಯಯಿಸುತ್ತಿದೆ. ವರದಿಗಳ ಪ್ರಕಾರ, ಅದು ತನ್ನ ಭೂ ಖಂಡಾಂತರ ಕ್ಷಿಪಣಿಗಳು, ಯುದ್ಧ ವಿಮಾನಗಳಲ್ಲಿ ಅಣ್ವಸ್ತ್ರ ನಿಯೋಜನೆ ಮಾಡಿಕೊಂಡಿದೆ.

190 ಭಾರತದ (2026ರ ಜನವರಿವರೆಗೆ) ಒಟ್ಟು ಸಿಡಿತಲೆಗಳು

12 ಭಾರತ ನಿಯೋಜಿಸಿದ ಸಿಡಿತಲೆಗಳು

620 ಚೀನಾ ಸಿಡಿತಲೆಗಳು

170 ಪಾಕಿಸ್ತಾನದ ಸಿಡಿತಲೆಗಳು

246.7 ಶತಕೋಟಿ ರೂ. 2025ರಲ್ಲಿ ಭಾರತದ ಅಣ್ವಸ್ತ್ರ ವೆಚ್ಚ

ಚೀನಾ ವೆಚ್ಚ 13.5 ಶತಕೋಟಿ ಡಾಲರ್!

ಅಮೆರಿಕ ನಂತರ ವಿಶ್ವದ ಎರಡನೇ ಅತಿ ದೊಡ್ಡ ಅಣ್ವಸ್ತ್ರ ರಾಷ್ಟ್ರವಾದ ಚೀನಾ 2025ರಲ್ಲಿ 13.5 ಶತಕೋಟಿ ಡಾಲರ್ ಖರ್ಚು ಮಾಡಿದೆ. ಇದು ಭಾರತದ 2.8 ಶತಕೋಟಿ ಡಾಲರ್‌ಗಿಂತ ಐದು ಪಟ್ಟು ಅಧಿಕ. ಚೀನಾದ ಅಣ್ವಸ್ತ್ರಾಗಾರದಲ್ಲಿ ಒಟ್ಟು 620 ಅಣು ಬಾಂಬ್‌ಗಳಿವೆ. ಆದರೆ ಚೀನಾ ತನ್ನ ವೆಚ್ಚಗಳ ಮಾಹಿತಿ ರಹಸ್ಯವಾಗಿ ಇಡುವುದರಿಂದ ಐಸಿಎಎನ್ ಸಂಸ್ಥೆಗೆ ಹೆಚ್ಚಿನ ಮಾಹಿತಿಗಳು ಲಭ್ಯವಾಗಿಲ್ಲ. ಚೀನಾ 2025ರ ಪ್ರತಿ ನಿಮಿಷಕ್ಕೆ 25,744 ಡಾಲರ್ ಖರ್ಚು ಮಾಡಿದೆ.

ವಿಶ್ವದ ಅಣ್ವಸ್ತ್ರ ವೆಚ್ಚ ಶೇ.19 ಏರಿಕೆ!

ಜಪಾನ್‌ನ ಹಿರೋಶಿಮಾ ಮತ್ತು ನಾಗಸಾಕಿ ಮೇಲೆ ಅಮೆರಿಕ ಪರಮಾಣು ಬಾಂಬ್ ದಾಳಿಗಳನ್ನು ನಡೆಸಿದ 8 ದಶಕಗಳ ಬಳಿಕವೂ ವಿಶ್ವದಲ್ಲಿ ಪರಮಾಣು ಸೂಪರ್ ಪವರ್ ಕಡಿಮೆಯಾಗಿಲ್ಲ, ಎಲ್ಲಾ ರಾಷ್ಟ್ರಗಳೂ ಪರಮಾಣು ಶಕ್ತಿ



ಶೇಖರಣೆಗಾಗಿ ಹೆಚ್ಚಿನ ವ್ಯಯ ಮಾಡುತ್ತಿವೆ. ಒಂಭತ್ತು ಪರಮಾಣು ರಾಷ್ಟ್ರಗಳಾದ ಅಮೆರಿಕ, ರಷ್ಯಾ, ಚೀನಾ, ಬ್ರಿಟನ್, ಫ್ರಾನ್ಸ್, ಭಾರತ, ಪಾಕಿಸ್ತಾನ, ಇಸ್ರೇಲ್ ಮತ್ತು ಉತ್ತರ ಕೊರಿಯಾ 2025ರಲ್ಲಿ ಅಣ್ವಸ್ತ್ರಗಳಿಗಾಗಿ 119 ಶತಕೋಟಿ ಡಾಲರ್ ವೆಚ್ಚ ಭರಿಸಿವೆ ಎಂದು ಪರಮಾಣು ಶಸ್ತ್ರಾಸ್ತ್ರ ನಿಷೇಧಕ್ಕಾಗಿ ಅಂತಾರಾಷ್ಟ್ರೀಯ ಅಭಿಯಾನ (ಐಸಿಎಎನ್) ಎಂಬ ಸಂಘಟನೆ ವರದಿ ಮಾಡಿದೆ. ಇದರ ಪ್ರಕಾರ, ಈ ವೆಚ್ಚವು 2024ರಿಂದ ಶೇ.19ರಷ್ಟು ಏರಿಕೆಯಾಗಿದೆ. ಒಂದೇ ವರ್ಷದಲ್ಲಿ ವಿಶ್ವದ ಅಣ್ವಸ್ತ್ರ ವೆಚ್ಚವು 16.8 ಶತಕೋಟಿ ಡಾಲರ್ ಹೆಚ್ಚಳವಾಗಿದೆ.

ಭಾರತದ ಕತೆಯೇನು? ಭಾರತ ಎಲ್ಲಿದೆ?

2025ರ ಅಣ್ವಸ್ತ್ರ ವೆಚ್ಚದ ಲೆಕ್ಕಾಚಾರದ ಪ್ರಕಾರ, ವಿಶ್ವದ 9 ಪರಮಾಣು ರಾಷ್ಟ್ರಗಳಲ್ಲಿ ಭಾರತ 6ನೇ ಸ್ಥಾನ ಸಂಪಾದಿಸಿದೆ. ಕಳೆದೊಂದು ವರ್ಷದಲ್ಲಿ ಭಾರತದ ಅಣ್ವಸ್ತ್ರ ವೆಚ್ಚ ಶೇ.12ರಷ್ಟು ಏರಿಕೆಯಾಗಿದ್ದು, ಒಂದೇ ವರ್ಷದಲ್ಲಿ ಭಾರತ 2.8 ಶತಕೋಟಿ ಡಾಲರ್ ಅಂದರೆ, 246.7 ಶತಕೋಟಿ ರೂ. ಖರ್ಚು ಮಾಡಿದೆ. ಇದು ದೇಶದ ಒಟ್ಟು ರಕ್ಷಣಾ ಬಜೆಟ್‌ನ ಶೇ.3 ವೆಚ್ಚವಾಗಿದೆ. ಅಂದರೆ, 2025ರಲ್ಲಿ ಅಣ್ವಸ್ತ್ರ ಚಟುವಟಿಕೆಗಳಿಗೆ ಕೇಂದ್ರ ಸರ್ಕಾರವು ನಿಮಿಷವೊಂದಕ್ಕೆ 4,69,396 ರೂ. ಖರ್ಚು ಮಾಡಿರುವುದಾಗಿ ಎಂದು ಐಸಿಎಎನ್ ಉಲ್ಲೇಖಿಸಿದೆ.

ಕಿರುಸುದ್ದಿ

ಸೆಟ್ಟೆಬೆಲ್ಲೊ ನೌಕೆಗೆ ದಾಳಿ: ಭಾರತದ ಖಂಡನೆ

ಹೊಸದಿಲ್ಲಿ: ಒಮಾನ್ ಕರಾವಳಿ ಪ್ರದೇಶದಲ್ಲಿ ವಾಣಿಜ್ಯ ಹಡಗು ಸೆಟ್ಟೆಬೆಲ್ಲೊ ಮೇಲೆ ನಡೆದ ದಾಳಿಯನ್ನು ಬುಧವಾರ ಭಾರತ ಖಂಡಿಸಿದೆ. ಸೆಟ್ಟೆಬೆಲ್ಲೊ ಮೇಲಿನ ದಾಳಿಗೆ ಮೂವರು ಭಾರತೀಯ ನೌಕಾ ಸಿಬ್ಬಂದಿ ಕಾಣೆಯಾಗಿದ್ದಾರೆ. ದಾಳಿ ಸಂದರ್ಭದಲ್ಲಿ ಸೆಟ್ಟೆಬೆಲ್ಲೊ ಹಡಗಿನಲ್ಲಿ 24 ಭಾರತೀಯರಿದ್ದರು. 21 ಮಂದಿಯನ್ನು ರಕ್ಷಿಸಲಾಗಿದೆ. ಆದರೆ ಮೂವರು ಇನ್ನೂ ಪತ್ತೆಯಾಗಿಲ್ಲ, ಭಾರತೀಯರನ್ನು ಗುರಿಯಾಗಿಸಿ ನಡೆಸುವ ದಾಳಿಗಳನ್ನು ತಕ್ಷಣ ನಿಲ್ಲಿಸಬೇಕೆಂದು ವಿದೇಶಾಂಗ ವಕ್ತಾರ ರಣಧೀರ್ ಜೈಸ್ವಾಲ್ ಖಂಡಿಸಿದ್ದಾರೆ. ನಮ್ಮ ಒಮಾನ್ ರಾಯಭಾರ ಕಚೇರಿ ರಕ್ಷಣಾ ಕಾರ್ಯದಲ್ಲಿ ನೆರವು ನೀಡಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೇನಾ ಕಾಪ್ಟರ್ ಪತನ: 21 ಸೇನಾ ಸಿಬ್ಬಂದಿ ಸಾವು

ಇಸ್ಲಾಮಾಬಾದ್: ಪಾಕಿಸ್ತಾನ ಆರ್ಮಿ ಏವಿಯೇಷನ್‌ನ ಎಂಐ-17 ಹೆಲಿಕಾಪ್ಟರ್ ಬುಧವಾರ ಮುಜಾಫರಾಬಾದ್ ಬಳಿ ಟೇಕ್-ಆಫ್ ವೇಳೆ ತಾಂತ್ರಿಕ ದೋಷದಿಂದಾಗಿ ಅಪಘಾತಕ್ಕೀಡಾಗಿದೆ. ಈ ಅಪಘಾತದಲ್ಲಿ ವಿಮಾನದಲ್ಲಿದ್ದ ಎಲ್ಲಾ 21 ಸಿಬ್ಬಂದಿ ಮೃತಪಟ್ಟಿದ್ದಾರೆ. ಪ್ರಾಥಮಿಕ ವರದಿಗಳ ಪ್ರಕಾರ, ಹೆಲಿಕಾಪ್ಟರ್ ಪಾಕಿಸ್ತಾನದ ಭದ್ರತಾ ಪಡೆಗಳ ಸೈನಿಕರನ್ನು ಹೊತ್ತೊಯ್ಯುತ್ತಿತ್ತು. ಪಾಕಿಸ್ತಾನ ಆಕ್ರಮಿತ ಕಾಶ್ಮೀರದ (ಪಿಒಕೆ) ನೀಲಂ ಕಣಿವೆ ವಲಯಕ್ಕೆ ಹೆಚ್ಚುವರಿ ಸೈನಿಕರನ್ನು ಸಾಗಿಸುತ್ತಿತ್ತು. ಅಪಘಾತದ ನಿಖರವಾದ ತಾಂತ್ರಿಕ ಕಾರಣವನ್ನು ನಿರ್ಧರಿಸಲು ತನಿಖಾ ಮಂಡಳಿಗೆ ಆದೇಶಿಸಲಾಗಿದೆ.

ಮಾತುಕತೆ ವಿಳಂಬ: ಟ್ರಂಪ್ ತೀವ್ರ ಅಸಮಾಧಾನ

ವಾಷಿಂಗ್ಟನ್: ಮಧ್ಯಪ್ರಾಚ್ಯ ಯುದ್ಧ ಆರಂಭಗೊಂಡು 100 ದಿನಗಳೂ ಯುದ್ಧ ನಿಲ್ಲುವ ಯಾವುದೇ ಸೂಚನೆಗಳು ಕಾಣುತ್ತಿಲ್ಲ, ಇಸ್ರೇಲ್‌ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಾರ್ನಿಂಗ್ ಕೊಟ್ಟಿದ್ದರು.ಇದೀಗ ಈ ಬೆನ್ನಲ್ಲೇ ಇರಾನ್‌ಗೂ ಎಚ್ಚರಿಕೆ ಕೊಟ್ಟು ಸಂಧಾನ ವಿಳಂಬ ಆಗುತ್ತಿರುವುದಕ್ಕೆ



ಅಸಮಾಧಾನ ಹೊರಹಾಕಿದ್ದಾರೆ. ಟ್ರುತ್ ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್‌ನಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

20 ದೇಸಿ ನ್ಯಾವಿಗೇಷನ್ ಜಾಮರ್ ಖರೀದಿಗೆ ಸಹಿ

ಹೊಸದಿಲ್ಲಿ: ಭಾರತೀಯ ನೌಕಾಪಡೆಗಾಗಿ 20 ಸುಧಾರಿತ ಸಾಮರ್ಥ್ಯದ ಜಾಗತಿಕ ನ್ಯಾವಿಗೇಷನ್ ಉಪಗ್ರಹ ವ್ಯವಸ್ಥೆಯ (ಜಿಎನ್‌ಎಸ್‌ಎಸ್) ಜಾಮರ್‌ಗಳನ್ನು ಖರೀದಿಸಲು ರಕ್ಷಣಾ ಸಚಿವಾಲಯ ಬುಧವಾರ 449 ಕೋಟಿ ರೂ.ಗಳ ಒಪ್ಪಂದಕ್ಕೆ ಸಹಿ ಹಾಕಿದೆ.

ಬೆಂಗಳೂರಿನ ಅಕಾರ್ಡ್ ಸಾಫ್ಟ್‌ವೇರ್ ಅಂಡ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ಹೊಸದೆಹಲಿಯಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು. ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಈ ಖರೀದಿಯನ್ನು ಸ್ವದೇಶಿಯಾಗಿಯೇ ವಿನ್ಯಾಸಗೊಳಿಸಿದ, ಅಭಿವೃದ್ಧಿಪಡಿಸಿದ ಮತ್ತು ತಯಾರಿಸಿದ ಉತ್ಪನ್ನಗಳ ವರ್ಗದ ಅಡಿಯಲ್ಲಿ ಮಾಡಲಾಗಿದೆ. ರಾಷ್ಟ್ರೀಯ ಉತ್ಪಾದನಾ ಯೋಜನೆಗೆ ಪೂರಕವಾಗಿ ಈ ಉಪಕರಣ ಕನಿಷ್ಠ ಶೇ. 75 ರಷ್ಟು ಸ್ವದೇಶಿ ವಸ್ತುಗಳನ್ನು ಒಳಗೊಂಡಿದೆ.ಈ ಜಾಮರ್‌ಗಳು ಶತ್ರುಗಳ ರಿಸೀವರ್‌ಗಳ ಉಪಗ್ರಹ ಸಂಕೇತಗಳ ಗ್ರಹಿಕೆ ಮತ್ತು ಟ್ರ್ಯಾಕಿಂಗ್ ಸಾಮರ್ಥ್ಯವನ್ನು ಕುಂಠಿತಗೊಳಿಸುತ್ತವೆ. ಅಲ್ಲದೆ, ನೌಕಾಪಡೆಯ ಹಡಗುಗಳ ಸುರಕ್ಷಿತ ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳಲು ಈ ವ್ಯವಸ್ಥೆ ಸಿಗ್ನಲ್ ವಂಚನೆ ಮತ್ತು ಶತ್ರುಗಳನ್ನು ದಾರಿತಪ್ಪಿಸುವ ಜ್ಯಾಮಿಂಗ್ ತಂತ್ರಜ್ಞಾನವನ್ನು ಒದಗಿಸುತ್ತದೆ. ಅಪಾಯದ ವಾತಾವರಣದಲ್ಲಿ ಕಾರ್ಯನಿರ್ವಹಿಸುವ ನೌಕಾಪಡೆಯ ಹಡಗುಗಳಿಗೆ ಈ ಜಾಮರ್‌ಗಳು ಸಹಕಾರಿಯಾಗಲಿವೆ. ಈ ತಂತ್ರಜ್ಞಾನದ ಸ್ವದೇಶೀಕರಣ, ರಾಷ್ಟ್ರೀಯ ರಕ್ಷಣಾ ಸಾಮರ್ಥ್ಯಗಳನ್ನು ಬಲಪಡಿಸುತ್ತದೆ ಮತ್ತು ದೇಶದ ಕಡಲ ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ, ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತದ ವಾರ್ಷಿಕ ರಫ್ತು ಶೇ.5.7 ಭಾರೀ ಅಭಿವೃದ್ಧಿ

ಚಂಡೀಗಢ: ವಿತ್ತೀಯ ವರ್ಷ 2025-26ರಲ್ಲಿ ಭಾರತದ ರಫ್ತು ದಾಖಲೆಯ 863 ಶತಕೋಟಿ ಡಾಲರ್ ತಲುಪಿರುವುದಾಗಿ ಕೇಂದ್ರ ವಾಣಿಜ್ಯೋದ್ಯಮ ಸಚಿವಾಲಯ ಬುಧವಾರ ಹೇಳಿದೆ. ವಿತ್ತೀಯ ವರ್ಷ 2014-15ರಲ್ಲಿ 468 ಶತಕೋಟಿ ಡಾಲರ್ ಇದ್ದ ಭಾರತದ



ರಫ್ತು 2025-26ರ ವೇಳೆಗೆ 863 ಶತಕೋಟಿ ಡಾಲರ್ ತಲುಪಿದೆ. ಒಟ್ಟಾರೆ ವಾರ್ಷಿಕ ರಫ್ತು ದರಶೇ.5.7 ಏರಿಕೆಯಾಗಿದೆ. ರಫ್ತುದಾರರು, ಉದ್ಯಮ ಮಂಡಳಿಗಳು ಮತ್ತು ರೈತ ಉತ್ಪಾದಕ ಸಂಘಗಳ ಸಮ್ಮೇಳನದಲ್ಲಿ ಮಾತನಾಡಿದ ವಾಣಿಜ್ಯೋದ್ಯಮ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ನಿತಿನ್ ಕುಮಾರ್ ಯಾದವ್ ಅಂಕಿ-ಅಂಶಗಳನ್ನು ಮುಂದಿಟ್ಟಿದ್ದಾರೆ.

ಈ ಅವಧಿಯಲ್ಲಿ, ಭಾರತದ ಸರಕು ರಫ್ತು 310 ಶತಕೋಟಿ ಡಾಲರ್‌ನಿಂದ 442 ಶತಕೋಟಿ ಡಾಲರ್‌ಗೆ ಏರಿಕೆಯಾಗಿದೆ. ಸೇವಾ ರಫ್ತು 158 ಶತಕೋಟಿ ಡಾಲರ್‌ನಿಂದ 421 ಶತಕೋಟಿಗೆ ಜಿಗಿತ ಕಂಡಿದೆ. ಇಂಧನೇತರ ರಫ್ತು 387.9 ಶತಕೋಟಿ ಡಾಲರ್ ತಲುಪಿ ಹೊಸ ದಾಖಲೆಯನ್ನು ನಿರ್ಮಿಸಿದ್ದು, ಭಾರತದ ರಫ್ತು ಕ್ಷೇತ್ರದ ಆಳ ಮತ್ತು ವೈವಿಧ್ಯತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಯಾದವ್ ಹೇಳಿದರು. ಭಾರತ-ಐರೋಪ್ಯ ಮುಕ್ತ ಸಂಘದ ನಡುವಿನ ವ್ಯಾಪಾರ ಮತ್ತು ಆರ್ಥಿಕ ಪಾಲುದಾರಿಕೆ ಒಪ್ಪಂದ (ಟಿಇಪಿಎ, 2025) ಪ್ರಕಾರ, 100 ಶತಕೋಟಿ ಡಾಲರ್ ನೇರ ವಿದೇಶಿ ಹೂಡಿಕೆ(ಎಫ್‌ಡಿಐ) ಬದ್ಧತೆಯ ಬೆಂಬಲವಿದ್ದು, ಭಾರತದ ಸುಮಾರು ಶೇ.98 ರಫ್ತುಗಳಿಗೆ ಸುಂಕಮುಕ್ತ ಪ್ರವೇಶವನ್ನು ಒದಗಿಸುತ್ತದೆ ಎಂದು ತಿಳಿಸಿದ್ದಾರೆ.

ರೈಲು ನಿಲ್ದಾಣಗಳಲ್ಲಿ ಸುರಕ್ಷತೆಗೆ ಹೆಚ್ಚಿನ ಕ್ರಮ

ಹೊಸದಿಲ್ಲಿ: ಸುರಕ್ಷತೆ ಮತ್ತು ಭದ್ರತಾ ಕ್ರಮಗಳನ್ನು ಮತ್ತಷ್ಟು ಬಲಪಡಿಸಲು ಭಾರತೀಯ ರೈಲ್ವೆ ದೇಶದಾದ್ಯಂತ ರೈಲು ನಿಲ್ದಾಣಗಳಲ್ಲಿ ಅಗ್ನಿ ಸುರಕ್ಷತಾ ಪರಿಶೋಧನೆಗಳನ್ನು ನಡೆಸಲಿದೆ. ರೈಲ್ವೆ ಸಚಿವಾಲಯದ ಪ್ರಕಾರ, ಈ ಯೋಜನೆಯು ಅಸ್ತಿತ್ವದಲ್ಲಿರುವ ಅಗ್ನಿ ಸುರಕ್ಷತಾ ವ್ಯವಸ್ಥೆಗಳನ್ನು ನಿರ್ಣಯಿಸುವ ಮತ್ತು ಪ್ರಯಾಣಿಕರ ಸುರಕ್ಷತೆ ಹೆಚ್ಚಿಸಲು ಮತ್ತು ರೈಲ್ವೆ ಆಸ್ತಿಗಳನ್ನು ರಕ್ಷಿಸಲು ಸುಧಾರಣೆಯ ಅಗತ್ಯವಿರುವ ಪ್ರದೇಶಗಳನ್ನು ಗುರುತಿಸುವ ಗುರಿ ಹೊಂದಿದೆ.

ಈ ಕಾರ್ಯಾಚರಣೆಯ ಭಾಗವಾಗಿ, ನಿಲ್ದಾಣಗಳಲ್ಲಿ ಅಸ್ತಿತ್ವದಲ್ಲಿರುವ ಅಗ್ನಿ ಸುರಕ್ಷತಾ ಕ್ರಮಗಳನ್ನು ಪರಿಶೀಲಿಸಲಾಗುವುದು ಮತ್ತು ಪ್ರಯಾಣಿಕರು ಮತ್ತು ರೈಲ್ವೆ ಆಸ್ತಿಗಳ ಸುರಕ್ಷತೆ ಖಚಿತಪಡಿಸಿಕೊಳ್ಳಲು ಎಲ್ಲೆಲ್ಲಿ ಸುಧಾರಣೆಗಳು ಅಗತ್ಯವಿದೆಯೋ ಅಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ನಿಲ್ದಾಣದ ಕಟ್ಟಡಗಳು, ವಿದ್ಯುತ್ ಸ್ಥಾಪನೆಗಳು, ಹವಾನಿಯಂತ್ರಣ ಮತ್ತು ವಾತಾಯನ ವ್ಯವಸ್ಥೆಗಳು, ತುರ್ತು ನಿರ್ಗಮನಗಳು, ಅಗ್ನಿಶಾಮಕ ಉಪಕರಣಗಳು, ನೀರಿನ ಲಭ್ಯತೆ, ಪಂಪಿಂಗ್ ವ್ಯವಸ್ಥೆಗಳು ಮತ್ತು ಸ್ಪ್ರಿಂಕ್ಲರ್ ವ್ಯವಸ್ಥೆಗಳು ಸೇರಿದಂತೆ ಎಲ್ಲಾ ನಿರ್ಣಾಯಕ ಸುರಕ್ಷತಾ ಮೂಲಸೌಕರ್ಯಗಳನ್ನು ಲೆಕ್ಕಪರಿಶೋಧನೆಯು ಒಳಗೊಂಡಿರುತ್ತದೆ.

ಬೆಂಕಿಯ ಘಟನೆಗಳು ಸೇರಿದಂತೆ ತುರ್ತು ಪರಿಸ್ಥಿತಿಗಳಿಗೆ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸಲು ರೈಲ್ವೆ ನಿಲ್ದಾಣಗಳು ಸಂಪೂರ್ಣವಾಗಿ ಸಿದ್ಧವಾಗಿವೆ ಎಂದು ಖಚಿತಪಡಿಸಿಕೊಳ್ಳುವುದು ಇದರ ಉದ್ದೇಶವಾಗಿದೆ.

ಬೆಲೆ ಏರಿಕೆ ತಡೆಗೆ 1.23ಲಕ್ಷ ಕೋ. ರೂ.ಖರ್ಚು !

ಹೊಸದಿಲ್ಲಿ : ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ಉಂಟಾಗಿರುವ ಜಾಗತಿಕ ತೈಲ ಬೆಲೆ ಹೆಚ್ಚಳದ ಹೊರತಾಗಿಯೂ ಭಾರತದಲ್ಲಿ ಎರಡು ತಿಂಗಳ ಕಾಲ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚಾಗದಂತೆ ತಡೆದು ಜನಹಿತ ಕಾಯಲು ಕೇಂದ್ರ ಸರಕಾರವೇ ತೈಲ ಕಂಪೆನಿಗಳಿಗೆ 1.23ಲಕ್ಷ ಕೋಟಿ ರೂ.ಗಳನ್ನು ನೀಡಿದೆ ಎಂಬುದೀಗ ಬಹಿರಂಗಗೊಂಡಿದೆ. ಜಾಗತಿಕ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳದಿಂದ ದೇಶದ ಜನರಿಗೆ ಆರ್ಥಿಕ ಹೊರೆ ಬೀಳಬಾರದು ಎಂಬ ಕಾರಣಕ್ಕೆ ಸ್ವತಃ ಕೇಂದ್ರ ವಿತ್ತ ಸಚಿವಾಲಯವೇ ಮಧ್ಯಪ್ರವೇಶಿಸಿ 78ದಿನಗಳ ಕಾಲ ತೈಲ ಕಂಪೆನಿಗಳ ನಷ್ಟ ಸರಿದೂಗಿಸಲು 1.23ಲಕ್ಷ ಕೋಟಿ ರೂ.ಗಳನ್ನು ನೀಡಿದೆ ಎಂದು ಸರಕಾರಿ ಮೂಲಗಳು ಬಹಿರಂಗಪಡಿಸಿವೆ. ಅಷ್ಟೇ ಅಲ್ಲದೆ ಈ ಅವಧಿಯಲ್ಲಿ ತೈಲ ಕಂಪೆನಿಗಳಿಂದ ಯಾವುದೇ ತೆರಿಗೆಯನ್ನೂ ಪಡೆದಿರಲಿಲ್ಲ .ಇದರಿಂದ ಸರಕಾರಕ್ಕೆ ಅಷ್ಟು ಆರ್ಥಿಕ ಹೊರೆ ಬಿದ್ದಿದೆ.

ಸುದೀರ್ಘಾವಧಿಯ ದಾಖಲೆ | ಪ್ರಧಾನಿ ಸ್ನೇಹಮಯ ಗುಣಕ್ಕೆ ಶ್ಲಾಘನೆ

ಪ್ರಧಾನಿಗೆ ಜಾಗತಿಕ ನಾಯಕರ ಅಭಿನಂದನೆ

ರೋಮ್/ಮಾಲೆ: ಭಾರತದ ಚುನಾಯಿತ ಪ್ರಧಾನಿಯಾಗಿ ಸತತ ನೆಲೆಯಲ್ಲಿ ಸುದೀರ್ಘಾವಧಿಯ ದಾಖಲೆ ಬರೆದ ನರೇಂದ್ರ ಮೋದಿಯವರಿಗೆ ವಿಶ್ವದ ನಾಯಕರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಬುಧವಾರ ಮೋದಿಯವರು ತಮ್ಮ ಅಧಿಕಾರದಲ್ಲಿ 4,399ದಿನಗಳನ್ನು ಪೂರೈಸಿ ಪ್ರಥಮ ಪ್ರಧಾನಿ ನೆಹರೂ ದಾಖಲೆಯನ್ನು ಮೀರಿದ ಸಾಧನೆಗೈದುದಕ್ಕಾಗಿ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ, ಮಾಲ್ಡೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜ್ಜು, ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಜಾಯೇ -ಮ್ಯೆಯಂಗ್, ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ, ಭೂತಾನ್ ಪ್ರಧಾನಿ ತ್ಶೆರಿಂಗ್ ಟೋಬ್‌ಗಾಯ್, ಶ್ರೀಲಂಕಾ ಅಧ್ಯಕ್ಷ ಅರುಣ ಕುಮಾರ ದಿಸ್ಸನಾಯಕೆ, ಮಾಜಿ ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರ್ರಿಸನ್ ಸೇರಿದಂತೆ ವಿವಿಧ ಜಾಗತಿಕ ನಾಯಕರು ಅಭಿನಂದಿಸಿ ಶುಭಕೋರಿದ್ದಾರೆ.

ಮೆಲೋನಿ ಅವರು ಮೋದಿಯವರ ಇತ್ತೀಚಿನ ಇಟಲಿ ಭೇಟಿ ಮತ್ತು ಭಾರತ-ಇಟಲಿ ನಡುವೆ ವಿಶೇಷ ವ್ಯೂಹಾತ್ಮಕ ಪಾಲುದಾರಿಕೆ ಒಪ್ಪಂದ ಮಾಡಿಕೊಂಡಿರುವುದನ್ನು ನೆನಪಿಸಿಕೊಂಡು ಭಾರತೀಯ ನಾಯಕನ ಮುತ್ಸದ್ದಿತನವನ್ನು ಶ್ಲಾಘಿಸಿದ್ದಾರೆ.ಈ ಒಪ್ಪಂದ ನಮ್ಮ ದೇಶಗಳ ಮತ್ತು ನಮ್ಮ



ಜನರ ಉಜ್ವಲ ಭವಿಷ್ಯಕ್ಕಾಗಿ ಹೊಸ ಅವಕಾಶಗಳನ್ನು ಸೃಷ್ಟಿಸಲಿದೆ ಎಂದು ಸಾಮಾಜಿಕ ಮಾಧ್ಯಮದ ಮೂಲಕ ತಿಳಿಸಿದ್ದಾರೆ. ಮಾಲ್ಡೀವ್ಸ್ ನಾಯಕ ಮುಯಿಜ್ಜು, ಭಾರತದೊಂದಿಗೆ ಪರಸ್ಪರ ಗೌರವ,ಕ ಸಾರ್ವಭೌಮ ಸಮಾನತೆ, ಹಿತಾಸಕ್ತಿಗಳ ಹಂಚಿಕೆಯೊಂದಿಗೆ ಸಹಕಾರವನ್ನು ಇನ್ನಷ್ಟು ಬಲಪಡಿಸುವುದನ್ನು ಎದುರುನೋಡುತ್ತಿರುವುದಾಗಿ ಹೇಳಿದ್ದಾರೆ. ಇಬ್ರಾಹಿಂ ಅವರು ಮೋದಿ ನಾಯಕತ್ವವನ್ನು ಹೊಗಳಿದ್ದು,ಅವರ ಇಷ್ಟು ವರ್ಷಗಳ ಸಾರ್ವಜನಿಕ ಸಮರ್ಪಿತ ಸೇವೆ , ಭಾರತದ ಅಭಿವೃದ್ಧಿ , ಉನ್ನತಿ ಮತ್ತು ಜಾಗತಿಕ ಮಟ್ಟಕ್ಕೆ ಭಾರತವನ್ನು ಬೆಳೆಸುವಲ್ಲಿ ಅವರ ನಾಯಕತ್ವ ಅನನ್ಯವಾದುದು ಎಂದಿದ್ದಾರೆ. ಭಾರತದೊಂದಿಗಿನ ಮಲೇಷ್ಯಾದ ದೀರ್ಘಾವಧಿಯ ಸ್ನೇಹ ಮತ್ತು ಆಪ್ತ ಬಾಂಧವ್ಯ ಅಮೂಲ್ಯವಾದುದು ಎಂದಿದ್ದಾರೆ.

ಮೋದಿ ನಂಬಿಗಸ್ಥ ಮಿತ್ರ: ನರೇಂದ್ರ ಮೋದಿಯವರು ''ಯಾವಾಗಲೂ ನಂಬಬಹುದಾದ ಒಬ್ಬ ವಿಶ್ವಾಸಾರ್ಹ ಮಿತ್ರ''ನೆಂದು ಬಣ್ಣಿಸಿದ ನೈಜೀರಿಯಾ ಅಧ್ಯಕ್ಷ ಬೋಲಾ ಅಹ್ಮದ್ ಟಿನುಬು ಅವರು, ಭಾರತದ ಜನತೆ ಸತತ ಮೂರು ಬಾರಿ ಅವರಿಗೆ ಜನಾದೇಶ ನೀಡಿರುವುದು ದೇಶದ ನಾಗರಿಕರು ಅವರಲ್ಲಿ ಇಟ್ಟ ವಿಶ್ವಾಸ ಮತ್ತು ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕೀನ್ಯಾದ ಅಧ್ಯಕ್ಷ ವಿಲಿಯಂ ಸಮೋಯಿ ರುಟೋ ಅಭಿನಂದನೆಯಲ್ಲಿ, ತೀರಾ ಸಾಮಾನ್ಯ ನೆಲೆಯಿಂದ ಆರಂಭಿಸಿ ಈ ಹಂತಕ್ಕೆ ಬಂದಿರುವುದು ನಿಮ್ಮ ಸಮರ್ಪಣೆ, ಪರಿಶ್ರಮ ಮತ್ತು ಸಾರ್ವಜನಿಕ ಸೇವೆಗೆ ಸಾಕ್ಷಿ ಎಂದಿದ್ದಾರೆ. ಆಸ್ಟ್ರೇಲಿಯಾದ ಮಾಜಿ ಪ್ರಧಾನಿ ಮಾರಿಸನ್ ಅವರು ಮೋದಿಯವರು ಭಾರತದ ಆರ್ಥಿಕತೆಯನ್ನೇ ಪರಿವರ್ತಿಸಿ ಒಬ್ಬ ನಿಜವಾದ ಮುತ್ಸದ್ದಿಯಾಗಿ ಭಾರತವನ್ನು ವಿಶ್ವದಲ್ಲಿ ತಲೆ ಎತ್ತಿ ನಿಲ್ಲುವಂತೆ ಮಾಡಿದ್ದಾರೆ. ನಾವು ಒಟ್ಟಾಗಿ ರೂಪಿಸಿದ ಸಮಗ್ರ ವ್ಯೂಹಾತ್ಮಕ ಪಾಲುದಾರಿಕೆಯ ಬಗ್ಗೆ ಹೆಮ್ಮೆ ಪಡುತ್ತೇನೆ ಎಂದಿದ್ದಾರೆ.

ಝಾಲ್ಮುರಿ ಸವಿದ ಮೋದಿ



ಹೊಸದಿಲ್ಲಿ: ನವಭಾರತ ಮಂಟಪಂನಲ್ಲಿ ಆಯೋಜಿಸಲಾಗಿದ್ದ ಎನ್‌ಡಿಎ ಸಭೆಯ ವೇಳೆ ಪ್ರಧಾನಿ ನರೇಂದ್ರ ಮೋದಿ ಪ್ರಸಿದ್ಧ ಪಶ್ಚಿಮ ಬಂಗಾಳ ಬೀದಿ ತಿನಿಸು ಝಾಲ್ಮುರಿ ಸವಿದರು. ಮೋದಿ ಸರ್ಕಾರ 12 ವರ್ಷ ಪೂರೈಸಿದ ಸಂದರ್ಭ ಎನ್‌ಡಿಎ ಅಗ್ರ ಗಣ್ಯ ನಾಯಕರು ಸಭೆ ಸೇರಿದ್ದರು. ಇಂದು ಎನ್‌ಡಿಎ ಸಭೆಯಲ್ಲಿ ಎನ್‌ಡಿಎ ನಾಯಕರ ಜತೆ ಝಾಲ್ಮುರಿ ಹಂಚಿದ ಕ್ಷಣ ಎಂದು ಪ್ರಧಾನಿ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ವಿಡಿಯೋವೊಂದನ್ನು ಹಂಚಿಕೊಂಡಿದ್ದಾರೆ. ಪಶ್ಚಿಮ ಬಂಗಾಳ ನೂತನ ಮುಖ್ಯಮಂತ್ರಿ ಸುವೇಂದು ಅಧಿಕಾರಿ ನಾಯಕರಿಗೆ ಝಾಲ್ಮುರಿ ಹಂಚುತ್ತಿರುವುದನ್ನು ಕಾಣಬಹುದು. ಅದೇ ರೀತಿ ಮೋದಿ, ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಝಾಲ್ಮುರಿ ಸವಿದರು. ಸಚಿವ ಎಚ್‌ಡಿ ಕುಮಾರಸ್ವಾಮಿ ಮೋದಿ ಜತೆಗಿದ್ದರು.

IN THE HON'BLE COURT OF PRL. SENIOR CIVIL JUDGE AND JMFC, AT NELAMANGALA
OS No. 523/2012

PLAINTIFFS: Smt. Chikkamma and Another
-V/s-
DEFENDANTS: Smt. Puttachikkamma and Others

ADRESS OF PROPOSED DEFENDANTS No. 18,20,27 & 31

18. Sri. K.H. Ramamurthy, Son of Hanumanthaiah, aged about 42 years, R/at Kalenahalli Village, Urdigere Hobli, Tumkur Taluk, Tumkur District. **20. Smt. N. Gayathri**, Wife of S. Shivakumar, aged about 27 years, R/at Narasipura village, Sompura Hobli, Nelamangala Taluk, Bangalore Rural District. **27. Smt. Padma**, W/o Nandappa, aged about 40 years, R/at No.72, JD Mara Road, N.S. Palya, 3rd Phase, J.P. Nagara, Bangalore. **31. Smt. Preethi. B**, W/o C. Prakash, aged about 31 years, R/at Akkamma Compound, 8th Cross, Venkatapura, Koramangala, Bangalore -34

SUMMONS UNDER ORDER 5 RULE 20(1-A) OF C.P.C.

WHEREAS, the Plaintiffs have filed the above suit for the relief of Partition and for other reliefs with respect of the suit schedule properties. You are hereby Noticed/summoned to appear before the Hon'ble court in person or through an Advocate duly instructed and able to answer all material questions on **13/07/2026** at **11:00 A.M** in and answer the claim day. Hence, you are summoned to appear before the court on the said date personally or by the pleader, otherwise the Hon'ble Court will be deciding the matter in your absence by placing you Ex-parte.

SCHEDULE 'A'

All that piece and parcel of the property bearing Sy. No. 14, situated at Thammenahalli village, Dasanapura Hobli, Bangalore North Taluk, Bangalore District, measuring 1 acre 20 guntas of land being bounded on: East by: Patel Chikkanna's Property, West by: Puttamarappa's Property, North by: Chikkanna Reddy, Hanumanthaiah's, Siddappa's Property, South by: Govindareddy, Nanjappa's and Dasappa's Property.

SCHEDULE 'B'

All that piece and parcel of the property bearing Sy. No. 32/1, situated at Thammenahalli village, Dasanapura Hobli, Bangalore North Taluk, Bangalore District, measuring 38½ guntas of land being bounded on: East by: Government Gomala, West by: Chikkanna's Property, North by: Road, South by: Drainage (Halla).

Given under my hand and seal of this Court on this 10/06/2026

By order of the Court, Sheristedar, Court of Senior Civil Judge & JMFC Nelamangala

SRI. G.R. RAVEESHA, Advocate
#25, Brigade Majestic, 108, 1st Floor, A Block, 1st Main, Kalidasa Road, Gandhinagara, Bangalore-09.

PUBLIC NOTICE

Notice is hereby given to the public at large that our clients: 1.Sri Dhanaraj Bharathi Narasimha, S/o H. Narasimha Mogera, aged about 40 years, and 2. Sri Ethin Raj, S/o H. Narasimha Mogera, aged about 34 years, Both residing at No. 55, Balanjaneya Temple Road, KGEHBS Layout, Armane Nagara, Devasandra, Bengaluru North, Bengaluru-560094, have, vide notice dated 20/05/2026, cancelled and terminated the Agreement for Sale (without possession) dated 29/12/2025. The said Agreement for Sale was duly registered on 29/12/2025 as Document No. BYP-1-08311-2025-26, stored in Book-1, in the office of the Sub-Registrar, Gandhinagar (Byatarayanapura), in favour of Smt. Lavanya R, aged about 48 years, C/o Narasimhamurthy P, residing at No. 06, 03rd Cross, Amarajyothi Layout, Sanjayanagar, Behind Vaibhav Theatre, R.M.V. Extension, 2nd Stage, Bengaluru 560094 (PAN: ARCPL8211B, AADHAAR No. 9727 7201 5545). Our clients were compelled to cancel and terminate the Agreement for Sale dated 29/12/2025 due to non-compliance and violation of the terms and conditions of the said Agreement by the purchaser, resulting in the forfeiture of the advance amount. Despite sending several reminders and notices, the said Smt. Lavanya R failed to complete the registration of the Sale Deed by paying the balance sale consideration.

The public at large is hereby cautioned not to enter into any transaction, agreement, or arrangement with the said Smt. Lavanya R in respect of the Schedule Property. Any such dealing will not be binding upon our clients. Our clients are at absolute liberty and may proceed to deal with the Schedule Property at their own discretion.

SCHEDULE PROPERTY

All that piece and parcel of residential Bengaluru Development Authority (BDA) property bearing New Site No. 8/1, Old Site No. 8, Old Land Property No. 17/7, and Old Municipal Corporation No. 8, bearing PID No. 100-130-8/1, situated under Bruhat Bengaluru Mahanagara Palike (BBMP) limits, Geddalahalli Village, Kasaba Hobli, Bengaluru North Taluk, New Municipal Corporation Ward No. 100, BBMP Khatha No. 8/1, measuring East to West: 50 feet, and North to South: 30 feet, totaling 1,500 Sq. Feet, and bounded as follows: East by: 30 feet Road, West by: Property Numbers 5 and 6, North by: Northern side of the same property, South by: Property No. 9

NATARAJ. H.P, Advocate
No.4, 1st Floor, 'ANAGA', New BEL Road, Devasandra, Bengaluru, Karnataka-560094.
Mob: 9008769162.
Email id: advocatenataraj.hp@gmail.com,
Date: 06- 06- 2026

CHANGE OF NAME

I **Rekha Badiger**, W/o. Ganesh Badiger, aged about 32 years, presently residing at No.210, Back side of St. Yash Public School, Kempegowda Nagar, 8th Cross, Bengaluru North, Bengaluru 560091.

I have changed my Husband, My name And My son previous names as **Sanjaya Badiger, Supriya Badiger** and **Yashwanth**, assume the new names of my Husband, My Name and My son respectively as **Ganesh Badiger, Rekha Badiger**, And **Yashwanth Ganesh Badiger** vide Affidavit dated 08.06.2026 sworn before Sumithra.N. Shah, Advocate & Notary, at Bengaluru City

CHANGE OF NAME

I, **VENKATALAKSHMI VENKATA GIRIYAPPA** (Old Name), aged about 45 years, W/o. PRASANNA KUMAR HURALIGANGANAHALLY VEDAMURTHY, RESIDING AT FLAT NO.105, 1ST FLOOR, VAASTU HILL VIEW-3, NEAR NHVPS SCHOOL, R. R. NAGAR, BENGALURU-560098, KARNATAKA, declare that I have changed my name from **VENKATALAKSHMI VENKATA GIRIYAPPA** (Old Name), to **VENKATALAKSHMI** (New Name), henceforth I shall be known and called as **VENKATALAKSHMI** (New Name) for all my personal, official & legal purpose, vide Affidavit dated : 10/06/2026 before Notary **GANGARAJU.B.N.** at BENGALURU.

PUBLIC NOTICE

Public are informed that my client Sri.Sricharan G Sonole and Smt.Sowmya G.N. both are residing at 38/A, 6th Main 12th Cross, Near Ekya School, 3rd Phase, J.P.Nagar, Bengaluru -560078

My client are the absolute owner in possession the Property bearing Site No.38/A, BBMP PID No.57-143-38/A, E-PID No.8125036617, measuring East to West 40 Feet and North to South 30 Feet, in all measuring 1200 Sq.Ft., along with house, situated at 6th Main, 12th Cross, Sarakki 3rd Phase, J.P.Nagar 3rd Phase, Bengaluru, presently within the limits of BBMP and bounded on:

East By	:	Road.
West By	:	Site No.35/A,
North By	:	Site No.39/A,
South By	:	Site No.37/A.

My client has lost the Original property documents i.e. Registered Sale deed bearing Doc. No. 2596/1985-86 dated 09.10.1985 registered in the Sub-Registrar, Jayanagar (Bommanahalli) Bangalore and Allotment letter dated 20.11.1973, Possession Certificate dated 16.08.1974, MOTD No.5252/1985-86 and Discharge deed.7209/1994-95

The said property is in possession of Sri.Sricharan G Sonole and Smt.Sowmya G.N are the absolute owner and free from all encumbrances whatsoever.

My Client had lost the above mentioned deed; Inspite of several efforts the Original deeds and other documents are not found and they had lodged the police complaint through online dated 09.06.2026, Lost Report No. 2246199/2026.

If any person found or anyone having any claim or interest over the said property, he/she is requested to forward their claims along with the relevant documents to us within 07 days of this public notice. If we do not receive any claim from any person within 07 days, it will be strictly presumed that this property is absolutely free from any claim or encumbrance and no one has any claim over this property and if any One found the above deed kindly contact below mentioned.

PREMA B DUBAE - ADVOCATE
FFD VI, 4th Floor Sampoorna Chambers, Vasavi Temple Road, V.V. Puram, Bengluru-560004.
080-42053588/080-42296969

ಗೌರವಾನ್ವಿತ 56ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ತುಮಕೂರು
ಸಿ.ಮಿಸ್.ನಂ. 375/2026

[illegible]

ಸಹಿ/- [illegible]

ನ್ಯಾಯಾಲಯ, ಸಿ.ಎಂ.ಎಫ್.ಸಿ. ರಾಮನಗರ.
ಸಿ. ಮಿಸ್. ನಂ: 247/2026

[illegible]

ದಿನಾಂಕ: 28-08-2013 ... ದಿನಾಂಕ: 29-07-2026 ರಂದು ಬೆಳಗ್ಗೆ 11-00 ಗಂಟೆಗೆ ... [illegible]

ಈ ದಿನ ದಿನಾಂಕ: 09-06-2026 ರಂದು ... [illegible]

ದಿನಾಂಕ: 09-06-2026

IN THE COURT OF THE XIX ADDL. CITY CIVIL AND SESSIONS JUDGE AT BENGALURU (CCH-18)
O.S. No. 2961 / 2025

Between:
MR. SELVARAJA. G, S/o Govindaswamy, Aged about 58 years, Residing at No.324, Sheshadri Road, Lakshmanpuri, Gandhinagara Post, Bangalore-560009. **...PLAINTIFF**
And:
MR. D MAGENDRAVARAMAN, S/o Sri. A.N. Dhanaraj, Aged about 49 years, Residing at 7th Cross, Thayappa Reddy Complex, Narayanapura, Akashnagar, PWD Main Road, Bangalore-560 016. **...DEFENDANT**

SUMMONS/NOTICE TO DEFENDANT U/o 5 RULE 20 OF CPC

MR. D MAGENDRAVARAMAN, S/o Sri. A.N. Dhanaraj, Aged about 49 years, Residing at 7th Cross, Thayappa Reddy Complex, Narayanapura, Akashnagar, PWD Main Road, Bangalore-560 016. **...DEFENDANT**

Whereas the plaintiff above named has instituted the above case before this XIX Addl. City Civil And Sessions Judge / at Bengaluru (CCH-18) against you and others the relief of specific performance of contract against the defendant to execute the sale deed infavour of the plaintiff in respect of the schedule property.

You are hereby summoned to appear in this Court in person or by a pleader duly instructed and able to answer all material questions relating to the suit, or who shall be accompanied by some person able to answer all such questions on the **18th day July 2026 at 11:00 O' Clock** in the forenoon to answer the suit and you are directed to produce on that day all the documents upon which you intend to rely in support of your defense.

Take notice that, in default of your appearance on the day before mentioned, the suit will be heard and determined in your absence.

SCHEDULE (IMMOVABLE PROPERTY)

All the peace and parcel of the immovable property bearing Northen portion of the Site No.10, formed in Property No.14, Old Katha No.418/10, Present Katha No.23, Situated at Nagarajappa Layout, B. Narayanapura, K.R Puram Hobli, Bangalore East Taluk, Erstwhile Bangalore South Taluk, Previously Mahadevapura CMC Limits, Presently comes under BBMP limits, Bangalore and measuring East to West 40 feet, North to South 15 feet in all 600 sq feet in which constructed 5 squares in first floor and constructed 5 squares in second floor building with basic civil amenities bounded on:

East by: Site No.7, West by: Road, North by: Site No.9, South by: Remaining portion of Site No.9.

Given under my hand and seal of the court this 5th day of June 2026.

By Order of the Court
Sd/- Senior Sheristedar
City Civil Court, Bengaluru

Advocate for the Plaintiff:
SRI. LAKSHMIKANTH. K, Advocate,
UNNATI LAW CHAMBERS,
No.13, 1st Floor, 12th Cross, Banappa Park Road, Cubbonpet, Bangalore-560 002.

BEFORE THE MOTOR ACCIDENT CLAIMS TRIBUNAL AT BANGALORE
M V C. No.1316/2026

BETWEEN: Muniratheamma & others ...PETITIONER
AND: Abhinash Kumar Jha ...RESPONDENT

NOTICE TO RESPONDENT

Abhinash Kumar Jha, S/o Mayananda Jha, R/at No.376, 1st floor, 7th cross, 1st stage, 2nd Block, Moodalapalya, Kalyan Nagar, Bangalore-560072. (Owner of the Vehicle bearing Reg No. KA-41-MD-4033)

WHEREAS, the petitioner in MVC. No. 1316/2026, has filed the above claim petition against the respondents seeking compensation for a Sum of Rs.50,00,000/- an account of death of Munikrishnappa S/o Late. Muniyappa, in a road traffic accident involving your vehicle Car bearing Reg. No.KA-41-MD-4033, which occurred on 20-12-2025 at about 06:15 P.M. near Bannikuppe Gate, 'U' turn, Bangalore to Hyderabad, NH-44 Road, Chikkaballapura, you are hereby directed to be present before the Hon'ble court (Mayo Hall SCCH-21) on **21-07-2026** at 11:00 A.M. personally or through a pleader in the above case, duly instructed by you, failing which the matter will be heard in your absence, placing you Ex-parte.

Given under my hand and seal of the court on this 05-06-2026.

By order of the Court, Sheristedar, Court of Small Causes, Mayo Hall Unit, Bangalore.

Advocate for petitioner: **M. SUBRAMANI**
No.13, 12th Cross, Udayaravi Divine Paradise Building, 3rd floor, Cubbonpet, Bangalore -560002.

ಸಿ.ಮಿಸ್. ನಂ. 220/2026

[illegible]

ಮೊ: 9844574772

CHANGE OF NAME

I **MURALIDHARA NARAYANA REDDY** R/O No-24, 3Rd Main, 8Th Cross, Bluejay Atmosphere, Andrahalli Main Road, Kariobanahalli, Bengaluru-560073 have changed my name to **MURALIDHAR NARAYANA REDDY** vide affidavit dated 09-Jun-2026 before notary **R. S. VIJAY** Bangalore.

ಅಸಲು ದಾವೆ ಸಂಖ್ಯೆ: 5017/2026

[illegible]

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಗುಬ್ಬಿ
ಮೂಲದಾವಾ ನಂ.606/2025

[illegible]

ಪತ್ರಿಕಾ ಪ್ರಕಟಣೆ

[illegible]

IN THE COURT OF THE ADDL.CIVIL JUDGE AND J.M.F.C. AT PAVAGADA
C.Mis. No. 1140/2025

PETITIONER: Manjula W/o late Nagendra, aged about 32 years, R/o Veerammanahalli village, Nagalamadike Hobli, Pavagada Taluk, Tumakuru Dist.
-- Vs--
RESPONDENT:- The Dy.Tahasildar, Nagalamadike Hobli, Pavagada, Taluk.

PAPER PUBLICATION

WHEREAS, the petitioner has filed the above petition seeking issue of Death Certificate of petitioner's sister JYOTHI W/O LATE NAGENDRA was died on 10-05-2006 in the house of petitioner at Veerammanahalli village in Pavagada taluk, now the matter set down for issue notice/suit summons to all or any interested persons or legal heirs whoever got any objection over the above said Death Certificate may appear in this case either as respondents / petitioners and may prosecute the same on the date of hearing ie. 10.07.2026

You are hereby called upon to appear before this Hon'ble court at 11-00 A.M. on the said date of hearing either in person or through your counsel. If you fail to appear this court, the matter will be heard and decided exparte.

Given under the hand and seal of the court this day of 05.06.2026.

By order
CMO, Principle Civil Judge Court, Pavagada.
Advocate for petitioner:
S.T.Narasimha, Advocate, Pavagada

ಜಾಹೀರಾತಿಗಾಗಿ ಸಂಪರ್ಕಿಸಿ:
9845438807,9611755391

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ
ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ,
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಭದ್ರಾವತಿ
Email: cmobdvt@gmail.com Phone No. 9986570474 & 7349760984 & 9964306757 & 7353603442
ಸಂ/ಸಾಆಭ/ಔರಾಟೆಂ/01/2026-27 ದಿನಾಂಕ :09/06/2026

:: ಟೆಂಡರ್ ಅಧಿಸೂಚನೆ ::

ವಿಷಯ:- ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಭದ್ರಾವತಿಗೆ ಇಲ್ಲಿಗೆ 2026-27ನೇ ಸಾಲಿಗೆ ಔಷಧ ಮತ್ತು ಪರಿಕರಗಳ ಸರಬರಾಜು ಕುರಿತು ಇ-ಟೆಂಡರ್ ಆಹ್ವಾನಿಸಿರುವ ಬಗ್ಗೆ.

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಭದ್ರಾವತಿಗೆ ಇಲ್ಲಿಗೆ 2026- 27ನೇ ಸಾಲಿಗೆ ಔಷಧ ಮತ್ತು ಪರಿಕರಗಳ ಸರಬರಾಜು ಕುರಿತು, ಕರ್ನಾಟಕ ಪಾರದರ್ಶಕತೆಯ ಅಧಿನಿಯಮ 1999 ಮತ್ತು ನಿಯಮಗಳು 2000ರಂತೆ ದ್ವಿ-ಲಕೋಟೆ ಪದ್ಧತಿಯ (Two Cover system) ಪ್ರಕಾರ ಅರ್ಹ ಸಂಸ್ಥೆಗಳಿಂದ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ, ಇ.ಎಂ.ಡಿ. ಟೆಂಡರ್ ಷರತ್ತು ಮತ್ತು ನಿಬಂಧನೆಗಳ ಬಗ್ಗೆ ಮತ್ತು ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ವೆಬ್ ಸೈಟನಲ್ಲಿ ನೋಡಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:29/06/2026 ಬೆಳಗ್ಗೆ 11-00 ಗಂಟೆ. ಟೆಂಡರ್ ಅಂದಾಜು ಮೌಲ್ಯ ರೂ 80.00ಲಕ್ಷಗಳು (ಎಂಭತ್ತು ಲಕ್ಷ ರೂಪಾಯಿಗಳು ಮಾತ್ರ

ಸಹಿ/- ಮುಖ್ಯ ವೈದ್ಯಾಧಿಕಾರಿಗಳು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಭದ್ರಾವತಿ

[illegible]/26-27/91/06/392

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ,
ಹೊಸಪೇಟೆ, ವಿಜಯನಗರ ಜಿಲ್ಲೆ.
ಸಂ:ಪಿಡಿ/ಟೆಂಡರ್ ಪ್ರಕಟಣೆ/ AE-1 /2026-27/888 ದಿ:- 06.06.2026.

ಅಲ್ಪಾವಧಿ ಇ-ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ/KPP Portal ನಿಂದ ಮಾಹಿತಿಯನ್ನು ಪಡೆಯಬಹುದು. ಕಾಮಗಾರಿಗಳ ಇಂಡೆಂಟ್ ಸಂಖ್ಯೆ (11 ನಂ) 36365, 36366, 36121, 36389, 36305, 36304, 36303, 36302, 36301, 36371&36370. ಟೆಂಡರ್ ಸಲ್ಲಿಸುವ/ಪ್ರಿ ಬಿಡ್/ಬಿಡ್‌ಗಳನ್ನು ತೆರೆಯುವ ಅಂತಿಮ ದಿನಾಂಕವನ್ನು ಈ ಕಛೇರಿಯಿಂದ ಹಾಗೂ ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಿಶೇಷ ಸೂಚನೆ:- ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ . ಮರುಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಇದ್ದಲ್ಲಿ ಗುತ್ತಿಗೆದಾರರು KPP Portal ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಸಹಿ/-ಕಾರ್ಯನಿರ್ವಾಹಕ ಅಭಿಯಂತರು. ಲೋ.ಇ ವಿಭಾಗ ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/131

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜೀನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಹಾವೇರಿ
ಸಂ.ಕಾನಿಇಂಜಾ/ಪಿಡಿ/ಗುತ್ತಿಗೆ/4059-8443/2026-27/1016 ದಿನಾಂಕ: 09-06-206

ಇ-ಟೆಂಡರ್ ಪ್ರಕಟಣೆ

ದಿನಾಂಕ: 09-06-2026ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿಗಳ **ಇಂಡೆಂಟ್ ಸಂಖ್ಯೆ 35076**ರ ಕಾಮಗಾರಿ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 23-06-2026 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ)** ಮತ್ತು ಕಾಮಗಾರಿಗಳ **ಇಂಡೆಂಟ್ ಸಂಖ್ಯೆ 34375-2ನೇ** ಕರೆ ಕಾಮಗಾರಿ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 17-06-2026 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ, ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ **http://www.kppp.karnataka.gov.in** ನ್ನು ಸಂಪರ್ಕಿಸಲು ಕೋರಲಾಗಿದೆ.

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಪಡಿಸಿದ ಗುತ್ತಿಗೆ ದಿನಾಂಕಗಳು ಬದಲಾದಲ್ಲಿ, ಮರು ಗುತ್ತಿಗೆ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಸಹಿ/-
(ಎನ್.ಎನ್.ಪಾಟೀಲ)
ಕಾರ್ಯನಿರ್ವಾಹಕ ಇಂಜೀನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.
ವಾ.ಸಾ.ಸಂ.ಇ/ಹಾವೇರಿ/148/ದೇಶಪಾಂಡೆಪಬ್ಲಿಸಿಟಿ/2026-27

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮಂಡ್ಯ-571401
Autonomous Medical Institution, Government of Karnataka)
Phone No: 08232-231003, 222086,231197, 224040, Fax-08232-231001
E-mail: mimsmandyasupplysection@gmail.com, mimsmandya@gmail.com,

ಸಂಖ್ಯೆ:ಮಿಮ್ಸ್/ಸರಬ(1)/OBG/FM&FD SHORT TERM-E-TENDER/05/2026-27, ದಿನಾಂಕ:05.06.2026
ಸಂಖ್ಯೆ:ಮಿಮ್ಸ್/ಸರಬ(1)Radiology-Psy-Nursing/ಇ-ಟೆಂಡರ್/04/2026-27 ದಿನಾಂಕ:05.06.2026
ಸಂಖ್ಯೆ:ಮಿಮ್ಸ್/ಸರಬ(1)ರೇಡಿಯಾಲಜಿ/MRI-P.I/ಇ-ಟೆಂಡರ್/03/2026-27 ದಿನಾಂಕ:05.06.2026

ಇ-ಟೆಂಡರ್/ಅಲ್ಪಾವಧಿ ಇ-ಟೆಂಡರ್ ಪ್ರಕಟಣೆಗಳು (ದ್ವಿ-ಲಕೋಟೆ ಪದ್ಧತಿ)

ಮಿಮ್ಸ್ ಸಂಸ್ಥೆಯ ಓ.ಬಿ.ಜಿ ವಿಭಾಗಕ್ಕೆ ಅವಶ್ಯಕವಿರುವ FETAL MONITOR & FETAL DOPPLER ಉಪಕರಣಗಳನ್ನು ಅಲ್ಪಾವಧಿ-ಇ-ಟೆಂಡರ್ ಮುಖೇನ ಅಂದಾಜು ಮೊತ್ತ **ರೂ.39.00 ಲಕ್ಷಗಳಲ್ಲಿ** ಹಾಗೂ ರೇಡಿಯಾಲಜಿ ವಿಭಾಗಕ್ಕೆ Thermal Print Roll, ಮಾನಸಿಕ ಚಿಕಿತ್ಸಾ ವಿಭಾಗಕ್ಕೆ Lithium Analyser ಹಾಗೂ ಮಿಮ್ಸ್ ನರ್ಸಿಂಗ್ ಕಾಲೇಜು ಪ್ರಯೋಗಶಾಲೆಗೆ OBG, CHN & Community Lab Items ಗಳನ್ನು ಇ-ಟೆಂಡರ್ ಮುಖೇನ **ಅಂದಾಜು ಮೊತ್ತ ರೂ.15.00 ಲಕ್ಷಗಳಲ್ಲಿ** ಹಾಗೂ ರೇಡಿಯಾಲಜಿ ವಿಭಾಗಕ್ಕೆ MRI COMPATIBLE DUEL HEAD PRESSURE INJECTOR ಯಂತ್ರವನ್ನು BUY-BACK ಆಧಾರದಲ್ಲಿ ಇ-ಟೆಂಡರ್ ಮುಖೇನ ಅಂದಾಜು **ಮೊತ್ತ ರೂ.24.00 ಲಕ್ಷಗಳಲ್ಲಿ** ಸರಬರಾಜು ಪಡೆದು ಅಳವಡಿಸುವ ಸಂಬಂಧ ಉತ್ಪಾದಕರವರಿಂದ/ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್/ಅಲ್ಪಾವಧಿ ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮೇಲ್ಕಂಡ ಟೆಂಡರ್ ಪ್ರಕಟಣೆಗಳಿಗೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ **https://kppp.karnataka.gov.in** ರಲ್ಲಿ ಪಡೆದುಕೊಳ್ಳಬಹುದು ಹಾಗೂ ಕರ್ತವ್ಯದ ದಿನಗಳಲ್ಲಿ ಮಿಮ್ಸ್ ಸಂಸ್ಥೆಯ ಕಛೇರಿಯಲ್ಲಿ ಪಡೆದುಕೊಳ್ಳಬಹುದು.

ಸಹಿ/- ಮುಖ್ಯ ಆಡಳಿತಾಧಿಕಾರಿಗಳು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ
ವಾಸಾಸಂಇ/ಮಂಡ್ಯ/ಶಿರಡಿಸಾಯಿ/198/2026-27

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ
ಸಂ: ಕಾಪಾಅ/ಗ್ರಾ.ಕು.ನೀ. & ನೈರ್ಮಲ್ಯ ವಿಭಾಗ/ಚಿ.ಪುರ/ತಾ.ಶಾ/ಟೆಂಡರ್/2025-26/ಟೆಂ.ಪ್ರ ಸಂಖ್ಯೆ-16/Call-2 ದಿನಾಂಕ: 06.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 16/2025-26/ಎರಡನೇ ಕರೆ ದಿನಾಂಕ : 06.06.2026 (ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ ರವರು ರಾಜ್ಯ ಸರ್ಕಾರದ 2023-24ನೇ ಸಾಲಿನ ಆಯವ್ಯಯದ ಘೋಷಣೆಯಂತೆ ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿ ಚಿಕ್ಕಬಳ್ಳಾಪುರ ಜಿಲ್ಲೆಯ ಮಂಚೇನಹಳ್ಳಿ ತಾಲ್ಲೂಕಿನ ಗೌಡಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವರವಣಿ ಗ್ರಾಮದಲ್ಲಿ ನಿರ್ಮಾಣ ಮಾಡಲಾಗಿರುವ MRF(Material Recovery Facility) ಘಟಕವನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ಯಂತ್ರೋಪಕರಣಗಳನ್ನು ಸರಬರಾಜು ಮಾಡಲು ಉತ್ಪಾದಕರು/ಅಧಿಕೃತವಿತರಕರು/ನೋಂದಾಯಿತ ಸರಬರಾಜುದಾರರು ಹಾಗೂ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಐಟಂವಾರು ಟೆಂಡರ್‌ನ್ನು ಸ್ಟ್ಯಾಂಡರ್ ಟೆಂಡರ್ ಡಾಕ್ಯೂಮೆಂಟ್ KW-3 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಈ ಪೇಮೆಂಟ್‌ನಲ್ಲಿ (Credit Card/Direct Debit/ NEFT & OTC ಮುಖೇನ) ಅಥವ ಚಾಲನ್ ಮೂಲಕ ಭರ್ತಿ ಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕ ಕ್ಕಿಂತ 2 ದಿನ ಮುಂಚಿತವಾಗಿ ಸಲ್ಲಿಸುವುದು. (1) ಟೆಂಡರ್ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ **ಕೊನೆಯ ದಿನಾಂಕ ಮತ್ತು ಸಮಯ: 12.06.2026 ರ ಸಂಜೆ 4.30 ಗಂಟೆಯ ನಂತರ.** (2) ಟೆಂಡರ್‌ಗಳನ್ನು ಸ್ವೀಕರಿಸಲು **ಕೊನೆಯ ದಿನಾಂಕ ಮತ್ತು ಸಮಯ: 15.06.2026 ಸಂಜೆ 4.00 ಗಂಟೆಯ ವರೆಗೆ.** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:17.06.2026 ಬೆಳಗ್ಗೆ 11.00 ಗಂಟೆಯ ನಂತರ.** (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 19.06.2026 ಬೆಳಗ್ಗೆ 11.00 ಗಂಟೆಯ ನಂತರ.**

ಸಹಿ/- ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:97/ಕೆಎಸ್‌ಎಂಸಿಎ/2026-27

ಪುರಸಭೆ ಕಾರ್ಯಾಲಯ, ಹುಣಸಮಾರನಹಳ್ಳಿ
ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-562157 ದೂರವಾಣಿ: 080-23901864
ಇ-ಮೇಲ್: itstaff_ulb_hmhalli@gmail.com ವೆಬ್‌ಸೈಟ್: www.hunasamaranahallitown.mrc.gov.in
ಸಂಖ್ಯೆ: ಹು.ಪು/ತಾ.ಶಾ/ಸಿ.ಆರ್/03/2026-27 ದಿನಾಂಕ: 10-06-2026

ಪೂರ್ಣಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಹುಣಸಮಾರನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿನ 2026-27 ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ, ಎಸ್.ಎಫ್.ಸಿ ಕುಡಿಯುವ ನೀರು ಮತ್ತು ಪುರಸಭಾ ನಿಧಿಯಡಿ ಕಾಮಗಾರಿಗಳನ್ನು ಮತ್ತು ಸರ್ವಿಸ್ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯ & ವಿದ್ಯುತ್ ಪರಿವೀಕ್ಷಣಾ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಹಾಗೂ ಸಾಮಾಗ್ರಿಗಳ ಏಜೆಂದಿಯನ್ನು ನೊಂದಾಯಿತ ಅರ್ಹ ಏಜೆನ್ಸಿದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

-:ಕಾಮಗಾರಿಗಳ ವಿವರ:-

ಕ್ರ.ಸಂ.	ಇಂಡೆಂಟ್ ಸಂಖ್ಯೆಗಳು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ವರ್ಗ	ಯೋಜನೆ
1.	DMA/2025-26/SE7162/CALL-2	10.00	ಸಾಮಾನ್ಯ	ಪುರಸಭೆ
2.	DMA/2025-26/SE7163/CALL-2	9.00	ಸಾಮಾನ್ಯ	ಪುರಸಭೆ
3.	DMA/2025-26/IND6130/CALL-2	8.00	ಸಾಮಾನ್ಯ	ಪುರಸಭೆ
4.	DMA/2026-27/WS/WORK_INDENT58957	29.30	ಪ್ರವರ್ಗ-01	ಪುರಸಭೆ
5.	DMA/2026-27/BD/WORK_INDENT58958	1.65	ಸಾಮಾನ್ಯ	ಪುರಸಭೆ
6.	DMA/2026-27/WS/WORK_INDENT59249	13.90	ಸಾಮಾನ್ಯ	ಪುರಸಭೆ
7.	DMA/2026-27/IND6263	0.40	ಸಾಮಾನ್ಯ	ಎಸ್.ಎಫ್.ಸಿ & ಪುರಸಭೆ
8.	DMA/2026-27/WS/WORK_INDENT59260	29.40	ಪರಿಶಿಷ್ಟ ಜಾತಿ	ಎಸ್.ಎಫ್.ಸಿ (ಕು.ನಿ)&ಪುರಸಭೆ

ಅಲ್ಪಾವಧಿ ಟೆಂಡರ್ ಕಾಲಾವಧಿ: (ಕ್ರ ಸಂಖ್ಯೆ: 07&8): (1) ಆಕ್ಷೇಪಣೆ/ಮಾಹಿತಿಯನ್ನು ಸಲ್ಲಿಸಲು ದಿನಾಂಕ: 17.06.2026 ಸಂಜೆ 5.00 ಗಂಟೆ ವರೆಗೆ. (2) ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 18.06.2026 ಸಂಜೆ 5.00 ಗಂಟೆ ವರೆಗೆ. (3) ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 19.06.2026 ಸಂಜೆ 5.15 ಗಂಟೆಗೆ. (4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 22.06.2026 ರಂದು ಬೆಳಗ್ಗೆ 11.00 ಗಂಟೆ ನಂತರ. ಪೂರ್ಣಾವಧಿ ಟೆಂಡರ್ ಕಾಲಾವಧಿ: (ಕ್ರ ಸಂಖ್ಯೆ:1,2,3,4,5&6): (1) ಆಕ್ಷೇಪಣೆ/ಮಾಹಿತಿಯನ್ನು ಸಲ್ಲಿಸಲು ದಿನಾಂಕ: 25.06.2026 ಸಂಜೆ 5.00 ಗಂಟೆ ವರೆಗೆ. (2) ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 29.06.2026 ಸಂಜೆ 5.00 ಗಂಟೆ ವರೆಗೆ. (3) ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 30.06.2026 ಸಂಜೆ 5.15 ಗಂಟೆಗೆ. (4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 01.07.2026 ರಂದು ಬೆಳಗ್ಗೆ 11.00 ಗಂಟೆ ನಂತರ. ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು ಮತ್ತು ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ / ಬದಲಾವಣೆಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ತಿಳಿಸಲಾಗುವುದು.

ಸಹಿ/- ಆಡಳಿತಾಧಿಕಾರಿಗಳು, ಪುರಸಭೆ, ಹುಣಸಮಾರನಹಳ್ಳಿ
ಸಹಿ/- ಮುಖ್ಯಾಧಿಕಾರಿಗಳು, ಪುರಸಭೆ, ಹುಣಸಮಾರನಹಳ್ಳಿ
DIPR/CP/SPAN/1099/2026-27

ಕಾರ್ಯಪಾಲಕ ಇಂಜಿನಿಯರ್, ನಂ.4, ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿ (ನಿ), ತುರುವೇಕೆರೆ. ತುಮಕೂರು ಜಿಲ್ಲೆ, ಪಿನ್-572227
ಸಂ:04/2026-27 ದಿನಾಂಕ: 06.06.2026

ಕೆ.ಪಿ.ಪಿ.ಪಿ ಪೋರ್ಟಲ್ ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.04 ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿನಿ, ತುರುವೇಕೆರೆ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ ಇಂಡೆಂಟ್ ನಂಬರ್‌ನ ಕಾಮಗಾರಿಗಳಿಗೆ KC-3&KC-4 "QCBS ದ್ವಿ-ಲಕೋಟೆ" ಪದ್ಧತಿಯಲ್ಲಿ &ನಿಬಂಧನೆಗಳೊಂದಿಗೆ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

General Works:-

1. Indent No:CNNL/2026-27/SE0970 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.26.19ಲಕ್ಷ, ಇ.ಎಂ.ಡಿ. ಮೊತ್ತ ರೂ.52500/- KPWD Class III ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 2. Indent No:CNNL/2026-27/SE0972 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.14.29 ಲಕ್ಷ, ಇ.ಎಂ.ಡಿ. ಮೊತ್ತ ರೂ.36000/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 3. Indent No:CNNL/2026-27/SE0973 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.11.90 ಲಕ್ಷ, ಇ.ಎಂ.ಡಿ. ಮೊತ್ತ ರೂ.30000/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 4. Indent No:CNNL/2026-27/SE0974 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.16.28 ಲಕ್ಷ, ಇ.ಎಂ.ಡಿ. ಮೊತ್ತ ರೂ.50000/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 5. Indent No:CNNL/2026-27/SE0975 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.5.07 ಲಕ್ಷ, ಇ.ಎಂ.ಡಿ. ಮೊತ್ತ ರೂ.13000/- KPWD Class IVಮತ್ತು ಮೇಲ್ಪಟ್ಟ ಗುತ್ತಿಗೆದಾರರು. 6. Indent No:CNNL/2026-27/SE0976 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.13.09 ಲಕ್ಷ, ಇ.ಎಂ.ಡಿ. ಮೊತ್ತ ರೂ.33000/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು.7. Indent No:CNNL/2026-27/SE0977 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ: ರೂ.12.09 ಲಕ್ಷ, ಇ.ಎಂ.ಡಿ. ಮೊತ್ತ ರೂ.30500/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 8. Indent No:CNNL/2026-27/SE0978 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.16.12ಲಕ್ಷ, ಇ.ಎಂ.ಡಿ. ಮೊತ್ತ ರೂ.40500/- KPWD Class IVಮತ್ತು ಮೇಲ್ಪಟ್ಟ ಗುತ್ತಿಗೆದಾರರು. 9. Indent No:CNNL/2026-27/SE0979 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.11.08 ಲಕ್ಷ, ಇ.ಎಂ.ಡಿ. ಮೊತ್ತ ರೂ.28000/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 10. Indent No:CNNL/2026-27/SE0982 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.6.85ಲಕ್ಷ, ಇ.ಎಂ.ಡಿ. ಮೊತ್ತ ರೂ.17500/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 11. Indent No:CNNL/2026-27/SE0875 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ: ರೂ.34.84 ಲಕ್ಷ, ಇ.ಎಂ.ಡಿ. ಮೊತ್ತ ರೂ.70000/- KPWD Class III ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 12. Indent No:CNNL/2026-27/SE0876 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.31.69 ಲಕ್ಷ, ಇ.ಎಂ.ಡಿ. ಮೊತ್ತ ರೂ.63500/- KPWD Class III ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 13. Indent No:CNNL/2026-27/SE0877 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.14.39ಲಕ್ಷ, ಇ.ಎಂ.ಡಿ. ಮೊತ್ತ: ರೂ.36000/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 14. Indent No:CNNL/2026-27/SE0878 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.13.12 ಲಕ್ಷ, ಇ.ಎಂ.ಡಿ. ಮೊತ್ತ ರೂ.33000/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 15. Indent No:CNNL/2026-27/SE0879 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ: 7.97 ಲಕ್ಷ, ಇ.ಎಂ.ಡಿ. ಮೊತ್ತ: ರೂ.20000/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 16. Indent No:CNNL/2026-27/SE0880 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.9.47ಲಕ್ಷ, ಇ.ಎಂ.ಡಿ. ಮೊತ್ತ ರೂ.24000/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 17. Indent No:CNNL/2026-27/SE0881 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.7.54 ಲಕ್ಷ, ಇ.ಎಂ.ಡಿ. ಮೊತ್ತ ರೂ.19000/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 18. Indent No:CNNL/2026-27/SE0883 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.13.50ಲಕ್ಷ, ಇ.ಎಂ.ಡಿ. ಮೊತ್ತ ರೂ.34000/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 19. Indent No:CNNL/2026-27/SE0873 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ: ರೂ: 14.06 ಲಕ್ಷ, ಇ.ಎಂ.ಡಿ. ಮೊತ್ತ: ರೂ.35500/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 20. Indent No:CNNL/2026-27/SE0885 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ: ರೂ.6.04ಲಕ್ಷ, ಇ.ಎಂ.ಡಿ. ಮೊತ್ತ ರೂ.15500/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 21. Indent No:CNNL/2026-27/SE0886 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.12.81ಲಕ್ಷ, ಇ.ಎಂ.ಡಿ. ಮೊತ್ತ ರೂ.32500/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 22. Indent No:CNNL/2026-27/SE0888 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.6.02ಲಕ್ಷ, ಇ.ಎಂ.ಡಿ. ಮೊತ್ತ: ರೂ.15500/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 23. Indent No:CNNL/2026-27/SE0889 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.10.69ಲಕ್ಷ, ಇ.ಎಂ.ಡಿ. ಮೊತ್ತ ರೂ.27000/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 24. Indent No:CNNL/2026-27/SE0890 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.6.13 ಲಕ್ಷ, ಇ.ಎಂ.ಡಿ. ಮೊತ್ತ ರೂ.15500/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 25. Indent No:CNNL/2026-27/SE0852 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.6.05 ಲಕ್ಷ, ಇ.ಎಂ.ಡಿ. ಮೊತ್ತ ರೂ.15500/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 26. Indent No:CNNL/2026-27/SE0894 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.5.27 ಲಕ್ಷ, ಇ.ಎಂ.ಡಿ. ಮೊತ್ತ ರೂ.13500/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 27. Indent No:CNNL/2026-27/SE0868 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.12.09 ಲಕ್ಷ, ಇ.ಎಂ.ಡಿ. ಮೊತ್ತ ರೂ.30500/- KPWD Class III ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 28. Indent No:CNNL/2026-27/SE0896 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.9.47ಲಕ್ಷ, ಇ.ಎಂ.ಡಿ. ಮೊತ್ತ ರೂ.24000/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 29. Indent No:CNNL/2026-27/SE0895 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.4.75 ಲಕ್ಷ, ಇ.ಎಂ.ಡಿ. ಮೊತ್ತ ರೂ.12000/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 30. Indent No:CNNL/2026-27/SE0897 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.9.09 ಲಕ್ಷ, ಇ.ಎಂ.ಡಿ. ಮೊತ್ತ ರೂ.23000/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು. 31. Indent No:CNNL/2026-27/SE0887 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.15.82 ಲಕ್ಷ, ಇ.ಎಂ.ಡಿ. ಮೊತ್ತ ರೂ.40000/- KPWD Class IV ಮತ್ತು ಮೇಲ್ಪಟ್ಟ ಗುತ್ತಿಗೆದಾರರು.

• ಇ-ಪೋರ್ಟಲ್‌ನಲ್ಲಿ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: 12-06-2026 ಸಂಜೆ 17.00 ಗಂಟೆವರೆಗೆ. • ಇ-ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:-09-05-2026 ರಿಂದ 17-06-2026 ಸಂಜೆ 5:00 ಗಂಟೆಯವರೆಗೆ. • ತಾಂತ್ರಿಕ ಬಿಡ್ ತೆರೆಯುವ ದಿನಾಂಕ:- 18-06-2026 ಸಂಜೆ 5:30 ಗಂಟೆಗೆ. • ಆರ್ಥಿಕ ಬಿಡ್ ತೆರೆಯುವ ದಿನಾಂಕ : 19-06-2026 (ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ) ಕಾಮಗಾರಿ ವಿವರ, ಷರತ್ತುಗಳು, ಕಾಲಾವಧಿ ಹಾಗೂ ಇನ್ನಿತರ ವಿವರಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ಸಿಸ್ಟಮ್ https://kppp.karnataka.gov.in/ ಮೂಲಕ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ನಂ.4,
ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿ(ನಿ), ತುರುವೇಕೆರೆ.
DIPR/TUM/100/KSMCA/2026-27

ನಾಯಿ ಕಡಿತ ಪ್ರಕರಣ ಕಡಿಮೆಯಾಗಲಿ

» ಅಧಿಕಾರಿಗಳಿಗೆ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಸೂಚನೆ



• **ಬೆಂಗಳೂರು:** ನಾಯಿಕಡಿತ ಪ್ರಕರಣಗಳನ್ನು ಶೂನ್ಯವಾಗಿಸಿ ಮಾದರಿ ವಾರ್ಡ್ ನಿರ್ಮಾಣದ ಪಶುಪಾಲನಾ ಇಲಾಖೆಯ ವಿಶೇಷ ಕಾರ್ಯಕ್ರಮಕ್ಕೆ ಚಾಲನೆ ನೀಡುವಂತೆ ಪಶುಪಾಲನಾ ವಿಭಾಗದ ಅಧಿಕಾರಿಗಳಿಗೆ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಕೆ.ವಿ. ಸೂಚಿಸಿದರು.

ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಪಶುಪಾಲನಾ ಇಲಾಖೆಯ ಸಭೆ ನಡೆಸಿದ ಅವರು, ಬೀದಿ ನಾಯಿ ದತ್ತು ವಿಶೇಷ ಕಾರ್ಯಕ್ರಮ ಉತ್ತಮವಾಗಿದ್ದು, ಮುಂದುವರಿಸುವಂತೆ ಹಾಗೂ ನಾಯಿಕಡಿತ ಪ್ರಕರಣಗಳನ್ನು ಶೂನ್ಯವಾಗಿಸಿ, ಪಶುಪಾಲನಾ ಇಲಾಖೆಯ ಮಾದರಿ ವಾರ್ಡ್ ನಿರ್ಮಾಣ ವಿಶೇಷ ಕಾರ್ಯಕ್ರಮಕ್ಕೆ ಚಾಲನೆ ನೀಡಲು ಸೂಚಿಸಿದರು.

ಮುದ್ದು ಪ್ರಾಣಿ ಸ್ನೇಹಿ ಪಾರ್ಕ್‌ಗಳ ನಿರ್ಮಾಣ: ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ ಮೊದಲ ಹಂತದಲ್ಲಿ ಕನಿಷ್ಠ 4 ಕ್ಷೇತ್ರದಲ್ಲಿ ಮುದ್ದು ಪ್ರಾಣಿ ಸ್ನೇಹಿ ಪಾರ್ಕ್‌ಗಳನ್ನಾಗಿಸಿ. ಮೂರು ಸಂಚಾರಿ ಪಶುಚಿಕಿತ್ಸಾಲಯ/ರೆಸ್ಕ್ಯೂ ವಾಹನ ಪ್ರಾರಂಭಿಸಲು ಆವಶ್ಯಕ ಕ್ರಮ ತೆಗೆದುಕೊಳ್ಳಲು ತಿಳಿಸಿದರು.

ಎಬಿಸಿ ಕೇಂದ್ರ ಸಾಮರ್ಥ್ಯವನ್ನು ದ್ವಿಗುಣಗೊಳಿಸಿ

ಪ್ರಸ್ತುತ 100 ಕೆನಲ್ ಸಾಮರ್ಥ್ಯದ ಸುಮನಹಳ್ಳಿ ಎಬಿಸಿ ಕೇಂದ್ರದ ಸಾಮರ್ಥ್ಯವನ್ನು ಕನಿಷ್ಠ 200ಕ್ಕೂ ಮಿಕ್ಕಂತೆ ಮೇಲ್ದರ್ಜೆಗೇರಿಸಲು ಪ್ರಸ್ತುತ ಎಬಿಸಿ ಕೇಂದ್ರದ ಸಮುಚ್ಚಯದಲ್ಲಿರುವ ಘನತ್ಯಾಜ್ಯ ವಿಂಗಡಣೆ ವಿಭಾಗದ ಘಟಕವನ್ನು ಬೇರೆಡೆಗೆ ಸ್ಥಳಾಂತರಿಸಿ, ಕೂಡಲೇ ಯೋಜನೆ ರೂಪಿಸಲು ನಿರ್ದೇಶಿಸಿದರು. ಪ್ರಸ್ತುತ ನಿಗದಿಪಡಿಸಿರುವ ಸಜ್ಜೆಪಾಳ್ಯ ಗ್ರಾಮದ ಸರ್ವೆ ನಂ.3ರಲ್ಲಿ 500 ಬೀದಿ ನಾಯಿಗಳಿಗೆ ನಿರ್ಮಿಸಲಾಗುತ್ತಿರುವ ಬೀದಿ ನಾಯಿಗಳ ಆಶ್ರಯ ತಾಣ ನಿರ್ಮಾಣ ಕಾರ್ಯಕ್ಕೆ ವೇಗ ಹೆಚ್ಚಿಸಿ ಜುಲೈ ಅಂತ್ಯದೊಳಗೆ ಪೂರ್ಣಗೊಳಿಸಲು ತಿಳಿಸಿದರು. ಎಬಿಸಿ-ಎಆರ್‌ವಿ ಕಾರ್ಯಕ್ರಮದ ಗುರಿಗೆ ತಕ್ಕಂತೆ ಪ್ರತಿ ದಿನ ಎರಡೂ ವಲಯಗಳಿಂದ 35 ನಾಯಿಗಳ ಶಸ್ತ್ರಚಿಕಿತ್ಸೆ ಗುರಿಯನ್ನು ಸಾಧಿಸಿ. ಪ್ರತಿ ದಿನ 150 ಬೀದಿ ನಾಯಿಗಳಿಗೆ ಲಸಿಕೆ ಹಾಕುವ ಗುರಿಯನ್ನು ಸಾಧಿಸಿ. ಅನಧಿಕೃತ ಮಾಂಸದ ಮಳಿಗೆಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಮಾದರಿ ವಾರ್ಡ್ ನಿರ್ಮಾಣದ ವಿಶೇಷತೆಗಳು

- ಶೂನ್ಯ ಬೀದಿ ನಾಯಿ ಕಡಿತ ಪ್ರಕರಣಗಳು
- ಶೂನ್ಯ ನಾಯಿ ಮರಿಗಳು
- ಶೇ. 100 ರಷ್ಟು ಬೀದಿ ನಾಯಿಗೆ ಎಬಿಸಿ ಕಾರ್ಯ, ರೇಬೀಸ್ ಲಸಿಕೆ ಸೇರಿದಂತೆ ಇತರೆ ಕಾರ್ಯ ಸಾಧನೆ
- ಶೇ. 100ರಷ್ಟು ಪರವಾನಗಿ ಹೊಂದಿದ ಮಾಂಸದ ಮಳಿಗೆ
- ಮೊದಲ ಹಂತದಲ್ಲಿ 4 ವಾರ್ಡ್‌ಗಳನ್ನು ಇತರೆ ಇಲಾಖೆ ಹಾಗೂ ಎನ್‌ಜಿಒ ಗಳ ಸಹಯೋಗದೊಂದಿಗೆ ಪ್ರಾರಂಭಿಸಿ 3 ತಿಂಗಳೊಳಗೆ ಮಾದರಿ ವಾರ್ಡ್‌ಗಳನ್ನಾಗಿಸುವ ಗುರಿ

ಉದ್ಘಾಟನೆ



ನಗರದ ಸಿಲಿಕಾನ್ ಸ್ಪೋರ್ಟ್ಸ್ ಅಕಾಡೆಮಿ ಹಾಗೂ ಆಗಮನ ಡೆವಲಪರ್ಸ್ ಅಸೋಸಿಯೇಷನ್ ವತಿಯಿಂದ ಹವ್ಯಕ ಬ್ಯಾಡ್ಮಿಂಟನ್ ಟೂರ್ನಮೆಂಟ್ ಉದ್ಘಾಟನೆ ಕಾರ್ಯಕ್ರಮದಲ್ಲಿ ಬ್ಯಾಡ್ಮಿಂಟನ್ ಅಸೋಸಿಯೇಟ್ಸ್‌ನ ಸಹಸ್ಥಾಪಕ ಕಮಲಾಕರ ಕೆ.ಎಸ್, ಸಿಎ ರಾಮಮೋಹನ ಹೆಗಡೆ, ಜಗದೀಶ್ ಹೊಸಬಾಳೆ, ಸಂಸ್ಥೆಯ ಅಧ್ಯಕ್ಷ ಶ್ರೇಯಸ್ ಕುಮಾರ್ ರಾವ್, ಖ್ಯಾತ ಬ್ಯಾಡ್ಮಿಂಟನ್ ಚಾಂಪಿಯನ್ ಜೈರಾಮ್ ಪೈ, ನಟ ದಿಗಂತ್, ಹೃದ್ರೋಗ ತಜ್ಞ ಡಾ. ದಿವಾಕರ್ ಭಟ್ ಇದ್ದರು.

ಕಿರುಸುದ್ದಿ

ಅಜಿತ್ ಹನುಮಕ್ಕನವರ್‌ಗೆ ಬೆ.ಸು.ನಾ.ಮಲ್ಯ ಪ್ರಶಸ್ತಿ





• **ಬೆಂಗಳೂರು:** ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ, ಕೆ.ಮೋಹನ್‌ದೇವ್ ಆಳ್ವ ಮತ್ತು ಎಂ.ಕೆ. ಶೈಲಜಾ ಆಳ್ವ ದಂಪತಿಗಳು ಸ್ಥಾಪಿಸಿರುವ ಬೆ.ಸು.ನಾ.ಮಲ್ಯ ಪ್ರಶಸ್ತಿಗೆ ಪತ್ರಕರ್ತ ಅಜಿತ್ ಹನುಮಕ್ಕನವರ್ ಹಾಗೂ ಮಹಾಮಾನವ ಅಗೋಳಿ ಮಂಜಣ್ಣ ಪ್ರಶಸ್ತಿಗೆ ಅಂತಾರಾಷ್ಟ್ರೀಯ ಸೈಕ್ಲಿಂಗ್ ಕ್ರೀಡಾಪಟು ದಾನಮ್ಮ ಚಿಚಕಂಡಿ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು 5 ಸಾವಿರ ರೂ. ನಗದು ಪುರಸ್ಕಾರ ಮತ್ತು ಸ್ಮರಣಿಕೆ ಒಳಗೊಂಡಿರುತ್ತದೆ. ಜೂ.14 ರಂದು ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ನಡೆಯುವ ಸಮಾರಂಭದಲ್ಲಿ ನಿವೃತ್ತ ಆರಕ್ಷಕ ಮಹಾನಿರ್ದೇಶಕ ಶಂಕರ್ ಬಿದರಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಆ.21ರಿಂದ ಲೋಕ್ ಅದಾಲತ್

• **ಬೆಂಗಳೂರು:** ಸರ್ವೋಚ್ಚ ನ್ಯಾಯಾಲಯವು ಆ.21 ರಿಂದ ಆ.23ರವರೆಗೆ ಹಮ್ಮಿಕೊಂಡಿರುವ ಲೋಕ್ ಅದಾಲತ್ ಬೃಹತ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರು ರಾಜ್ಯದ ಎಲ್ಲಾ ಇಲಾಖೆಗಳಿಗೆ ಮಹತ್ವದ ನಿರ್ದೇಶನ ನೀಡಿದ್ದಾರೆ. ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಸಲ್ಲಿಸಿರುವ ಮನವಿಯ ಹಿನ್ನೆಲೆಯಲ್ಲಿ, ಮುಖ್ಯ ಕಾರ್ಯದರ್ಶಿಗಳು ಎಲ್ಲಾ ಇಲಾಖೆಗಳಿಗೆ ಸೂಚಿಸಿರುತ್ತಾರೆ. ಎಲ್ಲಾ ಇಲಾಖೆಯ ಮುಖ್ಯಸ್ಥರು, ತಮ್ಮ ಇಲಾಖೆಗಳಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ ಸರ್ಕಾರಿ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ವಿವಾದಗಳನ್ನು ಉಚಿತ ಲೋಕ್ ಅದಾಲತ್ ಮೂಲಕ ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುವಂತೆ ತಿಳಿಸಿದ್ದಾರೆ. ಅಲ್ಲದೇ, ಈ ಕುರಿತು ಕೈಗೊಂಡ ಕ್ರಮಗಳ ವರದಿಯನ್ನು 3 ದಿನಗಳ ಒಳಗಾಗಿ ನೇರವಾಗಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಸಲ್ಲಿಸಿ, ಅದರ ಪ್ರತಿಯನ್ನು ಮುಖ್ಯ ಕಾರ್ಯದರ್ಶಿಗಳ ಕಚೇರಿಗೆ ಕಳುಹಿಸಿಕೊಡಬೇಕೆಂದು ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳಿಗೆ ಸೂಚನೆ ನೀಡಲಾಗಿದೆ.

ಕಳ್ಳತನ: ಆರೋಪಿಗಳ ಸೆರೆ

• **ಬೆಂಗಳೂರು:** ಕೆಲಸ ಮಾಡಿಕೊಂಡಿದ್ದ ಮನೆಯಲ್ಲಿದ್ದ 25 ಲಕ್ಷ ರೂಪಾಯಿ ನಗದು ದೋಚಿಕೊಂಡು ಪರಾರಿಯಾಗಿದ್ದ ನೇಪಾಳ ಮೂಲದ ದಂಪತಿಯನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಪವನ್ ಬಿಸ್ತಾ ಹಾಗೂ ಸೀತಾ ಬಿಸ್ತಾ ಬಂಧಿತ ಆರೋಪಿಗಳಾಗಿದ್ದು, ಮನೆ ಮಾಲೀಕರು ಕೆಲಸದ ನಿಮಿತ್ತ ಮನೆಯಿಂದ ಹೊರಗಡೆ ಹೋಗಿದ್ದರು. ಅದೇ ಸಮಯದಲ್ಲಿ ಮನೆಯೊಳಗೆ ನುಗ್ಗಿದ್ದ ಆರೋಪಿಗಳು ನಗದು ದೋಚಿ ಪರಾರಿಯಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಮಾಲೀಕ ಮನೆಗೆ ಬಂದಾಗ ಕೆಲಸಗಾರರಿಬ್ಬರು ನಾಪತ್ತೆಯಾಗಿದ್ದರು. ಅನುಮಾನಗೊಂಡು ಕಬೋರ್ಡ್ ಪರಿಶೀಲಿಸಿದಾಗ ಮನೆಯಲ್ಲಿ ನಗದು ಕಳ್ಳತನವಾಗಿರುವುದು ಬಯಲಾಗಿತ್ತು. ತಕ್ಷಣ ಮಾಲೀಕರು ಅಮೃತಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ತನಿಖೆ ನಡೆಸಿದ ಅಮೃತಹಳ್ಳಿ ಠಾಣೆ ಪೊಲೀಸರು ಕೆಂಗೇರಿಯ ಶಿರ್ಕೆಯ ಬಳಿ ವಾಸವಿದ್ದ ಆರೋಪಿ ದಂಪತಿಯನ್ನು ಬಂಧಿಸಿದ್ದಾರೆ. ಆರೋಪಿಗಳಿಂದ 25 ಲಕ್ಷ ರೂ. ನಗದು ವಶಪಡಿಸಿಕೊಂಡು ತನಿಖೆ ಮುಂದುವರೆಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಶ್ರೀ ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ಬಿಜೆಪಿ ಮುಖಂಡರಿಂದ ಮೋದಿ ಆರೋಗ್ಯವೃದ್ಧಿಗೆ ಪ್ರಾರ್ಥನೆ

ಪ್ರಧಾನಿ ಮೋದಿಗಾಗಿ ವಿಶೇಷ ಪೂಜೆ





• **ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರು ಚುನಾಯಿತ ಪ್ರಧಾನಿಗಳಾಗಿ ಕಳೆದ 12 ವರ್ಷಗಳಿಂದ ದೇಶದ ಪ್ರಧಾನ ಸೇವಕರಾಗಿ ಕೆಲಸ ನಿರ್ವಹಿಸಿ ದಾಖಲೆ ನಿರ್ಮಿಸಿದ ಹಿನ್ನೆಲೆಯಲ್ಲಿ, ಬುಧವಾರ ರಾಜ್ಯಾದ್ಯಂತ ಬಿಜೆಪಿ ನಾಯಕರು, ಮುಖಂಡರು, ಕಾರ್ಯಕರ್ತರು ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಮಲ್ಲೇಶ್ವರದ ಶ್ರೀ ಕಾಡುಮಲ್ಲೇಶ್ವರ ದೇವಸ್ಥಾನ, ಶೇಷಾದ್ರಿಪುರ ವಾರ್ಡಿನ (ಫೈವ್‌ಲೈನ್) ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನ, ವಿಧಾನಸೌಧದ ಆವರಣದಲ್ಲಿರುವ ಶ್ರೀ ಕಟ್ಟೆ ಮುನೇಶ್ವರ ಸ್ವಾಮಿ ದೇವಸ್ಥಾನ, ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನ, ರಾಮಮೂರ್ತಿನಗರದ ಶ್ರೀ ಅಭಯ ಆಂಜನೇಯ ಸ್ವಾಮಿ ದೇವಸ್ಥಾನ ಹಾಗೂ ಬಿಡದಿ ಪಟ್ಟಣದ ಶ್ರೀ ರಾಮದೇವರ ದೇವಾಲಯ ಸೇರಿದಂತೆ ನಗರದ ವಿವಿಧೆಡೆ ಬಿಜೆಪಿ ನಾಯಕರು, ಮುಖಂಡರು, ಕಾರ್ಯಕರ್ತರು ಪ್ರಧಾನಿ ನರೇಂದ್ರ ಮೋದಿ ಅವರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಧಾನಿಯವರ ಆಯಸ್ಸು, ಆರೋಗ್ಯ ವೃದ್ಧಿಗೆ ಪ್ರಾರ್ಥನೆ ಮಾಡಿದರು.

ಮಲ್ಲೇಶ್ವರದ ಶ್ರೀ ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು. ಈ ವೇಳೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ.ರಾಧಾಮೋಹನ್ ದಾಸ್ ಅಗ್ರವಾಲ್, ರಾಜ್ಯ ಸಹ ಉಸ್ತುವಾರಿ ಸುಧಾಕರ್ ರೆಡ್ಡಿ, ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ, ಪ್ರಕೋಷ್ಠಗಳ ರಾಜ್ಯ ಸಂಯೋಜಕ ಎಸ್.ದತ್ತಾತ್ರೀ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್.ಹರೀಶ್ ಮುಂತಾದವರು ಉಪಸ್ಥಿತರಿದ್ದರು.

ಶೇಷಾದ್ರಿಪುರ ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನ: ಶೇಷಾದ್ರಿಪುರ ವಾರ್ಡಿನ (ಫೈವ್‌ಲೈನ್) ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ.ರಾಧಾಮೋಹನ್ ದಾಸ್ ಅಗ್ರವಾಲ್ ಅವರು ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ ಮತ್ತಿತರರ ಮುಖಂಡರು ಉಪಸ್ಥಿತರಿದ್ದರು.

ಶ್ರೀ ಕಟ್ಟೆ ಮುನೇಶ್ವರ ಸ್ವಾಮಿ ದೇವಸ್ಥಾನ: ವಿಧಾನಸೌಧದ ಆವರಣದಲ್ಲಿರುವ ಶ್ರೀ ಕಟ್ಟೆ ಮುನೇಶ್ವರ ಸ್ವಾಮಿ ದೇವಸ್ಥಾನದಲ್ಲಿ, ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್. ಅಶೋಕ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಶಾಸಕರಾದ ಎಸ್. ಮುನಿರಾಜು, ಚನ್ನಬಸಪ್ಪ, ಸಿ.ಕೆ. ರಾಮಮೂರ್ತಿ ಇದ್ದರು.

ಮಹಾಲಕ್ಷ್ಮಿ ಲೇಔಟ್ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನ: ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ, ಶಾಸಕ ಕೆ.ಗೋಪಾಲಯ್ಯ ಅವರು ದೇಶದ ಉಜ್ವಲ ಭವಿಷ್ಯಕ್ಕಾಗಿ ಹಾಗೂ ಪ್ರಧಾನಿ ನರೇಂದ್ರ ಮೋದಿಯವರಿಗೆ ಇನ್ನಷ್ಟು ಹೆಚ್ಚು ಆಯಸ್ಸು ಆರೋಗ್ಯ ಅಧಿಕಾರ ಲಭಿಸಲಿ ಎಂದು ಶ್ರೀ ಪ್ರಸನ್ನ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ ಪ್ರಾರ್ಥನೆ ಸಲ್ಲಿಸಿದರು.

ಈ ವೇಳೆ ಮಂಡಲದ ಅಧ್ಯಕ್ಷ ಡಾ.ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಅವಿನ್ ಆರಾಧ್ಯ, ಮಾಜಿ ಕಾರ್ಪೊರೇಟರ್‌ಗಳಾದ ಎನ್.ಜಯರಾಮ್, ಮಹದೇವ್, ಸ್ಥಳೀಯ ಮುಖಂಡರಾದ ರೈಲ್ವೆ ನಾರಾಯಣ, ವೆಂಕಟೇಶ್, ಬಿ.ಡಿ ಶ್ರೀನಿವಾಸ್, ವೆಂಕಟೇಶ್ ಮೂರ್ತಿ, ಶಿವಾನಂದ್, ರಾಘವೇಂದ್ರ ಶೆಟ್ಟಿ ಮುಂತಾದವರು ಭಾಗವಹಿಸಿದ್ದರು.

ಬಿಡದಿ ಪಟ್ಟಣದ ಶ್ರೀ ರಾಮದೇವರ ದೇವಾಲಯ: ಬಿಡದಿ ಪಟ್ಟಣದ ಶ್ರೀ ರಾಮದೇವರ ದೇವಾಲಯದಲ್ಲಿ, ಬುಧವಾರ ಪೂಜೆ ನೆರವೇರಿಸಿ, ಸಿಹಿ ಹಂಚಿ, ಮೋದಿ ಅನುಷ್ಠಾನಕ್ಕೆ ತಂದ ಕಾರ್ಯಕ್ರಮಗಳ ಕರಪತ್ರವನ್ನು ಮಾಗಡಿ ತಾಲೂಕು ಬಿಜೆಪಿ ಮೋರ್ಚಾ ಅಧ್ಯಕ್ಷ ಪ್ರಸಾದ್ ಗೌಡ ವಿತರಿಸಿದರು. ಈ ವೇಳೆ ಮಾಗಡಿ ಬಿಜೆಪಿ ಮೋರ್ಚಾ ಉಪಾಧ್ಯಕ್ಷ ಪೊಲೀಸ್ ರೇವಣ್ಣ, ಜಿಲ್ಲಾ ಕಾರ್ಯದರ್ಶಿ ಬಾನಂದೂರು ಪ್ರಸನ್ನ, ಒಬಿಸಿ ಮೋರ್ಚಾ ತಾಲೂಕು ಅಧ್ಯಕ್ಷ ಬಾಳೆಮಂಡಿಶಿವಣ್ಣ, ಮುಖಂಡರಾದ ಲೋಕೇಶ್, ಮುತ್ತಣ್ಣ, ಶಶಿಕಲಾ, ಉಮಾ, ಚಾಂದಿನಿ ಇದ್ದರು.

ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ



» ಶಾಸಕ ಎಸ್.ಟಿ.ಸೋಮಶೇಖರ್ ಭರವಸೆ

• **ಕೆಂಗೇರಿ:** ಯಶವಂತಪುರ ಕ್ಷೇತ್ರದ ಪ್ರತಿ ಹಳ್ಳಿಗಳಿಗೂ ಮೂಲಸೌಕರ್ಯ ಒದಗಿಸಿ ಮಾದರಿ ಕ್ಷೇತ್ರವನ್ನಾಗಿ ಅಭಿವೃದ್ಧಿಪಡಿಸಲು ಪ್ರಾಮಾಣಿಕವಾಗಿ ಶ್ರಮಿಸಲಾಗುವುದು ಎಂದು ಶಾಸಕ ಎಸ್.ಟಿ.ಸೋಮಶೇಖರ್ ಹೇಳಿದರು.

ತಲಘಟ್ಟಪುರ ವಾರ್ಡಿನ ಎಸ್.ಆರ್.ಎಸ್.ಬಡಾವಣೆಯ ಗಾಣಿಗರಪಾಳ್ಯದಲ್ಲಿ ಸುಮಾರು 18 ಕೋಟಿ ರೂ. ವೆಚ್ಚದಲ್ಲಿ ರಾಜಕಾಲುವೆ ತಡೆಗೋಡೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕ್ಷೇತ್ರದ ಎಲ್ಲಾ ಗ್ರಾಮಗಳ ರಸ್ತೆ, ಚರಂಡಿ ಹಾಗೂ ಕುಡಿಯುವ ನೀರು ಬೀದಿದೀಪ ಮುಂತಾದ ಮೂಲ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು. ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದ ಕ್ಷೇತ್ರದ ಎಲ್ಲಾ ವಾರ್ಡ್‌ಗಳಿಗೆ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ಸಮರ್ಪಕವಾಗಿ ಹಂಚುವ ಮುಖಾಂತರ ಕುಡಿಯುವ ನೀರು ಪೂರೈಕೆ, ರಸ್ತೆಗಳು, ಚರಂಡಿ, ಶೈಕ್ಷಣಿಕ ಪ್ರಗತಿ ಮುಂತಾದ ಕಾಮಗಾರಿಗಳಿಗೆ ಬಳಸಿಕೊಂಡು, ಅಭಿವೃದ್ಧಿಗೆ ವೇಗ ಹೆಚ್ಚಿಸಲಾಗಿದೆ. ಕ್ಷೇತ್ರದಲ್ಲಿ ಅಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ಶೀಘ್ರವಾಗಿ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಬಿಬಿಎಂಪಿ ಮಾಜಿ ಸದಸ್ಯ ಆರ್ಯ ಶ್ರೀನಿವಾಸ್, ವಾರ್ಡ್ ಅಧ್ಯಕ್ಷ ಅರುಣ್ ಕುಮಾರ್, ಮಾಜಿ ಬ್ಲಾಕ್ ಅಧ್ಯಕ್ಷ ಅಮೃತ್ ಗೌಡ, ಪ್ರಧಾನ ಕಾರ್ಯದರ್ಶಿ ಜೈಕುಮಾರ್, ಪ್ರಕಾಶ್, ಮಹಿಳಾ ಅಧ್ಯಕ್ಷೆ ಸೌಮ್ಯಾ, ರಾಣಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಜೂ. 28ರಿಂದ ಪಲ್ಸ್ ಪೋಲಿಯೊ

• **ಬೆಂಗಳೂರು:** ಜೂನ್ 28ರಿಂದ ಜುಲೈ 1 ರವರೆಗೆ ಪಲ್ಸ್ ಪೋಲಿಯೊ ಕಾರ್ಯಕ್ರಮ ನಡೆಯಲಿದ್ದು, ಈ ಸಂಬಂಧ ಅಗತ್ಯ ಪ್ರಚಾರ, ಮಾಹಿತಿ ಕಾರ್ಯಕ್ರಮಗಳನ್ನು ಕೈಗೊಂಡು, ಕಾರ್ಯಕ್ರಮ ಯಶಸ್ವಿಯಾಗುವಂತೆ ನೋಡಿಕೊಳ್ಳಬೇಕೆಂದು ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಅಪರ ಆಯುಕ್ತೆ ಕವಿತಾ ರಾಜಾರಾಂ ಸೂಚಿಸಿದರು.

ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿದ ಅವರು, ಮುಂದಿನ ಪೀಳಿಗೆಯನ್ನು ಪೋಲಿಯೋದಿಂದ ರಕ್ಷಿಸಲು ಎಲ್ಲರ ಸಹಕಾರ ಅಗತ್ಯ.

ಪಾಲಿಕೆ ವ್ಯಾಪ್ತಿಯಲ್ಲಿ ಯಾವ ಅರ್ಹ ಮಗುವೂ ಪೋಲಿಯೊ ಲಸಿಕೆಯಿಂದ ವಂಚಿತವಾಗದಂತೆ ಖಚಿತಪಡಿಸಿಕೊಳ್ಳಬೇಕೆಂದು ತಿಳಿಸಿದರು. ನಗರ ಪ್ರದೇಶದಲ್ಲಿರುವುದರಿಂದ ಪಲ್ಸ್ ಪೋಲಿಯೋ ಕಾರ್ಯಕ್ರಮದ ಅನುಷ್ಠಾನಕ್ಕೆ ಸಾಧಕಗಳ ಜೊತೆಗೆ ಬಾಧಕಗಳೂ ಇವೆ. ಎಲ್ಲ ವ್ಯವಸ್ಥೆಗಳು ಇರುವುದು ಧನಾತ್ಮಕ ಅಂಶವಾದರೆ, ಲಸಿಕೆ ಬಗೆಗಿನ ನಿರ್ಲಕ್ಷ್ಯ ಅಥವಾ ಉದಾಸೀನದಂತಹ ಮನೋಭಾವ ಬಾಧಕವಾಗಬಹುದು. ಈ ನಿಟ್ಟಿನಲ್ಲಿ ಅಧಿಕಾರಿಗಳು, ಸಿಬ್ಬಂದಿ ವರ್ಗ ಲಸಿಕಾಕರಣ ಕಾರ್ಯಕ್ರಮವನ್ನು ಕರ್ತವ್ಯ ಮತ್ತು ಜವಾಬ್ದಾರಿಯೆಂದು ಭಾವಿಸಿ ಯಶಸ್ವಿಗೊಳಿಸಬೇಕು ಎಂದು ಸಲಹೆ ನೀಡಿದರು.

ವಿಶೇಷವಾಗಿ, ಕೊಳೆಗೇರಿಗಳು, ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ ಶೇ.100ರಷ್ಟು ಲಸಿಕಾಕರಣ ಪೂರ್ಣಗೊಳ್ಳುವಂತೆ ಖಚಿತಪಡಿಸಿಕೊಳ್ಳಬೇಕು. ಲಸಿಕಾಕರಣದಲ್ಲಿ ಸ್ವಯಂಸೇವಕರು, ಎನ್‌ಜಿಒಗಳು, ವೈದ್ಯಕೀಯ ಕಾಲೇಜು, ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳ ನೆರವು ಪಡೆದುಕೊಳ್ಳಬೇಕು ಎಂದು ಸೂಚಿಸಿದರು.

ಚೆಕ್ ಬೌನ್ಸ್: ಗರಿಷ್ಠ ಶಿಕ್ಷೆಗೆ ಮಾತ್ರ ಅವಕಾಶ

• **ಬೆಂಗಳೂರು:** ಚೆಕ್ ಬೌನ್ಸ್ ಪ್ರಕರಣಗಳಲ್ಲಿ ವಿಧಿಸಲಾದ ದಂಡವನ್ನು ಪಾವತಿಸದ ಆರೋಪಿಗೆ ವಿಧಿಸಿದ ಗರಿಷ್ಠ ಶಿಕ್ಷೆ ಎರಡು ವರ್ಷವನ್ನು ಮೀರಿ ಜೈಲಿನಲ್ಲಿ ಇರಿಸುವುದಕ್ಕೆ ಅವಕಾಶವಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ.

ನೆಗೋಶಿಯೇಬಲ್ ಇನ್ಸ್ಟ್ರುಮೆಂಟ್ಸ್ ಕಾಯ್ದೆಯ ಸೆಕ್ಷನ್ 138ರಡಿ ದಾಖಲಾದ ಮೂರು ಚೆಕ್‌ಬೌನ್ಸ್ ಪ್ರಕರಣಗಳಲ್ಲಿ ತಲಾ ಮೂರು ವರ್ಷದ ಶಿಕ್ಷೆಗೆ ಒಳಗಾಗಿದ್ದ ವ್ಯಕ್ತಿ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ಭಾರತೀಯ ದಂಡ ಸಂಹಿತೆಯ ಸೆಕ್ಷನ್ 65 ಹಾಗೂ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 8(3) ಪ್ರಕಾರ ದಂಡ ಪಾವತಿಸದಿದ್ದರೆ ವಿಧಿಸುವ ಜೈಲು ಶಿಕ್ಷೆ ಮೂಲ ಅಪರಾಧಕ್ಕೆ ನಿಗದಿಪಡಿಸಿರುವ ಗರಿಷ್ಠ ಶಿಕ್ಷೆಯ ನಾಲ್ಕನೇ ಒಂದು ಭಾಗವನ್ನು ಮೀರಬಾರದು. ಚೆಕ್ ಬೌನ್ಸ್ ಅಪರಾಧಕ್ಕೆ ಗರಿಷ್ಠ ಎರಡು ವರ್ಷ ಜೈಲು ಶಿಕ್ಷೆ ನಿಗದಿಯಾಗಿರುವುದರಿಂದ, ದಂಡ ಪಾವತಿಸದಿದ್ದರೆ ಗರಿಷ್ಠ ಆರು ತಿಂಗಳವರೆಗೆ ಮಾತ್ರ ಜೈಲು ಶಿಕ್ಷೆ ವಿಧಿಸಬಹುದಾಗಿದೆ ಎಂದು ಪೀಠ ತಿಳಿಸಿದೆ. ಅಲ್ಲದೆ, ಜೈಲು ಶಿಕ್ಷೆ ಅನುಭವಿಸಿದ ಮಾತ್ರಕ್ಕೆ ದಂಡ ಪಾವತಿಸುವ ಹೊಣೆಗಾರಿಕೆ ಕೊನೆಗೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿರುವ ನ್ಯಾಯಾಲಯ, ಕಾನೂನಿನ ಪ್ರಕಾರ ಸರ್ಕಾರ ಅಥವಾ ದೂರುದಾರರು ನಂತರವೂ ಆಸ್ತಿ ಜಪ್ತಿ ಸೇರಿದಂತೆ ಇತರೆ ಕಾನೂನು ಕ್ರಮಗಳ ಮೂಲಕ ದಂಡದ ಮೊತ್ತವನ್ನು ವಸೂಲಿ ಮಾಡಬಹುದು ಎಂದು ಹೇಳಿದೆ. ಹೊಸದಿಲ್ಲಿ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ತೀರ್ಪುಗಳನ್ನು ಉಲ್ಲೇಖಿಸಿದ ನ್ಯಾಯಪೀಠ, ದಂಡ ಪಾವತಿಸದಿದ್ದಕ್ಕಾಗಿ ವಿಧಿಸುವ ಜೈಲು ಶಿಕ್ಷೆ ಹೆಚ್ಚುವರಿ ಶಿಕ್ಷೆಯಲ್ಲ, ಅದು ಕೇವಲ ನ್ಯಾಯಾಲಯದ ಹಣಕಾಸು ಆದೇಶವನ್ನು ಜಾರಿಗೊಳಿಸುವ ಕ್ರಮವಾಗಿದೆ ಎಂದರು.

ಪಾಲಿಕೆ ಆಯುಕ್ತರಿಂದ ಪರಿಶೀಲನೆ



• **ಬೆಂಗಳೂರು:** ಉತ್ತರ ನಗರ ಪಾಲಿಕೆ ವ್ಯಾಪ್ತಿಯ ವಿವಿಧ ಪ್ರದೇಶಗಳಿಗೆ ಪಾಲಿಕೆ ಆಯುಕ್ತ ಪಿ.ಸುನೀಲ್ ಕುಮಾರ್ ಧಿಡೀರ್ ಭೇಟಿ ನೀಡಿ ಸ್ವಚ್ಛತೆ, ಮಳೆನೀರು ಕಾಲುವೆಗಳ ನಿರ್ವಹಣೆ ಹಾಗೂ ರಸ್ತೆ ಕಾಮಗಾರಿಗಳ ಪರಿಶೀಲನೆ ನಡೆಸಿದರು.

ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸ್ವಚ್ಛತೆ ಕಾಪಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಅಲ್ಲದೆ, ಕಸ ನಿರ್ವಹಣೆ ಮತ್ತು ಡೀಪ್ ಕ್ಲೀನಿಂಗ್ ಕಾರ್ಯಗಳನ್ನು ತ್ವರಿತವಾಗಿ ಕೈಗೊಳ್ಳುವಂತೆ ನಿರ್ದೇಶನ ನೀಡಿದರು. ಕುಶಾಲ್ ನಗರದ ಎಂಸಿಸಿ ರಸ್ತೆ ಸಮೀಪದ ರಾಜಕಾಲುವೆಗೆ ಭೇಟಿ ನೀಡಿ ಸುಮಾರು 8 ರಿಂದ 10 ಕಿಲೋಮೀಟರ್ ವ್ಯಾಪ್ತಿಯಲ್ಲಿ ರಾಜಕಾಲುವೆಯಲ್ಲಿ ಹೂಳು ಮತ್ತು ತ್ಯಾಜ್ಯ ಸಂಗ್ರಹವಾಗಿರುವುದನ್ನು ಗಮನಿಸಿ, ಸಂಪೂರ್ಣ ಡಿಸಿಲ್ಟಿಂಗ್ ಕಾರ್ಯವನ್ನು ತುರ್ತಾಗಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಅಧಿಕಾರಿಗಳಿಗೆ ಬೆಂ. ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ಸೂಚನೆ

ಭೂ ಸ್ವಾಧೀನಕ್ಕೆ ಪತ್ರ ರವಾನಿಸಿ



• **ಬೆಂಗಳೂರು:** ಈಜಿಪುರ ಮೇಲ್‌ಸೇತುವೆ ರಸ್ತೆ ಹಾಗೂ ಸರ್ವಿಸ್ ರಸ್ತೆ ನಿರ್ಮಾಣಕ್ಕೆ ಭೂ ಸ್ವಾಧೀನಕ್ಕೆ ಸಂಬಂಧಪಟ್ಟವರಿಗೆ ಪತ್ರ ರವಾನಿಸಿ ಎಂದು ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಅಧಿಕಾರಿಗಳಿಗೆ ಸೂಚಿಸಿದರು. ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಕೇಂದ್ರೀಯ ಸದನ ಹಾಗೂ ಸೆಂಟ್ ಜಾನ್ಸ್ ಹಾಸ್ಪೆಲ್ ಬಳಿ ನಡೆಯುತ್ತಿರುವ ಫ್ಲೈ ಓವರ್ ಕಾಮಗಾರಿಯಿಂದಾಗಿ ಸಾರ್ವಜನಿಕ ಸಂಚಾರಕ್ಕೆ ಎದುರಾಗಿರುವ ಸಮಸ್ಯೆಗಳನ್ನು ನಿವಾರಿಸಲು ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಪರಿಶೀಲನೆ ನಡೆಸಿದರು. ಫ್ಲೈ ಓವರ್ ನಿರ್ಮಾಣವಾಗುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಪರ್ಯಾಯವಾಗಿ ಸರ್ವಿಸ್ ರಸ್ತೆ ನಿರ್ಮಿಸುವ ನಿಟ್ಟಿನಲ್ಲಿ, ಮಡಿವಾಳ ಮುಖ್ಯರಸ್ತೆ ಹಾಗೂ ಈಜಿಪುರ-ಮಡಿವಾಳ ರಸ್ತೆ ಮಾರ್ಗವನ್ನು ಪರಿಶೀಲಿಸಿದರು. ವಾಹನ ದಟ್ಟಣೆ ನಿಯಂತ್ರಿಸಲು ಸರ್ವಿಸ್ ರಸ್ತೆಯನ್ನು ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆಡಳಿತ ಮಂಡಳಿಯಿಂದ ಸಹಕಾರ

ಕಾಮಗಾರಿ ಕುರಿತಂತೆ ಸೇಂಟ್ ಜಾನ್ ಆಸ್ಪತ್ರೆ ಆಡಳಿತ ಮಂಡಳಿಯೊಂದಿಗೆ ಆಯುಕ್ತರು ಕಾಮಗಾರಿಯಿಂದ ಸಾರ್ವಜನಿಕರಿಗೆ ಉಂಟಾಗುವ ಅನುಕೂಲಗಳನ್ನು ಚರ್ಚಿಸಿದ್ದು, ಆಡಳಿತ ಮಂಡಳಿಯು ಕಾಮಗಾರಿಗೆ ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದೆ ಎಂದು ಪಾಲಿಕೆ ತಿಳಿಸಿದೆ.

ಸುಗಮ ಸಂಚಾರಕ್ಕೆ ಕ್ರಿಯಾ ಯೋಜನೆ ರೂಪಿಸಿ

ಫ್ಲೈ ಓವರ್ ಕಾಮಗಾರಿ ನಡೆಯುವ ಅವಧಿಯಲ್ಲಿ ಸಾರ್ವಜನಿಕರಿಗೆ ಮತ್ತು ವಾಹನ ಸವಾರರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಪರ್ಯಾಯ ರಸ್ತೆಗಳನ್ನು ಸಿದ್ಧಪಡಿಸಿಕೊಳ್ಳಲು ಹಾಗೂ ಸರ್ವಿಸ್ ರಸ್ತೆ ನಿರ್ಮಾಣಕ್ಕೆ ಪೂರಕವಾದ ಕ್ರಿಯಾ ಯೋಜನೆಯನ್ನು ಆದಷ್ಟು ಬೇಗ ರೂಪಿಸಿ, ಕಾಮಗಾರಿ ಕೈಗೆತ್ತಿಕೊಳ್ಳುವಂತೆ ಸ್ಥಳದಲ್ಲಿದ್ದ ಅಭಿಯಂತರರಿಗೆ ಸೂಚನೆ ನೀಡಿದರು.

ಭೂ ಸ್ವಾಧೀನಕ್ಕಾಗಿ ಮನವಿ ಪತ್ರ ನೀಡಿ

ಕೇಂದ್ರೀಯ ಸದನ ಜಂಕ್ಷನ್ ಬಳಿ ಸರ್ವಿಸ್ ರಸ್ತೆ ವಿಸ್ತರಣೆಗಾಗಿ ಸೆಂಟ್ ಜಾನ್ಸ್ ಸಂಸ್ಥೆಯ ಸುಮಾರು 590 ಚದರ ಮೀಟರ್ ಜಾಗದ ಅಗತ್ಯವಿದೆ. ಸದರಿ ಜಾಗವನ್ನು ರಸ್ತೆ ಕಾಮಗಾರಿಗೆ ಬಿಟ್ಟುಕೊಡುವ ಸಂಬಂಧ ಹಾಗೂ ಸೆಂಟ್ ಜಾನ್ ಸಿಗ್ನಲ್ ಬಳಿ ಫ್ಲೈ ಓವರ್‌ನ ಒಂದು ಪಿಲ್ಲರ್‌ಗೆ ಹಾಗೂ ಸರ್ಜಾಪುರ ಕಡೆಯಿಂದ ಬರುವ ವಾಹನಗಳಿಗೆ ನಿರ್ಮಿಸಬೇಕಿರುವ ಹೆಚ್ಚುವರಿ ಆಪ್ ರ್‍ಯಾಂಪ್‌ಗೆ ಅವಶ್ಯವಿರುವ ಭೂಮಿಯನ್ನು ನೀಡುವಂತೆ ಕೋರಿ ಸೇಂಟ್ ಜಾನ್ ಆಸ್ಪತ್ರೆಗೆ ಮನವಿ ಪತ್ರ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಎಂಸಿಎ ಕಚೇರಿ ಉದ್ಘಾಟನೆ



• **ಚಿಕ್ಕಬಳ್ಳಾಪುರ/ಬೆಂಗಳೂರು:** ಚಿಕ್ಕಬಳ್ಳಾಪುರದಲ್ಲಿ, ನೂತನವಾಗಿ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಕಂಪನಿಯನ್ನು, ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಬಿ.ಆನಂದ್ ಉದ್ಘಾಟಿಸಿದರು.

ಜಿಲ್ಲೆಯಲ್ಲಿ ಜಾಹೀರಾತು ಮತ್ತು ಇನ್ನಿತರೆ ವ್ಯವಹಾರಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ದೃಷ್ಟಿಯಿಂದ ಹಾಗೂ ಇಲ್ಲಿನ ಸರ್ಕಾರದ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಜಾಹೀರಾತು ಮತ್ತು ಇನ್ನಿತರೆ ಸೇವೆಗಳನ್ನು ಪರಿಣಾಮಕಾರಿಯಾಗಿ ಒದಗಿಸುವುದಕ್ಕಾಗಿ, ಚಿಕ್ಕಬಳ್ಳಾಪುರದ ಅಣಕನೂರು ಗೇಟ್, ಸುಮನ್ ಟಿವಿ ಕಚೇರಿ ಕಟ್ಟಡ, ಡಿಸಿ ಕಚೇರಿ ರಸ್ತೆ, ಚಿಕ್ಕಬಳ್ಳಾಪುರ-562101, ಇಲ್ಲಿ ಚಿಕ್ಕಬಳ್ಳಾಪುರ ಸಂಪರ್ಕ ಕಚೇರಿಯನ್ನು ನೂತನವಾಗಿ ಉದ್ಘಾಟಿಸಲಾಯಿತು. ಕೆಎಸ್‌ಎಂಸಿಎಯ ಉಪ ಪ್ರಧಾನ ವ್ಯವಸ್ಥಾಪಕ ಪಿ.ಎಸ್. ನಂದೀಶ, ಶಾಖಾ ವ್ಯವಸ್ಥಾಪಕಿ ಎಚ್.ಕೆ.ಗೀತಾ ಹಾಗೂ ಇತರೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಇಂದು ನಗರದಲ್ಲಿ...

- ಅಧಿಕ ಮಾಸ ಹಿನ್ನೆಲೆಯಲ್ಲಿ ವಿಶೇಷ ಉಪನ್ಯಾಸ
- ಸ್ಥಳ: ಪೂರ್ಣ ಪ್ರಜ್ಞಾ ವಿದ್ಯಾಪೀಠ
- ಬೆಳಗ್ಗೆ 8

- ಕೈಸುಗಾರಿಕೆ ಮತ್ತು ಅಡುಗೆ, ಆಹಾರ ವ್ಯಾಪಾರ ಮೇಳ
- ಸ್ಥಳ: ಬಿಐಇಸಿ
- ಬೆಳಗ್ಗೆ 11.30ಕ್ಕೆ

- ರಂಗ ಪರಂಪರೋತ್ಸವ
- ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ
- ಸಂಜೆ 4.30

- ಭರತನಾಟ್ಯ ಪ್ರದರ್ಶನ
- ಸ್ಥಳ: ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಮಠ, ಜಯನಗರ
- ಸಂಜೆ 6ಕ್ಕೆ

ಕಿರುಸುದ್ದಿ

ಆರ್ಚರಿ ಪ್ರೀಮಿಯರ್ ಲೀಗ್: ಹೈದರಾಬಾದ್ ಆತಿಥ್ಯ

• **ಬೆಂಗಳೂರು:** ಭಾರತೀಯ ಬಿಲ್ಲುಗಾರಿಕೆಯ ಪ್ರತಿಷ್ಠಿತ ಫ್ರಾಂಚೈಸಿ ಟೂರ್ನಿಯಾದ ಆರ್ಚರಿ ಪ್ರೀಮಿಯರ್ ಲೀಗ್ (ಎಪಿಎಲ್) ಎರಡನೇ ಆವೃತ್ತಿಗೆ ಹೈದರಾಬಾದ್ ಆತಿಥ್ಯ ವಹಿಸಲಿದೆ ಎಂದು ಆಯೋಜಕರು ಘೋಷಿಸಿದ್ದಾರೆ. ಅಕ್ಟೋಬರ್ 8ರಿಂದ 18ರವರೆಗೆ ನೆಕ್ಲೇಸ್ ರೋಡ್‌ನ ಪೀಪಲ್ಸ್ ಪ್ಲಾಜಾದಲ್ಲಿ 11 ದಿನಗಳ ಕಾಲ ನಡೆಯಲಿರುವ ಈ ಟೂರ್ನಿಯಲ್ಲಿ ವಿಶ್ವದ ಅಗ್ರ ಬಿಲ್ಲುಗಾರರು ಭಾಗವಹಿಸಲಿದ್ದಾರೆ. ಭಾರತೀಯ ಬಿಲ್ಲುಗಾರಿಕೆ ಸಂಸ್ಥೆ ಆಯೋಜಿಸುತ್ತಿರುವ ಈ ಲೀಗ್‌ಗೆ ತೆಲಂಗಾಣ ಸರ್ಕಾರ ಬೆಂಬಲ ನೀಡಿದ್ದು, ಕಳೆದ ವರ್ಷ ನವದೆಹಲಿಯಲ್ಲಿ ಯಶಸ್ವಿಯಾಗಿ ನಡೆದ ಮೊದಲ ಆವೃತ್ತಿಯ ಬಳಿಕ ಇದೀಗ ಎರಡನೇ ಸೀಸನ್‌ಗೆ ಸಜ್ಜಾಗಿದೆ. ಟೂರ್ನಿಯಲ್ಲಿ ಭಾರತದ ಪ್ರಮುಖ ಬಿಲ್ಲುಗಾರರಾದ ದೀಪಿಕಾ ಕುಮಾರಿ, ಅತನು ದಾಸ್, ಓಜಸ್ ದಿಯೋತಲೆ, ಜ್ಯೋತಿ ಸುರೇಖಾ, ಅಭಿಷೇಕ್ ವರ್ಮಾ ಹಾಗೂ ಅಂಕಿತಾ ಭಕತ್ ಸೇರಿದಂತೆ ಹಲವು ಅಂತಾರಾಷ್ಟ್ರೀಯ ತಾರೆಯರು ಸ್ಪರ್ಧಿಸಲಿದ್ದಾರೆ. ಒಟ್ಟು ಆರು ಫ್ರಾಂಚೈಸಿ ತಂಡಗಳು ಕಣಕ್ಕಿಳಿಯಲಿದ್ದು, ಮೈಟಿ ಮರಾಠಾಸ್, ರಾಜಪುತಾನ ರಾಯಲ್ಸ್, ಪೃಥ್ವಿರಾಜ್ ಯೋಧಾಸ್, ಕಾಕತೀಯ ನೈಟ್ಸ್, ಚೆರೋ ಆರ್ಚರ್ಸ್ ಹಾಗೂ ಚೋಳ ಚೀಫ್ಸ್ ತಂಡಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿವೆ. 48 ಭಾರತೀಯ ಮತ್ತು ವಿದೇಶಿ ಬಿಲ್ಲುಗಾರರು ಟೂರ್ನಿಯಲ್ಲಿ ಭಾಗವಹಿಸಲಿದ್ದಾರೆ.

ಅಭ್ಯಾಸ ಪಂದ್ಯದಲ್ಲಿ ಎಡವಿದ ಭಾರತ

• **ಕಾರ್ಡಿಫ್(ಇಂಗ್ಲೆಂಡ್):** ಇಂಗ್ಲೆಂಡ್ ವಿರುದ್ಧ ನಡೆದ ಅಭ್ಯಾಸ ಪಂದ್ಯದಲ್ಲಿ ಭಾರತೀಯ ಮಹಿಳಾ ತಂಡ ಸೋಲನುಭವಿಸಿದರೂ ಟಿ20 ವಿಶ್ವಕಪ್ ಉತ್ತಮ ಪ್ರದರ್ಶನದೊಂದಿಗೆ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿತು. ಶುಕ್ರವಾರ ಶುರುವಾಗಲಿರುವ ಮಹಿಳೆಯರ ಟಿ20 ವಿಶ್ವಕಪ್‌ಗೆ ಭಾರತ ಸಜ್ಜಾಗುತ್ತಿದೆ. ಇದೇ ವೇಳೆ ಬುಧವಾರ ನಡೆದ ಅಭ್ಯಾಸ ಪಂದ್ಯದಲ್ಲಿ ಭಾರತ ಇಂಗ್ಲೆಂಡ್ ತಂಡವನ್ನು ಎದುರಿಸಿತ್ತು. ಅಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 6 ವಿಕೆಟ್ ನಷ್ಟಕ್ಕೆ 171 ರನ್ ಗಳಿಸಿತು. ಆಮಿ ಜೋನ್ಸ್(64) ಸ್ಫೋಟಕ ಅರ್ಧಶತಕ ಬಾರಿಸಿದರೆ, ಸೀವರ್ ಬ್ರಂಟ್ 57 ರನ್ ಬಾರಿಸಿದರು. ದಾನಿ ಗಿಬ್ಸನ್ 12 ಬಾಲ್‌ಗಳಲ್ಲಿ 30 ರನ್ ಬಾರಿಸಿ ಸ್ಕೋರ್ ಹಿಗ್ಗಿಸಿದರು. ಭಾರತ ಪರ ಶ್ರೇಯಾಂಕಾ ಪಾಟೀಲ್ 2 ವಿಕೆಟ್ ಪಡೆದರೆ, ಚಾರಣಿ, ರಾಧಾ, ಶೆಫಾಲಿ ಮತ್ತು ರೇಣುಕಾ ತಲಾ ಒಂದು ವಿಕೆಟ್ ಪಡೆದುಕೊಂಡಿತು. ಗುರಿ ಬೆನ್ನತ್ತಿದ ಭಾರತ 19.5 ಓವರ್‌ಗಳಲ್ಲಿ 166 ರನ್‌ಗಳಿಗೆ ಆಲೌಟ್ ಆಯಿತು. ಅಗ್ರ ಕ್ರಮಾಂಕಿತ ಬ್ಯಾಟರು ಕೈಕೊಟ್ಟರೂ ಮಧ್ಯಮ ಕ್ರಮಾಂಕದಲ್ಲಿ ರಿಚಾ ಘೋಷ್ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. 36 ಎಸೆತ ಮಾತ್ರವೇ ಎದುರಿಸಿದ ಅವರು, 9 ಬೌಂಡರಿ-2ಸಿಕ್ಸರ್‌ನೊಂದಿಗೆ 68 ರನ್ ಬಾರಿಸಿದರು. ಉಳಿದ ಬ್ಯಾಟರು 20ರ ಗಡಿ ದಾಟದಿದ್ದರೂ 15 ರನ್ ಮಟ್ಟಿಗೆ ಕೊಡುಗೆಗಳನ್ನು ನೀಡುತ್ತಾ ಬಂದರು. ಪರಿಣಾಮ ಭಾರತ ಕೊನೆಯ 3 ಬಾಲ್‌ಗಳಲ್ಲಿ 6 ರನ್‌ಗಳಿಸಬೇಕಿತ್ತು. ಆದರೆ 2 ಬಾಲ್ ಎದುರಿಸಿದ ಭಾರತೀಯರು ಒಂದೂ ರನ್ ಗಳಿಸದೆ ಆಲೌಟ್ ಆದರು. ಇಂಗ್ಲೆಂಡ್ 5 ರನ್‌ಗಳಿಂದ ಪಂದ್ಯ ಗೆದ್ದುಕೊಂಡಿತು.

ಕೌಂಟಿ ಕ್ರಿಕೆಟ್ ಆಡಲಿದ್ದಾರೆ ಮಾನವ್ ಸುಥಾರ್

• **ಮುಂಬೈ:** ಇತ್ತೀಚೆಗೆ ನಡೆದ ಅಫ್ಘಾನಿಸ್ತಾನ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಭರ್ಜರಿ ಪ್ರದರ್ಶನ ನೀಡಿ ವಿಶ್ವ ಕ್ರಿಕೆಟ್ ಗಮನ ಸೆಳೆದ ಭಾರತದ ಯುವ ಸ್ಪಿನ್ನರ್ ಮಾನವ್ ಸುಥಾರ್ ಇಂಗ್ಲೆಂಡ್‌ನ ವಾರ್ವಿಕ್‌ಷೈರ್ ಕೌಂಟಿ ಕ್ಲಬ್ ಸೇರಲಿದ್ದು, ಎರಡು ಪಂದ್ಯವನ್ನಾಡಲಿದ್ದಾರೆ. 23 ವರ್ಷದ ಈ ಎಡಗೈ ಸ್ಪಿನ್ನರ್ ಕೌಂಟಿ ಚಾಂಪಿಯನ್‌ಶಿಪ್‌ನ ಎರಡು ಪ್ರಮುಖ ಪಂದ್ಯಗಳಲ್ಲಿ ಕಣಕ್ಕಿಳಿಯಲಿದ್ದಾರೆ. ಇದೇ ಮೊದಲ ಬಾರಿಗೆ ಕೌಂಟಿ ಕ್ರಿಕೆಟ್ ಆಡುತ್ತಿರುವ ಮಾನವ್ ಸುಥಾರ್ ಇತ್ತೀಚೆಗೆ, ನ್ಯೂ ಚಂಡೀಗಢದಲ್ಲಿ ನಡೆದ ಏಕೈಕ ಟೆಸ್ಟ್ ಪಂದ್ಯದಲ್ಲಿ ಕಣಕ್ಕಿಳಿಯುವ ಮೂಲಕ ತಮ್ಮ ಅಂತಾರಾಷ್ಟ್ರೀಯ ಚೊಚ್ಚಲ ಪಂದ್ಯವನ್ನು ಆಡಿದರು. ಮೊದಲ ಇನ್ನಿಂಗ್ಸ್‌ನಲ್ಲಿ ಕೇವಲ 33 ರನ್ ನೀಡಿ 6 ವಿಕೆಟ್ ಪಡೆದಿದ್ದ ಮಾನವ್, ಎರಡನೇ ಇನ್ನಿಂಗ್ಸ್‌ನಲ್ಲಿ 1 ವಿಕೆಟ್ ಉರುಳಿಸಿದ್ದರು.

ಭಾರತ ಎ-ಅಫ್ಘಾನ್ ಎ ಪಂದ್ಯ ಇಂದು

• **ದಂಬುಲಾ:** ಗೆಲುವಿನೊಂದಿಗೆ ಮುನ್ನಡೆ ಸಾಧಿಸಿರುವ ಭಾರತ ಎ ತಂಡವು ತ್ರಿಕೋನ ಸರಣಿಯ ಎರಡನೇ ಪಂದ್ಯದಲ್ಲಿ ಗುರುವಾರದಂದು ಅಫ್ಘಾನಿಸ್ತಾನ ಎ ತಂಡವನ್ನು ಎದುರಿಸಲಿದೆ. ಶ್ರೀಲಂಕಾ ಎ ವಿರುದ್ಧ ನಡೆದಿರುವ ಪಂದ್ಯದಲ್ಲಿ ಈಗಾಗಲೇ ಗೆಲುವು ಸಾಧಿಸಿರುವ ಭಾರತ ಎ ತಂಡ ಭಾರೀ ಮುನ್ನಡೆ ಸಾಧಿಸಿದೆ. ಇತ್ತ ಅಫ್ಘಾನಿಸ್ತಾನ ಇದೇ ಮೊದಲ ಬಾರಿಗೆ ಕಣಕ್ಕಿಳಿಯಲಿದೆ. ರುತುರಾಜ್ ಗಾಯಕ್ವಾಡ್ ಮತ್ತು ತಿಲಕ್ ವರ್ಮಾ ಭರ್ಜರಿ ಬ್ಯಾಟಿಂಗ್‌ನೊಂದಿಗೆ ಮೊದಲ ಪಂದ್ಯ ಗೆಲ್ಲಿಸಿದ್ದರು. ತಂಡದಲ್ಲಿ ವೈಭವ್ ಸೂರ್ಯವಂಶಿ ಸೇರಿದಂತೆ ಯುವಕರೇ ಇದ್ದು ಭರವಸೆಯಲ್ಲಿದೆ.

ನಾಳೆಯಿಂದ ಮಹಿಳಾ ಟಿ20 ವಿಶ್ವಕಪ್ ಶುರು | ಚುಟುಕು ಕ್ರಿಕೆಟ್ ಸಮರಕ್ಕೆ ಇಂಗ್ಲೆಂಡ್ ಸಿದ್ಧ

ರಂಗೇರಿಸಲಿದೆ ಮಹಿಳಾ ವಿಶ್ವಕಪ್

• **ಲಂಡನ್:** ಇತ್ತ ಫುಟ್‌ಬಾಲ್ ಕಣದಲ್ಲಿ ಮಿಂಚಲು ವಿಶ್ವ ಕಾಲ್ಚೆಂಡಿನಾಟದ ದಿಗ್ಗಜರು ಸಜ್ಜಾದರೆ ಅತ್ತ ಮಹಿಳೆಯರ ಕ್ರಿಕೆಟ್ ಟಿ20 ವಿಶ್ವಕಪ್ ಪಂದ್ಯಾವಳಿ ಜನರ ಮನರಂಜಿಸಲು ಸಜ್ಜಾಗಿದೆ. ಕಳೆದ ವರ್ಷ ಮುಕ್ತಾಯಗೊಂಡಿರುವ ಏಕದಿನ ಮಾದರಿಯ ಕ್ರಿಕೆಟ್ ವಿಶ್ವಕಪ್ ನಂತರ ಇದೀಗ ಟಿ20 ವಿಶ್ವಕಪ್ ಪಂದ್ಯಾವಳಿ ಶುಕ್ರವಾರದಿಂದ ನಡೆಯಲಿದೆ.

ಮಹಿಳೆಯರ ಕ್ರಿಕೆಟ್ ಅಂಗಳಕ್ಕೆ ಈಗ ಪುರುಷರ ಕ್ರಿಕೆಟ್‌ನಷ್ಟೇ ಮಹತ್ವ ಸಿಗುತ್ತಿದೆ. ಬಹುಮಾನ ಮೊತ್ತದಿಂದ ನೋಡುಗರ ಸಂಖ್ಯೆಯಲ್ಲೂ ಪರಿವರ್ತನೆಯ ಪರ್ವವೇ ಕಂಡುಬಂದಿದೆ. ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಪಂದ್ಯಾವಳಿ ಯಾಕೆ ವಿಶೇಷ ಮತ್ತು ಯಾಕೆ ಮುಖ್ಯ ಎಂಬ ಪ್ರಶ್ನೆಗೆ ಉತ್ತರ ಇಲ್ಲಿದೆ.

ವಿಶ್ವಕಪ್ ಶುರುವಾಗಿದ್ದು ಹೀಗೆ: 2000 ಇಸವಿಯ ನಂತರದ ಸಮಯದಲ್ಲಿ ಕ್ರಿಕೆಟ್‌ನ ಅತ್ಯಂತ ಚಿಕ್ಕ ಮಾದರಿಗೆ ಭಾರೀ ಜನಪ್ರಿಯತೆ ಸಿಕ್ಕಿತು. ವಿಶ್ವಾದ್ಯಂತ ಕ್ರಿಕೆಟ್ ಅಭಿಮಾನಿಗಳು ಅರ್ಧ ದಿನದಲ್ಲೇ ಮುಗಿಯುವ ಈ ಕ್ರೀಡೆಗೆ ಹೆಚ್ಚಿನ ಆಸಕ್ತಿ ತೋರಿದ ನಂತರ 2007ರಲ್ಲಿ ಪುರುಷರ ಟಿ20 ವಿಶ್ವಕಪ್ ಪಂದ್ಯಾವಳಿ ಆಯೋಜಿಸಲಾಗಿತ್ತು. ಇತ್ತ 2005ರಲ್ಲಿ ಮೊದಲ ಬಾರಿಗೆ ಮಹಿಳೆಯರ ನಡುವೆ ಅಂತಾರಾಷ್ಟ್ರೀಯ ಟಿ20 ಪಂದ್ಯ ನಡೆದಿತ್ತು. 2007ರಲ್ಲಿ ನಡೆದ ಪುರುಷರ ಟಿ20 ವಿಶ್ವಕಪ್‌ಗೆ ಸಿಕ್ಕ ಬೆಂಬಲ ಮತ್ತು ಆಸಕ್ತಿ ಗಮನಿಸಿದ ಅಂತಾರಾಷ್ಟ್ರೀಯ ಕ್ರಿಕೆಟ್ ಸಂಸ್ಥೆ 2009ರಲ್ಲಿ ಮಹಿಳೆಯರಲ್ಲೂ ಇದೇ ಮಾದರಿಯ ವಿಶ್ವಕಪ್ ಒಂದನ್ನು ಆಯೋಜಿಸಲು ಸಿದ್ಧತೆ ನಡೆಸಿತು. ಅದರಂತೆ 2009ರಲ್ಲಿ ಮೊದಲ ಬಾರಿಗೆ ಇಂಗ್ಲೆಂಡ್‌ನಲ್ಲಿ ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿ ನಡೆಯಿತು. ಅಲ್ಲಿಂದ ಇಲ್ಲಿಯವರೆಗೂ ಪ್ರತಿ ಎರಡು ವರ್ಷಕ್ಕೊಮ್ಮೆ ಪಂದ್ಯಾವಳಿ ನಡೆಯುತ್ತದೆ.

ಫಿಫಾ ಅಬ್ಬರದಲ್ಲಿ ಮಹಿಳೆಯರ ಕ್ರಿಕೆಟ್ ವಿಶ್ವಕಪ್ ಮರೆಯದಿರಿ

ಅರ್ಹತೆ ಪಡೆದುಕೊಳ್ಳುವುದು ಹೇಗೆ?: ಐಸಿಸಿ ಮಹಿಳಾ ಟ್ವೆಂಟಿ20 ಅಂತಾರಾಷ್ಟ್ರೀಯ ಶ್ರೇಯಾಂಕಗಳು ಮತ್ತು ಅರ್ಹತಾ ಪಂದ್ಯವಾದ ಮಹಿಳಾ ವಿಶ್ವ ಟ್ವೆಂಟಿ20 ಅರ್ಹತಾ ಪಂದ್ಯಾವಳಿಯಿಂದ ಅರ್ಹತೆಯನ್ನು ನಿರ್ಧರಿಸಲಾಗುತ್ತದೆ. 2014 ರವರೆಗೆ, ಐಸಿಸಿ ಮಹಿಳಾ ಟಿ20 ಅಂತಾರಾಷ್ಟ್ರೀಯ ಶ್ರೇಯಾಂಕದ ಅಗ್ರ ಆರು ತಂಡಗಳು ಸ್ವಯಂಚಾಲಿತವಾಗಿ ಅರ್ಹತೆ ಪಡೆಯುತ್ತಿದ್ದವು. ಉಳಿದ ಎರಡು ಸ್ಥಾನಗಳನ್ನು ಅರ್ಹತಾ ಪ್ರಕ್ರಿಯೆಯಿಂದ ನಿರ್ಧರಿಸಲಾಗುತ್ತದೆ. 2014ರ ಆವೃತ್ತಿಯಲ್ಲಿ, ಆರು ಸ್ಥಾನಗಳನ್ನು ಐಸಿಸಿ ಮಹಿಳಾ ಟಿ20ಐ ಶ್ರೇಯಾಂಕದ ಅಗ್ರ ಎಂಟು ತಂಡಗಳು ನಿರ್ಧರಿಸುತ್ತಿದ್ದವು, ಆತಿಥೇಯ ದೇಶ ಮತ್ತು ಮೂರು ಅರ್ಹತಾ ತಂಡಗಳು ಪಂದ್ಯಾವಳಿಯಲ್ಲಿ ಅವರೊಂದಿಗೆ ಸೇರುತ್ತವೆ. 2016ರಿಂದ, ಐಸಿಸಿ ಮಹಿಳಾ ಟಿ20 ತಂಡದ ಶ್ರೇಯಾಂಕದ ಅಗ್ರ ಎಂಟು ತಂಡಗಳು ಏಳು ಸ್ಥಾನಗಳನ್ನು ನಿರ್ಧರಿಸುತ್ತವೆ, ಆತಿಥೇಯ ದೇಶ ಮತ್ತು ಎರಡು ತಂಡಗಳು ಅರ್ಹತಾ ಸುತ್ತಿನ ಮೂಲಕ ಕೂಡಿಕೊಳ್ಳುತ್ತವೆ.


ಈ ಬಾರಿ ಹೆಚ್ಚಿನ ತಂಡಗಳು: ಈ ಬಾರಿಯ ಟೂರ್ನಿ ಇಂಗ್ಲೆಂಡ್, ವೇಲ್ಸ್‌ನಲ್ಲಿ ನಡೆಯುತ್ತಿದೆ. ವಿಶೇಷವೆಂದರೆ ಸಾಮಾನ್ಯವಾಗಿ 10 ತಂಡಗಳು ಮಾತ್ರ ಈ ಪಂದ್ಯಾವಳಿ ಭಾಗವ ಹಿಸಿದರೆ ಈ ಬಾರಿ 10ರ ಬದಲು 12 ತಂಡ ಭಾಗವಹಿಸುತ್ತಿವೆ. ಇದು ಟೂರ್ನಿಯ ಅತಿ ದೊಡ್ಡ ಆವೃತ್ತಿಯಾಗಿದೆ. ಬಹುಮಾನ ಮೊತ್ತವೂ ದಾಖಲೆಯ 8.8 ಮಿಲಿಯನ್ ಡಾಲರ್ ಆಗಿದೆ.



ವಿಶ್ವಕಪ್ ಮಾಹಿತಿ



ಒಟ್ಟು ಪಂದ್ಯ	ಒಟ್ಟು ತಂಡಗಳು
33	12



ಗುಂಪುಗಳು

ಎ: ಆಸ್ಟ್ರೇಲಿಯಾ, ಭಾರತ, ಬಾಂಗ್ಲಾದೇಶ, ನೆದರ್ಲೆಂಡ್ಸ್, ಪಾಕಿಸ್ತಾನ, ದಕ್ಷಿಣ ಆಫ್ರಿಕಾ

ಬಿ: ಇಂಗ್ಲೆಂಡ್, ಐರ್ಲೆಂಡ್, ನ್ಯೂಜಿಲೆಂಡ್, ಸ್ಕಾಟ್ಲೆಂಡ್, ಶ್ರೀಲಂಕಾ, ವೆಸ್ಟ್ ಇಂಡೀಸ್

ಮಾದರಿ:
- ರೌಂಡ್ ರಾಬಿನ್, ನಂತರ ನಾಕೌಟ್

ಹಾಲಿ ಚಾಂಪಿಯನ್ಸ್
- ನ್ಯೂಜಿಲೆಂಡ್

ಅತ್ಯಂತ ಯಶಸ್ವಿ ತಂಡ
- ಆಸ್ಟ್ರೇಲಿಯಾ

ಪಂದ್ಯಾವಳಿಯ ಆರಂಭ
- 12 ಜೂನ್

ಫೈನಲ್: 5 ಜುಲೈ

ಪ್ರಮುಖ ದಾಖಲೆಗಳು
- ಅತ್ಯಧಿಕ ಪ್ರಶಸ್ತಿಗಳು: ಆಸ್ಟ್ರೇಲಿಯಾ (6)
- ಅತಿ ಹೆಚ್ಚು ರನ್: ಸೂಜಿ ಬೇಟ್ಸ್ (1216+ ರನ್)
- ಅತಿ ಹೆಚ್ಚು ವಿಕೆಟ್: ಮೇಗನ್ ಶುಟ್ (48+ ವಿಕೆಟ್)

ಟಿ20 ವಿಶ್ವಕಪ್‌ಗಿದೆ ಅದ್ಭುತ ಇತಿಹಾಸ

1. ಮೊದಲ ಚಾಂಪಿಯನ್ ಇಂಗ್ಲೆಂಡ್ (2009)
ಲಾರ್ಡ್ಸ್ ಮೈದಾನದಲ್ಲಿ ನಡೆದ ಮೊದಲ ಮಹಿಳಾ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಇಂಗ್ಲೆಂಡ್ ನ್ಯೂಜಿಲೆಂಡ್ ತಂಡವನ್ನು ಸೋಲಿಸಿ ಇತಿಹಾಸ ನಿರ್ಮಿಸಿತು.

2. ಟಿ20ಯಲ್ಲೂ ಆಸ್ಟ್ರೇಲಿಯಾ ಪ್ರಭುತ್ವ
2010ರಿಂದ 2014ರವರೆಗೆ ಸತತ ಮೂರು ಬಾರಿ ಹಾಗೂ ನಂತರ 2018, 2020 ಮತ್ತು 2023ರಲ್ಲಿ ಪ್ರಶಸ್ತಿ ಗೆದ್ದು ಮಹಿಳಾ ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾ ಬೆಸ್ಟ್ ತಂಡವಾಗಿದ್ದಲ್ಲದೆ ಪ್ರತಿಷ್ಠಿತ ಮಾದರಿಯಲ್ಲಿ ತನ್ನ ಪ್ರಭುತ್ವ ನಿರ್ಮಿಸಿತು.

3. ವೆಸ್ಟ್ ಇಂಡೀಸ್‌ನ ಐತಿಹಾಸಿಕ ಗೆಲುವು
2016ರಲ್ಲಿ ಕೋಲ್ಕತ್ತಾದಲ್ಲಿ ನಡೆದ ಫೈನಲ್‌ನಲ್ಲಿ ಆಸ್ಟ್ರೇಲಿಯಾವನ್ನು ಸೋಲಿಸಿ ಮೊದಲ ಬಾರಿಗೆ ಚಾಂಪಿಯನ್ ಆಯಿತು.

4. 2020ರಲ್ಲಿ ಭಾರತದ ಕನಸು ಭಗ್ನ
2020ರ ಫೈನಲ್‌ನಲ್ಲಿ 86,000ಕ್ಕೂ ಹೆಚ್ಚು ಪ್ರೇಕ್ಷಕರ ಎದುರು ಭಾರತ ಆಸ್ಟ್ರೇಲಿಯಾ ವಿರುದ್ಧ ಸೋತು ಪ್ರಶಸ್ತಿ ಕಳೆದುಕೊಂಡಿತು. ಇದು ಮಹಿಳಾ ಕ್ರಿಕೆಟ್‌ನ ಅತಿ ದೊಡ್ಡ ಪ್ರೇಕ್ಷಕ ದಾಖಲೆಯೊಂದಾಗಿದೆ.

5. ನ್ಯೂಜಿಲೆಂಡ್‌ನ ಚೊಚ್ಚಲ ಕಿರೀಟ
2024ರಲ್ಲಿ ದಕ್ಷಿಣ ಆಫ್ರಿಕಾವನ್ನು ಮಣಿಸಿ ನ್ಯೂಜಿಲೆಂಡ್ ಮೊದಲ ಬಾರಿಗೆ ಮಹಿಳಾ ಟಿ20 ವಿಶ್ವಕಪ್ ಗೆದ್ದಿತು.



ವಿಶ್ವಕಪ್ ಮೈದಾನಗಳ ಯಶಸ್ಸಿನ ಹಿಂದೆ ಅಡಗಿರುವ ಮಹಾ ವಿಜ್ಞಾನ

ಮೈದಾನದ ಹುಲ್ಲಿನ ಹಿಂದಿದೆ ರೋಚಕ ಕಹಾನಿ

ಫಿಫಾ ವಿಶ್ವಕಪ್ ನಡೆಯ ಬೇಕಾದರೆ ಸಾವಿರಾರು ಆಟಗಾರರು ಮೈದಾನದಲ್ಲಿ ಮಿಂಚುತ್ತಾರೆ. ಲಕ್ಷಾಂತರ ಅಭಿಮಾನಿಗಳು ಕ್ರೀಡಾಂಗಣದ ರಂಗೇರಿಸುತ್ತಾರೆ. ಕೋಟ್ಯಂತರ ಅಭಿಮಾನಿಗಳ ವೀಕ್ಷಣೆ, ನಿರ್ಣಾಯಕರ ನಿರ್ಧಾರ, ಗ್ರೌಂಡ್‌ಸ್ಟಾಫ್‌ಗಳ ಶ್ರಮ ಮತ್ತು ಆಯೋಜಕರ ಸಾಹಸ ಸೇರಿದಾಗ ಮಾತ್ರವೇ ಫಿಫಾ ವಿಶ್ವಕಪ್ ಅಂಥ ದೊಡ್ಡ ಕೂಟಗಳು ಯಶಸ್ವಿಯಾಗುತ್ತವೆ. ಅಂಥದ್ದೇ ಮತ್ತೊಂದು ತಂಡದ ಬಗ್ಗೆ ಕೇಳಿದರೆ ಹುಬ್ಬೇರುವುದು ಗ್ಯಾರಂಟಿ. ಫಿಫಾ ವಿಶ್ವಕಪ್‌ನಲ್ಲಿ ಅಭಿಮಾನಿಗಳ ಕಣ್ಣು ಸಾಮಾನ್ಯವಾಗಿ ಗೋಲುಗಳು, ಸ್ಟಾರ್ ಆಟಗಾರರು ಮತ್ತು ರೋಚಕ ಪಂದ್ಯಗಳ ಮೇಲಿರುತ್ತದೆ. ಆದರೆ ಈ ಎಲ್ಲದರ ಹಿಂದೆ ಮೌನವಾಗಿ ಕೆಲಸ ಮಾಡಿರುವ ಮತ್ತೊಂದು ತಂಡ ಇದೆ ಪಿಚ್ (ಹುಲ್ಲಿನ ಮೈದಾನ) ತಜ್ಞರು. ಅವರ ಯಶಸ್ಸು ಎಂದರೆ ಅಭಿಮಾನಿಗಳು ಪಿಚ್‌ನ್ನು ಗಮನಿಸದೇ ಪಂದ್ಯವನ್ನು ಆನಂದಿಸುವುದು. ಯಾಕೆಂದರೆ ಪಿಚ್ ಬಗ್ಗೆ ಯಾರೂ ಮಾತನಾಡದಿದ್ದರೆ ಅದು ಯಶಸ್ಸು!

ಡಲ್ಲಾಸ್‌ನಲ್ಲಿ ಗುಲಾಬಿ ಬೆಳಕಿನ ಅದ್ಭುತ!

ಡಲ್ಲಾಸ್‌ನ ಎಟಿಟಿ ಸ್ಟೇಡಿಯಂನಲ್ಲಿ ಅತ್ಯಂತ ದೊಡ್ಡ ಸವಾಲು ಎದುರಾಯಿತು. ಇಲ್ಲಿ 9 ಪಂದ್ಯಗಳು ನಡೆಯಲಿದ್ದು, ಮೇಲ್ಛಾವಣಿ ಇರುವುದರಿಂದ ಸಾಕಷ್ಟು ಸೂರ್ಯನ ಬೆಳಕು ಮೈದಾನಕ್ಕೆ ಬರುವುದಿಲ್ಲ ಇದಕ್ಕೆ ಪರಿಹಾರವಾಗಿ ಇಂಜಿನಿಯರ್‌ಗಳು ಸ್ಟೇಡಿಯಂ ಮೇಲ್ಭಾಗದಲ್ಲಿ ಗುಲಾಬಿ ಗ್ರೋವ್ ಲೈಟ್ಸ್ ಅಳವಡಿಸಿದರು. ಈ ವಿಶೇಷ ದೀಪಗಳು ಹುಲ್ಲಿಗೆ ಅಗತ್ಯವಾದ ಬೆಳಕನ್ನು ಒದಗಿಸಿ ಅದನ್ನು ಹಸಿರಾಗಿಯೇ ಉಳಿಸುತ್ತವೆ.

1994ರಿಂದ 2026ರವರೆಗೆ

1994ರಲ್ಲಿ ಅಮೆರಿಕ ವಿಶ್ವಕಪ್ ಆಯೋಜಿಸಿದ್ದಾಗ ಇಂದಿನ ತಂತ್ರಜ್ಞಾನಗಳಿರಲಿಲ್ಲ, ಆ ಸಮಯದಲ್ಲಿ ಹೈಬ್ರಿಡ್ ಬಲವರ್ಧನೆ ಇರಲಿಲ್ಲ, ಗ್ರೋ ಲೈಟ್ಸ್ ಇರಲೇ ಇಲ್ಲ, ಹಾಗಾಗಿ ಹುಲ್ಲು 30 ದಿನಗಳೊಳಗೆ ಹಾಳಾಗುತ್ತಿತ್ತು. ಆ ಅನುಭವದಿಂದಲೇ ಹೊಸ ಸಂಶೋಧನೆ ಆರಂಭವಾಗಿ ಇಂದಿನ ಅತ್ಯಾಧುನಿಕ ಪಿಚ್ ವ್ಯವಸ್ಥೆ ರೂಪುಗೊಂಡಿದೆ. ಆದರೆ ಈಗ ಇದೆಲ್ಲಾ ಸಮಸ್ಯೆಗಳಿಗೂ ಉತ್ತರ ಸಿಕ್ಕಿದೆ.



ಸಂಶೋಧನೆಯಿಂದ ಏನೇನು ಲಾಭ?

- ಕಡಿಮೆ ನೀರಿನಲ್ಲಿ ಹುಲ್ಲು ಬೆಳೆಯುವ ವ್ಯವಸ್ಥೆ
- ನೀರನ್ನು ಮರುಬಳಕೆ ಮಾಡುವ ಹೈಡ್ರೋಪೋನಿಕ್ ಪಿಚ್‌ಗಳು
- ಹೆಚ್ಚು ಪರಿಸರ ಸ್ನೇಹಿ ಕ್ರೀಡಾಂಗಣಗಳನ್ನು ಒದಗಿಸುತ್ತದೆ.

ನಿಯಮ ಏನಿದೆ?

ಟೆನ್ನೆಸಿ ಮತ್ತು ಮಿಚಿಗನ್ ಸ್ಟೇಟ್ ಯೂನಿವರ್ಸಿಟಿ ವಿಜ್ಞಾನಿಗಳು ಕಳೆದ ಎಂಟು ವರ್ಷಗಳಿಂದ ವಿಶ್ವಕಪ್‌ಗೆ ಸೂಕ್ತವಾದ ಹೈಬ್ರಿಡ್ ಹುಲ್ಲಿನ ತಂತ್ರಜ್ಞಾನ ಅಭಿವೃದ್ಧಿಪಡಿಸಿದ್ದಾರೆ. ಫಿಫಾ ನಿಯಮದಂತೆ ಎಲ್ಲ ಮೈದಾನಗಳೂ ಬಹುತೇಕ ನೈಸರ್ಗಿಕ ಹುಲ್ಲಿನಿಂದಲೇ ಇರಬೇಕು ಹಾಗೂ ಎಲ್ಲೆಡೆ ಆಟದ ಗುಣಮಟ್ಟ ಒಂದೇ ರೀತಿಯಿರಬೇಕು. ಈ ಬಾರಿಯ ವಿಶ್ವಕಪ್ 16 ಕ್ರೀಡಾಂಗಣಗಳಲ್ಲಿ ನಡೆಯಲಿದೆ. 48 ತಂಡಗಳು ಸ್ಪರ್ಧಿಸಲಿವೆ. 104 ಪಂದ್ಯಗಳು ನಡೆಯಲಿವೆ. ಈ 16 ಮೈದಾನಗಳಲ್ಲಿ 8 ಮೈದಾನಗಳು ಕೃತಕ ಹುಲ್ಲು ಹೊಂದಿದ್ದವು. ಮುಖ್ಯವಾಗಿ ಲ್ಯೂಮನ್ ಫೀಲ್ಡ್ (ಸಿಯಾಟಲ್), ಸೋಫಿ ಸ್ಟೇಡಿಯಂ (ಲಾಸ್ ಏಂಜೆಲಿಸ್), ಎಟಿಟಿ ಸ್ಟೇಡಿಯಂ (ಡಲ್ಲಾಸ್) ಕ್ರೀಡಾಂಗಣಗಳು ಸಂಪೂರ್ಣ ಕೃತಕ ಹುಲ್ಲನ್ನೇ ಹೊಂದಿದ್ದವು.


ಕಾರ್ಯಾಚರಣೆ ಹೇಗಿತ್ತು?

ಡ್ರೈನೇಜ್ ವ್ಯವಸ್ಥೆ: ಸಿಯಾಟಲ್‌ನ ಲ್ಯೂಮನ್ ಫೀಲ್ಡ್‌ನಲ್ಲಿ ಮೊದಲು ಡ್ರೈನೇಜ್ ವ್ಯವಸ್ಥೆ ಅಳವಡಿಸಿ, ಅದರ ಮೇಲೆ 10 ಇಂಚುಗಳಷ್ಟು ಮರಳು ಹಾಕಿ, ನಂತರ ವಿಶೇಷ ಹುಲ್ಲನ್ನು ಹಾಸಿ ಕೃತಕ ನಾರುಗಳಿಂದ ಬಲಪಡಿಸಲಾಯಿತು.

ಎರಡು ವಿಧದ ಹುಲ್ಲು

ಮೆಕ್ಸಿಕೋದ ಮಾಂಟೆರೇಯ್‌ನಲ್ಲಿ ಉಷ್ಣಾಂಶ ಹೆಚ್ಚಿದ್ದರೆ, ಕೆನಡಾದ ವ್ಯಾಂಕೂವರ್‌ನಲ್ಲಿ ತಂಪಾದ ವಾತಾವರಣವಿದೆ. ಆದ್ದರಿಂದ ತಜ್ಞರು ಎರಡು ವಿಧದ ಹುಲ್ಲು ಬಳಸಿದ್ದಾರೆ:

1 ಬೆಚ್ಚಗಿನ ಪ್ರದೇಶಗಳಿಗೆ
- ಬರ್ಮುಡಾ ಗ್ರಾಸ್



2 ತಂಪಾದ ಕ್ರೀಡಾಂಗಣಗಳಿಗೆ
- ಪೆರೆನ್ನಿಯಲ್ ರೈ ಹುಲ್ಲು
- ಕೆಂಟುಕಿ ಬ್ಲೂಗ್ರಾಸ್ ಮಿಶ್ರಣ



- ಈ ಹುಲ್ಲುಗಳನ್ನು ಮೂರು ಆತಿಥೇಯ ರಾಷ್ಟ್ರಗಳ 10 ವಿಶೇಷ ಟರ್ಫ್ ಫಾರ್ಮ್‌ಗಳಲ್ಲಿ ಬೆಳೆಸಲಾಗಿದೆ.

ಟೆಸ್ಟ್ ಬ್ಯಾಟಿಂಗ್ ಶ್ರೇಯಾಂಕ: ಶುಭಮನ್ ಗಿಲ್‌ಗೆ 8ನೇ ಸ್ಥಾನ

• **ದುಬೈ:** ಭಾರತ ತಂಡದ ನಾಯಕ ಶುಭಮನ್ ಗಿಲ್ ಮತ್ತು ಬ್ಯಾಟರ್ ಯಶಸ್ವಿ ಜೈಸ್ವಾಲ್ ಅಂತಾರಾಷ್ಟ್ರೀಯ ಕ್ರಿಕೆಟ್ ಸಂಸ್ಥೆಯ ಟೆಸ್ಟ್ ಶ್ರೇಯಾಂಕದಲ್ಲಿ ಅಗ್ರ 10ರಲ್ಲಿ ಕಾಣಿಸಿಕೊಂಡಿದ್ದಾರೆ.

ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್ ಪಂದ್ಯದಲ್ಲಿ ಭಾರತ ಗೆಲುವು ಸಾಧಿಸಿದೆ. ಈ ನಡುವೆ ಅದೇ ಪಂದ್ಯದಲ್ಲಿ ಶತಕ ಬಾರಿಸಿ ಮಿಂಚಿರುವ ಗಿಲ್ 2 ಸ್ಥಾನ ಜಿಗಿತ ಕಂಡಿದ್ದಾರೆ. ಜೈಸ್ವಾಲ್ ಒಂದು ಸ್ಥಾನ ಇಳಿದಿದ್ದಾರೆ. ಬುಧವಾರದಂದು ಪ್ರಕಟಗೊಂಡಿರುವ ಪರಿಷ್ಕೃತ ಪಟ್ಟಿಯಲ್ಲಿ ಹಲವು ಬದಲಾವಣೆಗಳಾಗಿವೆ. ಇಂಗ್ಲೆಂಡಿನ ಜೋ ರೂಟ್ ಅವರನ್ನು ಹಿಂದಿಕ್ಕಿರುವ ಅದೇ ದೇಶದ ಹ್ಯಾರಿ ಬ್ರೂಕ್ ಮೊದಲ ಸ್ಥಾನಕ್ಕೇರಿದ್ದಾರೆ. ಎರಡನೇ ಸ್ಥಾನವನ್ನು ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್ ಪಡೆದರೆ, ಜೋ ರೂಟ್ ಮೂರನೇ ಸ್ಥಾನಕ್ಕೆ ಜಾರಿದ್ದಾರೆ. ನಾಲ್ಕನೇ ಸ್ಥಾನದಲ್ಲಿ ಆಸ್ಟ್ರೇಲಿಯಾದ ಸ್ಟೀವ್ ಸ್ಮಿತ್, ಬಡ್ತಿ ಕಂಡಿರುವ ಶ್ರೀಲಂಕಾದ ಕಮಿಂದು ಮೆಂಡೀಸ್ ಐದನೇ ಸ್ಥಾನಕ್ಕೇರಿದ್ದಾರೆ. ಒಟ್ಟು 743 ರೇಟಿಂಗ್ ಅಂಕಗಳನ್ನು ಹೊಂದಿರುವ ಶುಭಮನ್ ಗಿಲ್ 8ನೇ ಸ್ಥಾನದಲ್ಲಿದ್ದರೆ, 733 ಅಂಕ ಗಳಿಸಿರುವ ಜೈಸ್ವಾಲ್ 9ನೇ ಸ್ಥಾನದಲ್ಲಿದ್ದಾರೆ. ವಿಕೆಟ್ ಕೀಪರ್-ಬ್ಯಾಟರ್ ರಿಷಭ್ ಪಂತ್ ಜಿಗಿತ ಕಂಡಿದ್ದು, 12ನೇ ಸ್ಥಾನಕ್ಕೇರಿದ್ದಾರೆ.



ಬೂಮ್ರಾ ದರ್ಬಾರ್: ಬೌಲಿಂಗ್ ವಿಭಾಗದಲ್ಲಿ ಜಸ್‌ಪ್ರೀತ್ ಬೂಮ್ರಾ ಅಗ್ರಸ್ಥಾನದಲ್ಲೇ ಇದ್ದಾರೆ. 870 ಅಂಕಗಳನ್ನು ಹೊಂದಿರುವ ಬೂಮ್ರಾ, ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್ ಮೇಲಿದ್ದಾರೆ. ದ. ಆಫ್ರಿಕಾದ ಮಾರ್ಕೊ ಯಾನ್ಸನ್ ಬಡ್ತಿ ಪಡೆದು ನಾಲ್ಕನೇ ಸ್ಥಾನಕ್ಕೇರಿದರೆ, ಭಾರತದ ಕುಲ್ದೀಪ್ ಯಾದವ್ 14ನೇ ಸ್ಥಾನಕ್ಕೇರಿದರೆ, ಆಡದ ರವೀಂದ್ರ ಜಡೇಜಾ ಮೂರು ಸ್ಥಾನದ ಕುಸಿತದೊಂದಿಗೆ 17ಕ್ಕಿಳಿದಿದ್ದಾರೆ.

ಮೆರಿಟಸ್ ಕಪ್ ರೇಸಿಂಗ್: ಜಿದಾನ್ ಅನೀಸ್ ರನ್ನರ್‌ಅಪ್

• **ಕೊಯಮತ್ತೂರು:** ಹತ್ತು ವರ್ಷದ ಆರವ್ ಸುರೇಕಾ (ರಾಯೋ ರೇಸಿಂಗ್) ರಾಷ್ಟ್ರೀಯ ರೇಸಿಂಗ್ ವೇದಿಕೆಯಲ್ಲಿ ತಮ್ಮ ಶಕ್ತಿಯನ್ನು ಪ್ರದರ್ಶಿಸಿದ್ದು, ಕೊಯಮತ್ತೂರಿನ ಕೋಸ್ಟ್ ಕಾರ್ಟಿಂಗ್ ಸರ್ಕ್ಯೂಟ್‌ನಲ್ಲಿ ಮೆಕೊ ಮೆರಿಟಸ್ ಕಪ್‌ನ 'ಮೈಕ್ರೋ ಮ್ಯಾಕ್ಸ್' ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಮುಂಬೈನ ಈ ಬಾಲಕ ಕೇವಲ 2 ಅಂಕಗಳ ಅಲ್ಪ ಮುನ್ನಡೆಯೊಂದಿಗೆ ಅಂತಿಮ ದಿನಕ್ಕೆ ಪ್ರವೇಶಿಸಿದ್ದರು. ಅಂತಿಮವಾಗಿ ಅವರು ಎರಡನೇ ಮತ್ತು ಐದನೇ ಸ್ಥಾನಗಳನ್ನು ಪಡೆದು, ಒಟ್ಟು 78 ಅಂಕಗಳೊಂದಿಗೆ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಬೆಂಗಳೂರಿನ ಜಿದಾನ್ ಅನೀಸ್ (ಪೆರೆಗ್ರಿನ್ ರೇಸಿಂಗ್; 72 ಅಂಕಗಳು) ಮತ್ತು ಕೊಲ್ಹಾಪುರದ ಆಯಾನ್ಶ್ ಪಾಟೀಲ್ (ಎಮ್ ಸ್ಪೋರ್ಟ್; 72 ಅಂಕಗಳು) ಅವರನ್ನು ಹಿಂದಿಕ್ಕಿ ಆರವ್ ಈ ಸಾಧನೆ ಮಾಡಿದರು.

ಇದಕ್ಕೂ ಮುನ್ನ ನಡೆದ ಸುತ್ತುಗಳಲ್ಲಿ ಅವರು ಒಮ್ಮೆ ಪ್ರಥಮ ಹಾಗೂ ಒಮ್ಮೆ ದ್ವಿತೀಯ ಸ್ಥಾನ ಗಳಿಸುವ ಮೂಲಕ ಸ್ಪಷ್ಟ ವಿಜೇತರಾಗಿ ಹೊರಹೊಮ್ಮಿದ್ದರು. ಈ ವಯೋಮಿತಿಯಲ್ಲಿ ದೇಶದ ಅತ್ಯುತ್ತಮ ರೇಸರ್‌ಗಳ ವಿರುದ್ಧ ಸ್ಪರ್ಧಿಸಿದ್ದ ಆರವ್, ತಮ್ಮ ಮುನ್ನಡೆಯನ್ನು ಕಾಯ್ದುಕೊಳ್ಳುವಲ್ಲಿ ಅದ್ಭುತ ಧೈರ್ಯವನ್ನು ಪ್ರದರ್ಶಿಸಿದರು.

ಆಸ್ಟ್ರೇಲಿಯನ್ ಓಪನ್ | ಭಾರತೀಯರ ಮಿಂಚಿನಾಟ

ಪ್ರಿ-ಕ್ವಾರ್ಟರ್‌ಗೆ ಸಿಂಧು, ತನ್ವಿ, ಮಾಳ್ವಿಕಾ

• **ಸಿಡ್ನಿ(ಆಸ್ಟ್ರೇಲಿಯಾ):** ಇಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯನ್ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತೀಯರ ಅತ್ಯುತ್ತಮ ಪ್ರದರ್ಶನ ಮುಂದುವರಿದಿದೆ. ಅವಳಿ ಪದಕ ವಿಜೇತೆ ಪಿ. ವಿ. ಸಿಂಧು ಗೆಲುವಿನ ಆರಂಭ ಕೊಟ್ಟರೆ, ಉದಯೋನ್ಮುಖ ಆಟಗಾರ್ತಿ ತನ್ವಿ ಶರ್ಮ ಗೆಲುವಿನ ನಾಗಾಲೋಟ ಮುಂದುವರಿಸಿದರು. ಮಾಳ್ವಿಕಾ ಬನ್ಸೋಡ್, ಇಶಾರಾಣಿ ಮತ್ತು ತನ್ಯಾ ಹೇಮಂತ್ ಕೂಡ ಭರ್ಜರಿ ಪ್ರದರ್ಶನದೊಂದಿಗೆ ಪ್ರಿಕ್ವಾರ್ಟರ್‌ಫೈನಲ್‌ಗೇರಿದ ನಂತರ ಆಸ್ಟ್ರೇಲಿಯನ್ ಓಪನ್‌ನಲ್ಲಿ ಭಾರತೀಯರೇ ಪಾರುಪತ್ಯ ಸಾಧಿಸಿದ್ದಾರೆ.

ಪೆರುವಿನ ಐನಸ್ ಲೂಸಿಯಾ ಅವರನ್ನು ಎದುರಿಸಿದ್ದ ಸಿಂಧು 21-13, 21-11ರಿಂದ ಗೆಲುವು ಸಾಧಿಸಿದರು. ಮೊದಲಿನಿಂದಲೂ ಪಂದ್ಯದ ಮೇಲೆ ಹಿಡಿತ ಸಾಧಿಸಿದ ಸಿಂಧು ಅನುಭವ ಪ್ರದರ್ಶಿಸಿದರು. ಪಂದ್ಯ ಕೇವಲ 32




ನಿಮಿಷಗಳಲ್ಲಿ ಮುಕ್ತಾಯಗೊಂಡಿತು. ಮತ್ತೊಂದು ಪಂದ್ಯದಲ್ಲಿ ತನ್ವಿ ಶರ್ಮ ಪಂದ್ಯಾವಳಿಯ ಐದನೇ ಸೀಡ್‌ನ ಚಿಯು ಪಿನ್ ಅವರನ್ನು ಎದುರಿಸಿದ್ದರು. 45 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಪ್ರಾಬಲ್ಯ ಸಾಧಿಸಿದ 17 ವರ್ಷದ ತನ್ವಿ ಶರ್ಮ 21-12, 22-20ರಿಂದ ಗೆಲುವು ಸಾಧಿಸಿದರು. ಮತ್ತೊಂದು ಪಂದ್ಯದಲ್ಲಿ ಮಾಳ್ವಿಕಾ ಥೈಲ್ಯಾಂಡ್‌ನ ಟೋನ್ರುಗ್ ಅವರನ್ನು 15-21, 21-7, 21-13ರಿಂದ ಗೆಲುವು ಸಾಧಿಸಿದರು. ಮುಂದಿನ ಸುತ್ತಿನ ಪಂದ್ಯದಲ್ಲಿ ಮಾಳ್ವಿಕಾ ಮತ್ತು ತನ್ಯಾ ಎದುರಾಗಲಿದ್ದಾರೆ. ಭಾರತೀಯರ ಪ್ರಾಬಲ್ಯದಲ್ಲಿ ತನ್ಯಾ ಕೂಡ ಸೇರಿಕೊಂಡರು. ಅಮೆರಿಕದ ಇಶಿಕಾ ಜೈಸ್ವಾಲ್ ಅವರನ್ನು ಎದುರಿಸಿದ ಅವರು, 21-17, 21-18ರಿಂದ ಗೆಲುವು ಸಾಧಿಸಿದರು.

ಇನ್ನು ಮಿಶ್ರ ವಿಭಾಗದಲ್ಲಿ ಭಾರತೀಯ ಜೋಡಿಯಾದ ಧ್ರುವ್ ರಾವತ್ ಮತ್ತು ಮನೀಶಾ ಜೋಡಿ, ಆಸ್ಟ್ರೇಲಿಯಾದ ಲಿಮ್ ಜಯ್ಡೆನ್ ಮತ್ತು ವಿಕ್ಟೋರಿಯಾ ವಿರುದ್ಧ 21-13, 21-14ರಿಂದ ಭರ್ಜರಿ ಗೆಲುವು ಸಾಧಿಸಿದರು.

ಪುರುಷರ ವಿಭಾಗದಲ್ಲಿ ನಿರಾಸೆ: ಮಹಿಳೆಯರ ಪ್ರಾಬಲ್ಯದ ನಡುವೆಯೇ ಅತ್ತ ಪುರುಷರ ವಿಭಾಗದಲ್ಲಿ ಭಾರತಕ್ಕೆ ಭಾರೀ ಹಿನ್ನಡೆಯಾಯಿತು. ಹಿರಿಯ ಆಟಗಾರರಾದ ಕಿರಣ್ ಜಾರ್ಜ್ ಉತ್ತಮ ಪ್ರದರ್ಶನ ನೀಡಿದ್ದಾದರೂ ಮಲೇಷ್ಯಾದ ಜಸ್ಟಿನ್ 19-21, 21-14, 15-21ರಿಂದ ಸೋತರು. ದಯಾನಂದ ಚೀನಾದ ಹು ಜಿಯಾನ್ ವಿರುದ್ಧ 8-21, 10-21ರಿಂದ ಸೋತರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6011

ಎಡದಿಂದ ಬಲಕ್ಕೆ
1.ರತಿ ಕಡೆಯಲ್ಲಿರುವ ವಿಶಿಷ್ಟ ಶೈಲಿ (3)
3.ಪಾಠವನ್ನು ಕಲಿಸುವಿಕೆ (4)
5.ದೊಡ್ಡ ರೀತಿಯ ಗೊಂದಲ-ಗದ್ದಲ (4)
7.ನನಗೆ ಈ ಹತ್ತು ತಲೆಯುಳ್ಳವ ಕಂಡ (4)
8. ನಸುವಿನ ನಡುವೆ ಭಯಗೊಳಿಸುವಿಕೆಯಿದೆ (4)
10.ಆರಾಮ ಖುರ್ಚಿಯನ್ನು ಹೀಗೂ ಹೇಳಬಹುದು (4)
12.ದಿನಭವಿಷ್ಯದಲ್ಲಿ ಸಂಪತ್ತಿನ ಪ್ರವೇಶ (4)
14.ಭೂಮಿಯಲ್ಲಿ ಹುಟ್ಟುವ ಗಿಡಮರಗಳು (4)
16.ಸುಭಾಷಿತದ ಸಮಾನಪದ (4)
17.ಮನೆಯ ಮೇಲಿನ ಅಂತಸ್ತು (3)

ಮೇಲಿನಿಂದ ಕೆಳಕ್ಕೆ
1.ಸಂಕಲನವನ್ನು ಸೂಚಿಸುವ ಚಿಹ್ನೆ (2)
2.ಮಂಗ ಇಲ್ಲಿ ತಲೆಕೆಳಗಾಗಿದೆ (2)
4.ಗಾಳಿ-ವಾಯುದೇವತೆಯೀತ (3)
6.ಲಾಡುವಿನ ನಡುವೆ ಬರೆದ ವ್ಯವಸಾಯದ ಖರ್ಚು (3)
7.ತನ್ನ ಸ್ವಾಧೀನಕ್ಕೆ ಬರುವಂತೆ ಮಾಡಿಕೊಳ್ಳು (3)
9.ಸುಮದ ಮಧ್ಯದಲ್ಲಿ ಕುಳಿತ ಕೃಷ್ಣನ ಮಿತ್ರ (3)
11.ನೇರವಾದ ಸಾಲು-ಕ್ರಮ ಎಂಬರ್ಥದ ಶಬ್ದ (3)
13.ನಾಣಿಗೆ ಈ ನಡುವೆ ಕಂಡ ಹೆಣ್ಣು ಹಾವು (3)
15.ಖಾತೆಗೆ ಬಂದ ಸೇರಿದ ಎಂಬ ಉರ್ದು ಶಬ್ದ (2)
16.ನೆಲವನ್ನು ತೋಡುವಿಕೆ (2)

6010 ಉತ್ತರ

ಎಡದಿಂದ ಬಲಕ್ಕೆ:
3.ಪಿಡಿ 4.ವದನಾರವಿಂದ
7.ಖನಿಜ 8.ನರಳು
9.ದೊಣ್ಣೆ 10.ಕಾಂತಿ
12.ಗಡವ 14.ಯಮಳ
15.ಕುರುಡುನಂಬಿಕೆ
18.ಬೇಡು

ಮೇಲಿನಿಂದ ಕೆಳಕ್ಕೆ :
1.ಶೇವ 2.ವಿಂಧ್ಯ
3.ಪಿತ್ತಜನಕಾಂಗ
5.ನಾಗರ 6.ದಖನಿ
8.ನನ್ನೆದೆಯಹಾಡು
11.ಬೆಳಕು 13.ನಂಜುಂಡ
16.ರುದ್ರ 17.ಕೆತ್ತು

ಕಿರುಸುದ್ದಿ

ಕಾರು ಕಳ್ಳತನ: ಆರೋಪಿ ಸೆರೆ

ಬೆಂಗಳೂರು: ಬಾಡಿಗೆ ಆಧಾರಿತ ಸೇವೆ ಒದಗಿಸುವ ಜೂಮ್ ಆ್ಯಪ್‌ನಲ್ಲಿ ವ್ಯಕ್ತಿಯೊಬ್ಬ ಬುಕ್ ಮಾಡಿದ್ದ ಕಾರು ಕಳ್ಳತನ ಮಾಡಿದ್ದ ಅಂತಾರಾಜ್ಯ ಕಳ್ಳನನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದರು. ಪಾದರಾಯನಪುರ ನಿವಾಸಿ ಸೈಯದ್ ಕದೀರ್ ಪಾಷಾ ಎಂಬುವರ ಸ್ವಿಫ್ಟ್ ಕಾರು ಕಳ್ಳತನವಾಗಿತ್ತು. ಈ ಸಂಬಂಧ ಕೇರಳದ ಕಣ್ಣೂರಿನ ಮಿಥೆಲ್ ಶಫೀಕ್ ಎಂಬಾತನನ್ನು ಬಂಧಿಸಿ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದರು. ಪಾದರಾಯನಪುರದ ಬಾಡಿಗೆ ಮನೆಯಲ್ಲಿ ವಾಸವಿರುವ ಸೈಯದ್ ಖಾಸಗಿ ಕಂಪನಿಯೊಂದರಲ್ಲಿ ಅಕೌಂಟ್ ಮ್ಯಾನೇಜರ್ ಆಗಿದ್ದಾರೆ. 2023ರಲ್ಲಿ ಸ್ವಿಫ್ಟ್ ಕಾರು ಖರೀದಿಸಿದ್ದು, ಮನೆ ಮುಂದೆ ಪಾರ್ಕಿಂಗ್ ಜಾಗವಿಲ್ಲದ ಕಾರಣ ಮಲ್ಲೇಶ್ವರದ 15ನೇ ಕ್ರಾಸ್‌ನಲ್ಲಿರುವ ಎಂಇಎಸ್ ಕಾಲೇಜು ಮುಂದಿರುವ ರಸ್ತೆ ಬದಿಯಲ್ಲಿ ಕಾರು ಪಾರ್ಕಿಂಗ್ ಮಾಡಿದ್ದರು. ದೂರುದಾರ ಸೈಯದ್ ಹೆಸರಿನ ಕಾರನ್ನು ಸಹೋದರ ಫೈಸಲ್ ಖಾನ್ ಹೆಸರಿನಲ್ಲಿ ಜೂಮ್ ಕಾರ್ ಆ್ಯಪ್‌ನಲ್ಲಿ ನೋಂದಣಿ ಮಾಡಿಸಲಾಗಿತ್ತು. ಏ.22ರಂದು ಬೆಳಗ್ಗೆ ಆರೋಪಿ ಮಿಥೆಲ್ ಸಫೀಕ್ ಕಾರು ಬುಕ್ ಮಾಡಿದ್ದ. ಇದರಂತೆ ಆತನನ್ನು ಭೇಟಿಯಾಗಿ ಕಂಪನಿ ಷರತ್ತುಗಳನ್ನು ಹೇಳಿ ಆತನಿಂದ ಡಿಎಲ್ ಹಾಗೂ ಆಧಾರ್ ಕಾರ್ಡ್ ಪಡೆದುಕೊಂಡಿದ್ದ. ಒಂದು ದಿನಕ್ಕೆಂದು ಕಾರು ಬುಕ್ ಮಾಡಿದ್ದ ಆರೋಪಿ ಎರಡನೇ ದಿನವಾದರೂ ಕಾರು ಬುಕಿಂಗ್ ವಿಸ್ತರಿಸಲಿಲ್ಲ, ಅಂದಿನಿಂದ ಈವರೆಗೂ ಕಾರು ವಾಪಸ್ ನೀಡಿಲ್ಲ, ಕಳ್ಳತನ ಮಾಡುವ ಉದ್ದೇಶದಿಂದ ಬಾಡಿಗೆ ನೆಪದಲ್ಲಿ ಕಾರು ಪಡೆದು ಮೋಸ ಮಾಡಿರುವುದಾಗಿ ದೂರಿನಲ್ಲಿ ಸೈಯ್ಯದ್ ತಿಳಿಸಿದ್ದರು.

ಕೊಟ್ಟಿಗೆ ಗೊಬ್ಬರ ಬಳಸಲು ರೈತರಿಗೆ ಬೆಂಗಳೂರಿನ ಹಿರಿಯ ವಿಜ್ಞಾನಿ ಡಾ. ಸುನಿಲ್ ಪಿ. ಮಸ್ಕೆ ಕಿವಿಮಾತು

ರಾಸಾಯನಿಕ ಗೊಬ್ಬರ ಬಳಕೆಗೆ ಮಿತಿ ಇರಲಿ

ದೊಡ್ಡಬಳ್ಳಾಪುರ: ಬೆಳೆಗಳಿಗೆ ರಾಸಾಯನಿಕ ಗೊಬ್ಬರಗಳ ಬಳಕೆ ಕಡಿತಗೊಳಿಸಿ, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಬೇಕು. ಮಣ್ಣು ಪರೀಕ್ಷಾ ಆಧಾರದ ಮೇಲೆ ಸಮತೋಲಿತ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ಬಳಸಬೇಕು ಎಂದು ರಾಷ್ಟ್ರೀಯ ಮಣ್ಣು ಸರ್ವೇಕ್ಷಣ ಮತ್ತು ಭೂ ನಿಯೋಜನ ಸಂಸ್ಥೆ, ಬೆಂಗಳೂರಿನ ಹಿರಿಯ ವಿಜ್ಞಾನಿ ಡಾ. ಸುನಿಲ್ ಪಿ. ಮಸ್ಕೆ ಹೇಳಿದರು. ಅವರು ತಾಲೂಕಿನ ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ, ಮೈತ್ರಿ ಸರ್ವ ಸೇವಾ ಸಮಿತಿ, ದೊಡ್ಡಬಳ್ಳಾಪುರ, ಐ.ಆರ್.ಐ.ಡಿ.ಎಸ್ ಸಂಸ್ಥೆ, ದೊಡ್ಡಬಳ್ಳಾಪುರ ಇವರ ಸಹಯೋಗದೊಂದಿಗೆ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆಯಲ್ಲಿ ಮಾತನಾಡಿದರು. ಮಣ್ಣಿನ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದ್ದು ಭೂಮಿಯನ್ನು ಪರಿಸರವನ್ನು ಕಾಪಾಡಲು ಎಲ್ಲರೂ ಕೈಜೋಡಿಸಬೇಕು ಎಂದರು.

ಕೇಂದ್ರದ ಬೇಸಾಯ ಶಾಸ್ತ್ರ ವಿಜ್ಞಾನಿ ಡಾ. ಜಿ.ಕೆ.ನಿಂಗರಾಜು ಪ್ರಾಸ್ತಾವಿಕ ನುಡಿಯಲ್ಲಿ ಪ್ರತಿ ವರ್ಷ ಜೂನ್ 5 ರಂದು 'ವಿಶ್ವ ಪರಿಸರ ದಿನವನ್ನು ಆಚರಿಸಲಾಗುತ್ತದೆ. ಪರಿಸರ ಸಂರಕ್ಷಣೆಯ ಮಹತ್ವವನ್ನು ಜನರಿಗೆ ಅರಿವು ಮೂಡಿಸುವ ಉದ್ದೇಶದಿಂದ ವಿಶ್ವಸಂಸ್ಥೆಯು ಈ ದಿನವನ್ನು ಆಚರಿಸಲು ಕರೆ ನೀಡಿದೆ. 2026 ನೇ ಸಾಲಿನ ಧ್ಯೇಯ ವಾಕ್ಯವಾದ ? 'ಹವಾಮಾನ ಕ್ರಮ ಮತ್ತು ನಮ್ಮ ಭವಿಷ್ಯಕ್ಕಾಗಿ – ಪ್ರಕೃತಿಯಿಂದ ಪ್ರೇರಣೆ" ಯ ಬಗ್ಗೆ ವಿವರಿಸಿ, ಹವಾಮಾನ ಬದಲಾವಣೆಯನ್ನು ತಡೆಯಲು ತಕ್ಷಣದ ಮತ್ತು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವ ಅಗತ್ಯವನ್ನು ಒತ್ತಿ ಹೇಳಿದರು.



ಇಂದು ನಮ್ಮ ಭೂಮಿ ಅನೇಕ ಪರಿಸರ ಸವಾಲುಗಳನ್ನು ಎದುರಿಸುತ್ತಿದೆ. ಅರಣ್ಯನಾಶ, ವಾಯು ಮಾಲಿನ್ಯ, ಜಲ ಮಾಲಿನ್ಯ, ಪ್ಲಾಸ್ಟಿಕ್ ತ್ಯಾಜ್ಯ, ಜೀವ ವೈವಿಧ್ಯದ ಕುಸಿತ ಮತ್ತು ಜಾಗತಿಕ ತಾಪಮಾನ ಏರಿಕೆ ಇವುಗಳು ಮಾನವ ಜೀವನದ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ. ಪರಿಸರ ಸಂರಕ್ಷಣೆ ಕೇವಲ ಸರ್ಕಾರದ ಜವಾಬ್ದಾರಿಯಲ್ಲ, ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ನಾವು ಮರಗಳನ್ನು ನೆಡಬೇಕು, ನೀರನ್ನು ಮಿತವಾಗಿ ಬಳಸಬೇಕು, ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಬೇಕು, ತ್ಯಾಜ್ಯವನ್ನು ಸರಿಯಾಗಿ ನಿರ್ವಹಿಸಬೇಕು ಹಾಗೂ ನವೀಕರಿಸಬಹುದಾದ ಇಂಧನ ಮೂಲಗಳನ್ನು ಬಳಸಲು ಉತ್ತೇಜಿಸಬೇಕೆಂದು ತಿಳಿಸಿದರು.

ಮೈತ್ರಿ ಸರ್ವ ಸೇವಾ ಸಂಸ್ಥೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹರೀಶ್ ಬಾಬು ಮಾತನಾಡಿ, ರೈತರು ತಮ್ಮ ಜಮೀನುಗಳಲ್ಲಿ ಮಾತ್ರವಲ್ಲದೆ, ಸರ್ಕಾರಿ ಜಮೀನು, ಅರಣ್ಯ ಪ್ರದೇಶಗಳಲ್ಲಿ ಹೆಚ್ಚು ಗಿಡಗಳನ್ನು ನೆಟ್ಟು ಸಂರಕ್ಷಿಸಬೇಕು ಮತ್ತು ಅರಣ್ಯ ಬೆಳೆಸಲು ದಶಕಗಳ ಕಾಲ ಬೇಕೆಂದು ತಿಳಿಸಿದರು.

ದೊಡ್ಡಬಳ್ಳಾಪುರದ ಐ.ಆರ್.ಐ.ಡಿ.ಎಸ್, ಸಂಸ್ಥೆಯ ಯೋಜನಾ ನಿರ್ದೇಶಕ ಮಂಜುನಾಥ್ ಪಾಟೀಲ್ ಮಾತನಾಡಿ,ಸಾವಯವ ಕೃಷಿಗೆ ಒತ್ತು ನೀಡುತ್ತಾ, ಮಳೆ ನೀರಿನ ಸಂಗ್ರಹಣೆ, ಮಣ್ಣಿನ ಸಂರಕ್ಷಣೆ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಬಳಕೆಯಿಂದ ಪರಿಸರದ ಸಮತೋಲನವನ್ನು ಕಾಪಾಡಲು ಸಹಕಾರಿಯಾಗುತ್ತದೆಯೆಂದು ತಿಳಿಸಿದರು.

ಕೇಂದ್ರದ ಕೃಷಿ ವಿಸ್ತರಣಾ ವಿಜ್ಞಾನಿಯಾದ ಡಾ. ವೈ.ಎಂ. ಗೋಪಾಲ್ 'ಪರಿಸರ ಸಂರಕ್ಷಣೆಯ ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಿ, ಹಸಿರು ಮತ್ತು ಸುಸ್ಥಿರ ಭವಿಷ್ಯ ನಿರ್ಮಿಸೋಣ ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಂಗವಾಗಿ ಭಾಗವಹಿಸಿದ್ದ ಮುಖ್ಯ ಅತಿಥಿಗಳಿಂದ ಕೇಂದ್ರದ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು. ಭಾಗವಹಿಸಿದ್ದ ರೈತರೆಲ್ಲರಿಗೂ ಮಾವು, ನೇರಳೆ, ಕರಿಬೇವು ಮತ್ತು ಸೀಬೆ ಗಿಡಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಐ.ಆರ್.ಐ.ಡಿ.ಎಸ್ ನಬಾರ್ಡ್ ಕೃಷಿ ಇಂಜಿನಿಯರ್ ವೆಂಕಟಾಚಲಪತಿ, ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ಈಶ್ವರಪ್ಪ, ಡಾ. ಗೋಪಿಕಾ ಸಿ. ಮುತ್ತಗಿ, ಡಾ. ಬಾಲಾಜಿ ನಾಯ್ಕ್, ಡಾ.ಎಸ್ ಸುಪ್ರಿಯಾ, ವಿಸ್ತರಣಾಧಿಕಾರಿಗಳು, ರೈತ ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದರು.

> **ಗಿಡ-ಮರ ಬೆಳೆಸಿ**
>
> ವಿಶ್ವ ಪರಿಸರ ದಿನಾಚರಣೆಯ ಪ್ರಾಮುಖ್ಯತೆಯ ವಿವರಿಸುತ್ತಾ 1952 ರಲ್ಲಿ ಅರಣ್ಯ ನೀತಿಯ ಪ್ರಕಾರ ಪ್ರತಿ ದೇಶ ಆರೋಗ್ಯಕರವಾಗಿರಬೇಕೆಂದರೆ ಶೇ. 33 ರಷ್ಟು ಅರಣ್ಯ ಇರಬೇಕು. ಸ್ವಾತಂತ್ರ್ಯದ ನಂತರ ಅಭಿವೃದ್ಧಿಯ ಹೆಸರಲ್ಲಿ ಅರಣ್ಯವನ್ನು ನಾಶ ಮಾಡುತ್ತಿದ್ದೇವೆ. ಇದರಿಂದ ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಾಗಿ, ಮಳೆಯ ಹಂಚಿಕೆ ಏರುಪೇರಾಗುತ್ತಿದೆ. ಪರಿಸರವನ್ನು ಸಮತೋಲನವಾಗಿ ಇಟ್ಟುಕೊಳ್ಳಲು ಪ್ರತಿಯೊಬ್ಬರು ಹೆಚ್ಚು ಮರಗಳನ್ನು ಬೆಳೆಸಬೇಕೆಂದು ತಿಳಿಸಿದರು. ದೇಶದ ಪ್ರತಿಯೊಬ್ಬ ಪ್ರಜೆಯು ಹೆಚ್ಚು ಹೆಚ್ಚು ಗಿಡಗಳನ್ನು ನೆಡುವುದರ ಮುಖಾಂತರ ಪರಿಸರದ ಸಂರಕ್ಷಣೆಗೆ ಕೈಜೋಡಿಸಬೇಕೆಂದು ಕೇಂದ್ರದ ಮುಖ್ಯಸ್ಥ ಡಾ. ಬಿ.ಜಿ. ಹನುಮಂತರಾಯ ಮನವಿ ಮಾಡಿದರು.

ಸೂರಜ್ ಹೆಗ್ಡೆ ನಿಧನಕ್ಕೆ ಸಂತಾಪ

ದೇವನಹಳ್ಳಿ: ರಾಜ್ಯ ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿಯ ಉಪಾಧ್ಯಕ್ಷರು ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ, ಮಾಜಿ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ ಅರಸು ರವರ ಮೊಮ್ಮಗ ಸೂರಜ್ ಹೆಗಡೆ ಅವರ ಅಕಾಲಿಕ ನಿಧನಕ್ಕೆ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಂತಾಪ ವ್ಯಕ್ತಪಡಿಸಿದೆ.

ಬುಧವಾರ ಜಿಲ್ಲಾಡಳಿತ ಭವನದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರ ಕಛೇರಿಯಲ್ಲಿ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಏರ್ಪಡಿಸಿ ಸೂರಜ್ ಹೆಗಡೆ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಿ ಒಂದು ನಿಮಿಷ ಮೌನಾಚರಣೆ ನಡೆಸಲಾಯಿತು.

ಗ್ಯಾರಂಟಿ ಯೋಜನೆ ಅಧ್ಯಕ್ಷ ಬಿ. ರಾಜಣ್ಣ ಮಾತನಾಡಿ, ಸೂರಜ್ ಹೆಗಡೆ ಅವರು ಅತ್ಯಂತ ಸರಳ ಹಾಗೂ ಸಜ್ಜನ ರಾಜಕಾರಣಿಯಾಗಿದ್ದರು. ದೇವರಾಜ ಅರಸು ಅವರ ರಾಜಕೀಯ ತತ್ವಗಳನ್ನು ಅಳವಡಿಸಿಕೊಂಡಿದ್ದ ಅವರ ಪಕ್ಷ ನಿಷ್ಠೆ ಹಾಗೂ ಕಾರ್ಯವೈಖರಿ ಎಲ್ಲರಿಗೂ ಮಾದರಿಯಾಗಿತ್ತು. ಸೂರಜ್ ಅವರು ಎಐಸಿಸಿ ಕಾರ್ಯದರ್ಶಿಯಾಗಿ ತಮಿಳುನಾಡು ಹಾಗೂ ಪುದುಚೆರಿ ರಾಜ್ಯದ ಉಸ್ತುವಾರಿಯಾಗಿ ಪಕ್ಷದ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಅವರ ಅಗಲಿಕೆ ಪಕ್ಷಕ್ಕೆ, ರಾಜ್ಯಕ್ಕೆ ತುಂಬಲಾರದ ನಷ್ಟ ಎಂದರು.



ಸೂರಜ್ ಹೆಗ್ಡೆ ಅವರು ತಮ್ಮ ತಾತ ದೇವರಾಜ ಅರಸು ಅವರಂತೆ ಹಿಂದುಳಿದ ವರ್ಗಗಳು, ಕಾರ್ಮಿಕರ ಹಕ್ಕು, ಸಾಮಾಜಿಕ ನ್ಯಾಯಕ್ಕಾಗಿ ಶ್ರಮಿಸುತ್ತಿದ್ದರು. ರಾಷ್ಟ್ರೀಯ ಯುವ ಕಾಂಗ್ರೆಸ್ ಉಸ್ತುವಾರಿಗಳಾಗಿ ಪಕ್ಷದ ಸಂಘಟನೆ ಮೂಲಕ ರಾಜಕೀಯಕ್ಕೆ ಪ್ರವೇಶಿಸಿದರು. ಈಗ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷರಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದರು ಎಂದು ಸ್ಮರಿಸಿದರು.

ಈ ಸಂದರ್ಭದಲ್ಲಿ ಜಿ.ಪಂ ಉಪಕಾರ್ಯದರ್ಶಿ ಶಿವಕುಮಾರ್, ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ನಾರಾಯಣಸ್ವಾಮಿ, ಅಬ್ದುಲ್ ಬಶೀರ್, ತಾಲ್ಲೂಕು ಅಧ್ಯಕ್ಷರು, ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರತಿಭಟನೆ: ಸಂಚಾರ ಮಾರ್ಗ ಬದಲು

ಬೆಂಗಳೂರು: ಜೂ.11ರಂದು ಬೆಳಗ್ಗೆ 8 ರಿಂದ ಸಂಜೆ 06 ಗಂಟೆಯವರೆಗೆ ಕರ್ನಾಟಕ ದಲಿತ ಸಂಘಟನಾ ಸಮಿತಿ ವತಿಯಿಂದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಿರುವುದರಿಂದ, ಸುಗಮ ಸಂಚಾರದ ದೃಷ್ಟಿಯಿಂದ ಪರ್ಯಾಯ ಮಾರ್ಗಗಳನ್ನು ಬಳಸುವಂತೆ ಬೆಂಗಳೂರು ಸಂಚಾರ ಪೊಲೀಸರು ಮನವಿ ಮಾಡಿದ್ದಾರೆ. ಕೆ.ಆರ್ ರಸ್ತೆ ಮೂಲಕ ಮೈಸೂರು ಬ್ಯಾಂಕ್ ವೃತ್ತದಿಂದ ಬಲ ತಿರುವು ಪಡೆದು ಸ್ವಾತಂತ್ರ್ಯ ಉದ್ಯಾನವನದ ಕಡೆಗೆ ಬರುವ ವಾಹನಗಳು ಕಡ್ಡಾಯವಾಗಿ ಮಹಾರಾಣಿ ಕಾಲೇಜಿನ ಕೆಳಸೇತುವೆ ರಸ್ತೆಯನ್ನು ಬಳಸುವುದು. ಸ್ವಾತಂತ್ರ್ಯ ಉದ್ಯಾನವನ ಜಂಕ್ಷನ್‌ನಿಂದ ಕನಕದಾಸ ವೃತ್ತದ ಕಡೆಗೆ ಬರುವ ಮತ್ತು ಹೋಗುವ ವಾಹನ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದ್ದು, ಈ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅವಕಾಶವಿರುವುದಿಲ್ಲ, ಖೋಡೆ ಜಂಕ್ಷನ್ ಕಡೆಯಿಂದ ಕೆ.ಆರ್ ಸರ್ಕಲ್ ಕಡೆಗೆ ಹೋಗುವ ವಾಹನ ಸವಾರರು ಫ್ಲೈಓವರ್ ರಸ್ತೆಯಲ್ಲಿ, ರೈಲ್ವೆ ನಿಲ್ದಾಣದಿಂದ ಪ್ರತಿಭಟನೆಯಲ್ಲಿ ಭಾಗವಹಿಸುವ ಜನರು ಕಾಲುದಾರಿಯಲ್ಲಿ ಬರುವುದರಿಂದ, ವಾಹನ ದಟ್ಟಣೆಯನ್ನು ತಡೆಗಟ್ಟುವ ಹಳೆ ಜಿ.ಟಿ.ಬಿ.ಎಸ್ ಕಚೇರಿ ರಸ್ತೆಯನ್ನು ಬಳಸಬಹುದು. ಸುಬ್ಬಯ್ಯ ಜಂಕ್ಷನ್‌ನಿಂದ ಎಂ.ಟಿ.ಆರ್ ಜಂಕ್ಷನ್ ಕಡೆಗೆ ಬರುವ ರಸ್ತೆಯು ಹಾಲಿ ಏಕಮುಖ ಸಂಚಾರ ರಸ್ತೆಯಾಗಿದ್ದು, ತಾತ್ಕಾಲಿಕವಾಗಿ ದ್ವಿಮುಖ ಸಂಚಾರ ರಸ್ತೆಯನ್ನಾಗಿ ಪರಿವರ್ತಿಸಲಾಗಿದೆ. ಗಾಂಧಿನಗರ ಕಡೆಗೆ ಬರುವ ವಾಹನ ಸವಾರರು ಸದರಿ ರಸ್ತೆಯನ್ನು ಬಳಸಬಹುದು.

ಜೂ.13ಕ್ಕೆ ರೈಸ್ ಕಾನ್‌ಕ್ಲೇವ್

ಬೆಂಗಳೂರು : ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ಹಾಗೂ ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ ವತಿಯಿಂದ ಜೂ.13 ಮತ್ತು 14 ರಂದು ರೈಸ್ ಕಾನ್ ಕ್ಲೇವ್ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ ಎಂದು ಸಿಎಸ್‌ಐಆರ್ -ಎನ್‌ಎಎಲ್ ನ ನಿರ್ದೇಶಕ ಡಾ.ಅಭಯ್ ಪಶೀಲ್ಕರ್ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕಾರ್ಯಕ್ರಮಕ್ಕೆ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ಅವರು ಸಮಾವೇಶಕ್ಕೆ ಚಾಲನೆ ನೀಡಲಿದ್ದಾರೆ. ವಿಕಸಿತ್ ಭಾರತ್ 2047 ಗುರಿಯೊಂದಿಗೆ ಕೇಂದ್ರ ಸರ್ಕಾರದ ಸಂಪೂರ್ಣ ವಿಜ್ಞಾನ ಮತ್ತು ನಾವೀನ್ಯತೆ ದೂರದೃಷ್ಟಿಗೆ ಪೂರಕವಾಗಿ ಈ ಸಮಾವೇಶವನ್ನು ರೂಪಿಸಲಾಗಿದೆ ಎಂದು ತಿಳಿಸಿದರು. ಈ ಬಾರಿಯ ಬೆಂಗಳೂರು ಆವೃತ್ತಿಯು ವಿಕಸಿತ ಭಾರತ 2047ಕ್ಕಾಗಿ ನಾವೀನ್ಯತೆ ಮತ್ತು ಉದ್ಯಮಶೀಲತೆ ಆಧಾರಿತ ಬೆಳವಣಿಗೆ ಎಂಬ ವಿಶೇಷ ಧ್ಯೇಯವಾಕ್ಯದೊಂದಿಗೆ ನಡೆಯುತ್ತಿದ್ದು, ಶೈಕ್ಷಣಿಕ ಸಂಸ್ಥೆಗಳು, ಸಂಶೋಧನಾ ಪ್ರಯೋಗಾಲಯಗಳು ಹಾಗೂ ಕೈಗಾರಿಕೆಗಳ ನಡುವಿನ ಬಾಂಧವ್ಯವನ್ನು ವೃದ್ಧಿಸುವ ಗುರಿ ಹೊಂದಿದೆ ಎಂದರು.

ಈ ಸಮಾವೇಶದಲ್ಲಿ ಏರೋಸ್ಪೇಸ್ ತಂತ್ರಜ್ಞಾನಗಳ ಬೆಳವಣಿಗೆ, ಕೃತಕ ಬುದ್ಧಿಮತ್ತೆ ಮತ್ತು ಕೃಷಿ-ಆಹಾರ ಮಾರುಕಟ್ಟೆ ಸಂಪರ್ಕ ಪ್ರಮುಖ ಕ್ಷೇತ್ರಗಳ ಮೇಲೆ ಗಂಭೀರ ಚರ್ಚೆಗಳು ನಡೆಯಲಿವೆ ಎಂದು ತಿಳಿಸಿದರು.

ಯುವ ಸಂಶೋಧಕರಿಗೆ ಸುವರ್ಣಾವಕಾಶ : ಸಮಾವೇಶದಲ್ಲಿ ಏರೋಸ್ಪೇಸ್, ಆಹಾರ ತಂತ್ರಜ್ಞಾನ ಮತ್ತು ಎಐ ಕ್ಷೇತ್ರಗಳ 800ಕ್ಕೂ ಹೆಚ್ಚು ಪ್ರತಿನಿಧಿಗಳು ಹಾಗೂ ನವೋದ್ಯಮಗಳು ಪಾಲ್ಗೊಳ್ಳುತ್ತಿದ್ದಾರೆ. ನವೋದ್ಯಮಗಳ ಉತ್ಪನ್ನಗಳ ಪ್ರದರ್ಶನದ ಜೊತೆಗೆ, ವಿದ್ಯಾರ್ಥಿಗಳಿಗೆ ಮತ್ತು ಯುವ ಸಂಶೋಧಕರಿಗೆ ಪ್ರಾಯೋಗಿಕ ಜ್ಞಾನ ನೀಡಲು ಸಿಎಸ್‌ಐಆರ್, ಐಸಿಎಆರ್, ಐಸಿಎಂಆರ್ ಮತ್ತು ಇಸ್ರೋ ಸಂಸ್ಥೆಗಳನ್ನೊಳಗೊಂಡ ವಿಜ್ಞಾನ ಮತ್ತು ತಂತ್ರಜ್ಞಾನ ಪೆವಿಲಿಯನ್ ಪ್ರಮುಖ ಆಕರ್ಷಣೆಯಾಗಿರಲಿದೆ. ಈ ಕಾನ್‌ಕ್ಲೇವ್‌ನಲ್ಲಿ 70ಕ್ಕೂ ಹೆಚ್ಚಿನ ನವೋದ್ಯಮಿಗಳು ಭಾಗವಹಿಸಲಿದ್ದಾರೆ ಎಂದರು.

ಮಾರ್ನಿಂಗ್ ಶೋ

ನಮ್ಮ ರೇಂಜ್ ರೋವರ್ ಸುತ್ತ ಸಸ್ಪೆನ್ಸ್ ಥ್ರಿಲ್ಲರ್ ಕಥಾನಕ



ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಒಳಗೊಂಡ ನಮ್ಮ ರೇಂಜ್ ರೋವರ್ ಎಂಬ ಚಿತ್ರಕ್ಕೆ ಓ.ಎಸ್.ಆರ್. ಕುಮಾರ್ ಅವರು ಆಕ್ಷನ್‌ಕಟ್ ಹೇಳಿದ್ದಾರೆ. ಸಿ.ಎಮ್.ಎಮ್. ಹಿಂದೂಸ್ತಾನ್ ಫಿಲಂಸ್ ಮೂಲಕ ಡಾ||ಮೌಲಾ ಶರೀಫ್ ಸಿ.ಕೆ. ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಅರವಿಂದ್ ರಾವ್, ಆಟ ಸಂದೀಪ್, ಮೇಘನಾ ರಜಪೂತ್ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರದ ಟೀಸರನ್ನು ಕೂಡಲಸಂಗಮದ ಸಂಗಮಾನಂದ ಸ್ವಾಮಿಗಳು ಬಿಡುಗಡೆ ಮಾಡಿದರು, ಈವೇಳೆ ಮಾಜಿ ಶಾಸಕ ರಾಜಣ್ಣ, ಉದ್ಯಮಿ ವೀರಭದ್ರಾಚಾರಿ, ನಟ ಸಂಪೂರ್ಣೇಶ್‌ಬಾಬು, ಫಿಲಂಚೇಂಬರ್ ಉಪಾಧ್ಯಕ್ಷ ಕಿಶೋರ್‌ಕುಮಾರ್, ನಿರ್ಮಾಪಕರ ಸಂಘದ ಕಾರ್ಯದರ್ಶಿ ರಮೇಶ್ ಯಾದವ್, ವಿತರಕ ರಮೇಶ್ ಬಾಬು ಹಾಗೂ ನಿರ್ಮಾಪಕರ ಸಂಘದ ಮಾಜಿ ಅಧ್ಯಕ್ಷ ಉಮೇಶ್ ಬಣಕಾರ್ ಉಪಸ್ಥಿತರಿದ್ದು ಚಿತ್ರಕ್ಕೆ ಶುಭ ಹಾರೈಸಿದರು.

ನಿರ್ದೇಶಕ ಓ.ಎಸ್.ಆರ್.ಕುಮಾರ್ ಮಾತನಾಡುತ್ತ ಇದೊಂದು ಪ್ರತಿಷ್ಠಿತ ಕಾರಿನ ಹೆಸರು. ಎಮೋಷನ್ ಜತೆಗೊಂದು ಲವ್‌ಸ್ಟೋರಿ ಕೂಡ ಚಿತ್ರದಲ್ಲಿದೆ, ಚಿತ್ರಕ್ಕೆ ಇದೇ ಟೈಟಲ್ ಏಕೆ ಎನ್ನುವುದು ಸಿನಿಮಾ ನೋಡಿದಾಗ ತಿಳಿಯುತೆ ಬೆಂಗಳೂರು, ಮಂಗಳೂರು, ಹೈದರಾಬಾದ್ ಸುತ್ತಮುತ್ತ ಚಿತ್ರೀಕರಣ ಮಾಡಿದ್ದೇವೆ. ಈ ಹಿಂದೆ ಒಂದಷ್ಟು ಕಿರುಚಿತ್ರಗಳನ್ನು ನಿರ್ದೇಶನ ಮಾಡಿದ್ದೆ, ಹಿರಿತೆರೆಯಲ್ಲಿದು ಮೊದಲ ಪ್ರಯತ್ನ. ಸದ್ಯ ಕನ್ನಡದಲ್ಲೇ ತಯಾರಾಗಿರುವ ಈ ಚಿತ್ರವನ್ನು ತೆಲುಗಿಗೆ ಡಬ್ ಮಾಡುವ ಯೋಚನೆಯಿದೆ ಎಂದರು.

ನಿರ್ಮಾಪಕ ಮೌಲಾ ಶರೀಫ್ ಮಾತನಾಡುತ್ತ ಚಿಕ್ಕಂದಿನಿಂದ ನಾನು ಡಾ.ರಾಜಕುಮಾರ್ ಅವರ ಚಿತ್ರಗಳನ್ನು ನೋಡಿಯೇ ಬೆಳೆದವನು. ಇದು ನಮ್ಮ ಸಂಸ್ಥೆಯ ಮೂರನೇ ಚಿತ್ರ. ಈ ಹಿಂದೆ ಹೀರೋ ನಾನಲ್ಲ, ನಮ್ಮೂರ ಅಳಿಯ ಎಂಬ ಚಿತ್ರಗಳನ್ನು ನಿರ್ಮಿಸಿದ್ದೆ. ನಿರ್ದೇಶಕರು ಹೇಳಿದ ಈ ಕಥೆ ನನಗೆ ಬಹಳ ಇಷ್ಟವಾಯಿತು. ಹಾಗಾಗಿ ನಿರ್ಮಾಣಕ್ಕೆ ಕೈಹಾಕಿದೆ. ನಾನು ಚಿತ್ರರಂಗಕ್ಕೆ ಬರಲು ಉಮೇಶ್ ಬಣಕಾರ್ ಅವರೇ ಕಾರಣ. ಮುಂದೆಯೂ ಸದಭಿರುಚಿಯ ಚಿತ್ರಗಳನ್ನು ನಿರ್ಮಿಸುವ ಯೋಜನೆಯಿದೆ ಎಂದು ಹೇಳಿದರು. ನಾಯಕಿ ಮೇಘನಾ ರಜಪೂತ್ ಮಾತನಾಡಿ ಜಾಬ್ ಮಾಡಿಕೊಂಡಿರುವ ಸಿಂಪಲ್ ಹುಡುಗಿ, ಒಂದು ಘಟನೆ ನಡೆದು ಆಕೆಯ ಲೈಫೇ ಬದಲಾಗುತ್ತೆ ಎಂದು ವಿವರಿಸಿದರು. ಬ್ಯಾಂಕ್ ಜನಾರ್ದನ್, ಯತಿರಾಜ್, ಸನತ್ ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದಾರೆ. ರಾಜಾ ಶಿವಶಂಕರ್ ಅವರ ಛಾಯಾಗ್ರಹಣ, ಸತ್ಯ ಸೋಮೇಶ್ ಅವರ ಸಂಗೀತ ಈ ಚಿತ್ರಕ್ಕಿದೆ,



ಇದೇ ವರ್ಷ ಬಿಲ್ಲರಂಗ ಬಾಷ ಗುಡ್‌ನ್ಯೂಸ್ ಕೊಟ್ಟ ಸುದೀಪ್

ನನಗೆ ಸಿನಿಮಾ ಮಾಡೋದು ಬಿಟ್ಟು ಬೇರೇನೂ ಬೇಕಾಗಿಲ್ಲ. ನೀವು ಕೊಡುತ್ತಿರುವ ಪ್ರೀತಿ, ಕಾಳಜಿ ನನ್ನನ್ನು ಸಿನಿಮಾ ಮಾಡುವ ಉತ್ಸಾಹಕ್ಕೆ ಸದಾ ಪ್ರೇರೇಪಿಸುತ್ತಲೇ ಇರುತ್ತದೆ. ನೀವು ಕೊಡುವ ಉತ್ತೇಜನವನ್ನ ನಾನು ಎಂದೂ ಲಘುವಾಗಿ ತೆಗೆದುಕೊಂಡಿಲ್ಲ. ಬೇರೆ ವಿಚಾರಗಳ ಬಗ್ಗೆ ನಾನು ಎಂದೂ ತಲೆ ಕೆಡಿಸಿಕೊಳ್ಳುವುದಿಲ್ಲ.



ಸತ್ಯಮೂರ್ತಿ

ಕಿಚ್ಚ ಸುದೀಪ್ ಅವರು ಇತ್ತೀಚೆಗೆ ನಡೆದ ಪತ್ರಿಕಾ ಗೋಷ್ಠಿಯಲ್ಲಿ ನೆಪೋಟಿಸಂ ಬಗ್ಗೆ ನೀಡಿದ್ದ ಹೇಳಿಕೆ ಭಾರೀ ಚರ್ಚೆಗೆ ಕಾರಣವಾಗಿತ್ತು, ಕೊನೆಗೆ ಅದಕ್ಕೆ ನಟ ಶಿವರಾಜ್ ಕುಮಾರ್ ಅವರೇ ಬ್ರೇಕ್ ಹಾಕಿದ್ದರು, ಆ ಬಳಿಕ ಕಿಚ್ಚ ಸುದೀಪ್ ಅವರು ತಮ್ಮ ಅಭಿಮಾನಿಗಳಿಗೆ ಮತ್ತೊಂದು ಗುಡ್ ನ್ಯೂಸನ್ನು ಕೊಟ್ಟಿದ್ದಾರೆ, ಬುಧವಾರ ಬೆಳಗ್ಗೆ ಕಿಚ್ಚ ಸುದೀಪ್ ಅವರು ತಮ್ಮ ಎಲ್ಲಾ ಫ್ಯಾನ್ಸ್‌ಗೆ ಖುಷಿ ನೀಡುವಂಥ ಮಾಹಿತಿಯೊಂದನ್ನು ಕೊಟ್ಟಿದ್ದಾರೆ. ಹೌದು, ಕಿಚ್ಚ ಸುದೀಪ್ ಅವರು ಈಗ ಯಾವ ಚಿತ್ರದಲ್ಲಿ ತೊಡಗಿಕೊಂಡಿದ್ದಾರೆ ಎಂಬ ಪ್ರಶ್ನೆಗೆ ಸ್ಪಷ್ಟವಾದ ಉತ್ತರ ಸಿಕ್ಕಿದ್ದಿಲ್ಲ, ಅದಕ್ಕೀಗ ಸುದೀಪ್ ಅವರೇ ಸ್ಪಷ್ಟನೆ ನೀಡಿದ್ದಾರೆ, ತಾವು ಈಗಾಗಲೇ ಒಟ್ಟಿಗೇ ನಾಲ್ಕು ಚಿತ್ರಗಳನ್ನ ಲಾಕ್ ಮಾಡ್ಕೊಂಡಿರೋ ವಿಚಾರವನ್ನು ಅಧಿಕೃತವಾಗಿ ಘೋಷಿಸಿದ್ದಾರೆ. ಜೊತೆಗೆ ಸುದೀಪ್ ಅವರು ತಮ್ಮ ಬಹು ನಿರೀಕ್ಷಿತ ಚಿತ್ರವಾದ ಬಿಆರ್‌ಬಿ (ಬಿಲ್ಲಾ ರಂಗ ಭಾಷ) ಸಿನಿಮಾ ಇದೇ ವರ್ಷದ ಅಂತ್ಯದಲ್ಲಿ ರಿಲೀಸ್ ಆಗುತ್ತದೆ ಎನ್ನುವ ರೋಚಕ ಸುದ್ದಿಯನ್ನ ತಮ್ಮ ಎಕ್ಸ್ ಖಾತೆಯಲ್ಲಿ ಘೋಷಣೆ ಮಾಡಿದ್ದಾರೆ.

ತಮ್ಮ ಅಭಿಮಾನಿಗಳನ್ನು ಉದ್ದೇಶಿಸಿ ಮಾಹಿತಿ ಹಂಚಿಕೊಂಡಿರುವ ಕಿಚ್ಚ ಸುದೀಪ್ ನನಗೆ ಸಿನಿಮಾ ಮಾಡೋದು ಬಿಟ್ಟು ಬೇರೇನೂ ಬೇಕಾಗಿಲ್ಲ, ನೀವು ಕೊಡುತ್ತಿರುವ ಪ್ರೀತಿ, ಕಾಳಜಿ ನನ್ನನ್ನು ಸಿನಿಮಾ ಮಾಡುವ ಉತ್ಸಾಹಕ್ಕೆ ಸದಾ ಪ್ರೇರೇಪಿಸುತ್ತಲೇ ಇರುತ್ತದೆ. ನೀವು ಕೊಡುವ ಉತ್ತೇಜನವನ್ನ ನಾನು ಎಂದೂ ಲಘುವಾಗಿ ತೆಗೆದುಕೊಂಡಿಲ್ಲ, ಬೇರೆ ವಿಚಾರಗಳ ಬಗ್ಗೆ ನಾನು ಎಂದೂ ತಲೆ ಕೆಡಿಸಿಕೊಳ್ಳುವುದಿಲ್ಲ, 2026ಕ್ಕೆ ಬಿಲ್ಲಾ ರಂಗ ಭಾಷ ಚಿತ್ರದ ಜೊತೆ ನಾನು ನಿಮ್ಮ ಮುಂದೆ ಬರುತ್ತೇನೆ. ಜೊತೆಗೆ ಈಗಾಗಲೇ ನಾಲ್ಕು ಸ್ಕ್ರಿಪ್ಟ್‌ಗಳನ್ನು ನಾನು ಲಾಕ್ ಮಾಡಿದ್ದು, ಶೀಘ್ರದಲ್ಲೇ ಅದರ ಬಗ್ಗೆಯೂ ಸಹ ಮಾಹಿತಿ ಕೊಡಲಿದ್ದೇನೆ' ಎಂದು ತಮ್ಮ ಎಕ್ಸ್ ಖಾತೆಯಲ್ಲಿ ಕಿಚ್ಚ ಸುದೀಪ್ ಅವರು ಹಂಚಿಕೊಂಡಿದ್ದಾರೆ.

ಗೀಕ್ ಚಿತ್ರತಂಡಕ್ಕೆ ಅಶ್ವಿನಿ ಪುನೀತ್ ರಾಜಕುಮಾರ್ ಸಾಥ್

ಶೀರ್ಷಿಕೆಯಿಂದಲೇ ಕುತೂಹಲ ಮೂಡಿಸಿದ್ದ ಗೀಕ್ ಚಿತ್ರದ ಮೊದಲ ಝಲಕ್ ಇತ್ತೀಚೆಗಷ್ಟೇ ಬಿಡುಗಡೆಯಾಗಿತ್ತು. ಚಂದನವನದ 50ಕ್ಕೂ ಹೆಚ್ಚು ಸೆಲೆಬ್ರಿಟಿಗಳು ಈ ಚಿತ್ರದ ಟೈಟಲ್ ಟೀಸರ್ ಅನಾವರಣಗೊಳಿಸಿದ್ದರು. ಇದೀಗ ದೊಡ್ಮನೆ ಸೊಸೆ ಅಶ್ವಿನಿ ಪುನೀತ್ ರಾಜಕುಮಾರ್ ಅವರು ಗೀಕ್ ಚಿತ್ರದ ಪೋಸ್ಟರನ್ನು ರಿಲೀಸ್ ಮಾಡಿದ್ದಾರೆ. ಚಿತ್ರತಂಡದ ಶ್ರಮ ಹಾಗೂ ಕ್ರಿಯೇಟಿವಿಟಿಯನ್ನು ಮೆಚ್ಚಿ ಅವರು ಶುಭ ಹಾರೈಸಿದ್ದಾರೆ. ಪ್ರವೀಣ್‌ತೇಜ್, ಚೈತ್ರಾ ಆಚಾರ್, ಕಿರಣ್ ಶ್ರೀನಿವಾಸ್, ವಿರಾನಿಕಾ ಶೆಟ್ಟಿ ಮುಖ್ಯ ಪಾತ್ರಗಳಲ್ಲಿರುವ ಈ ಚಿತ್ರಕ್ಕೆ ಡಿ.ಹರಿಪ್ರಕಾಶ್ ಅವರು ಆ್ಯಕ್ಷನ್ ಕಟ್ ಹೇಳಿದ್ದಾರೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿರುವ ಈ ಚಿತ್ರದಲ್ಲಿ ಉತ್ತಮ ಕಂಟೆಂಟ್ ಇದೆ ಎನ್ನುವುದು ಈವರೆಗೂ ಚಿತ್ರದ ಝಲಕ್ ನೋಡಿದವರ ಅಭಿಪ್ರಾಯ. ಎಸ್.ವಿ.ಎಂ. ಪ್ರೊಡಕ್ಷನ್ಸ್ ಹಾಗೂ ಹರಿಪ್ರಕಾಶ್ ಫಿಲಂಸ್ ಬ್ಯಾನರ್ ಅಡಿಯಲ್ಲಿ ಸಂದೀಪ್ ನಾಗರಾಜ್ ಹಾಗೂ ಪ್ರಿಯಾಂಕಾ ಜಂಟಿಯಾಗಿ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಕನ್ನಡಿಗರಿಗೆ ಒಂದೊಳ್ಳೆ ಸಿನಿಮಾ ಕೊಡುವ ನಿಟ್ಟಿನಲ್ಲಿ ನಿರ್ಮಾಪಕದ್ವಯರು ಕಂಟೆಂಟ್ ಇರುವ ಸಿನಿಮಾವನ್ನೇ ನೀಡಬೇಕೆಂಬ



ಪ್ಯಾಶನ್‌ನೊಂದಿಗೆ ಗೀಕ್ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಕೀರ್ತನ್ ಪೂಜಾರಿ ಅವರ ಛಾಯಾಗ್ರಹಣ, ಜೋ ಕೋಸ್ಟಾ ಅವರ ಸಂಗೀತ ಸಂಯೋಜನೆ, ಶಶಾಂಕ್ ನಾರಾಯಣ್ ಅವರ ಸಂಕಲನ, ಲಿಜು ಪ್ರಭಾಕರ್ ಡಿಐ ಹಾಗೂ ಅರುಣ್ ಸೌಂಡ್ ಡಿಸೈನಿಂಗ್ ಈ ಚಿತ್ರಕ್ಕಿದೆ. ಯೋಗೀಶ್‌ರಾಜ್ ಚಿತ್ರದ ಕಾರ್ಯಕಾರಿ ನಿರ್ಮಾಪಕರಾಗಿದ್ದಾರೆ. ಇತ್ತೀಚೆಗೆ ಮೊಬೈಲ್ ಸಂಬಂಧಿತ ಆಪ್‌ಗಳು ಹಾಗೂ ಡೇಟಾ ದುರುಪಯೋಗಪಡಿಸಿಕೊಳ್ಳುತ್ತಿರುವ ಕುರಿತ ಕಥಾಹಂದರ ಹೊಂದಿರುವ ಸಿನಿಮಾ ಇದಾಗಿದ್ದು, ಇದಕ್ಕೆ ಸಸ್ಪೆನ್ಸ್-ಥ್ರಿಲ್ಲರ್ ಅಂಶವನ್ನು ಸೇರಿಸಲಾಗಿದೆ. ಕಂಟೆಂಟ್ ಜತೆಗೆ ಸಸ್ಪೆನ್ಸ್, ಥ್ರಿಲ್ ನೀಡಬೇಕು ಎಂಬ ನಿಟ್ಟಿನಲ್ಲಿ ಗೀಕ್ ಸಿನಿಮಾ ತಯಾರಾಗಿದೆ. .

ಚಿತ್ರೀಕರಣ ಮುಗಿಸಿದ ಲವ್‌ಕೇಸ್

ಜೈಶ್ ಅವರ ನಿರ್ದೇಶನದ ಲವ್‌ಕೇಸ್ ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯವಾಗಿದೆ. ಎಂ.ಬಿ. ಕ್ರಿಯೇಷನ್ಸ್ ಅಡಿ ಮೋಹನ್‌ಬಾಬು ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ನಾಗರಭಾವಿಯ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಕೊನೆಯ ದಿನದ ಚಿತ್ರೀಕರಣ ಮುಗಿಸಿದ ಚಿತ್ರತಂಡ ಕುಂಬಳಕಾಯಿ ಒಡೆಯುವ ಮೂಲಕ ಚಿತ್ರೀಕರಣಕ್ಕೆ ಶುಭಂ ಹಾಡಿದೆ. ಶ್ರೀನಗರ ಕಿಟ್ಟಿ, ಪ್ರಮೋದ್ ಶೆಟ್ಟಿ, ಸುಧಾರಾಣಿ, ನಾಗಭೂಷಣ್, ಮಹಾನಟಿ ಖ್ಯಾತಿಯ ವಂಶಿ, ಸ.ಹಿ.ಪ್ರಾ. ಶಾಲೆ ಕಾಸರಗೋಡು ಹಾಗೂ ಕಾಂತಾರ ಖ್ಯಾತಿಯ ರಂಜನ್ ಪ್ರಮುಖ ಪಾತ್ರಗಳಲ್ಲಿರುವ ಈ ಚಿತ್ರಕ್ಕೆ ಆದಿ ಹರಿಕೃಷ್ಣ ಅವರ ಸಂಗೀತ ಸಂಯೋಜನೆ, ಕೆ.ಎಸ್. ಚಂದ್ರಶೇಖರ್ ಅವರ ಛಾಯಾಗ್ರಹಣ, ಅನುಕೃಷ್ಣ ಅವರ ಸಂಕಲನವಿದೆ. ಹಲವು ವಿಶೇಷ ವಿಚಾರಗಳಿಂದ ಕೂಡಿರುವ ಈ ಚಿತ್ರವನ್ನು ಶೀಘ್ರದಲ್ಲೇ ತೆರೆಗೆ ತರೋ ಸನ್ನಾಹದಲ್ಲಿ ಚಿತ್ರತಂಡವಿದೆ. ಸದ್ಯ ಲವ್ ಕೇಸ್ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಬಿರುಸಿನಿಂದ ಸಾಗಿದ್ದು, ಟೀಸರ್ ಮತ್ತು ಹಾಡುಗಳನ್ನು ಬಿಡುಗಡೆ ಮಾಡೋ ಆಲೋಚನೆಯೂ ಚಿತ್ರತಂಡಕ್ಕಿದೆ.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26

IN THE COURT OF PRINCIPAL CIVIL JUDGE AND JMFC, AT ANEKAL

C.Mis.No. 799/2026

BETWEEN : SRI. RANGASWAMY & OTHERS ...PETITIONERS

AND : THE TAHASILDHAR, Anekal Taluk, Bangalore District. ...RESPONDENT

PUBLIC NOTICE

Whereas the petitioners have filed the above petition for seeking death certificate of mother namely Smt.Muniyamma he was died on 28/03/2021 at #14, Mahal, Chowdadenahalli Village, Sarjapura Hobli, Anekal Taluk, Bangaluru, Karnataka for necessary relief take notice that if any interested persons in respect of Death certificate of Smt. Muniyamma are hereby called upon to appear before this Hon'ble court either personally or through on Advocate duly instructed on **15/07/2026 at 11:00 A.M.** otherwise the matter will be heard and decided ex-parte.

Given under my hand and seal of the Court this is the 08th day of June 2026.

By Order of the Court
Sd/- Sheristedar
Senior Civil Judge & JMFC Court, Anekal

Advocate for Petitioners.
Smt. RANJITHA. C,
Advocate at Anekal,
Anekal Taluk, Bengaluru -562106.

IN THE COURT OF THE 3rd ADDL CIVIL JUDGE AND JMFC AT ANEKAL

C.Misc. No.892/2026

BETWEEN: **Sri.D.L.Subramanyaswamy,** S/o Late D.Lakshmi Narasimhaiah, Aged about 63 years, R/at Dyavasandra Village, Jigani Hobli, Anekal Taluk, Bangalore District-560 105 ... PETITIONER

AND: **The Tahasildhar,** Anekal Taluk ... RESPONDENT

NOTICE

Whereas the petitioners have filed the above petition for seeking the death certificate of petitioner father namely D. Lakshmi Narasimhaiah S/o Ramaswamy Shastry who was died on 03-03-1980 at Dyvasandra Village, Jigani Hobli, Anekal Taluk, Bangalore District before 3rd ADDL the Civil Judge and JMFC at Anekal, whereas the above petition is fixed for hearing date on **18-07-2026** at 11:00 AM if anybody interest in this matter regard to appear in this court in person or by a pleader to file objections the same of you failing which the petition will be disposed on enquiry.

Given under my hand and seal of the court on 10-06-2026.

By order of the court, Sheristedar, civil Judge & JMFC Court at Anekal

Sri.VENUGOPAL .M, Advocate
Office at 2nd Floor, Dharmashastha Complex, Attibele Main Road, Anekal Town, Anekal Taluk, Bangalore District.

IN THE COURT OF THE PRINCIPAL CIVIL & J.M.F.C. AT CHIKKBALAPURA

C. MISC. NO.20/2026

BETWEEN: 1.**Smt. Shanthamma** W/o Late Muniraju .P Aged about 53 years. 2. **Sri. C.M. Shashikumar** D/o Late Muniraju .P Aged about 36 years. Both are R/at No.606, 29th Ward, 4th Cross, Chamarajapete, Chikkaballapura Town & Dist. 3. **Smt. M. Radhika** D/o Late Muniraju .P W/o K.V. Chandramohan, Aged about 41 years. R/at No.6193, Hosa Ad Colony, Mulabagal, Kolar District. **Petitioners**

AND Register of Birth and Death, City Municipal Council Chikkalapura. Respondent

PUBLIC NOTICE

Whereas the petitioners has filed the above petition against the Respondent for the relief of direct the Respondent to register the date of death of Smt Ramakka W/o Muniyappa @ Munipapaiah, was died on 12.10.1968, in the petitioners No.1 and 2 residence at No.606, 29th Ward, 4th Cross, Chamarajapete, Chikkaballapura Town & Dist. if any person/s have any interest or objection may dispute regarding the same and can appear before the Hon'ble Principal, Civil Judge and JMFC at Chikkaballapura, in Crl. Misc. 20/2026 on 13.07.2026 at 11.00 AM.

Given under my hand and the seal of the court this 04.06.2026.

By Order of the Court
Chief Ministerial Officer Pri.Civil Judge and J.M.F.C.Court Chikkballapur 562101

Address for service : **Sri. Sunil Kumar G.S.** Advocate, Lekhanasree Law Chamber, Hanumanthappa Building, Ground Floor, Behind Police Station, Devanahalli New Bus stand, Devanahalli. Mob:9591087381.

ಜಾಹೀರಾತಿಗಾಗಿ ಸಂಪರ್ಕಿಸಿ:
9845438807,9611755391

IN THE COURT OF THE PRL CIVIL JUDGE AND JMFC AT ANEKAL

C.Misc. No. 904/2026

BETWEEN: 1. **Smt. Jayamma,** W/o Late. Krishnappa, aged about 56 years, R/at #004, LIG-3, 89, KHB Colony, Suryacity, Chandapura, Anekal Taluk, Bangalore District. 2. **Sri. Manjunath,** S/o Late. Krishnappa, aged about 48 years, R/at No.195/B, 2nd Cross, Sri Sai Residency, Hennagara Gate, Yellammanagara, Chandapura, Anekal Taluk, Bangalore District. 3. **Sri. Arun Kumar,** S/o Late. Krishnappa, aged about 43 years, R/at #004, LIG 3, 89, KHB Colony, Suryacity, Chandapura, Anekal Taluk, Bangalore District. 4. **Smt. Savitha,** D/o Late. Krishnappa, aged about 43 years, R/at No.274, 1st Main, Ramakrishna Layout, Giddenahalli, RMV Extension, 2nd Stage, Bangalore North, Bangalore ...**Petitioners.**

AND: **The Tahasildhar,** Anekal Taluk ...**Respondent**

NOTICE

Whereas the petitioners have filed the above petition for seeking the death certificate of petitioners mother namely **Muniyamma** W/o Late. Munivenkatappa who died on 24-04-1968 at Sarjapura Village, Sarjapura Hobli, Anekal Taluk, Bangalore District before the Prl Civil Judge and JMFC at Anekal, whereas the above petition is fixed for hearing date on **10/07/2026 at 11.00 AM** if anybody interest in this matter regard to appear in this court in person or by a pleader to file objections the same of you failing which the petition will be disposed on enquiry.

Given under my hand and seal of the Court on this 09/06/2026

By order of the Court, Sheristedar Civil Judge (Jr.Dvn) and JMFC Court, Anekal

Advocate for Petitioner: **Sri. Sunil. D**
Office at STB Complex, Attibele Main Road, Anekal Town, Anekal Taluk, Bangalore District.

BEFORE THE MOTOR ACCIDENT CLAIMS TRIBUNAL AT BANGALORE

M V C. No.1317/2026

BETWEEN: **Munirathnamma** & others ...PETITIONER

AND: **Abhinash Kumar Jha** ...RESPONDENT

NOTICE TO RESPONDENT

Abhinash Kumar Jha, S/o Mayananda Jha, R/at No.376, 1st floor, 7th cross, 1st stage, 2nd Block, Moodalapalya, Kalyan Nagar, Bangalore-560072. (Owner of the Vehicle bearing Reg No. KA-41-MD-4033)

WHEREAS, the petitioner in MVC. No. 1317/2026, has filed the above claim petition against the respondents seeking compensation for a Sum of Rs.20,00,000/- for the injuries sustained by petitioner, in a road traffic accident involving your vehicle Car bearing Reg No.KA-41-MD-4033 which occurred on 20-12-2025 at about 06:15 P.M, near Bannikuppe Gate, 'U' turn, Bangalore to Hyderabad, NH-44 Road, Chikkaballapura, you are hereby directed to be present before the Hon'ble court (Mayo Hall SCCH-21) on **21-07-2026** at 11:00 A.M. personally or through a pleader in the above case, duly instructed by you, failing which the matter will be heard in your absence, placing you Ex-parte.Given under my hand and seal of the court on this 05-06-2026.

By order of the Court, Sheristedar, Court of Small Causes, Mayo Hall Unit, Bangalore.

Advocate for petitioner: **M. SUBRAMANI**
No.13, 12th Cross, Udayaravi Divine Paradise Building, 3rd floor, Cubbonpet, Bangalore -560002.

IN THE COURT OF MOTOR ACCIDENT CLAIMS TRIBUNAL AT BENGALURU

MVC No.6610/2024 (SCCH-09)

BETWEEN: **Kodandaramaiah ...PETITIONER**

AND: **Hemanth Kumar ...RESPONDENT**

NOTICE TORESPONDENT

Mr. Hemanth Kumar, S/o. Veerabhadrappa, No.5, Thigalarapalya road, Udupa Layout Andrahalli, Bengaluru-560091.

Take notice that the above petitioner have filed the above claim petition against the Respondents for the compensation of Rs. 18,00,000/- for the grievous injuries sustained by the petitioner, in a Road Traffic Accident that occurred on 11-03-2024 involving Motor Cycle KA-03-AH4797 at about 3:00 P.M, Infront of Tata Advance company Jigani Industrial Area Jigani town Bangalore District.The Respondent above named is hereby directed to appear before this Hon'ble Court either in person or through the pleader on the day **03-08-2026** before SCCH-09 at 11:00 A.M. to defend the above case, failing which the matter will be determined as Ex-parte.

Given under my hand & seal of the court on this 09-06-2026.

By order of the Court, Assistant Registrar, Court of Small Causes, Bengaluru.

Advocate for petitioner: **SREENIVASAN .M**
No.7, STB Complex, Attibele road, Anekal, Bangaluru - 562106.

IN THE COURT OF THE ASSISTANT COMMISSIONER DODDABALPURA SUB DIVISION AT DODDABALAPURA

RA(H).No.77/2025

BETWEEN: **Venkatesh K.M ... PETITIONER**

AND: **The Tasildhar** and others ... **RESPONDENTS**

NOTICE TO BE SERVED ON THE RESPONDENT NO.2(A), AT THE FOLLOWING ADDRESS

2 (a). Sathish Jayarama Shastri, S/o Late Jayarama Shastri, Major in age, R/at: Kacharakanahalli Village, Jadigenahalli Hobli, Hoskote Taluk, Bangalore Rural District.

WHEREAS, the Appellants have filed the above Appeal being highly aggrieved by Endorsement dated highly aggrieved by Endorsement issued by the first respondent-Tahsildar, Hoskote Taluk, Bangalore Rural District, wherein the first respondent has ordered to prefer this revenue appeal before this Hon'ble Authority, in respect of accepting the Mutation in the name of the appellant in respect of the land bearing Sy.No.10 new sy.No.10/2 measuring 10 guntas situated at Kacharakanahalli Village, Jadigenahalli Hobli, Hoskote Taluk, Bangalore Rural District.

You are hereby directed to appear, before this Hon'ble Court either in person or through a pleader, on **29-06-2026** at 3:00 P.M to answer the claim of the Petitioner, failing which, the matter will be disposed off ex parte.

Given under my hand, signature and seal of this Hon'ble court, on 08-06-2026

By order of the court, Assistant Commissioner Doddabalpura, Sub Division at Doddabalapura, Bangalore Rural District.

BEFORE THE MOTOR ACCIDENT CLAIMS TRIBUNAL (SCCH-14) AT BANGALORE

MVC NO.7722 OF 2025

BETWEEN: **Venkatesh V.N ...Petitioner**

AND: **New India Ass Com. LTD,** and another ...**Respondents**

ISSUE NOTICE TO 2ND RESPONDENT.

To, Mr. Bikram Saha, S/o. Ranbir Saha, R/at. Flat No. C-610, Ozone Evergreens, Haralur Road, Off Sarjapura Road, Bengaluru- 560 035. (Owner of the Car bearing reg no.KA-51-MM-1797).

Whereas the above named petitioner has filed this claim petition against the above named respondent before this Hon'ble court for compensation of Rs 11,00,000/- for the injuries sustained in RTA, the accident occurred on 22/08/2025, at about 04.30 PM To 05.30 PM, heading towards Edan Garden layout, on the Chandapura- Anekal Road, Kasaba Hobli, Anekal Taluk, Bengaluru, the accident between the TVS Star City Motor Cycle bearing reg.no.KA-51-L-7377, and Car bearing reg. KA-51-MM-1797, You are hereby summoned to appear in this court in person or through a pleader, duly instructed on **03/07/2026 at 11:00 AM** before (SCCH -14) to show cause against the claim petition failing which the petition will be heard and determined exparte.

Given under my hand and seal of the court on this 05/06/2026

By order of the Court, Assistant Registrar, Court of Small Causes, Bengaluru

Advocate for Petitioner: **N.S. Ashtalakshmi**
Consultant & Advocate, (C/o. ASM Enterprises), No.9, 7th Cross, Vallabhanagara, Uttarahalli Main Road, Konanakunte Cross, K.P. Main Road, Bangalore- 560062.

BEFORE THE MOTOR ACCIDENT CLAIMS TRIBUNAL AT BANGALORE

MVC. No.1319/2026

BETWEEN: **Revanth B.M** & others ...**PETITIONER**

AND: **Abhinash Kumar Jha ...RESPONDENT**

NOTICE TO RESPONDENT

Abhinash Kumar Jha, S/o Mayananda Jha, R/at No.376, 1st floor, 7th cross, 1st stage, 2nd Block, Moodalapalya, Kalyan Nagar, Bangalore-560072. (Owner of the Vehicle bearing Reg No. KA-41-MD-4033)

WHEREAS, the petitioner in MVC. No. 1319/2026, has filed the above claim petition against the respondents seeking compensation for a Sum of Rs.20,00,000/- for the injuries sustained by petitioner, in a road traffic accident involving your vehicle Car bearing Reg No.KA-41-MD-4033, which occurred on 20-12-2025 at about 06:15 P.M, near Bannikuppe Gate, 'U' turn, Bangalore to Hyderabad, NH-44 Road, Chikkaballapura, you are hereby directed to be present before the Hon'ble court (Mayo Hall SCCH-21) on **21-07-2026** at 11:00 A.M. personally or through a pleader in the above case, duly instructed by you, failing which the matter will be heard in your absence, placing you Ex-parte.

Given under my hand and seal of the court on this 05-06-2026.

By order of the Court, Sheristedar, Court of Small Causes, Mayo Hall Unit, Bangalore.

Advocate for petitioner: **M. SUBRAMANI.**
No.13, 12th Cross, Udayaravi Divine Paradise Building, 3rd floor, Cubbonpet, Bangalore -560002.

IN THE COURT OF THE HON'BLE II J.M.F.C AT MYSURU

C.Mis No: 96 /2026

Petitioner: Mahendra.G.C S/o Late Chikkanegowda, Aged about 47years, R/at: #410,Gopalapura, JayapuraHobli, MysuruTaluk. Mysuru-570008.

V/s

Respondent: Registrar of Birth & Death Thasildhar Mysore Taluk, Mysore.

PUBLIC NOTICE

That the above Petitioner has applied for the registration of the Death of his wife by name Smt. Danalakshmi. G.B. W/o Mahendra.G.C as 11/04/2013 in the records of the Registrar of Birth and Death and seeking to issue Death Certificate to that effect, if the General public having any objection with respect to the same, may appear before the Hon'ble Court on 12.06.2026 at 11.00 A.M in person or through authorized Counsel and file respective objection if any. Otherwise, the Hon'ble Court will decide the case.

By order of this court
Sheristedar, THE HON'BLE II J.M.F.C AT MYSURU

ADVOCATE FOR PETITIONER:
Manoj K.N.
Place: Mysuru, Date : 13.05.2026

BEFORE THE MOTOR ACCIDENT CLAIMS TRIBUNAL (SCCH-14) AT BANGALORE

MVC NO.7721 OF 2025

BETWEEN: **Munirathnamma ...Petitioner**

AND: **New India Ass Com. LTD,** and another ...**Respondents**

ISSUE NOTICE TO 2ND RESPONDENT.

To, Mr. Bikram Saha, S/o. Ranbir Saha, R/at. Flat No. C-610, Ozone Evergreens, Haralur Road, Off Sarjapura Road, Bengaluru- 560 035. (Owner of the Car bearing reg no.KA-51-MM-1797).

Whereas the above named petitioner has filed this claim petition against the above named respondent before this Hon'ble court for compensation of Rs 20,00,000/- for the injuries sustained in RTA, the accident occurred on 22/08/2025, at about 04.30 PM TO 05.30 PM, heading towards Edan Garden layout, on the Chandapura- Anekal Road, Kasaba Hobli, Anekal Taluk, Bengaluru, the accident between the TVS Star City Motor Cycle bearing reg.no.KA-51-L-7377, and Car bearing reg. KA-51-MM-1797, You are hereby summoned to appear in this court in person or through a pleader, duly instructed on **03/07/2026 at 11:00 AM** before (SCCH -14) to show cause against the claim petition failing which the petition will be heard and determined exparte.

Given under my hand and seal of the court on this 05/06/2026

By order of the Court, Assistant Registrar, Court of Small Causes, Bengaluru

Advocate for Petitioner: **N.S. Ashtalakshmi**
Consultant & Advocate, (C/o. ASM Enterprises), No.9, 7th Cross, Vallabhanagara, Uttarahalli Main Road, Konanakunte Cross, K.P. Main Road, Bangalore- 560062.

IN THE COURT OF THE SENIOR CIVIL JUDGE AND JMFC AT GUDIBANDE

O.S.No. 179/2025

Plaintiff: Adilakshmamma

-Vs-

Defendant: Ramadevi and others.

Defendant No.23. Smt. Sulochanamma W/o Narasimha reddy D/o Late Narayanamma and Late Narayanareddy, Aged about 50 years, R/at Gangasandera village, Kasaba Hobli Gowribidanur taluk. **Defendant No. 26. Sri Lakshminarayana reddy** S/o Late Eramma and Late Obalareddy, Aged about 70 years, R/at Mopurahalli village, Nagaragere Hobli, Gowribidanur taluk. **Defendant No. 27. Smt. Saraswathamma** W/o Narayanswamy D/o Late Eramma and Late Obalareddy, Aged about 66 years, R/at Yarrapalli village, Kasaba Hobli, Gudibande taluk. **Defendant No. 28. Sri.Chanchureddy** S/o Late Eramma and Late Obalareddy, Aged about 64 years, R/at Mopurahalli village, Nagaragere Hobli Gowribidanur taluk. **Defendant No. 29. Smt. Kamalamma** W/o Shankara reddy S/o late Eramma and Late Obalareddy, Aged about 60 years R/at Venkatapura village, Chilamathur Mandal, Hindupur Taluk Sathya Sai District. **Defendant No. 30. Sri. Vivekananda Reddy** S/o Late Eramma and Late Obalareddy, Aged about 59 years R/at Mopurahalli village, Nagaragere Hobli Gowribidanur taluk. **Defendant No. 31. Smt. Padmamma** W/o Prabhakar Reddy D/o Late Eramma and Late Obalareddy, Aged about 54 years, R/at Nammanni Extension, Gowribidanur taluk.

DRAFT PAPER PUBLICATION

Notice to the of defendant No.23, 26 to 31 Under Order 5 Rule 20 (1) of the Code of Civil Procedure.

Whereas, the plaintiff has filed this suit against the defendants in respect of the schedule properties and your presence in the case is needs to resolve and dispose the matter.

You are the defendant No.23, 26 to 31 is hereby directed to appear in the above said court in person or through pleader duly instructed and able to answer all material questions raising in the suit or to accompanied by some person able to answer all such questions on the day of on 03-07-2026 at 11.00 clock in forenoon.

Given under my hand and seal of the court on the day of 10-04-2026.

SCHEDULE

1. Sy no. 4/1,measuring 2-04 guntas Bounded on:- **East:** Narendra Reddy's property, **West:** Joint family property Sy No.5/2, **North:** Sy No. 2 Maddara Ganagapp's property, **South:** Sy No.4/2 and 4/3.
2. Sy no. 5/2, measuring 1-22 guntas, Bounded on:- **East:** Joint family property, **West:** Nagabushana reddy's proeprty, **North:** Harinatha reddy's proeprty, **South:** Suryanarayana Reddy and Narasareddy's property
3. Sy no. 10/2 measuring 3-10 guntas, Bounded on:- **East:** Maddara Gangapp' property, **West:** Narendara Reddy's property, **North:** Rajakaluve, **South:** Janaradhana Reddy's porperty
4. Sy no. 3/2A measuring 1-00 acre, Bounded on:- **East:** Nirmala's Property, **West:** Chikka Chowdappa's proepty, **North:** Venkataegowda & Santhosh proeprty, **South:** Pillakk's property

Item No. 1 to 4 are situated at Mopurahalli village, Nagaragere Hobli, Gowribidanur Taluuk.

5. Sy no. 10/1 measuring 5-29.08 guntas, including 0- 26.08 guntas karab:-
6. Sy no. 10/3 measuring 2-09 guntas, including 0-09 guntas karab:-
7. Sy no. 10/4 measuring 2-09.08 guntas, including 0- 09.08 guntas karab:-

Items No.5 to 7 are commonly bounded on:- **East:** Hill, **West:** Arivand's property, **North:** Manjula's property, **South:** Naresh and Bharathamm's property.

8. Sy no. 11 measuring 20 acres 23 guntas, including 3-23 guntas karab, out of which 15 acres Bounded on:- **East:** Joint family property, **West:** Road, **North:** Road, **South:** Joint family property.
9. Sy no. 12/1 measuring 8-33 acre, including 0-30 gunts karab Bounded on:- **East:** Joint family Property, **West:** Manjula's proepty, **North:** Janardhana Reddy's property, **South:** Joint family property and Raod.
10. Sy no. 12/4 measuring 2-35 guntas, Bounded on:- **East:** Rajeshawara's property, **West:** Narasareddy's property, **North:** Rajeshwara's property, **South:** Joint family property.
11. Sy no.13/1 measuring 23 acre, including 5-13 guntas karab, Bounded on:- **East:** Reddappanavara Rangappa's property, **West:** Joint family proepty, **North:** Road and Lakshmidevamma's property, **South:** Hill

Item No.5 to 11 are situated at Chapparadahalli village, Nagaragere Hobli, Gowribidanur Taluk.

By order of the court: Sheristhedar
Senior Civil Judge & JMFC, Gudibande

Address for service: K.M.Nagamurthy, Advocate, Opp lakkamma chowltry OPO Road, Chickballapur-562 101

Hg-06-07-2026

IN THE COURT OF THE (CCH-43) XLII ADDITIONAL CITY CIVIL AND SESSIONS JUDGE AT BENGALURU

O.S. NO. 8299/2024

Plaintiffs :
Smt.Akkayamma and others
D/o Late Poojappa, W/o Late Muniyappa, Aged about 80 years, R/at.No.31,Guniagrahara, Shivakote,Bengaluru North-560089.

V/S

Defendants :
Smt.Siddamma & ors

SUMMONS TO DEFENDANT NO.9 TO 11 &13

9. Sri.Anil Kumar S/o Late Munikrishnappa, Aged about 42 years,
10. Sri.Gopal S/o Late Munikrishnappa, Aged about 65 years,
Both are R/at Allalasandra Village, Yelahanka Taluk, Bengaluru Urban District.
11. M/s.The Standard Brick And Tile Company(Yelahank) Pvt. Ltd,
Representing its Managing Director,
Sri.V.S.Surendar, S/o V.N.Sundar, R/at.No.8, Matadahalli, R.T.Nagar,Bengaluru-560032
13. Sri.Ravichandra M S/o Sri.Muniyappa, Aged about 40 years, R/at.No.108,Narayana Layout, Near Anjaneya Temple, Allalasandra, Bengaluru-65.

Whereas the Plaintiffs have filed the above suit for Partition and separate possession agains: the Defendants with respect to Suit Schedule property.

You are hereby summoned to appear before this court **on 06-07-2026 at 11 A.M.** in person or through advocate /pleader to answer the questions to the same. Failing which the suit will be heard and determined as Ex-parte.

SCHEDULE

All the piece and parcel of the property bearing **Sy. No 42,** measuring total extent of 1acre 03 guntas, including 0-02 guntas of Kharab, Sy. No 44, measuring total extent of 00-21 guntas including 0-01 guntas of Kharab, and Sy.No.45 measuring total extent of 0-20 guntas, totally measuring an extent of 2 acres 04 guntas, including 0-03 guntas of Kharab, situated at **Allalasanddra Village, Yekahanka Hobali, Yelahanka Taluk (Bengaluru North Taluk), Bangalore Urban District.**

Which are consisting of common boundaries.

East by: Railway Property. **West by:** Property of Sy.No.115, **North by:** Property of Sy.No.114 & RMZ Property. **South by:** Property of Sy.No.43 & Sy.No.46

Given under my hand and seal of this Hon'ble Court on, this **10th day of June 2026.**

By Order of the Court
Senior Sheristedar
City Civil Court, Bengaluru
Advocate for Plaintiffs
Sri.N.Ramesha,
Udayonmukha Law Chambers,
2nd Floor, M.R.Complex, Shanthinagar, Sulibele Road, Devanahalli Town, Bengaluru Rural -562 110

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-560 020

ಸಂ.: ಬೆಂಅಪ್ರಾ/ನಯೋಸ/CLU-577/25-26/413/2026-27 ದಿನಾಂಕ: 10.06.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕಾಗಿ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಬೆಟ್ಟಹಲಸೂರು ಗ್ರಾಮದ ಸರ್ವೆ ನಂ.358/3 ರಲ್ಲಿನ 1ಎಕರೆ-27ಗುಂಟೆ ಜಮೀನನ್ನು RMP-2015 ರಲ್ಲಿ ಭಾಗಶಃ ಪ್ರದೇಶವನ್ನು ವ್ಯವಸಾಯ ಹಾಗೂ ಭಾಗಶಃ ಪ್ರದೇಶವನ್ನು Cartographical Error ನಿಂದಾಗಿ ವ್ಯಾಲಿ ಎಂದು ಗುರುತಿಸಲಾಗಿರುತ್ತದೆ. ಗ್ರಾಮ ನಕ್ಷೆಯಂತೆ ಪ್ರಶ್ನಿತ ಜಮೀನಿನಲ್ಲಿ/ ಜಮೀನಿಗೆ ಹೊಂದಿಕೊಂಡಂತೆ ಯಾವುದೇ ವ್ಯಾಲಿ ಹಾದುಹೋಗಿಲ್ಲದೇ ಇರುವುದರಿಂದ, ಅದನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರಲ್ಲಿ Cartographical Error ಅವಕಾಶದಡಿಯಲ್ಲಿ ತಿದ್ದುಪಡಿ ಮಾಡಲು ಪರಿಶೀಲಿಸಬಹುದಾಗಿರುತ್ತದೆ ಹಾಗಾಗಿ ಸದರಿ ವ್ಯಾಲಿ ಪ್ರದೇಶವನ್ನು ಒಳಗೊಂಡಂತೆ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಿರುವ ಪ್ರದೇಶವನ್ನು ಸೇರಿ ಒಟ್ಟಾರೆ 1ಎಕರೆ-27ಗುಂಟೆ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ರಶ್ಮ ಕೃಷ್ಣಮೂರ್ತಿ ನಂ. ಡಿ-43, "ಲೆಗೆಸಿ ಡಿಮೇರಾ" ಜಕ್ಕೂರು ಪ್ಲಾಂಟೇಷನ್, ಯಲಹಂಕ ಬೆಂಗಳೂರು-560064	ಯಲಹಂಕ	ಜಾಲ	ಬೆಟ್ಟ ಹಲಸೂರು	358/3	1ಎ-27ಗುಂ	ವ್ಯವಸಾಯ ಹಾಗೂ ವ್ಯಾಲಿ	ವಾಣಿಜ್ಯ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವಾಣಿಜ್ಯ ಉಪಯೋಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನಲ್ಲಿ ವಾಣಿಜ್ಯ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗಿರುತ್ತದೆ. ಈ ಜಾಗದಲ್ಲಿ ಬಹುಮಹಡಿಗಳ ವಾಣಿಜ್ಯ ಕಟ್ಟಡಗಳನ್ನು ಕಟ್ಟುವುದರಿಂದ ಸರ್ಕಾರಕ್ಕೆ ತೆರಿಗೆ ಸಂಗ್ರಹವಾಗುತ್ತದೆ ಹಾಗೂ ಜಮೀನಿನಲ್ಲಿ ಅಭಿವೃದ್ಧಿಪಡಿಸಿದ ಕಟ್ಟಡಗಳಿಂದ ಹಲವಾರು ಜನರಿಗೆ ಉದ್ಯಮಗಳು ದೊರಕುತ್ತವೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಾಣಿಜ್ಯ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಾಯವಾಣಿ/ವಾಟ್ಸಪ್: **94831 66622 (24 x 7). @BDAOfficialGoK**

ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಪುರಸಭಾ ಕಾರ್ಯಾಲಯ, ಹೊಳೆನರಸೀಪುರ

ದೂರವಾಣಿ ಮತ್ತು ಫ್ಯಾಕ್ಸ್ ಸಂಖ್ಯೆ:08175-273229 email: tstaff_ulb_holenarasipur@yahoo.co.in

ನಂ:ಪುಸ.ಹೊನಪು/ತಾ.ಶಾ/ಎನ್‌ಎಂಪಿಸಿ/01/2026-27 ದಿನಾಂಕ: 09.06.2026

:: ಅಲ್ಪಾವಧಿ ಟೆಂಡರ್ ಪ್ರಕಟಣೆ :: (ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ)

ಹೊಳೆನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999-2000 ನಿಯಮಗಳಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ-ಪ್ರೊಕ್ಯೂರ್‌ಮೆಂಟ್ ಸೆಲ್, ಬೆಂಗಳೂರುರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಐಟಂವಾರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಅರ್ಹ ಗುತ್ತಿಗೆದಾರರು ತಮ್ಮ ದರಗಳನ್ನು ಇ-ಪ್ರೊಕ್ಯೂರ್‌ಮೆಂಟ್ https://kppp.karnataka.gov.in/ಪೋರ್ಟಲ್ ಮೂಲಕ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್ ಮೂಲಕ ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿ ವಿವರಗಳು ಈ ಕೆಳಕಂಡಂತಿರುತ್ತದೆ. 2023-24 ಮತ್ತು 2024-25ನೇ ಸಾಲಿನ Million plus city (BBMP) ಗೆ ಹಂಚಿಕೆಯಾದ 15ನೇ ಹಣಕಾಸು ಆಯೋಗದ ಘನತ್ಯಾಜ್ಯ ವಸ್ತು ನಿರ್ವಹಣೆಯ ಅನುದಾನವನ್ನು Non-Million Plus City ಗಳಿಗೆ ಮರು ಹಂಚಿಕೆ ಮಾಡಿ ಬಿಡುಗಡೆಗೊಳಿಸಿರುವ ಅನುದಾನ ಕ್ರ.ಸಂ.1)ಕಾಮಗಾರಿಯ ವಿವರ ಹೊಳೆನರಸೀಪುರ ಪುರಸಭಾ ವ್ಯಾಪ್ತಿಯ ತಾಲ್ಲೂಕು ಕಛೇರಿ ಆವರಣದಲ್ಲಿ ಓವರ್‌ಹೆಡ್ ಟ್ಯಾಂಕ್ ನಿರ್ಮಾಣ ಕಾಮಗಾರಿ. Indent No: DMA/2026-27/OW/WORK_INDENT59593 ಅಂದಾಜು ಮೊತ್ತ (ಲಕ್ಷಗಳಲ್ಲಿ)15.00 ಇಎಂಡಿ ಮೊತ್ತ (ರೂ.ಗಳಲ್ಲಿ)37500-00 1.ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.06.2026 ಸಂಜೆ 5.30 ಗಂಟೆಗೆ 2.ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಸ್ವೀಕರಿಸಲಾದ ತಾಂತ್ರಿಕ ಬಿಡ್ ಟೆಂಡರ್‌ನ್ನು ತೆರೆಯುವ ದಿನಾಂಕ: 18.06.2026 ಬೆಳಿಗ್ಗೆ: 11.00 ಗಂಟೆಗೆ 3.ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದ ಟೆಂಡರ್‌ದಾರರ ಆರ್ಥಿಕ ಬಿಡ್ ಟೆಂಡರ್‌ನ್ನು ತೆರೆಯುವ ದಿನಾಂಕ: 20.06.2026 ಬೆಳಿಗ್ಗೆ: 11.00 ಗಂಟೆಗೆ 4.ನಿಗಧಿಪಡಿಸಿದ ದಿನಾಂಕಗಳಲ್ಲಿ ಟೆಂಡರ್‌ನ್ನು ತೆರೆಯದಿದ್ದಲ್ಲಿ ಮುಂದಿನ ದಿನಾಂಕವನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು.

ಸಹಿ/-ಮಾನ್ಯ ಆಡಳಿತಾಧಿಕಾರಿಗಳು, (ಪುರಸಭೆ ಹೊಳೆನರಸೀಪುರ) ಹಾಸನ ಉಪವಿಭಾಗ, ಹಾಸನ.

ಸಹಿ/- ಮುಖ್ಯಾಧಿಕಾರಿ. ಪುರಸಭೆ, ಹೊಳೆನರಸೀಪುರ

ವಾಸಾಸಂಇ/ಹಿಸ/ಹಾಸನ/212/ಕೆಎಸ್‌ಎಂಸಿಎ/2026-27

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಪರಿಸರ ಭವನ, ನಂ.49, ಚರ್ಚ್ ರಸ್ತೆ, ಬೆಂಗಳೂರು-560001

ದೂರವಾಣಿ : 080-25581383, ಫ್ಯಾಕ್ಸ್ : 080-25586321

ಸಂಖ್ಯೆ: ಮಾನಿಮಂ/87/6/2025/2026-27/626 ದಿನಾಂಕ: 21/05/2026

ಟೆಂಡರ್‌ಗಾಗಿ ಆಹ್ವಾನ - ಕರೆ-1

(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ http://kppp.karnataka.gov.in ಮುಖಾಂತರ)

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಸದಸ್ಯ ಕಾರ್ಯದರ್ಶಿಗಳು ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ http://kppp.karnataka.gov.in ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ

ಕೆಲಸದ ಹೆಸರು: ಮಂಗಳೂರಿನ ಕೆಎಸ್‌ಪಿಸಿಬಿ ಆರ್‌ಎಸ್‌ಎಲ್ ಸಹಿತ ಪ್ರಯೋಗಾಲಯ ಕಟ್ಟಡ ಮತ್ತು ಪ್ರಾದೇಶಿಕ ಕಛೇರಿ ಕಟ್ಟಡದ ಗೃಹಸೇವಾಗಾಗಿ (ಹೌಸ್‌ಕೀಪಿಂಗ್) ವಾರ್ಷಿಕ ನಿರ್ವಹಣೆ ಗುತ್ತಿಗೆ (ಎಎಂಸಿ) (1 ವರ್ಷ). ಕೆಲಸದ ಅಂದಾಜು ಮೌಲ್ಯ: **ರೂ.17.95 ಲಕ್ಷಗಳು.** ಟೆಂಡರ್ ಬೆಲೆ, ಇಎಂಡಿ ಇತ್ಯಾದಿ, ಮುಂತಾದ ಪಾವತಿಗಳನ್ನು ಇ-ಪಾವತಿ ವಿಧಾನದಲ್ಲಿ ಮಾತ್ರ ಪಾವತಿಸಬೇಕು.

ಹೆಚ್ಚಿನ ವಿವರಗಳಿಗೆ, ದಯವಿಟ್ಟು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನಲ್ಲಿ ವೀಕ್ಷಿಸುವುದು.

ಸಹಿ/-
ಮುಖ್ಯ ಪರಿಸರ ಅಧಿಕಾರಿ-2

ವಾ.ಸಾ.ಸಂ.ಇ/ವಾಪ್ರ/1092/ಅಕಾರ್/2026-27

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ : ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಧಾರವಾಡ

ಫೋ: (0836) 2213838 Email: eedharwad@gmail.com

ನಂ.ಎಚ್.ಡಿಎಂಸಿ/66/07/02/2026-27 ದಿನಾಂಕ: 10-06-2026

ಅಲ್ಪಾವಧಿ/ಪೂರ್ಣಾವಧಿ ಇ-ಟೆಂಡರ್ ಅಧಿಸೂಚನೆ

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿಧ ಯೋಜನೆ ಅನುದಾನದಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ನಿಯಮದನ್ವಯ ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಪಿಡಬ್ಲ್ಯೂಡಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರು ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಪಾಲಿಕೆ ವಾರ್ಡ ಸದಸ್ಯರ /ಮಹಾಪೌರರ/ಉಪಮಹಾಪೌರರ/ಅಮೃತ 2.0 ಅನುದಾನ

1) ಇಂಡೆಂಟ್ ನಂ. 48303/14.00 ಲಕ್ಷ/ಸಾಮಾನ್ಯ 2) ಇಂಡೆಂಟ್ ನಂ. 48787/5.00 ಲಕ್ಷ/ಸಾಮಾನ್ಯ 3) ಇಂಡೆಂಟ್ ನಂ. 57163/22.00 ಲಕ್ಷ/ಪ್ರವರ್ಗ-1 4) ಇಂಡೆಂಟ್ ನಂ. 57161/8.00 ಲಕ್ಷ/ಪ್ರವರ್ಗ-2ಎ 5) ಇಂಡೆಂಟ್ ನಂ. 53896/9.93 ಲಕ್ಷ/ಸಾಮಾನ್ಯ 6) ಇಂಡೆಂಟ್ ನಂ. 54149/13.00 ಲಕ್ಷ/ಸಾಮಾನ್ಯ 7) ಇಂಡೆಂಟ್ ನಂ. 54147/2.25 ಲಕ್ಷ/ಸಾಮಾನ್ಯ 8) ಇಂಡೆಂಟ್ ನಂ. 49139/2.00 ಲಕ್ಷ/ಸಾಮಾನ್ಯ 9) ಇಂಡೆಂಟ್ ನಂ. 56116/8.50 ಲಕ್ಷ/ಸಾಮಾನ್ಯ 10) ಇಂಡೆಂಟ್ ನಂ. 12614/ 5.20 ಲಕ್ಷ/ಸಾಮಾನ್ಯ 11) ಇಂಡೆಂಟ್ ನಂ. 42526/27.35 ಲಕ್ಷ/ ಸಾಮಾನ್ಯ 12) ಇಂಡೆಂಟ್ ನಂ. 56758/4.80 ಲಕ್ಷ/ಸಾಮಾನ್ಯ 13) ಇಂಡೆಂಟ್ ನಂ. 56772/18.00 ಲಕ್ಷ/ಸಾಮಾನ್ಯ 14) ಇಂಡೆಂಟ್ ನಂ. 57191/7.90 ಲಕ್ಷ/ಸಾಮಾನ್ಯ 15) ಇಂಡೆಂಟ್ ನಂ. 57196/3.50 ಲಕ್ಷ/ಪರಿಶಿಷ್ಟ ಪಂಗಡ 16) ಇಂಡೆಂಟ್ ನಂ. 56117/10.00 ಲಕ್ಷ/ಸಾಮಾನ್ಯ 17) ಇಂಡೆಂಟ್ ನಂ. 53145/18.45 ಲಕ್ಷ/ಸಾಮಾನ್ಯ 18) ಇಂಡೆಂಟ್ ನಂ. 54075/15.00 ಲಕ್ಷ/ಸಾಮಾನ್ಯ 19) ಇಂಡೆಂಟ್ ನಂ. 53571/25.00 ಲಕ್ಷ/ಸಾಮಾನ್ಯ 20) ಇಂಡೆಂಟ್ ನಂ. 54626/4.10 ಲಕ್ಷ/ಸಾಮಾನ್ಯ 21) ಇಂಡೆಂಟ್ ನಂ. 54158/5.11 ಲಕ್ಷ/ಸಾಮಾನ್ಯ 22) ಇಂಡೆಂಟ್ ನಂ. 54141/10.00 ಲಕ್ಷ/ಸಾಮಾನ್ಯ 23) ಇಂಡೆಂಟ್ ನಂ. 51287/14.10 ಲಕ್ಷ/ಸಾಮಾನ್ಯ 24) ಇಂಡೆಂಟ್ ನಂ. 54630/35.00 ಲಕ್ಷ/ಸಾಮಾನ್ಯ 25) ಇಂಡೆಂಟ್ ನಂ. 52884/5.00 ಲಕ್ಷ/ಸಾಮಾನ್ಯ 26) ಇಂಡೆಂಟ್ ನಂ. 57259/25.20 ಲಕ್ಷ/ಪ್ರವರ್ಗ-2ಎ 27) ಇಂಡೆಂಟ್ ನಂ. 57258/10.00 ಲಕ್ಷ/ಪರಿಶಿಷ್ಟ ಜಾತಿ 28) ಇಂಡೆಂಟ್ ನಂ. 57647/11.50 ಲಕ್ಷ/ಸಾಮಾನ್ಯ 29) ಇಂಡೆಂಟ್ ನಂ. 55951/2.50 ಲಕ್ಷ/ಸಾಮಾನ್ಯ 30) ಇಂಡೆಂಟ್ ನಂ. 53994/32.00 ಲಕ್ಷ/ಸಾಮಾನ್ಯ 31) ಇಂಡೆಂಟ್ ನಂ. 53101/38.00 ಲಕ್ಷ/ಸಾಮಾನ್ಯ 32) ಇಂಡೆಂಟ್ ನಂ. 53103/6.50 ಲಕ್ಷ/ಸಾಮಾನ್ಯ 33) ಇಂಡೆಂಟ್ ನಂ. 53075/13.00 ಲಕ್ಷ/ಸಾಮಾನ್ಯ 34) ಇಂಡೆಂಟ್ ನಂ. 54088/26.60 ಲಕ್ಷ/ಸಾಮಾನ್ಯ 35) ಇಂಡೆಂಟ್ ನಂ. 53901/25.00 ಲಕ್ಷ/ಸಾಮಾನ್ಯ 36) ಇಂಡೆಂಟ್ ನಂ. 58004/34.00 ಲಕ್ಷ/ಸಾಮಾನ್ಯ 37) ಇಂಡೆಂಟ್ ನಂ. 52688/20.00 ಲಕ್ಷ/ಸಾಮಾನ್ಯ 38) ಇಂಡೆಂಟ್ ನಂ. 49066/7.27 ಲಕ್ಷ/ಸಾಮಾನ್ಯ 39) ಇಂಡೆಂಟ್ ನಂ. 49822/5.00 ಲಕ್ಷ/ಸಾಮಾನ್ಯ 40) ಇಂಡೆಂಟ್ ನಂ. 54391/2.20 ಲಕ್ಷ/ಸಾಮಾನ್ಯ 41) ಇಂಡೆಂಟ್ ನಂ. 52551/3.00 ಲಕ್ಷ/ಸಾಮಾನ್ಯ 42) ಇಂಡೆಂಟ್ ನಂ. 52217/23.60 ಲಕ್ಷ/ಸಾಮಾನ್ಯ 43) ಇಂಡೆಂಟ್ ನಂ. 54745/6.00 ಲಕ್ಷ/ಸಾಮಾನ್ಯ 44) ಇಂಡೆಂಟ್ ನಂ. 56191/8.05 ಲಕ್ಷ/ಸಾಮಾನ್ಯ 45) ಇಂಡೆಂಟ್ ನಂ. 56152/12.00 ಲಕ್ಷ/ಸಾಮಾನ್ಯ 46) ಇಂಡೆಂಟ್ ನಂ. 57360/5.00 ಲಕ್ಷ/ಸಾಮಾನ್ಯ 47) ಇಂಡೆಂಟ್ ನಂ. 49799/14.01 ಲಕ್ಷ/ಸಾಮಾನ್ಯ 48) ಇಂಡೆಂಟ್ ನಂ. 45595/3.00 ಲಕ್ಷ/ಸಾಮಾನ್ಯ 49) ಇಂಡೆಂಟ್ ನಂ. 45580/3.00 ಲಕ್ಷ/ಸಾಮಾನ್ಯ 50) ಇಂಡೆಂಟ್ ನಂ. 40807/10.50 ಲಕ್ಷ/ಸಾಮಾನ್ಯ 51) ಇಂಡೆಂಟ್ ನಂ. 58587/5.00 ಲಕ್ಷ/ಪರಿಶಿಷ್ಟ ಜಾತಿ 52) ಇಂಡೆಂಟ್ ನಂ. 58588/10.00 ಲಕ್ಷ/ಪರಿಶಿಷ್ಟ ಜಾತಿ 53) ಇಂಡೆಂಟ್ ನಂ. 58618/1.72 ಲಕ್ಷ/ಪರಿಶಿಷ್ಟ ಜಾತಿ 54) ಇಂಡೆಂಟ್ ನಂ. 57694/2.58 ಲಕ್ಷ/ಸಾಮಾನ್ಯ 55) ಇಂಡೆಂಟ್ ನಂ. 58692/13.50 ಲಕ್ಷ/ಪ್ರವರ್ಗ-2ಎ 56) ಇಂಡೆಂಟ್ ನಂ. 58736/4.30 ಲಕ್ಷ/ಸಾಮಾನ್ಯ 57) ಇಂಡೆಂಟ್ ನಂ. 59201/12.00 ಲಕ್ಷ/ಸಾಮಾನ್ಯ 58) ಇಂಡೆಂಟ್ ನಂ. 59361/34.62 ಲಕ್ಷ/ಪ್ರವರ್ಗ-2ಎ 59) ಇಂಡೆಂಟ್ ನಂ. 59358/25.22 ಲಕ್ಷ/ಸಾಮಾನ್ಯ 60) ಇಂಡೆಂಟ್ ನಂ. 59347/25.32 ಲಕ್ಷ/ಸಾಮಾನ್ಯ 61) ಇಂಡೆಂಟ್ ನಂ. 59346/70.00 ಲಕ್ಷ/ಸಾಮಾನ್ಯ 62) ಇಂಡೆಂಟ್ ನಂ.55326/49.50 ಲಕ್ಷ/ಸಾಮಾನ್ಯ 63) ಇಂಡೆಂಟ್ ನಂ.58352/25.00 ಲಕ್ಷ/ಪ್ರವರ್ಗ-2ಎ 64) ಇಂಡೆಂಟ್ ನಂ. 58353/25.00 ಲಕ್ಷ/ಸಾಮಾನ್ಯ 65) ಇಂಡೆಂಟ್ ನಂ. 58361/30.00 ಲಕ್ಷ/ಸಾಮಾನ್ಯ 66) ಇಂಡೆಂಟ್ ನಂ. 58378/10.00 ಲಕ್ಷ/ಸಾಮಾನ್ಯ 67) ಇಂಡೆಂಟ್ ನಂ. 58380/10.00 ಲಕ್ಷ/ಸಾಮಾನ್ಯ 68) ಇಂಡೆಂಟ್ ನಂ. 58951/6.22 ಲಕ್ಷ/ಪ್ರವರ್ಗ-2ಎ 69) ಇಂಡೆಂಟ್ ನಂ. 58995/36.48 ಲಕ್ಷ/ಪ್ರವರ್ಗ-1 70) ಇಂಡೆಂಟ್ ನಂ. 58594/10.00 ಲಕ್ಷ/ಸಾಮಾನ್ಯ 71) ಇಂಡೆಂಟ್ ನಂ. 58605/49.60 ಲಕ್ಷ/ಸಾಮಾನ್ಯ 72) ಇಂಡೆಂಟ್ ನಂ. 58993/15.00 ಲಕ್ಷ/ಸಾಮಾನ್ಯ 73) ಇಂಡೆಂಟ್ ನಂ. 58943/10.00 ಲಕ್ಷ/ಪರಿಶಿಷ್ಟ ಜಾತಿ 74) ಇಂಡೆಂಟ್ ನಂ. 58945/19.17 ಲಕ್ಷ/ಸಾಮಾನ್ಯ 75) ಇಂಡೆಂಟ್ ನಂ. 58937/8.00 ಲಕ್ಷ/ಸಾಮಾನ್ಯ 76) ಇಂಡೆಂಟ್ ನಂ. 58595/9.00 ಲಕ್ಷ/ಸಾಮಾನ್ಯ 77) ಇಂಡೆಂಟ್ ನಂ. 58596/25.00 ಲಕ್ಷ/ಪರಿಶಿಷ್ಟ ಪಂಗಡ 78) ಇಂಡೆಂಟ್ ನಂ. 59404/31.90 ಲಕ್ಷ/ಪರಿಶಿಷ್ಟ ಪಂಗಡ 79) ಇಂಡೆಂಟ್ ನಂ. 59396/29.00 ಲಕ್ಷ/ಪರಿಶಿಷ್ಟ ಜಾತಿ 80) ಇಂಡೆಂಟ್ ನಂ. 59436/48.96 ಲಕ್ಷ/ಸಾಮಾನ್ಯ 81) ಇಂಡೆಂಟ್ ನಂ. 59407/34.80 ಲಕ್ಷ/ಪ್ರವರ್ಗ-2ಎ 82) ಇಂಡೆಂಟ್ ನಂ. 59442/12.00 ಲಕ್ಷ/ಸಾಮಾನ್ಯ 83) ಇಂಡೆಂಟ್ ನಂ. 59437/15.00 ಲಕ್ಷ/ಸಾಮಾನ್ಯ 84) ಇಂಡೆಂಟ್ ನಂ. 59457/30.00 ಲಕ್ಷ/ಪರಿಶಿಷ್ಟ ಜಾತಿ 85) ಇಂಡೆಂಟ್ ನಂ. 54105/14.00 ಲಕ್ಷ/ಸಾಮಾನ್ಯ 86) ಇಂಡೆಂಟ್ ನಂ. 54100/20.00 ಲಕ್ಷ/ಸಾಮಾನ್ಯ 87) ಇಂಡೆಂಟ್ ನಂ. 54610/10.00 ಲಕ್ಷ/ಸಾಮಾನ್ಯ 88) ಇಂಡೆಂಟ್ ನಂ. 57692/8.00 ಲಕ್ಷ/ಪರಿಶಿಷ್ಟ ಜಾತಿ 89) ಇಂಡೆಂಟ್ ನಂ. 39876/15.00 ಲಕ್ಷ/ಸಾಮಾನ್ಯ 90) ಇಂಡೆಂಟ್ ನಂ. 57956/5.00 ಲಕ್ಷ/ಸಾಮಾನ್ಯ 91) ಇಂಡೆಂಟ್ ನಂ. 57649/30.00 ಲಕ್ಷ/ಪರಿಶಿಷ್ಟ ಜಾತಿ 92) ಇಂಡೆಂಟ್ ನಂ.DMA/2026-27/SE7670/47.72 ಲಕ್ಷ/ಸಾಮಾನ್ಯ 93) ಇಂಡೆಂಟ್ ನಂ. 58722/703.21 ಲಕ್ಷ/ಸಾಮಾನ್ಯ.

ಒಟ್ಟು 93 ಕಾಮಗಾರಿಗಳು ಮೊತ್ತ ರೂ.2236.94 ಲಕ್ಷಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು ಧಾರವಾಡ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. **ದೂರವಾಣಿ ಸಂಖ್ಯೆ: 0836-2213838** ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ http://www.kppp.karnataka.gov.in ರಲ್ಲಿ ಪಡೆಯಬಹುದು. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರಕಾರ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಅ.ನಂ. 1 ರಿಂದ 93 ರವರೆಗೆ **ದಿನಾಂಕ: 12-06-2026** ರಿಂದ ಪಡೆಯಬಹುದಾಗಿದೆ.

ಈ ಮೇಲಿನ ಕಾಮಗಾರಿಗಳಿಗೆ (1 ರಿಂದ 87 ಕ್ಕೆ) 1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 29-06-2026 ಸಂಜೆ 04.00 ಗಂಟೆ 2) ಟೆಂಡರ್ ತೆರೆಯುವ ದಿನಾಂಕ: 30-06-2026 ಸಂಜೆ 04.30 ಗಂಟೆ 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 03-07-2026 ಬೆಳಿಗ್ಗೆ 10.30 ಗಂಟೆ

ಈ ಮೇಲಿನ ಕಾಮಗಾರಿಗಳಿಗೆ (88 ರಿಂದ 92 ಕ್ಕೆ) 1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : 20-06-2026 ಸಂಜೆ 04.00 ಗಂಟೆ 2) ಟೆಂಡರ್ ತೆರೆಯುವ ದಿನಾಂಕ : 22-06-2026 ಬೆಳಿಗ್ಗೆ 10.30 ಗಂಟೆ

ಈ ಮೇಲಿನ ಕಾಮಗಾರಿಗಳಿಗೆ (93ಕ್ಕೆ) 1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : 13-07-2026 ಸಂಜೆ 04.00 ಗಂಟೆ 2) ಟೆಂಡರ್ ತೆರೆಯುವ ದಿನಾಂಕ : 14-07-2026 ಸಂಜೆ 04.00 ಗಂಟೆ 3) ಆರ್ಥಿಕ ಬಿಡ್ ತೆರೆಯುವ ದಿನಾಂಕ : 20-07-2026 ಬೆಳಿಗ್ಗೆ 10.30 ಗಂಟೆ

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಧಾರವಾಡ.

ಮಿಡಿಯಾ/ಧಾರವಾಡ/289/ಮಾಹಿತಿ/2026-27